" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

07ನೇ ಫೆಬ್ರವರಿ 2017
ಮಂಗಳವಾರ

## ವಿಷಯಾನುಕ್ರಮಣಿಕೆ

1. ಪ್ರಶ್ನೋತ್ತರಗಳು

*ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.*

**48+55** – ರಾಜ್ಯದ ಟೋಲ್‌ಗಳಲ್ಲಿ ಅಂಬ್ಯುಲನ್ಸ್ ಮತ್ತು ವಿ.ಐ.ಪಿ. ವಾಹನಗಳಿಗೆ ಪ್ರತ್ಯೇಕ ದ್ವಾರ ನಿರ್ಮಿಸುವ ಬಗ್ಗೆ.
– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
– ಶ್ರೀ ಎಂ.ಎ.ಗೋಪಾಲಸ್ವಾಮಿ

**21**– ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿನ ಕೊರತೆ ನೀಗಿಸುವ ಬಗ್ಗೆ.
– ಶ್ರೀ ಎನ್.ಎಸ್.ಬೋಸ್‌ರಾಜು

**37**– ಹೈದರಾಬಾದ್-ಕರ್ನಾಟಕ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ಸಿಬ್ಬಂದಿ ನೇಮಕಾತಿ ಬಗ್ಗೆ.
– ಶ್ರೀ ವಿಜಯ ಸಿಂಗ್

**45**– ಶಿರಾಡಿ ಘಾಟ್ ರಸ್ತೆ ಅಭಿವೃದ್ಧಿ ಮಾಡುವ ಕುರಿತು ಮತ್ತು ಹಾಸನ-ಬಿ.ಸಿ.ರೋಡ್ ಚತುಷ್ಪಥ ಕಾಮಗಾರಿ ಬಗ್ಗೆ.
– ಶ್ರೀ ಕೋಟ ಶ್ರೀನಿವಾಸ ಪೂಜಾರಿ

**06**– ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.
– ಶ್ರೀ ಬಿ.ಜೆ.ಪುಟ್ಟಸ್ವಾಮಿ

**34**– ರಾಜ್ಯದ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಮತ್ತು ಟೋಲ್ ಸಂಗ್ರಹ ಕುರಿತು.
– ಶ್ರೀ ವಿ.ಸೋಮಣ್ಣ

**92** – ಕೃಷಿ ಹೊಂಡಕ್ಕೆ ಬಲಿಯಾದ ಜನರು-ಜಾನುವಾರುಗಳ ಬಗ್ಗೆ.
– ಶ್ರೀ ಟಿ.ಎ.ಶರವಣ

**68** – ವಿದ್ಯುತ್ ದರದ ಬಗ್ಗೆ. – ಶ್ರೀ ಅಪ್ಪಾಜಿಗೌಡ

**52** – ಪಶು ವಿಶ್ವವಿದ್ಯಾಲಯಗಳಲ್ಲಿ ಕೈಗೊಂಡಿರುವ ಸಂಶೋಧನೆಗಳ ಬಗ್ಗೆ
– ಶ್ರೀ ಕೆ.ಸಿ.ಕೊಂಡಯ್ಯ

**36** – ರೋಣ ತಾಲ್ಲೂಕಿನ ಗಜೇಂದ್ರಗಡ ನಗರದಲ್ಲಿ ಪಶು ಆಸ್ಪತ್ರೆ ನಿರ್ಮಿಸುವ ಬಗ್ಗೆ.
– ಶ್ರೀ ಎಸ್.ವ್ಹಿ.ಸಂಕನೂರ

**14** – ತೋಟಗಾರಿಕೆ ಇಲಾಖೆಯ ಯೋಜನೆಯ ಸಹಾಯ ಸವಲತ್ತುಗಳ ಬಗ್ಗೆ.
– ಶ್ರೀ ಸೋಮಣ್ಣ ಮ.ಬೇವಿನಮರದ

**78** – ಮಂಡ್ಯ-ಕೆರಗೋಡು-ಕೌಡ್ಲೆ ಮಾರ್ಗವಾಗಿ ಯಡಿಯೂರು ರಸ್ತೆ ಕಾಮಗಾರಿ ಬಗ್ಗೆ.
– ಶ್ರೀ ಕೆ.ಟಿ.ಶ್ರೀಕಂಠೇಗೌಡ

**54**– ರೈತರಿಗೆ ಬೆಳೆ ನಷ್ಟವಾದಲ್ಲಿ ಪರಿಹಾರ ನೀಡುವ ಬಗ್ಗೆ.
–ಶ್ರೀ ಎಂ.ಎ.ಗೋಪಾಲಸ್ವಾಮಿ

*ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.*

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.

ಅ) ತಮಿಳುನಾಡು ರಾಜ್ಯದ ಮಲ್ಟಿಪ್ಲೆಕ್ಸ್ ಚಲನಚಿತ್ರ ಮಂದಿರಗಳಲ್ಲಿ ಕೂಲ್ ಡ್ರಿಂಕ್ಸ್ ಮಾರಾಟ ರದ್ದುಪಡಿಸಿ, ಎಳನೀರು ಮಾರಾಟ ಮಾಡುತ್ತಿರುವ ರೀತಿ ಕರ್ನಾಟಕ ರಾಜ್ಯದಲ್ಲಿ ಅಳವಡಿಸಿ ರೈತರಿಗೆ ನೆರವಾಗುವ ಬಗ್ಗೆ

– ಶ್ರೀ ಎಂ.ಕೆ.ಪ್ರಾಣೇಶ್
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಆ) ನ್ಯಾಯಧೀಶರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಶಾಸಕರು ಮತ್ತು ಸಚಿವರನ್ನು ಅಹ್ವಾನಿಸಬಾರದೆಂಬ ಸುತ್ತೋಲೆ ಬಗ್ಗೆ.

– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಇ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಅಜ್ಜಂಪುರ ಗ್ರಾಮದ ತಳಿ ಸಂವರ್ಧನ ಕೇಂದ್ರದಲ್ಲಿ ಅಮೃತ ಮಹಲ್ ತಳಿಯ ರಾಸುಗಳ ಸಾವಿನ ಬಗ್ಗೆ.

– ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)
– ಶ್ರೀ ಎ. ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು)

ಈ) ನಾಗರಹೊಳೆ ಹುಲಿ ರಕ್ಷಿತಾರಣ್ಯ ಪ್ರದೇಶದಲ್ಲಿ ಆರು ಹುಲಿಗಳು ಸಾವಿಗೀಡಾಗಿರುವ ಬಗ್ಗೆ

– ಶ್ರೀ ಸಂದೇಶ್ ನಾಗರಾಜು
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಉ) ವಸತಿ ಇಲಾಖೆ ಬಡವರ ಮನೆಗಳ ಆಯ್ಕೆ ಪ್ರಕ್ರಿಯೆ ಗ್ರಾಮ ಸಭೆಯಿಂದ ಹಿಂಪಡೆದು ಪಂಚಾಯತ್ ಕಾಯ್ದೆಗೆ ವಿರುದ್ಧವಾಗಿರುವ ಬಗ್ಗೆ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)
– ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು)
– ಶ್ರೀ ಎ.ಕೃಷ್ಣಪ್ಪ (ವಸತಿ ಸಚಿವರು)

3. ಪ್ರಕಟಣೆ
4. ಸಭೆಯ ಮುಂದಿಡಲಾದ ಕಾಗದ ಪತ್ರಗಳು
5. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ

6. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ–

– ಶ್ರೀ ಶರಣಪ್ಪ ಮಟ್ಟೂರ್
– ಶ್ರೀ ಆರ್.ಪ್ರಸನ್ನ ಕುಮಾರ್

7. ಗಮನ ಸೆಳೆಯುವ ಸೂಚನೆ

ಸರ್ಕಾರವು ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆ ಹಾಗೂ ಆದೇಶಗಳಿಂದ ಸರ್ಕಾರಿ ಕಟ್ಟಡ, ರಸ್ತೆ ಕಾಮಗಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಅಗತ್ಯವಾಗಿರುವ ಮರಳು, ಜಲ್ಲಿ ಮತ್ತು ಮೊರಮ್(murram) ಲಭಿಸದೆ ತೊಂದರೆಯಾಗಿರುವ ಬಗ್ಗೆ.

– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ
– ಶ್ರೀ ವಿನಯ್ ಆರ್. ಕುಲಕರ್ಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

~~~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~~~

*(05)07.02.2017 MM-VK 11.00*

**ಕರ್ನಾಟಕ ವಿಧಾನ ಪರಿಷತ್ತು**

***ಮಂಗಳವಾರ, 07ನೇ ಫೆಬ್ರವರಿ 2017***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 1. ಪ್ರಶ್ನೋತ್ತರಗಳು

## (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭಿಸುತ್ತಾ, ಮೊದಲನೆಯದಾಗಿ ಮಾನ್ಯ ಶ್ರೀ ಡಿ.ಎಸ್. ವೀರಯ್ಯನವರೇ ತಮ್ಮ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 90 ಕ್ಕೆ ಸಂಬಂಧಿಸಿದಂತೆ ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ನನ್ನನ್ನು ಭೇಟಿ ಮಾಡಿ, ಮಾನ್ಯ ಸಚಿವರಾದ ಡಾ||ಶರಣ ಪ್ರಕಾಶ್ ಆರ್.ಪಾಟೀಲ್‌ರವರು ಅವರ ಪರವಾಗಿ ಉತ್ತರ ಕೊಡುವುದಾಗಿ ತಿಳಿಸಿದ್ದಾರೆ. ಆದರೆ ಆ ಸಚಿವರು ನಮ್ಮ ಸದನದಲ್ಲಿ ಉಪಸ್ಥಿತರಿಲ್ಲದಿರುವುದರಿಂದ ಅವರು ಈ ಸದನಕ್ಕೆ ಬರುವವರೆಗೆ ಈ ಪ್ರಶ್ನೆಯನ್ನು ಪೆಂಡಿಂಗ್ ಇಡುತ್ತೇನೆ.

### ಚುಕ್ಕೆ ಪ್ರಶ್ನೆ ಸಂಖ್ಯೆ: 84+55

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಈ ಸದನಕ್ಕೆ ಬಂದಾಗಿನಿಂದ ಈ ಪ್ರಶ್ನೆಯನ್ನು ಕೇಳುತ್ತಲೇ ಇದ್ದೇನೆ, ಅದಕ್ಕೆ ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಡುತ್ತಾ ಬಂದಿದ್ದಾರೆ. ಈ ಸಮಸ್ಯೆ ನನಗೊಬ್ಬನಿಗೇ ಅಲ್ಲ, ಎಲ್ಲಾ ಶಾಸಕರಿಗೂ ಇರುವ ಒಂದು ಜ್ವಲಂತ ಸಮಸ್ಯೆಯಾಗಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶಾಸಕರು ಮತ್ತು ಆಂಬುಲೆನ್ಸ್ ವಾಹನಗಳು ಸುಗಮವಾಗಿ ಸಂಚರಿಸಲು ಅವಕಾಶ ಮಾಡಿಕೊಟ್ಟಿಲ್ಲ ಎಂದರೆ ಸದನದ ಗೌರವ, ಘನತೆ ಬಗ್ಗೆ ಜನರಿಗೆ ಯಾವ ಸಂದೇಶ ಹೋಗುತ್ತದೆ ಎಂಬ ಬಗ್ಗೆ ಚಿಂತಿಸಬೇಕಾಗಿದೆ. ಉದಾಹರಣೆಗೆ ದಿನಾಂಕ:28-01-2017ರಂದು ಶನಿವಾರ ರಾತ್ರಿ 9.00 ಗಂಟೆಗೆ ತುಮಕೂರು- ಕ್ಯಾತ್ಸಂದ್ರ ಹತ್ತಿರ ಇರುವ ಟೋಲ್ ನಲ್ಲಿ ಆಂಬುಲೆನ್ಸ್ ವಾಹನ ಮತ್ತು ವಿಐಪಿ ವಾಹನವನ್ನು ಸಂಚರಿಸಲು ಬಿಡಲಿಲ್ಲ. ಆಗ ನಾನೇ ಖುದ್ದಾಗಿ ಕಾರಿನಿಂದ ಇಳಿದು ಆಂಬುಲೆನ್ಸ್ ವಾಹನವನ್ನು ಬಿಡಿಸಿ ಅಲ್ಲಿನ ಸಿಬ್ಬಂದಿಗಳಿಗೆ ಇಂತಹ ವಾಹನಗಳಿಗೆ ತೊಂದರೆ ನೀಡದೇ ತುರ್ತಾಗಿ ಬಿಡಬೇಕೆಂದು ಕೇಳಿಕೊಂಡಿದ್ದೇನೆ. ಜೊತೆಗೆ ಸೋಮವಾರ ಕೂಡ ಮಾಜಿ ಪ್ರಧಾನಮಂತ್ರಿಯವರಾದ ಮಾನ್ಯ ಹೆಚ್.ಡಿ. ದೇವೇಗೌಡರ ಜೊತೆಯಲ್ಲಿ ನಾನು ತುಮಕೂರಿನಿಂದ ಬರುವಾಗ ಅವರ ಎಸ್ಕಾರ್ಟ್ ವಾಹನವನ್ನು ನೋಡಿಯೂ ಅವರ ವಾಹನ ಸಂಚರಿಸಲು ಬಿಡದೇ ಬೇಜವಾಬ್ದಾರಿಯಿಂದ ಸುಮಾರು 15 ನಿಮಿಷಗಳ ಕಾಲ ರಸ್ತೆಯಲ್ಲಿ ನಿಲ್ಲಿಸಿದ್ದರು. ರಾಜ್ಯದ ಎಲ್ಲಾ ಟೋಲ್‌ಗಳಲ್ಲೂ ಇದೇ ರೀತಿಯ ಪರಿಸ್ಥಿತಿ ಇದೆ. ಆದ್ದರಿಂದ ಘನ ಸರ್ಕಾರವು ಇದರ ಬಗ್ಗೆ ಗಮನಹರಿಸಬೇಕು. ತಾವು ಕೂಡ ಈ ಬಗ್ಗೆ ಸಭೆಯನ್ನು ಕರೆಯುತ್ತೇವೆ, ಈ ಸಮಸ್ಯೆಯನ್ನು ಬಗೆಹರಿಸಿಕೊಡುತ್ತೇವೆಂದು ಬಹಳಷ್ಟು ಸಂದರ್ಭಗಳಲ್ಲಿ ಈ ಸದನದಲ್ಲಿ ತಿಳಿಸಿದ್ದೀರಿ. ಆದರೆ ಇದುವರೆವಿಗೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೌಜನ್ಯಕ್ಕಾದರೂ ಸದಸ್ಯರುಗಳ ಸಭೆಯನ್ನು ಕರೆಯದಿರುವುದರಿಂದ ಈ ಸದನದಲ್ಲಿ ನಾವು ಪ್ರಶ್ನೆಗಳನ್ನು ಕೇಳುವುದು ವ್ಯರ್ಥ ಮತ್ತು ಸಮಯವೂ ವ್ಯರ್ಥ ಎಂದು ಹೇಳಬಯಸುತ್ತೇನೆ. ದಯವಿಟ್ಟು ಸಚಿವರು ಇದಕ್ಕೆ ಉತ್ತರ ನೀಡಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರ ಭಾವನೆಗಳು ಅರ್ಥವಾಗಿವೆ. ಕೆಲವು ಕಡೆಗಳಲ್ಲಿ ಈ ರೀತಿಯ ತೊಂದರೆಗಳು, ಅನಾನುಕೂಲಗಳಾಗಿವೆ. ಅಲ್ಲಿ exempted VIP vehicle lane ಇದ್ದರೂ ಅಲ್ಲಿ ಇಲ್ಲದೇ ಇದ್ದಾಗ ಬೇರೆ vehicle ಗಳನ್ನು ಬಿಟ್ಟಾಗ ಈ ರೀತಿಯ ಅನಾನುಕೂಲಗಳಾಗಿವೆ. ಈ ಲೇನ್ ಅನ್ನು ಮಾಡುವಾಗ ವಿಐಪಿ ಲೇನ್ ಎಂದು ಮಾಡಿಲ್ಲ, exempted vehicle lane ಎಂದು ಮಾಡಿದ್ದಾರೆ. ಅದರಲ್ಲಿ ಆಂಬುಲೆನ್ಸ್, ಎಂ.ಎಲ್.ಎ/ಎಂ.ಎಲ್.ಸಿ. ಗಳು ಮತ್ತಿತರ ವಿಐಪಿಗಳು ಹೋಗುವುದಕ್ಕೆ ಎಂದು ಇರುತ್ತದೆ. ಆ ಲೇನ್ ಅನ್ನು ಯಾವಾಗಲೂ ಖಾಲಿ ಬಿಡುವುದಿಲ್ಲ. ವಾಹನಗಳು ಹೆಚ್ಚಾದಾಗ ಆ ಲೇನ್ ಅನ್ನು ಉಪಯೋಗಿಸಲು ಬಿಡುತ್ತಾರೆ. ಇಂತಹ ಸಂದರ್ಭಗಳಲ್ಲಿ ವಿಐಪಿಗಳು, ಆಂಬುಲೆನ್ಸ್‌ಗಳು ಬಂದಾಗ ಸ್ವಲ್ಪ ಅನಾನುಕೂಲಗಳಾಗುತ್ತವೆ. ಅದಕ್ಕೆ ಮಾನ್ಯ ಸದಸ್ಯರಿಗೆ ಸದಸ್ಯರುಗಳ ಸಭೆಯನ್ನು ಕರೆದು, ಈ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಸದನದಲ್ಲಿ ಹೇಳಿದ್ದೆನು. ಆದ್ದರಿಂದ ಎಲ್ಲಾ concessionaires ಅನ್ನು ಕರೆಸಿ ದಿನಾಂಕ:13.02.2017 ರಂದು ಸಂಜೆ 5.00 ಗಂಟೆಗೆ ಮೀಟಿಂಗ್ ಹಾಲ್‌ನಲ್ಲಿ ಸಭೆ ಕರೆಯಲು ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸಿರುವ ಬಗ್ಗೆ ಮಾನ್ಯ ಸದಸ್ಯರಿಗೆ ಸೂಚನೆ ಕೊಟ್ಟಿದ್ದೇನೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಚಿವರೇ, ತಾವು ಪ್ರತಿ ಸಲವೂ ಇದೇ ಮಾತನ್ನು ಹೇಳುತ್ತಿದ್ದೀರಿ. ಯಾವ ಕೆಲಸಗಳನ್ನೂ ಮಾಡುತ್ತಿಲ್ಲ. ಕೇವಲ ಭರವಸೆಯನ್ನು ಕೊಡುತ್ತಿದ್ದೀರಿ. ಸಮಸ್ಯೆಯನ್ನು ಬಗೆಹರಿಸುತ್ತಿಲ್ಲ. ಆ ಭರವಸೆಯನ್ನು ಸರ್ಕಾರ ಕಾರ್ಯರೂಪಕ್ಕೆ ತರಬೇಕು.

(ಗೊಂದಲ)

**ಸಭಾಪತಿಯವರು:-** ಅಷ್ಟು ಜನರೂ ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲ. ಯಾರಾದರೂ ಒಬ್ಬರು ಮಾತನಾಡಿ. ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಪ್ರಶ್ನೆ ಕೇಳಿದವರು ಮಾತನಾಡಲಿ. ಮಾನ್ಯ ಸಚಿವರು ದಿನಾಂಕ:13.02.2017 ರಂದು ಸಭೆಯನ್ನು ಕರೆಯುತ್ತೇವೆಂದು ಈಗಾಗಲೇ ಹೇಳಿದ್ದಾರೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*06/7-2-2017/11.10/ಡಿಎಸ್-ಎಕೆ*

**ಸಭಾಪತಿಯವರು:-** ಇದೇ ತಿಂಗಳ 13ನೇ ತಾರೀಖು ಸಭೆ ಕರೆಯುತ್ತೇನೆಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ಮಾನ್ಯ ಸಚಿವರೇ, ನಮ್ಮ ಗೌರವಾನ್ವಿತ ಸದಸ್ಯರುಗಳಿಗೆ 13ನೇ ತಾರೀಖು ಸಭೆ ಇದೆ ಎಂದು ಪತ್ರವನ್ನು ಕಳುಹಿಸಿ, ಯಾರ್‍ಯಾರಿಗೆ ಆಸಕ್ತಿ ಇದೆಯೋ ಅವರೆಲ್ಲರೂ ಸಭೆಯಲ್ಲಿ ಭಾಗವಹಿಸುತ್ತಾರೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದೊಂದು ಕಡೆ ಈ ರೀತಿ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಸುಳ್ಳು ಮಾಹಿತಿಯನ್ನು ನೀಡುತ್ತಿದ್ದಾರೆ, ಪ್ರತಿಯೊಂದು ಟೋಲ್‌ನಲ್ಲೂ ಈ ಸಮಸ್ಯೆ ಇದೆ. ಅದನ್ನು ಮಾನ್ಯ ಸಚಿವರು ಒಪ್ಪಿಕೊಳ್ಳಬೇಕು. ಒಂದೊಂದು ಕಡೆ ಎಂದು ಏಕೆ ಹೇಳುತ್ತಿದ್ದಾರೆ? ಈ ಪ್ರಶ್ನೆಯನ್ನು ನಾನು ಬಹಳಷ್ಟು ಸಲ ಕೇಳಿದ್ದೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾವು ಬಹಳಷ್ಟು ಸಲ ಈ ಪ್ರಶ್ನೆ ಕೇಳಿದರೂ ಈ ಅವ್ಯವಸ್ಥೆಯನ್ನು ಸರಿಪಡಿಸದಿದ್ದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಶರವಣರವರೇ, ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯಿಲ್ಲ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಚೌಡರೆಡ್ಡಿ ತೂಪಲ್ಲಿಯವರು ಪ್ರಶ್ನೆ ಕೇಳುತ್ತಿದ್ದಾರೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮೊನ್ನೆ ಗಲಾಟೆಯಾಗಿ ಮಾನ್ಯ ಗೋಪಾಲಸ್ವಾಮಿಯವರು ನಾಲ್ಕು ದಿವಸ ಸ್ಟೇಷನ್‌ನಲ್ಲಿ ಕುಳಿತಿದ್ದಾರೆ. ಈ ರೀತಿಯ ಪರಿಸ್ಥಿತಿ ಇದ್ದರೂ ಕೂಡ ಕೆಲವು ಕಡೆ ಈ ರೀತಿಯ ಸಮಸ್ಯೆ ಇದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಈ ತಿಂಗಳು 13ನೇ ತಾರೀಖು ಸೋಮವಾರದಂದು ಸಂಜೆ 5:00 ಗಂಟೆಗೆ ಎಲ್ಲಾ concessionaires ಗಳನ್ನು ಸಭೆಗೆ ಕರೆದಿದ್ದೇನೆ. ಮಾನ್ಯ ಗೌರವಾನ್ವಿತ ಸದಸ್ಯರುಗಳನ್ನು ಸಭೆಗೆ ಕರೆಯುತ್ತೇನೆ. ಸಮಯವಿದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರೂ ಸಭೆಗೆ ಬರಲಿ.

**ಸಭಾಪತಿಯವರು:-** ಎಲ್ಲರನ್ನೂ ಕರೆದುಬಿಡಿ.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ತೊಂದರೆಯಿಲ್ಲ, ಎಲ್ಲರೂ ಬರಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೇ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಸಭಾಪತಿಯವರು:–** 13ನೇ ತಾರೀಖು ಮಾನ್ಯ ಸಚಿವರು ಸಭೆಯನ್ನು ಕರೆದಿದ್ದಾರೆ, ಅಲ್ಲಿ ಮಾತನಾಡಿ. ಇಲ್ಲಿ ಬೇಡ, ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳೋಣ.

(ಗೊಂದಲ)

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತಿದ್ದೇನೆ.

(ಗೊಂದಲ)

**ಸಭಾಪತಿಯವರು:–** ಅವರವರೆ ಮಾತನಾಡಿಕೊಂಡರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುತ್ತೋಲೆಯನ್ನು ಕಳುಹಿಸಿ, ಪ್ರತಿಯೊಂದು ಟೋಲ್‌ನಲ್ಲಿ ಎಡಗಡೆ ಕೊನೆ ಭಾಗದಲ್ಲಿ ಒಂದು lane reserve ಮಾಡಬೇಕು. ಆಂಬುಲೆನ್ಸ್‌ಗೆ ಸ್ಪೆಷಲ್ ಆಗಿ ಹೋಗುವ ಹಾಗೆ ಮಾಡಬೇಕು. ಈ ರೀತಿ ಸುತ್ತೋಲೆಯನ್ನು ಅವರಿಗೆ ಕಳುಹಿಸಿಯೂ ಅವರು ಮಾಡದೆ ಹೋದರೆ, ಸಭೆಯನ್ನು ಕರೆಯಬಹುದಾಗಿದೆ.

**ಡಾ:ಹೆಚ್.ಸಿ.ಮಹದೇವಪ್ಪ:–** 13ನೇ ತಾರೀಖು ಸಭೆಯನ್ನು ಕರೆದು ಚರ್ಚೆ ಮಾಡೋಣ ಎಂದು ಹೇಳಿದ್ದೇನೆ. ಆ ಸಭೆಗೆ ಎಲ್ಲರನ್ನೂ ಕರೆಯುತ್ತೇನೆ ಎಂದು ಹೇಳಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಹಾಸನಕ್ಕೆ ಪ್ರವೇಶ ಮಾಡುವಾಗ ಅವನು ಯಾರೋ....

**ಸಭಾಪತಿಯವರು:–** ಸಾಕು, ಅದನ್ನು 13ನೇ ತಾರೀಖು ಕೇಳಿ.

(ಗೊಂದಲ)

**ಸಭಾಪತಿಯವರು:–** ಅವರು ಸಭೆಯನ್ನು ಕರೆಯುತ್ತೇನೆ ಎಂದು ಹೇಳಿದ್ದಾರೆ. 13ನೇ ತಾರೀಖು ಎಲ್ಲರೂ ಹೋಗಿ. ಅದೇನು ಸಮಸ್ಯೆ ಇದೆಯೋ ಅದನ್ನೆಲ್ಲಾ ಆ ಸಭೆಯಲ್ಲಿ ಹೇಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೇ, ಎಂ.ಎಲ್.ಸಿ. ಬೋರ್ಡ್ ಇರುತ್ತದೆ, ಎಂ.ಎಲ್.ಸಿ. ಪಾಸ್ ಕೊಟ್ಟಿದ್ದೀರಿ, ಕಾರ್ಡ್‌ನ್ನು ತೋರಿಸುತ್ತೇವೆ, ಇವೆಲ್ಲಾ ಡೂಪ್ಲಿಕೇಟ್ ಹಿಂದಕ್ಕೆ ಸರಿಯಿರಿ ಎಂದು ಹೇಳುತ್ತಾರೆ. ಇದನ್ನು ದಯಮಾಡಿ ಮಾನ್ಯ ಸಚಿವರು ವಿಚಾರ ಮಾಡಬೇಕು. ಪಾಸ್ ಡೂಪ್ಲಿಕೇಟೋ, ಬೋರ್ಡ್ ಡೂಪ್ಲಿಕೇಟೋ, ಕಾರ್ಡ್ ಡೂಪ್ಲಿಕೇಟೋ?

(ಗೊಂದಲ)

**ಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರವರೇ, ಮಾನ್ಯ ಚೌಡರೆಡ್ಡಿಯವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರೆ, ಈಗ ಚೌಡರೆಡ್ಡಿಯವರು ಬಹಳ ನಿರ್ದಿಷ್ಟವಾಗಿ ರಾಷ್ಟ್ರೀಯ ಹೆದ್ದಾರಿ–75 ರ ದೇವಿಹಳ್ಳಿ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ದೇವಿಹಳ್ಳಿಯಲ್ಲಿ ನಡೆದಂತಹ ಘಟನೆ ಬಗ್ಗೆ ಅವರು ಉಲ್ಲೇಖ ಮಾಡಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಟ್ಟ ಮೇಲೆ ಗೌರವಾನ್ವಿತ ಸಚಿವರು 13ನೇ ತಾರೀಖು ಇದರ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದರು. ಪ್ರಶ್ನೋತ್ತರ ಅವಧಿಯೊಳಗೆ ಟೋಲ್ ಗೇಟ್‌ಗಳಲ್ಲಿರತಕ್ಕಂಥ ಸಮಗ್ರ ಸಮಸ್ಯೆಗಳ ಚರ್ಚೆಗೆ ಈಗ ಅವಕಾಶ ಇಲ್ಲ. ಇದರ ಬಗ್ಗೆ ಒಂದು ನೋಟಿಸ್ ಕೊಡಿ, ಆಗ ಚರ್ಚೆ ಮಾಡೋಣ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಭೆ ಕರೆಯುತ್ತೇವೆಂದು ಪ್ರತಿ ಅಧಿವೇಶನದಲ್ಲಿಯೂ ಹೇಳುತ್ತಿದ್ದಾರೆ. ಆದರೆ ಸಭೆಯನ್ನು ಕರೆಯುವುದಿಲ್ಲ.

**ಸಭಾಪತಿಯವರು:–** ಸಭೆ ಕರೆಯದಿದ್ದರೆ privilege move ಮಾಡಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸದನದಲ್ಲಿ ನಾಲ್ಕು ಸಲ ಸಭೆಯನ್ನು ಕರೆಯುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ಆದರೆ ಸಭೆಯೇ ಕರೆದಿಲ್ಲ. ಪ್ರತಿ ಅಧಿವೇಶನದಲ್ಲೂ ಸಭೆ ಕರೆಯುತ್ತೇನೆಂದು ಹೇಳುತ್ತಾರೆಯೇ ಹೊರತು ಸಭೆ ಕರೆಯುವುದಿಲ್ಲ.

**Sri RAMACHANDRA GOWDA:-** Why do you want to conduct a meeting? You send a circular to them and if they dint follow, just cancel their contract. ನನ್ನ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲ ಎಂದು ಅವರು ಹೇಳಿಬಿಡಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ರಸ್ತೆಗಳನ್ನು ಮಾಡುವಾಗ National Highways Authority of India ದವರು Government of India ದವರ ಜೊತೆಗೆ ಒಪ್ಪಂದ ಮಾಡಿಕೊಂಡಿರುತ್ತಾರೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಕಂಟ್ರಾಕ್ಟರುಗಳು ಹುಡುಗಾಟ ಆಡುತ್ತಿದ್ದಾರೆಯೇ?

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರು ಹಿರಿಯ ಮುಖಂಡರು. ಕೇಂದ್ರ ಭೂ ಸಾರಿಗೆ ಇಲಾಖೆಯ ಅಡಿಯಲ್ಲಿ National Highways Authority of India ಅಡಿಯಲ್ಲಿ ಸುಮಾರು 36 ಟೋಲ್‌ಗಳು ಬರುತ್ತವೆ. ಅವರು ಟೋಲ್‌ಗಳನ್ನು ಮಾಡುವಾಗ "Exempted Vehicle Lane" ಎಂದು ಮಾಡಿರುತ್ತಾರೆ. That includes VIP, Ambulance and other important vehicles. ಈ "Exempted Vehicle Lane" ಅನ್ನು ಎಲ್ಲಾ ಕಡೆ ಮಾಡಿದ್ದಾರೆ. ಅದು ಖಾಲಿ ಇದ್ದು, ವಾಹನ ದಟ್ಟಣೆಯಾದಾಗ to ease-out the traffic, ಅದನ್ನು ಉಪಯೋಗ ಮಾಡುತ್ತಾರೆ. ಅದನ್ನು ಉಪಯೋಗ ಮಾಡುವ ಸಂದರ್ಭದಲ್ಲಿ ಯಾರಾದರೂ ನಮ್ಮ ವಿ.ಐ.ಪಿ.ಗಳು, ಆಂಬ್ಯುಲೆನ್ಸ್, ನಮ್ಮ ಎಂ.ಎಲ್.ಎ.ಗಳು, ಎಂ.ಪಿ.ಗಳು, ಸಚಿವರುಗಳು, ಹೋದಾಗ ಸ್ವಲ್ಪ ಸಮಸ್ಯೆಯಾಗುತ್ತದೆ. ಇದನ್ನು ನೋಡಿದಾಗ ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಹೀಗೆ ಆಗುತ್ತಿದೆ ಎನ್ನುವ ಭಾವನೆ ಸಹಜವಾಗಿ ಬಂದಿರುತ್ತದೆ.

ಶ್ರೀ ರಾಮಚಂದ್ರಗೌಡ:- ಮಾನ್ಯ ಸಭಾಪತಿಯವರೇ,....

(ಗೊಂದಲ)

**ಡಾ:ಹೆಚ್.ಸಿ.ಮಹದೇವಪ್ಪ:-** ಸ್ವಲ್ಪ ಕೇಳಿ ಸರ್. Why don't you have patience?

**ಶ್ರೀ ರಾಮಚಂದ್ರಗೌಡ:-** ರಸ್ತೆ ಖಾಲಿ ಇದ್ದರೂ ವಾಹನಗಳನ್ನು ತಡೆದು ನಿಲ್ಲಿಸುತ್ತಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ:ಹೆಚ್.ಸಿ.ಮಹದೇವಪ್ಪ:–** ರಾಮಚಂದ್ರಗೌಡರಿಗೆ ಗೊತ್ತಿಲ್ಲವೆ? ಖಾಲಿ ಇದ್ದರೆ ಯಾರಾದರೂ ಬೇಡ ಎಂದು ಹೇಳುತ್ತಾರೆಯೇ? ಖಾಲಿ ಇದ್ದರೂ ಬೇಡ ಎಂದು ಹೇಳಿದರೆ, then he should be a foolish fellow.

**ಶ್ರೀ ರಾಮಚಂದ್ರಗೌಡ:–** ಎಂ.ಎಲ್.ಸಿ. ಎಂದು ಬೋರ್ಡ್ ಇದ್ದರೂ, ‘ಕಾರ್ಡ್ ಕೊಡುವವರೆಗೂ ವಾಹನವನ್ನು ಬಿಡುವುದಿಲ್ಲ’ ಎಂದು ಟೋಲ್‌ಗಳಲ್ಲಿ ಹೇಳುತ್ತಾರೆ.

**ಡಾ:ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಗೈಡ್‌ಲೈನ್ಸ್ ಏನಿವೆ, Rules and Regulations ಏನಿವೆ, ಅದಕ್ಕೆ ಎಲ್ಲಾ concessionaires ಅನ್ನು ಈ ತಿಂಗಳು 13ನೇ ತಾರೀಖು ಸಂಜೆ 5 ಗಂಟೆಗೆ ಸಮ್ಮೇಳನ ಸಭಾಂಗಣದಲ್ಲಿ ಸಭೆ ಕರೆದಿದ್ದೇನೆ. ನಮ್ಮ ಸದಸ್ಯರುಗಳನ್ನೆಲ್ಲಾ ಕರೆಯುತ್ತೇನೆ. ಅಲ್ಲಿ ಏನೇನು provisions ಇದೆ. . . . .

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ರೌಡಿಗಳು ಹೋದರೆ ಬಿಡುತ್ತಾರೆ, ಆದರೆ ನಮಗೆ ಬಿಡುವುದಿಲ್ಲ.

**ಡಾ:ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರು ಈ ರೀತಿ ಮಾತನಾಡಿದರೆ ಹೇಗೆ?

**(ಈ ಹಂತದಲ್ಲಿ ವಿರೋಧ ಪಕ್ಷದ ಕೆಲವು ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:–** ಮಾನ್ಯ ಸಚಿವರೇ, ಯಾರು ಅವರ ಸ್ಥಾನದಲ್ಲಿ ನಿಂತು ಮಾತನಾಡುವುದಿಲ್ಲವೋ ಅವರ ಪ್ರಶ್ನೆಗೆ ನೀವು ಉತ್ತರ ನೀಡುವ ಅವಶ್ಯಕತೆ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಲೋಕೋಪಯೋಗಿ ಸಚಿವರು ಎಷ್ಟರ ಮಟ್ಟಿಗೆ ವಿಫಲರಾಗಿದ್ದಾರೆ ಎನ್ನುವುದಕ್ಕೆ ಇದು ಸಾಕ್ಷಿ. ಎಷ್ಟು ಸಲ ಅವರು ಈ ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ? ಇದಕ್ಕೆ ತಾವು privilege move ಮಾಡಿ ಎಂದು ಹೇಳಿದ್ದೀರಿ. ಆಯಿತು, privilege move ಮಾಡುತ್ತೇವೆ. Privilege move ಮಾಡಿದರೂ ಕೂಡ ಇವರಿಗೇನಾದರೂ ಗೌರವ, ಜವಾಬ್ದಾರಿ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಇದೆಯೇ? Privilege move ಮಾಡುತ್ತೇವೆ ಎಂದು ಇಟ್ಟುಕೊಳ್ಳಿ, ಅವರು ಏನು ಮಾಡುವುದಕ್ಕೆ ಹೊರಟಿದ್ದಾರೆ ಎಂಬುದನ್ನಾದರೂ ಹೇಳಿಬಿಡಲಿ.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಟೋಲ್‌ಗಳಲ್ಲಿನ ಸಮಸ್ಯೆ ಇವತ್ತಿನದಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆಯಿತು, ಇವರು ಒಂದು ಕೆಲಸ ಮಾಡಲಿ. ಎಂ.ಎಲ್.ಎ., ಎಂ.ಎಲ್.ಸಿ., ಎಂ.ಪಿ., ಮಂತ್ರಿಗಳು ದುಡ್ಡು ಕಟ್ಟಿ ಹೋಗಿ ಎಂದು ಹೇಳಿಬಿಡಿ. ಮಾನ್ಯ ದೇವೇಗೌಡರು ನಿಂತಿದ್ದರು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇವರಿಗೆ ನಾಚಿಕೆಯಾಗುವುದಿಲ್ಲವೆ? ಅದಕ್ಕಿಂತ ಬೇಕೇ? ನಿಮ್ಮ ಕೈಯಲ್ಲಿ ಆಗುತ್ತದೆಯೋ, ಇಲ್ಲವೋ ಹೇಳಿ; ಆಗದಿದ್ದರೆ ಆಗುವುದಿಲ್ಲ ಎಂದು ಹೇಳಿ.

(ಗೊಂದಲ)

*(07) 07.02.2017 ಕೆಹೆಚ್/ಜಿಆರ್ 11.20*

**ಡಾ॥ ಎಚ್.ಸಿ.ಮಹದೇವಪ್ಪ(ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಟೋಲ್‌ನಲ್ಲಿ ರಿಯಾಯಿತಿ ಕೊಡುವುದಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಾರೆ. It is not in the reach of the State Government. NHAI (*National Highways Authority of India)* ಕಡೆಯಿಂದ ಆ ತೀರ್ಮಾನವಾದರೆ ಕರ್ನಾಟಕ ಸರ್ಕಾರ ಅದಕ್ಕೆ ಬದ್ಧವಾಗಿರುತ್ತದೆ. I request the Hon'ble Leader of Opposition to influence the Union Government to take such decisions, so that every body's mind will be very clear.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿಮಗೆ ಶಕ್ತಿಯಿಲ್ಲ ಅಂದರೆ ಮೀಟಿಂಗ್‌ಗೆ ಏಕೆ ಕರೆಯುತ್ತೀರಿ? ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳಿಬಿಡಿ.

**ಡಾ॥ ಎಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, Toll Policy is made by the Government of India. 2008ರಲ್ಲಿ ಭಾರತ ಸರ್ಕಾರವು Toll Policy ಮಾಡಿರುವುದರಿಂದ, ಈ ಪಾಲಿಸಿಯಿಂದ ಕೆಲವೊಮ್ಮೆ ನಮ್ಮ ಮೇಲ್ಮನವಿಗೆ ತೊಂದರೆಯಾಗುತ್ತಿದೆ. ಅದಕ್ಕೆ ತಾವುಗಳು ಬರಬೇಕೆಂದು, ನಾನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನೋಟೀಸ್ ಅನ್ನು ಸರ್ವ್ ಮಾಡಿ, ನಮ್ಮ ಸದಸ್ಯರನ್ನು ಕರೆಸಿ ಚರ್ಚೆ ಮಾಡಬೇಕು. It is a policy matter of the Union Government. Toll Policy has been made by the Union Government under the Rules of 2008 (National Highways Fee (Determination of Rates and Collection) Rules, 2008).

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮೀಟಿಂಗ್ ಮಾಡುವುದಕ್ಕೆ ಸಮಯವನ್ನು ವ್ಯರ್ಥ ಮಾಡುವುದು ಬೇಡ. ನಮ್ಮಿಂದ ಆಗುವುದಿಲ್ಲವೆಂದು ಸಚಿವರು ಹೇಳಿಬಿಡಲಿ. ಅವರು ಪುನಃ ಏತಕ್ಕೆ ಮೀಟಿಂಗ್ ಕರೆಯುತ್ತಾರೆ?

**ಡಾ॥ಎಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಯಾವಾಗ ನಮ್ಮ ಸದಸ್ಯರಿಗೆ ತೊಂದರೆಯಾಯಿತು, ನಾನು 2 ಬಾರಿ ಹೇಳಿದ್ದೇನೆ. ಈ ಬಗ್ಗೆ ಮೀಟಿಂಗ್ ಅನ್ನು ಮಾಡಿದ್ದೇನೆ. ಇನ್ನೂ time and again ಅಲ್ಲಿ ಇಲ್ಲಿ ಈ ರೀತಿಯ ಘಟನೆಗಳು ನಡೆಯುತ್ತಿರುತ್ತದೆ. ಸೀರಿಯಸ್ ಆಗಿ 13ನೇ ತಾರೀಖಿನಂದು ಎಲ್ಲರೂ ಮೀಟಿಂಗ್‌ಗೆ ಬರಬೇಕೆಂದು ನಾನು ಎಲ್ಲಾ ಸದಸ್ಯರನ್ನು ಕರೆಯುತ್ತೇನೆ. ಅವರ ಸಮಸ್ಯೆಗಳನ್ನು ಕೇಳಬೇಕು ಮತ್ತು ನಿಮ್ಮ ತೊಂದರೆಗಳು ಏನು ಇದೆ ಎಂದು ಹೇಳಬೇಕು. As per the Toll Policy and guidelines of the Ministry of Road Transport and Highways you have to act ಎಂದು ಹೇಳುವುದಕ್ಕೆ ಮೀಟಿಂಗ್‌ಗೆ ಕರೆದಿದ್ದೇನೆ. ಒಂದು ವೇಳೆ ಅವರು ಬೇಡವೆಂದು ಹೇಳಿದರೆ, ಕೇಂದ್ರ ಸರ್ಕಾರಕ್ಕೆ influence ಮಾಡಿ ಬೇಡ ಎಂದು ಹೇಳಲಿ, I am also very happy. The State Government is extremely happy. Whatever may be the decision taken by the Central Government, we will abide by it.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗ ತಮ್ಮ ಬೇಡಿಕೆಗಳು ಏನು ಎಂದು ನನಗೆ ಗೊತ್ತಾಗಲಿಲ್ಲ. ಸದನದಲ್ಲಿ ಒಬ್ಬೊಬ್ಬರು ಮಾತನಾಡಿ, ಇಬ್ಬಿಬ್ಬರು ಮಾತನಾಡಿದರೆ ಆಗುವುದಿಲ್ಲ.

**(ಈ ಹಂತದಲ್ಲಿ ಧರಣಿಯಲ್ಲಿ ನಿರತರಾಗಿದ್ದ ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡರವರು ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಿದರು)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, we will ask the Central Government to do it. ಮಾನ್ಯ ಸಚಿವರೆ, ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಕೈತೊಳೆದುಕೊಂಡು ಬಿಡಿ. ನಾವು ಸಂಸತ್ ಸದಸ್ಯರ ಕಡೆಯಿಂದ ಸಂಸತ್ತಿನಲ್ಲಿ ಪ್ರಶ್ನೆ ಕೇಳಿಸುತ್ತೇವೆ, ಇದು ಅಲ್ಲಿಯೇ ಇತ್ಯರ್ಥ ಆಗಲಿ.

**(ಈ ಹಂತದಲ್ಲಿ ಧರಣಿಯಲ್ಲಿ ನಿರತರಾಗಿದ್ದ ಮಾನ್ಯ ಸದಸ್ಯರಾದ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿರವರು ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಿದರು)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮೀಟಿಂಗ್ ಕರೆಯುತ್ತೇವೆ ಎಂದು ಹೇಳಿದರು. ಸದನದಲ್ಲಿ ಮಾತನಾಡಲು ಒಂದು ನಿಮಿಷ ಅವಕಾಶ ಕಲ್ಪಿಸಿಕೊಡಿ.

**ಸಭಾಪತಿಯವರು:-** ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿಯವರೇ, ಅವರು ಏನು ಬೇಕಾದರೂ ಮಾತನಾಡಲಿ ನೀವು ಕುಳಿತುಕೊಳ್ಳಿ. ನೀವು ಸದನದಲ್ಲಿ ಉತ್ತರವನ್ನು ಕೊಡಬೇಡಿ. ಅವರು ಎಷ್ಟೊತ್ತು ಮಾತನಾಡುತ್ತಾರೋ ಮಾತನಾಡಲಿ. ಇದು ಪ್ರಶ್ನೋತ್ತರ ಅವಧಿಯಾಗಿರುತ್ತದೆ. ನಿಮ್ಮ ಬೇಡಿಕೆಗಳೇನು? ಏನಾಗಬೇಕೆಂಬುದನ್ನಷ್ಟೇ ಹೇಳಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಮಗೆ ದಯಮಾಡಿ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

**ಸಭಾಪತಿಯವರು:-** ಶ್ರೀ ಗೋಪಾಲಸ್ವಾಮಿಯವರು ತಮಗೂ ಸಹ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ.

**ಸಭಾಪತಿಯವರು:-** ಇದು ಭಾಷಣದ ಅವಧಿಯಲ್ಲ, ಪ್ರಶ್ನೋತ್ತರ ಅವಧಿ. ಶ್ರೀ ಚೌಡರೆಡ್ಡಿಯವರೇ, ದಯಮಾಡಿ ಕುಳಿತುಕೊಳ್ಳಿ. ನಿಮ್ಮ ಬೇಡಿಕೆಗೆ ಅವರು ಪರಿಹಾರ ಹೇಳಿದರೆ, ಅದನ್ನು ಒಪ್ಪಿಕೊಳ್ಳುವುದಕ್ಕೆ ನೀವು ತಯಾರಿಲ್ಲ. ನಿಮಗೆ ಏನಾಗಬೇಕೆಂದು ಹೇಳಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಾನು ಕಳೆದ ಬಾರಿ ಸದನದಲ್ಲಿ ಹೇಳಿದೆ. ನನ್ನ ಮೇಲೆ ಹಲ್ಲೆ ಮಾಡುವುದಕ್ಕೆ ಬಂದಿದ್ದರು. ಇದಕ್ಕೆ ಯಾರು ಜವಾಬ್ದಾರಿ? ಯಾರಿಗೆ ದೂರವಾಣಿ ಮಾಡಬೇಕು ಎಂದು ಕೇಳಿದಾಗ 'ಪ್ರಧಾನ ಕಾರ್ಯದರ್ಶಿ' ಎಂದು ಹೇಳಿದರು. ಆ ಸ್ಥಳದಲ್ಲಿಯೇ ಪ್ರಧಾನ ಕಾರ್ಯದರ್ಶಿಯವರಿಗೆ ನಾಲ್ಕು ಬಾರಿ ದೂರವಾಣಿ ಕರೆಯನ್ನು ಮಾಡಿ ಕೇಳಿದ್ದೇನೆ. ಇದರ ಬಗ್ಗೆ ಇದುವರೆವಿಗೂ ಯಾವ ಉತ್ತರವೂ ಇಲ್ಲ. ಇದರ ಬಗ್ಗೆ ಕೇಳಬೇಕು ಅಂದರೆ ಈ ವಿಷಯ ಸದನದಲ್ಲಿಯೇ ಪ್ರಸ್ತಾಪವಾಗಬೇಕು. ಅದಕ್ಕೆ ಇನ್ನು ಮೂರು ತಿಂಗಳಾಗಬೇಕು. ದಯವಿಟ್ಟು ಇದು ಜ್ವಲಂತ ಸಮಸ್ಯೆಯಾಗಿರುವುದರಿಂದ ಮಾನ್ಯ ಸಚಿವರು ಇದಕ್ಕೆ ಸರಿಯಾದ ಉತ್ತರವನ್ನು ಕೊಟ್ಟು, ನಮಗೆ ಅವಕಾಶವನ್ನು ಕೊಡಬೇಕು. ಪ್ರತಿ ಸಮಯದಲ್ಲೂ ಕೂಡ ಸಭೆ ನಡೆಸುತ್ತೇವೆ ಎಂದು ಹೇಳುತ್ತಾರೆ. ಆದರೆ ಸಭೆಯನ್ನು ಮಾಡುವುದಿಲ್ಲ. ಈಗ ಸಭೆಯನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ನಮ್ಮನ್ನು ಆ ಸಭೆಗೆ ಕರೆದಿರುವುದಿಲ್ಲ.

**ಡಾ|| ಎಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, I will call all the Hon'ble Members. I will invite all the Hon'ble Members to the meeting.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನೀವು ಸಭೆಯನ್ನು ಮಾಡಿಲ್ಲ ಅನ್ನುವುದೇ ನಮ್ಮ ಆರೋಪ.

**ಡಾ|| ಎಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, That's what I am telling. I have already fixed the time. I am calling all the Hon'ble Members to the meeting on 13th of this month at 5 o'clock.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಸದನದ ಒಬ್ಬ ಸದಸ್ಯರ ಮೇಲೆ ಹಲ್ಲೆ ನಡೆಯುತ್ತಿದೆ ಎಂದು ಹೇಳಿದರೂ ಸಹ ಸಭೆಯನ್ನು ಮಾಡಿಲ್ಲ ಎಂದರೆ, ಅದಕ್ಕೆ ಕಾರಣ ಏನು?

**ಡಾ|| ಎಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಭೆಯನ್ನು ಮಾಡುತ್ತೇನೆ ಎಂದು ಹೇಳುತ್ತಿದ್ದೇನೆ. ಇನ್ನೇನು ಮಾಡಲಿ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ನೀವು ಈಗ ಮೀಟಿಂಗ್ ಮಾಡುವುದಾದರೆ, ನಾನು ಸಭೆಯನ್ನು ಮುಂದೂಡುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಸದನದಲ್ಲಿ ಕೇಳಿದ್ದಾರೆ. ಇದು ಎಲ್ಲಾ ಸದಸ್ಯರ ಗೌರವ ಮತ್ತು ಸ್ವಾಭಿಮಾನದ ವಿಚಾರವಾಗಿದೆ. ಯಾರು ಟೋಲ್‌ಗಳಲ್ಲಿ ಕಾರ್ಡ್‌ಗಳನ್ನು ತೋರಿಸಿಕೊಂಡು ಎಂ.ಎಲ್.ಎ./ಎಂ.ಎಲ್.ಸಿ. ಎಂದು ಹೇಳಿಕೊಂಡು ಹೋಗುವಂತಹ ಪರಿಸ್ಥಿತಿಯಾದರೆ, ಇದು ನಮಗೂ ಸಹ ದೊಡ್ಡ ಅವಮಾನದ ವಿಚಾರ. They may belong to whichever party. Even bureaucrats also are there. There is a Circular. ಅದೇನೆಂದರೆ, ಸರ್ಕಾರಿ ವಾಹನಗಳಿಗೆ ವಿನಾಯಿತಿ ಕೊಡಬೇಕು. We are also Government Servants. We are public representatives. ಮಾನ್ಯ ಸಚಿವರು 13ನೇ ತಾರೀಖಿನಂದು ಸಭೆಯನ್ನು ಕರೆಯುತ್ತೇನೆ ಎಂದು ಹೇಳುತ್ತಿದ್ದಾರೆ. Because, we have to take them also into confidence. If it is a question of State High Ways, within one minute we can issue directions to them. ಈಗ ಮಾನ್ಯ ಮಂತ್ರಿಗಳು ಏನು ಪ್ಲಾನ್ ಮಾಡಿದ್ದಾರೆ ಅಂದರೆ, he is going to request them. ರಿಕ್ವೆಸ್ಟ್ ಮಾಡಿ, ನಮ್ಮ ಎಂ.ಎಲ್.ಎ. ವ್ಯಾಪ್ತಿಯಲ್ಲಿ ಈ ರೀತಿ ಇದೆ ಎಂದು ತಿಳಿಸಿ ಅವರ ಹತ್ತಿರವೇ ಇದಕ್ಕೆ ಪರಿಹಾರವನ್ನು ಕೇಳುವುದಕ್ಕೆ ಒಂದು ಪ್ರಯತ್ನ ಮಾಡುತ್ತಿದ್ದಾರೆ. We will also issue official directions to them. This is the desire of the Hon'ble Members, ನೀವು ಇದನ್ನು ಪ್ರತ್ಯೇಕವಾಗಿ ಮಾಡಬೇಕಾಗುತ್ತದೆ ಎಂದು ಹೇಳುತ್ತೇವೆ. ಇಲ್ಲಿ ಎರಡು-ಮೂರು ವಿಚಾರಗಳಿವೆ. ಎಂ.ಎಲ್.ಎ./ಎಂ.ಎಲ್.ಸಿ.ಗಳು ವಾಹನಗಳಲ್ಲಿ ಸಂಚರಿಸುವಾಗ ಕೆಲವರು ಪಾಸ್ ಅಳವಡಿಸಿಕೊಂಡಿರುತ್ತಾರೆ, ಕೆಲವರು ಕೆಲವು ಸಂದರ್ಭಗಳಲ್ಲಿ ವಾಹನಗಳಿಗೆ ಪಾಸ್ ಅಳವಡಿಸಿಕೊಂಡಿರುವುದಿಲ್ಲ. ಅದಕ್ಕೆ ಒಂದು ಸಮರ್ಪಕವಾದ understanding ಅವರ ಜೊತೆಯಲ್ಲಿಯೇ ಬರಬೇಕಾಗುತ್ತದೆ. ಇಲ್ಲ, ನಾವು ದಬಾವಣೆ ಮೇಲೆ ನೀವು ಹೀಗೆ ಮಾಡಬೇಕೆಂದರೆ... this can also be expelled. ಎಷ್ಟೋ Legislators ಗಳಿಗೆ ಸೇರಿದ ನಮ್ಮ ಪಾಸ್‌ಗಳನ್ನು ಕಲರ್ ಜೆರಾಕ್ಸ್ ಮಾಡಿಕೊಂಡು ಬಾರ್‌ಗಳ ಮುಂದೆ ವಾಹನಗಳನ್ನು ನಿಲ್ಲಿಸಿರುವುದನ್ನು ನಾನು ನೋಡಿದ್ದೇನೆ. I have just removed my pass. ನನ್ನ ಪಾಸನ್ನೇ ದುರುಪಯೋಗ ಮಾಡಿಕೊಳ್ಳಲಾಗಿತ್ತು. ನನ್ನ ಪಾಸ್‌ನ ನಂಬರ್ ನನಗೆ ಗೊತ್ತಾಯಿತು. ನಮ್ಮ ಶಿಷ್ಯರೇ ನನ್ನ ಪಾಸ್‌ನ್ನು ಕಲರ್ ಜೆರಾಕ್ಸ್ ಮಾಡಿಕೊಂಡು, ಅವರ ವಾಹನಗಳ ಮೇಲೆ ಎಂ.ಎಲ್.ಸಿ. ಎಂದು ಹಾಕಿಕೊಂಡು ಬಾರ್, ವೈನ್ ಶಾಪ್ ಮುಂದೆ ವಾಹನಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಿಲ್ಲಿಸಿದ್ದಾರೆ. ಎಷ್ಟೋ ಜನ ನನ್ನನ್ನು ಕೇಳಿದ್ದಾರೆ. ಈ ರೀತಿ ಕೆಲವರು ಬಹಳ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಒಂದು ಮ್ಯಾಗ್ನಟಿಕ್ ಕಾನ್ಸೆಪ್ಟ್ ಇದೆ. ಅದನ್ನು ನಮ್ಮ ವಾಹನಗಳಿಗೆ ಕೊಟ್ಟರೆ ಸ್ವಯಂಚಾಲಿತವಾಗಿ ನಂಬರ್ ರೀಡ್ ಆಗುತ್ತದೆ. So, let them workout.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಕಾರ್ ಇರುವುದು ಒಂದೇ. ಕಾರ್ ಇಲ್ಲ ಅಂದರೆ, ನಾವು ಒಂದೊಂದು ದಿವಸ ಒಂದೊಂದು ಕಾರಿನಲ್ಲಿ ಹೋಗುತ್ತೇವೆ. ಪಾಸ್ ಇರುವುದು ಕಾರಿಗೆ ಅಲ್ಲ, ಪಾಸ್ ಇರುವುದು ನನಗೆ. ಒಂದು ದಿವಸ ನಾನು ಈ ಕಾರಿನಲ್ಲಿ ಹೋಗುತ್ತೇನೆ. ಮತ್ತೊಂದು ದಿವಸ ಇನ್ನೊಂದು ಕಾರಿನಲ್ಲಿ ಹೋಗುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ಗುರುತಿನ ಚೀಟಿ ಅಂದರೆ ಅದನ್ನು magnetic Identity Card ಅನ್ನು lift ಮಾಡುವಂತಹ ಅವಕಾಶ ಇದೆ. ನಾವು ಹೊರಗಡೆ ಪ್ರವಾಸ ಮಾಡುವಾಗ ಎಲ್ಲ ಕಡೆ ನೋಡಿದ್ದೇವೆ. I am very happy. ನಿಮಗೆ ಅಭಿನಂದಿಸಿ, ತಾವು ಒಳ್ಳೆಯ ಕೆಲಸ ಮಾಡಿದ್ದೀರಿ. ತಾವು ಸರ್ಕಾರದ, ವಿರೋಧಪಕ್ಷದವರ ಮತ್ತು ಮಾಧ್ಯಮದವರ ಗಮನವನ್ನು ಸೆಳೆದಿದ್ದೀರಿ. We will sort out this problem. You just give time till 13th of this month.

**ಸಭಾಪತಿಯವರು:-** ಈಗ ಧರಣಿಯಲ್ಲಿ ನಿರತರಾಗಿರುವ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಮುಂದಿನ ಕಲಾಪವನ್ನು ನಡೆಸಲು ನನಗೆ ಅನುಕೂಲ ಮಾಡಿಕೊಡಬೇಕೆಂದು ಕೋರುತ್ತಿದ್ದೇನೆ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣೆಯಲ್ಲಿ ನಿರತರಾಗಿದ್ದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

**ಸಭಾಪತಿಯವರು:-** ಶ್ರೀ ಗೋಪಾಲಸ್ವಾಮಿಯವರೇ, ನಿಮಗೆ ಇನ್ನು ಸಮಧಾನವಾಗಿಲ್ಲವೇ? ಈಗಾಗಲೇ ಅರ್ಧಗಂಟೆ ಆಯಿತು. ಅವರು ಅದೇ ಪ್ರಶ್ನೆಯನ್ನು ಕೇಳುತ್ತಾರಂತೆ. ಅವರು ಬಿಡುವುದಿಲ್ಲ. ನೀವು ಕೇಳಿ ನಿಮ್ಮದು ಇನ್ನು ಅರ್ಧ ಗಂಟೆ ನಡೆಯಲಿ. ಈ ದಿವಸ ಒಂದು ಪ್ರಶ್ನೆ ಆಗುತ್ತದೆ ಅಷ್ಟೆ. ನಾನು ಮಧ್ಯಾಹ್ನ 12.00 ಗಂಟೆಗೆ ಪ್ರಶ್ನೋತ್ತರ ಅವಧಿಯನ್ನು ಮುಕ್ತಾಯ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಇಷ್ಟೆ. ಡ್ರೈವರ್ ನನ್ನ ಮೇಲೆ ಹಲ್ಲೆ ಮಾಡುವುದಕ್ಕೆ ಬಂದರು. ಈ ಬಗ್ಗೆ ನನ್ನ ಡ್ರೈವರ್ ಮೇಲೆ ಎಫ್ಐಆರ್ ಆಗಿದೆ. ನನ್ನ ಪ್ರಶ್ನೆ ಏನೆಂದರೆ, ಕೇಂದ್ರ ಸರ್ಕಾರದಿಂದ ಅಧಿಕಾರಿಗಳನ್ನು ಕರೆಸಬೇಕು ಎನ್ನುವುದೇ ನನ್ನ ಮನವಿಯಾಗಿದೆ. ಈ ಪ್ರಶ್ನೆ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಪಟ್ಟಿರುವುದರಿಂದ ಕೇಂದ್ರ ಸರ್ಕಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಯಾರು ಯಾರು ಇದ್ದಾರೆ, ಅವರನ್ನು ಸಹ ಸಚಿವರು ಸಭೆಗೆ ಕರೆಸಬೇಕು. ಸಭೆಯಲ್ಲಿ ಎಲ್ಲರ ಜೊತೆ ಚರ್ಚೆ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರು ಈ ಬಗ್ಗೆ ಹೇಳುತ್ತಾರೆ.

**ಪ್ರಶ್ನೆ ಸಂಖ್ಯೆ: 21**

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನೂತನ ಪಟ್ಟಣ ಪಂಚಾಯಿತಿಗಳಿಗೆ ತಲಾ 5.00 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರ ಜೊತೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಮಾತನಾಡುತ್ತಿದ್ದೇನೆ. ಏಕೆಂದರೆ ಇಲ್ಲಿಯವರೆಗೂ ನೂತನ ಪಟ್ಟಣ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳು ಆಗಿದ್ದವು. ಪ್ರತಿವರ್ಷ ಗ್ರಾಮ ಪಂಚಾಯಿತಿಯಲ್ಲಿ ಯೋಜನೆಗಳನ್ನು ಮಾಡಿಕೊಂಡು, ಕುಡಿಯುವ ನೀರಿಗೆ ಒಂದು ಬಜೆಟ್ ಪ್ರಾವಿಷನ್ ಅನ್ನು ಮಾಡುತ್ತಿದ್ದಾರೆ. ಇವತ್ತು ನೀವು ಶಾಶ್ವತವಾಗಿ ಪಟ್ಟಣ ಪ್ರದೇಶಗಳಿಗೆ ನೀರು ಕೊಡಬೇಕಾದರೆ KUWSDB ಮುಖಾಂತರ ಸಹಜವಾಗಿ ತಮ್ಮ ಇಲಾಖೆಯಿಂದ ಮಾಡುವಂತಹದ್ದಾಗಿರುತ್ತದೆ. ಹಾಗಾಗಿ, ಎಲ್ಲೆಲ್ಲಿ ನೂತನ ಪಟ್ಟಣ ಪಂಚಾಯಿತಿಗಳಿಗೆ ಕಾಲುವೆಗಳ ಮುಖಾಂತರವಾಗಲಿ ಅಥವಾ ground water ಮುಖಾಂತರವಾಗಲಿ ಅದನ್ನು ಕೈಗೊಳ್ಳುವುದಕ್ಕೆ ತಕ್ಷಣ ನೀವು ಒಂದು ಬಜೆಟ್ ಒದಗಿಸಿ ಪ್ರಯತ್ನ ಮಾಡದೇ ಇದ್ದರೆ, ಮುಂದಿನ ದಿನಗಳಲ್ಲಿ ಆ ಪಟ್ಟಣಗಳಿಗೆ ಬಹಳ ತೊಂದರೆಯಾಗುವಂತಹ ಪರಿಸ್ಥಿತಿ ಇದೆ. ಈಗಾಗಲೇ ನಾವು KUWSDB ಅವರ ಜೊತೆಯಲ್ಲಿ ಮಾತನಾಡಿದಾಗ ಸರ್ಕಾರದ ವತಿಯಿಂದ ನಾವು ಅನುಮತಿ ಪಡೆಯಬೇಕೆಂದು ಹೇಳುತ್ತಿದ್ದಾರೆ. ನೀವು ಯಾವ ರೀತಿ ಬಜೆಟ್ ಪ್ರಾವಿಷನ್ ಮಾಡುವುದಕ್ಕೆ ಆದ್ಯತೆ ಮೇಲೆ ಅಥವಾ ನೂತನವಾಗಿ ಪಟ್ಟಣ ಪಂಚಾಯಿತಿಗಳಿಗೆ ಅವಕಾಶ ಕೊಟ್ಟಿದ್ದೀರಿ. ಮೂಲಭೂತ ಸೌಲಭ್ಯಗಳಲ್ಲಿ ಅತಿ ಮುಖ್ಯವಾಗಿ ಕುಡಿಯುವ ನೀರಿಗೆ ಆದ್ಯತೆ ಕೊಡುವಂತಹ ಅವಶ್ಯಕತೆ ಇದೆ. ಎರಡನೆಯದಾಗಿ, ನಾನು ಮಾನ್ವಿ ಪಟ್ಟಣದಲ್ಲಿಯೇ ಇರುತ್ತೇನೆ. ಬೆಳಿಗ್ಗೆ ಎದ್ದರೆ ಬೆಂಗಳೂರಿನಿಂದ 6 ಗಂಟೆಗೆ ದೂರವಾಣಿ ಬರುತ್ತದೆ. ಐದು ದಿನಗಳಿಗೊಮ್ಮೆ ಕುಡಿಯುವ ನೀರನ್ನು ಕೊಡುತ್ತಿದ್ದಾರೆ. ಏಕೆಂದರೆ, ತಾವೇ ಉತ್ತರದಲ್ಲಿ ತಿಳಿಸಿರುವಂತೆ ನವೆಂಬರ್ 16ನೇ ತಾರೀಖಿಗೆ ತುಂಗಭದ್ರಾ ನದಿಯಲ್ಲಿ ನೀರು ಬತ್ತಿ ಹೋಗಿದೆ. ಇದು ಜಿಲ್ಲಾಧಿಕಾರಿಗಳಿಗೂ ಮತ್ತು ಮುಖ್ಯ ಅಭಿಯಂತರರಿಗೂ ಹಾಗೂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶಾಸಕರಿಗೂ ಗೊತ್ತಿರುವಂತಹ ವಿಷಯವಾಗಿರುತ್ತದೆ. ಹಾಗಾಗಿ, ನವೆಂಬರ್ 15ನೇ ತಾರೀಖಿನಿಂದ ಆಗಸ್ಟ್‌ವರೆಗೂ ನೀರು ಬಿಡಬೇಕು. ಆದರೆ Reservoir ನಲ್ಲಿ ನೀರಿಲ್ಲ.

*08/ 07-02-2017/11-30/bkp-gr*

**ಶ್ರೀ ಎನ್.ಎಸ್.ಬೋಸ್‌ರಾಜು : ಟುಬಜಣ**ಜಿಲ್ಲಾಧಿಕಾರಿಗಳ ಸಭೆಯಲ್ಲಿಯೂ ಆ ಒಂದು ವಿಷಯವನ್ನು raise ಮಾಡಿದ್ದು, ಅಲ್ಲಿ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಇವರು ಈ ವಿಚಾರವಾಗಿ ಹೇಳಿದ್ದಾರೆ. ಅಂದರೆ 7 ತಿಂಗಳು ನೀರು ಇರುವುದಿಲ್ಲ. ಆದರೆ ಉತ್ತರದಲ್ಲಿ 60 ದಿವಸಗಳು ಎಂದು ಹೇಳಲಾಗಿದೆ. ಆ ನದಿಯಲ್ಲಿ ಸುಮಾರು 7 ತಿಂಗಳು ನೀರು ಇರುವುದಿಲ್ಲವೆನ್ನುವ ವಿಚಾರವನ್ನು ಸನ್ಮಾನ್ಯ ಸಚಿವರು ಗಮನಿಸಬೇಕು.

**ಸಭಾಪತಿಯವರು:–** ತಮಗೆ ಏನು ಬೇಕೆನ್ನುವ ಬಗ್ಗೆ ಪ್ರಶ್ನೆ ಕೇಳಿ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಕಳೆದ ವರ್ಷದ ಮೇ ತಿಂಗಳ 16ನೇ ತಾರೀಖಿನಂದು ಸನ್ಮಾನ್ಯ ಮುಖ್ಯಮಂತ್ರಿಗಳು ಬಂದು ಬರಗಾಲದ ಬಗ್ಗೆ ಮಾತನಾಡಿದಂತಹ ಸಂದರ್ಭದಲ್ಲಿ KUWSDB ಅಧಿಕಾರಿಗಳು, ಶ್ರೀಯುತ ಅನಿಲ್‌ಕುಮಾರ್‌ರವರು ಹಾಗೂ ಇನ್ನಿತರ ಅಧಿಕಾರಿಗಳು ಹಾಗೂ ಜಿಲ್ಲಾ ಮಂತ್ರಿಗಳು ಹಾಜರಿದ್ದರು. ಈ ವಿಚಾರವನ್ನು ಅಂದು ನಡೆದ ಸಭೆಯಲ್ಲಿ ಗಂಭೀರವಾಗಿ ತೆಗೆದುಕೊಂಡು ತಕ್ಷಣ ಸರ್ಕಾರದ ಗಮನಕ್ಕೆ ತರಬೇಕೆಂದು, ಅಲ್ಲಿ impounding reservoir ಆಗಬೇಕೆಂದು ಸಭೆಯ ನಡವಳಿಯಲ್ಲಿ ದಾಖಲಾಗಿದೆ. ಆದರೂ ಸಹ ಇವತ್ತಿನವರೆಗೂ ಈ ವಿಚಾರವಾಗಿ ಯಾವ ಅಧಿಕಾರಿಗಳು ಸಹ ಗಮನ ಹರಿಸುತ್ತಿಲ್ಲ. ಶಾಸಕರುಗಳಾದ ನಾವೇ ತಿರುಗಾಡಿಕೊಂಡು, ಅವರುಗಳಿಗೆ ಹೇಳಬೇಕು. ಈ ವಿಚಾರವಾಗಿ ನಾನು ದೀರ್ಘವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಇಲ್ಲಿ 5 ಪ್ರಶ್ನೆಗಳಿವೆ. ತಾವೇ ಹೇಳಿದಂತೆ ಅಲ್ಲಿ ಕೆರೆ ನಿರ್ಮಾಣವಾಗಲಿಕ್ಕೆ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮುನ್ಸಿಪಾಲಿಟಿಯಿಂದ ಭೂಮಿಯನ್ನು ತೆಗೆದುಕೊಂಡಿದ್ದೇವೆ.

**ಸಭಾಪತಿಯವರು:–** ನಿಮ್ಮ ಪ್ರಶ್ನೆ ಏನೆಂದು ಕೇಳಲಿಲ್ಲ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಅದಕ್ಕೆ 88 ಕೋಟಿ ರೂಪಾಯಿಗಳು ಬೇಕೆಂದು ಹೇಳಿ, ಆರ್ಥಿಕ ಇಲಾಖೆಗೆ ಈ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಹೇಳುತ್ತೀರಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

2005 ರಲ್ಲಿ ನಾನು ಶಾಸಕನಾಗಿರುವಂತಹ ಸಂದರ್ಭದಲ್ಲಿ, ರಾಜಕೀಯ ಕಾರ್ಯದರ್ಶಿಯಾಗಿದ್ದಂತಹ ಸಂದರ್ಭದಲ್ಲಿ ನಮ್ಮ ಸರ್ಕಾರದ ಕೊನೆಯ ಕ್ಯಾಬಿನೆಟ್‌ನಲ್ಲಿ ಇದಕ್ಕೆ 815 ಲಕ್ಷ ರೂಪಾಯಿಗಳಿಗೆ ಮಂಜೂರಾತಿಯನ್ನು ಮಾಡಿಸಿದ್ದೇವೆ.

Mr.CHAIRMAN:- What is your question? ತಮ್ಮ ಪ್ರಶ್ನೆ ಏನೆಂದು ಕೇಳಲಿಲ್ಲ. ಸಚಿವರು ಏನು ಮಾಡಬೇಕೆಂದು ಮೊದಲು ಹೇಳಿ. ಇದು ಪ್ರಶ್ನೋತ್ತರ ಅವಧಿಯಾಗಿದೆ. ಇಲಾಖೆ ಬಗ್ಗೆ ಚರ್ಚೆ ಬೇಡ.

**ಶ್ರೀ ಎನ್.ಎಸ್.ಬೋಸ್‌ರಾಜು:-** ಇದರಲ್ಲಿ ಕೆರೆ ನಿರ್ಮಾಣವಾಗದೆ, ಅಲ್ಲಿ ಲಭ್ಯವಿರುವಂತಹ 5 ಕೋಟಿ ರೂಪಾಯಿಗಳಿಂದ ಕೆರೆಗೆ inlet, outlet, jack well ಇದೆಲ್ಲವನ್ನು ಮಾಡಿದ್ದಾರೆ. ಆದರೆ, ಕೆರೆ ನಿರ್ಮಾಣಕ್ಕೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. 5 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದರಿಂದ ಕೆರೆ ನಿರ್ಮಾಣ ಮಾಡುವ ಸಲುವಾಗಿ ನಾವು 88 ಕೋಟಿ ರೂಪಾಯಿಗಳಿಗೆ ಆರ್ಥಿಕ ಇಲಾಖೆಗೆ ಏನು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ, ಅದು ಬಂದ ನಂತರ ಮಾಡುತ್ತೇವೆಂದು ಹೇಳಲಾಗುತ್ತಿದೆ. ಇದು KUWSDB ನವರ ಕೆಲಸವಾಗಿದೆ. ಈ ಕೆಲಸ 2005 ರಲ್ಲಿ ಪ್ರಾರಂಭವಾಗಿದೆ. ಇದು ongoing work ಆಗಿದೆ.

**ಸಭಾಪತಿಯವರು:-** ಸಚಿವರಿಗೆ ಸದಸ್ಯರ ಪ್ರಶ್ನೆ ಏನೆಂದು ಅರ್ಥವಾಗಿರಬಹುದು. ಅವರ ಪ್ರಶ್ನೆ ಅರ್ಥವಾಗಿದ್ದರೆ ಸಚಿವರು ಉತ್ತರ ಹೇಳಬೇಕು. ಇಲ್ಲವೆಂದರೆ, ಮತ್ತೊಂದು ಬಾರಿ ಅವರಿಗೆ ಹೇಳಲಿಕ್ಕೆ ಹೇಳುತ್ತೇನೆ.

**ಶ್ರೀ ಈಶ್ವರ್ ಬಿ. ಖಂಡ್ರೆ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮಾನ್ಯ ಸದಸ್ಯರು ಏನು ವಿಷಯಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ, ಅದರಲ್ಲಿ ಹೊಸದಾಗಿ, 57 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಿದ್ದೇವೆ. ಅಲ್ಲಿ ತಕ್ಷಣ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಿಕ್ಕೆ ತುರ್ವಿಹಾಳ-31,44 ಲಕ್ಷ. ರೂ. ಬಳಗಾನೂರು-38.27 ಲಕ್ಷ ರೂ. ಕವಿತಾಳ 31.44 ಲಕ್ಷ ರೂ. ಮತ್ತು ಸಿರವಾರಕ್ಕೆ 31.44 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ರೀತಿಯಲ್ಲಿ ಪ್ರತಿಯೊಂದು ಪಟ್ಟಣ ಪಂಚಾಯಿತಿಗಳಿಗೆ ಕುಡಿಯುವ ನೀರಿಗೋಸ್ಕರ ಹಣವನ್ನು ಒದಗಿಸಿದ್ದೇವೆ. ಇದನ್ನು ಹೊರತುಪಡಿಸಿ, ಎಸ್‌ಎಫ್‌ಸಿ ಯಲ್ಲಿ 92.88 ಲಕ್ಷ ರೂಪಾಯಿಗಳನ್ನು, 14ನೇ ಹಣಕಾಸು ಅನುದಾನದಲ್ಲಿ 75.49 ಲಕ್ಷ ರೂಪಾಯಿಗಳನ್ನು ಮತ್ತೆ ಈಗ ಹೊಸದಾಗಿ ನಗರೋತ್ಥಾನ ಹಂತ-3 ಯೋಜನೆಯಡಿಯಲ್ಲಿ ಮೇಲ್ದರ್ಜೆಗೇರಿಸಿದಂತಹ ಎಲ್ಲಾ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪಟ್ಟಣ ಪಂಚಾಯಿತಿಗಳಿಗೆ ತಲಾ 5 ಕೋಟಿ ರೂಪಾಯಿಗಳಂತೆ ಅನುದಾನವನ್ನು ಒದಗಿಸಿದ್ದೇವೆ. ಅದರಲ್ಲಿ ವಿಶೇಷವಾಗಿ ಅನುದಾನವನ್ನು ಮೊದಲ ಆದ್ಯತೆಯಾಗಿ ಕುಡಿಯುವ ನೀರಿಗಾಗಿ ಉಪಯೋಗಿಸಬೇಕೆಂದು ಹೇಳಿದ್ದೇವೆ. ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಕುಡಿಯುವ ನೀರಿಗೋಸ್ಕರ ಆದ್ಯತೆ ಕೊಟ್ಟು ಈ ಅನುದಾನವನ್ನು ಉಪಯೋಗ ಮಾಡಿಕೊಳ್ಳಬಹುದು.

ಇನ್ನು, ಮಾನ್ವಿ ಪುರಸಭೆ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ವಿಯಲ್ಲಿ ನಿಜವಾಗಿಯೂ ಸಹ ಕುಡಿಯುವ ನೀರಿನ ಸಮಸ್ಯೆ ಇದೆ. ಮಾನ್ಯ ಸದಸ್ಯರೇ ಹೇಳಿದ ಹಾಗೆ 2005 ರಲ್ಲಿ 8 ಕೋಟಿ 15 ಲಕ್ಷ ರೂಪಾಯಿಗಳಿಗೆ ಒಂದು ಯೋಜನೆಯನ್ನು ತಯಾರು ಮಾಡಿದ್ದರು. ಅಲ್ಲಿ ಕೆರೆ ನಿರ್ಮಾಣ ಮಾಡುವಂತಹದ್ದಕ್ಕೆ ಭೂಮಿ ಲಭ್ಯವಾಗದ ಕಾರಣ, 2015 ರಲ್ಲಿ ಸಂಧಾನದ ಮೂಲಕ ಭೂಮಿಯನ್ನು ಖರೀದಿ ಮಾಡಿಕೊಂಡಿದ್ದಾರೆ. ಆ ಒಂದು ಯೋಜನೆಯ ಅಂದಾಜು ಸುಮಾರು 82. ಕೋಟಿ ರೂಪಾಯಿಗಳು. 24/7 ಅಂದರೆ ನಿರಂತರವಾಗಿ ಕುಡಿಯುವ ನೀರನ್ನು ಒದಗಿಸುವಂಥ ಯೋಜನೆ ಬೇಕಾಗಿದೆ. ಅದಕ್ಕೆ ಒಂದು ಅಂದಾಜು ಪಟ್ಟಿಯನ್ನು ತಯಾರು ಮಾಡಲಾಗಿದೆ. ಮತ್ತೆ ಕೆರೆ ನಿರ್ಮಾಣಕ್ಕಾಗಿ 88 ಕೋಟಿ ರೂಪಾಯಿಗಳು ಲಭ್ಯ ಇದೆ. ಈ ಎರಡು ಯೋಜನೆ ಸಂಬಂಧ ಈಗಾಗಲೇ ನಾವು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ, ಅಂದರೆ ಎರಡು ವರ್ಷಗಳವರೆಗೆ ಈಗಾಗಲೇ ನಡೆದಿರುವಂತಹ ಕಾಮಗಾರಿಗಳು ಪೂರ್ಣವಾಗುವವರೆಗೆ ಹೊಸದಾಗಿ ಯಾವುದನ್ನೂ ತೆಗೆದುಕೊಳ್ಳುವಂತಿಲ್ಲವೆನ್ನುವ ವಿಚಾರ ಇರುವುದರಿಂದ ಅದು ನಿಧಾನ ಗತಿಯಲ್ಲಿ ನಡೆಯುತ್ತಿದೆ. ಮುಂದಿನ ಆಯವ್ಯಯದಲ್ಲಿ ಇನ್ನೂ ಹೆಚ್ಚು ಅನುದಾನವನ್ನು ಕೊಟ್ಟು ಶಾಶ್ವತವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಿಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಈಗ ಅಲ್ಲಿಗೆ ತಾತ್ಕಾಲಿಕವಾಗಿ ಬೋರ್‌ವೆಲ್ ಮೂಲಕ ಹಾಗೂ ಇನ್ನಿತರ ವ್ಯವಸ್ಥೆಗಳ ಮೂಲಕ ನೀರನ್ನು ಒದಗಿಸಲಾಗುತ್ತದೆ. ಏಕೆಂದರೆ, ತುಂಗಾ ನದಿಯಿಂದ ನೀರನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಮಾನ್ವಿಯಲ್ಲಿ 3 ದಿವಸಗಳಿಗೊಮ್ಮೆ ನೀರನ್ನು ಕೊಡಲಾಗುತ್ತಿದೆ ಎನ್ನುವ ಮಾಹಿತಿ ನಮಗೆ ಇದೆ. ಈಗ 130 LPCD ನೀರಿನ ಬದಲಾಗಿ 70 LPCD ನೀರನ್ನು ಮೂರು ದಿವಸಗಳಿಗೊಮ್ಮೆ ಕೊಡುತ್ತಿದ್ದೇವೆ. ಆದರೆ, ಮಾನ್ಯ ಗೌರವಾನ್ವಿತ ಸದಸ್ಯರು 5 ದಿವಸಗಳಿಗೊಮ್ಮೆ ನೀರನ್ನು ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಇನ್ನು ಹೆಚ್ಚಿನ ರೀತಿಯಲ್ಲಿ ನೀರನ್ನು ಬೋರ್‌ವೆಲ್ ಮೂಲಕವಾಗಲಿ ಒದಗಿಸಬೇಕು. ಶಾಶ್ವತ ಯೋಜನೆ ಆಗುವುದಕ್ಕೆ ಮೊದಲು ಕುಡಿಯುವ ನೀರಿಗೋಸ್ಕರ ಏನು ವ್ಯವಸ್ಥೆ ಮಾಡಬೇಕಾಗಿದೆ, ಆ ವ್ಯವಸ್ಥೆಯನ್ನು ಮಾಡಲಿಕ್ಕೆ ಸರ್ಕಾರ ಬದ್ಧವಾಗಿದೆ. ಬೋರ್‌ವೆಲ್ ಆಗಲಿ, ಟ್ಯಾಂಕರ್ ಆಗಲಿ, ಇತರ ಮೂಲಗಳಿಂದಾಗಲಿ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗುವುದು ಎನ್ನುವ ವಿಚಾರವನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಮುಂದಿನ ಪ್ರಶ್ನೆ ಸಂಖ್ಯೆ:10 ಶ್ರೀಯುತ ಬಸನಗೌಡ ಆರ್. ಪಾಟೀಲ್ (ಯತ್ನಾಳ್) ರವರದ್ದಾಗಿದ್ದು, ಅದಕ್ಕೆ ಉತ್ತರ ನೀಡಲು ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ. ಮುಂದಿನ ವಾರವೂ ಅಧಿವೇಶನ ನಡೆಯುವುದರಿಂದ ಮುಂದಿನ ವಾರ ಈ ಪ್ರಶ್ನೆಗೆ ಉತ್ತರವನ್ನು ಕೊಡಲಿಕ್ಕೆ ನಾನು ಸಚಿವರಿಗೆ ತಿಳಿಸುತ್ತೇನೆ.

**ಪ್ರಶ್ನೆ ಸಂಖ್ಯೆ: 37**

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಹೈದ್ರಾಬಾದ್-ಕರ್ನಾಟಕದಲ್ಲಿ ಸಾಕಷ್ಟು ನಿರುದ್ಯೋಗ ಸಮಸ್ಯೆಗಳಿವೆ. ಅವರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದರ ಬದಲಿಗೆ ನೇರವಾಗಿ ಇಲಾಖೆಯಲ್ಲಿ ನೇಮಕ ಮಾಡಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ. ಜೊತೆಗೆ ಕಳೆದ 8 ತಿಂಗಳುಗಳಿಂದ ಇವರುಗಳಿಗೆ ವೇತನ ಸಿಕ್ಕುತ್ತಿಲ್ಲ. ಆದಷ್ಟು ಬೇಗ ಅವರುಗಳಿಗೆ ವೇತನ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ ಶರಣಪ್ರಕಾಶ್ ಆರ್. ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು(ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಸ್ಪಷ್ಟವಾದ ಉತ್ತರವನ್ನು ಕೊಡಲಾಗಿದೆ. ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ಹೈದ್ರಬಾದ್ ಕರ್ನಾಟಕ ಭಾಗದಲ್ಲಿರುವಂತಹ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿಕ್ಕೆ ಅವಕಾಶವಿದೆ. ಈ ವಿಚಾರವಾಗಿ ಮಾನ್ಯ ಸಚಿವರ ಗಮನಕ್ಕೆ ತಂದು, ಈ ಹುದ್ದೆಗಳನ್ನು ಎಲ್ಲೆಲ್ಲಿ ನೇರವಾಗಿ ನೇಮಕ ಮಾಡಿಕೊಳ್ಳಲಿಕ್ಕೆ ಸಾಧ್ಯವಿದೆ, ಅಲ್ಲಿ ನೇರವಾಗಿ ನೇಮಕಾತಿ ಮಾಡಿಕೊಳ್ಳುತ್ತೇವೆ. ಮತ್ತೆ, ಕಳೆದ 8 ತಿಂಗಳುಗಳಿಂದ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವವರಿಗೆ ವೇತನ ಸಿಕ್ಕುತ್ತಿಲ್ಲವೆಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ, ಈ ವಿಚಾರವಾಗಿ ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಈ ತಿಂಗಳ ಒಳಗಾಗಿ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಅವರು ತಿಳಿಸಿದ್ದಾರೆ. ಆ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ 45**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ಸುದೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಇನ್ನು ಪ್ರಶ್ನೆಗಳನ್ನು ಕೇಳುವುದು ಇದ್ದು, ಅದನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೇರೆ ರೂಪದಲ್ಲಿ ಕೇಳುತ್ತೇನೆ. ಈಗ ನೀವು ತುರ್ತಾಗಿ ಉತ್ತರ ಕೊಡಬೇಕಾದ್ದು ಏನೆಂದರೆ, ಅಲ್ಲಿ ಮೂರು ಹಂತದ ಕಾಮಗಾರಿ ಬಾಕಿ ಇದೆ. ಕರಾವಳಿ ಜಿಲ್ಲೆ ಮತ್ತು ರಾಜಧಾನಿಯನ್ನು ಸೇರುವಂತಹ ಬಹು ಮುಖ್ಯವಾದ ಮಾರ್ಗ ಈ ಶಿರಾಡಿ ಘಾಟ್. ಈಗ ಬಿ.ಸಿ. ರೋಡ್‌ನಿಂದ ಅಡ್ಡ ಹೊಳೆಯವರೆಗೆ ಒಂದು ರಸ್ತೆ. ಮತ್ತೆ ಹಾಸನದಿಂದ ಸಕಲೇಶಪುರದವರೆಗೆ ರಸ್ತೆ ನಿರ್ಮಾಣ ಮತ್ತು ಈಗ ನೀವು ಶಿರಾಡಿ ಘಾಟ್‌ವರೆಗೆ ಅರ್ಧ ಕಾಮಗಾರಿ ಮುಗಿಸಿರುವಂತಹ ಸುಮಾರು 20.ಕಿಮೀ. ಕಾಮಗಾರಿ. ಈ ಮೂರು ಕಾಮಗಾರಿಗಳು ಆಗಬೇಕಾಗಿದೆ. ಈಗ ನೀವು ಕೊಟ್ಟಿರುವಂತಹ ಉತ್ತರದಲ್ಲಿ ದಿನಾಂಕ:04–01–2017ಕ್ಕೆ ಈ ಒಂದು ಕಾಮಗಾರಿಯನ್ನು ಮಾಡದೇ ಇರುವುದರಿಂದ ಈ ಕಾಮಗಾರಿಯನ್ನು ರದ್ದು ಮಾಡಲಾಗಿದೆ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಇದಲ್ಲದೆ ಈ ಗುತ್ತಿಗೆದಾರರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತರುತ್ತೇವೆಂದು ಹೇಳಿದ್ದಾರೆಂದು ತಾವು ಲಿಖಿತವಾಗಿ ನೀಡಿರುವ ಉತ್ತರದಲ್ಲಿ ಹೇಳಿದ್ದೀರಿ. ಇದನ್ನು ನೀವು ಯಾವಾಗ ಪ್ರಾರಂಭ ಮಾಡುತ್ತೀರಿ? ಈ ವಿಚಾರದಲ್ಲಿ ನಿಮಗೆ ಇರುವಂತಹ ಸಮಸ್ಯೆಗಳೇನು ಎನ್ನುವುದನ್ನು ತಿಳಿಸಬೇಕು. ಇದು ಒಂದು ವಿಚಾರ. ನಾನು ಈ ವಿಚಾರವಾಗಿ ಸುಧೀರ್ಘವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಇವತ್ತಿನ ತಾಂತ್ರಿಕ ಯುಗದಲ್ಲಿ ಗುಂಡ್ಯದಿಂದ ಮೇಲಕ್ಕೆ ಹತ್ತುವಾಗ ಒಂದು ಸಣ್ಣ ತಿರುವು ಸಿಕ್ಕುತ್ತದೆ. ಆ ಒಂದು ಸಣ್ಣ ತಿರುವಿಗೆ 200 ಮೀಟರ್‌ವರೆಗೆ ಮಣ್ಣು ಹಾಕಿ ಮುಚ್ಚಿದರೆ ಸುಮಾರು ಮುಕ್ಕಾಲು ಕಿ.ಮೀ ಅಂತರ ಕಡಿಮೆಯಾಗುತ್ತದೆ ಎಂದು ಇಂಜಿನಿಯರ್ ಹೇಳುತ್ತಾರೆ. ಆದರೆ ಇನ್ನು ಕೂಡ ಆ ತಿರುವಿನಲ್ಲಿಯೇ ಸಂಚರಿಸಬೇಕೆನ್ನುವ ವಿಚಾರ ನಿಮ್ಮಲ್ಲಿ ಇದೆಯೇ? ಅದನ್ನು ನೀವು ಏತಕ್ಕೆ ಸರಿಪಡಿಸಬಾರದು, ಈ ಎರಡು ಕಾಮಗಾರಿಗಳನ್ನು ನೀವು ಯಾವಾಗ ಮಾಡುತ್ತೀರಿ? ಎಂತಹ ದುಸ್ಥಿತಿ ಇದೆ ಎಂದು ಹೇಳಿದರೆ, ಅಲ್ಲಿ ಸಂಚರಿಸಲಿಕ್ಕೆ ಆಗದೇ ಇರುವಂತಹ ದುಸ್ಥಿತಿಯಲ್ಲಿ ನಿಮ್ಮ ಉಳಿಕೆ ಕಾಮಗಾರಿಗಳಿವೆ. ಕಾಮಗಾರಿಯನ್ನು ಹೊಸದಾಗಿ ಪ್ರಾರಂಭ ಮಾಡುವುದಿಲ್ಲ. ಈ ಮಧ್ಯೆ ಹಾಸನ ಮತ್ತು ಸಕಲೇಶಪುರ ಮಧ್ಯೆದಲ್ಲಿ ಬರುವಂತಹ ರಸ್ತೆಯ ಇಕ್ಕೆಲಗಳಲ್ಲಿ ಸುಮಾರು 2 ಸಾವಿರದಷ್ಟು ಅನಾಧಿ ಕಾಲದ ಮರಗಳನ್ನು ಕಡಿದು ಹಾಕಲಾಗಿದೆ. ಅದಕ್ಕೆ ಬದಲಾಗಿ ಆ ರಸ್ತೆಯನ್ನು ಸ್ವಲ್ಪ ಸರಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈ ಸರ್ಕಾರಿ ಜಾಗವನ್ನು ಅತಿಕ್ರಮಿಸಿಕೊಂಡಿದ್ದರೆ ಸಾಕಾಗುತ್ತಿತ್ತು. ಖಾಸಗಿ ಭೂ–ಸ್ವಾಧೀನ ಮಾಡಬೇಕಾಗಿಲ್ಲ. ಈ ರೀತಿ ಮಾಡಿದರೆ ಸುಮಾರು ಸಾವಿರಾರು ಮರಗಳನ್ನು ಉಳಿಸಬಹುದು ಎಂದು ಮಾಧ್ಯಮದವರೂ ಹೇಳುತ್ತಾರೆ, ಪರಿಸರವಾದಿಗಳು ಸಹ ಹೇಳುತ್ತಾರೆ. ಹೀಗಾಗಿ ಈ ಎಲ್ಲಾ ಕಾಮಗಾರಿಗಳನ್ನು ಯಾವಾಗ ಮುಗಿಸುತ್ತೀರಿ, ಕೋರ್ಟ್‌ನಲ್ಲಿರುವಂತಹ ದಾವೆಯನ್ನು ಯಾವಾಗ ತೆರವು ಮಾಡುತ್ತೀರಿ ಎನ್ನುವುದು ನನ್ನ ಪ್ರಶ್ನೆ. ಶಿರಾಡಿಘಾಟ್‌ನಿಂದ ಸುಮಾರು 20 ಕಿಲೋಮೀಟರ್ ರಸ್ತೆ ಕಾಮಗಾರಿಯನ್ನು ತುರ್ತಾಗಿ ಮಾಡಬೇಕಾಗಿದೆ. ಅಲ್ಲಿ ವಾಹನಗಳು ಓಡಾಡಲಿಕ್ಕೆ ಅಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಲೋಕೋಪಯೋಗಿ

ಸಚಿವರಾಗಿ ತಾವು ಗಮನಿಸಿದ್ದೀರಿ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ಕೆಲಸವನ್ನು ತುರ್ತಾಗಿ ಯಾವಾಗ ಮಾಡುತ್ತೀರಿ? ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರು ಉತ್ತರ ಕೊಡಬೇಕೆಂದು ವಿನಂತಿಸುತ್ತೇನೆ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ವಿವರವಾದ ಉತ್ತರವನ್ನು ಮಾನ್ಯ ಸದಸ್ಯರಿಗೆ ಲಿಖಿತವಾಗಿ ಕೊಟ್ಟಿದ್ದೇನೆ. 2ನೇ ಹಂತದ ಕಾಮಗಾರಿಗೆ 10% ಹಣ ಅಂದರೆ, 9 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಗುತ್ತಿಗೆದಾರರ 2016ಕ್ಕೆ ಕಾಮಗಾರಿಯನ್ನು ಪೂರ್ಣ ಮಾಡಬೇಕಾಗಿತ್ತು. ಆದರೆ, ಅವರು ಈ ಕೆಲಸವನ್ನು ಮಾಡಲಿಲ್ಲ. ಅದಕ್ಕೋಸ್ಕರ ನಾವು ಅವರನ್ನು ಟರ್ಮಿನೇಟ್ ಮಾಡಿದ್ದೇವೆ. ಟರ್ಮಿನೇಟ್ ಮಾಡಿರುವುದರ ಬಗ್ಗೆ ಅವರು ಕೋರ್ಟ್‌ಗೆ ಹೋಗಿದ್ದಾರೆ. ಕೋರ್ಟ್‌ನಲ್ಲಿ ಇದನ್ನು ತೆರವುಗೊಳಿಸುವಂತಹ ಕೆಲಸವನ್ನು ಬೇಗ ಮಾಡಬೇಕಾಗಿದ್ದು, ಆ ಕೆಲಸವನ್ನು ನಾವು ಮಾಡಿಸುತ್ತೇವೆ.

ಎರಡನೆಯದಾಗಿ, ಹಾಸನದಿಂದ ಬಿ.ಸಿ. ರೋಡ್ ಏನಿದೆ, ಸುಮಾರು 45-65 ಒಟ್ಟು 110 ಕಿ.ಮೀ. ಉದ್ದದ ರಸ್ತೆಯನ್ನು ಎರಡು ಹಂತದಲ್ಲಿ ಮಾಡಲಿಕ್ಕೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಆ ಎರಡು ಕೆಲಸಕ್ಕೆ ಟೆಂಡರ್ ಆಗಿ ಅವರುಗಳು ಶೀಘ್ರದಲ್ಲಿ ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಈಗ ರಸ್ತೆ ಏನು ಹಾಳಾಗಿದೆ, ಅದಕ್ಕೆ ಗ್ರಾಂಟ್ ಒದಗಿಸಿ ನಿರ್ವಹಣೆ ಮಾಡುತ್ತೇವೆ. ಅದನ್ನು ಸರ್ಕಾರದ ವತಿಯಿಂದ ಮಾಡಿ, ಆದಷ್ಟು ಬೇಗ 2ನೇ ಹಂತದ ಕಾಮಗಾರಿಗಳೇನು ಬಾಕಿ ಉಳಿದಿವೆ, ಅದನ್ನು ಮಾಡುತ್ತೇವೆ. ಮತ್ತೆ, ಶಿರಾಡಿಘಾಟ್ ವ್ಯಾಪ್ತಿಯಲ್ಲಿ ಕೇವಲ 8.5 ಮೀಟರ್ಸ್‌ಗಳಷ್ಟು ಮಾತ್ರ ವಿಸ್ತರಿಸಲಿಕ್ಕೆ ಸಾಧ್ಯವಾಗುತ್ತದೆ. ಹೀಗಿರುವುದರಿಂದ ಅದನ್ನು ಹೆಚ್ಚು ಮಾಡಲಿಕ್ಕೆ ಆಗುವುದಿಲ್ಲ. Since it is coming under the environmental zone, 8.5 ಮೀಟರ್‌ಗೆ ವಿಸ್ತರಣೆ ಮಾಡಿಕೊಂಡು ಮಾಡಲಿಕ್ಕೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಈ ಎರಡು ಕಾಮಗಾರಿಗಳು ಎರಡು ಹಂತದಲ್ಲಿ ನಡೆಯುವಂತಹದ್ದಾಗಿದ್ದು, ಹಾಸನದ ಮಾರನಹಳ್ಳಿವರೆಗೆ ಒಂದು ಹಂತ. ಮತ್ತೆ ಅಡ್ಡಹೊಳೆಯಿಂದ ಬಿ.ಸಿ.ರೋಡ್‌ವರೆಗೆ ಮತ್ತೊಂದು ಹಂತ. ಇವುಗಳ ಟೆಂಡರ್ ಫೈನಲ್ ಆಗಿದ್ದು, ಒಂದು L&T ಗೆ ಆಗಿದೆ, ಮತ್ತೊಂದು M/s Isolux Corsan India Eng & Con Pvt Ltd., ಇವರಿಗೆ ಆಗಿದೆ. ಇವರುಗಳು ಬಹುತೇಕ ಮುಂದಿನ ತಿಂಗಳು ಕೆಲಸವನ್ನು ಪ್ರಾರಂಭ ಮಾಡುತ್ತಾರೆ.

*(09) 07-02-2017 ಎಸ್‌ಪಿಆರ್/ಎಂಡಿ 11.40*

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ|| ಹೆಚ್.ಸಿ.ಮಹದೇವಪ್ಪ:-** ಮುಂದು. ಕಳೆದ 30-40 ವರ್ಷಗಳಿಂದ ಶಿರಾಡಿ ಘಾಟ್‌ನ ಪರಿಸ್ಥಿತಿ ಹೇಗಿದೆ ಎಂದು ತಮಗೆ ಗೊತ್ತಿದೆ. ಇದರ ಜೊತೆಗೆ ನಾನು ಹತ್ತಾರು ಬಾರಿ ಅಲ್ಲಿಗೆ ಭೇಟಿ ನೀಡಿದ್ದೇನೆ ಹಾಗೂ ಕೇಂದ್ರ ಸರ್ಕಾರದೊಂದಿಗೆ ವ್ಯವಹಾರ ಮಾಡಿ ಕಾಮಗಾರಿಯನ್ನು ಮಂಜೂರು ಮಾಡಿಸಿಕೊಂಡಿದ್ದೇನೆ. ಮೊದಲನೇ ಹಂತದ ಕಾಮಗಾರಿಯು ಪೂರ್ಣಗೊಂಡಿದೆ. ಎರಡನೇ ಹಂತದ ಕಾಮಗಾರಿಯಲ್ಲಿ ಶೇಕಡಾ 10 ರಷ್ಟು ರಿಯಾಯಿತಿ ಕೊಡಬೇಕಿತ್ತು. ಆದರೆ, ಅದನ್ನು ಕೊಡಲಿಲ್ಲ. ಆದ್ದರಿಂದ ಹಳೆಯ ಗುತ್ತಿಗೆದಾರರನ್ನು terminate ಮಾಡಿ ಹೊಸ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಿಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಆದರೆ, ಗುತ್ತಿಗೆದಾರರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಹಾಲಿ ಇರುವ ತಡೆಯಾಜ್ಞೆಯನ್ನು ಬೇಗನೇ ತೆರವುಗೊಳಿಸಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿಯವರೆಗೆ ಈಗಾಗಲೇ ಇರುವ maintenance grantನಿಂದ ನಮ್ಮ ರಸ್ತೆಗಳನ್ನು ಸರಿಪಡಿಸಿ, ವಾಹನ ಸಂಚಾರಕ್ಕೆ ಅನಾನುಕೂಲವಾಗದ ರೀತಿಯಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸುತ್ತಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಏಕೆಂದರೆ ಈ ಕಾಮಗಾರಿಯನ್ನು ತುರ್ತಾಗಿ ಮಾಡಬೇಕಾಗಿದೆ. ನೀವು ನೋಡಿದ ಹಾಗೆ, ಸದರಿ ರಸ್ತೆಯಲ್ಲಿ ಸಂಚರಿಸಲಿಕ್ಕೆ ಸಾಧ್ಯವಾಗದ ಪರಿಸ್ಥಿತಿ ಇದೆ. ಏಕೆಂದರೆ, ಕ್ರೇನ್ ಬಂದು ಕಾರನ್ನು ಎತ್ತಬೇಕಾದ ಪರಿಸ್ಥಿತಿ ಈಗ ಅಲ್ಲಿದೆ. ಅದನ್ನು ಮಾನ್ಯ ಸಚಿವರು ಗಮನಿಸಿದ್ದಾರೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ಕಾಮಗಾರಿಯನ್ನು 15 ದಿನಗಳಲ್ಲಿ ಅಥವಾ ಒಂದು ತಿಂಗಳಿನಲ್ಲಿ ಪೂರ್ಣಗೊಳಿಸಲಾಗುತ್ತದೆಯೇ; ಇಲಾಖೆಗಿರುವ ಶಕ್ತಿಯಿಂದ ತುರ್ತಾಗಿ 15 ದಿನಗಳಲ್ಲಿ ದುರಸ್ತಿ ಮಾಡಲಿಕ್ಕೆ ಸಾಧ್ಯವಿಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಜಪಾನ್ ದೇಶದವರು ಇಲ್ಲಿಗೆ ಬಂದು ಸುರಂಗ ಮಾಡುತ್ತಾರೆಂಬ ಗೊಂದಲಗಳು ಪತ್ರಿಕೆ ಹಾಗೂ ದೂರದರ್ಶನ ಮಾಧ್ಯಮಗಳಲ್ಲಿ ಸೃಷ್ಟಿಯಾಗಿದೆ. ಈಗ ಅಲ್ಲಿ ಚತುಷ್ಪಥ ರಸ್ತೆ ಮಾಡುತ್ತಿದ್ದೇವೆ. ಕೆಲವು culvertಗಳನ್ನು ದುರಸ್ತಿ ಮಾಡಿಟ್ಟಿದ್ದೀರಿ. ಸಿಮೆಂಟ್ ಹಾಕದೇ ಇರುವ ಒಂದು ಭಾಗ ಗುಂಡ್ಯದಿಂದ ಮೇಲುಗಡೆ ಶಿರಾಡಿ ಘಾಟ್‌ನಲ್ಲಿದೆ. ಅಲ್ಲಿ ಅರ್ಧಂಬರ್ಧ ಕೆಲಸವಾಗಿದೆ. ರಸ್ತೆ ಬದಿಯಲ್ಲಿ ಜೆಲ್ಲಿ ಕಲ್ಲುಗಳನ್ನು ಶೇಖರಿಸಿಟ್ಟಿದ್ದೀರಿ. ಇತ್ತೀಚಿನ ದಿನಗಳಲ್ಲಿ ಪತ್ರಿಕಾ ಮಾಧ್ಯಮದಲ್ಲಿ 'ಈ ಕಾಮಗಾರಿಯು ನಿಂತುಹೋಗಿದೆ, ಅದನ್ನು ಪೂರ್ಣ ಮಾಡುವುದಿಲ್ಲ' ಎಂದು ವರದಿಯಾಗಿರುವುದು ನಮ್ಮೆಲ್ಲರನ್ನೂ ಆತಂಕಕ್ಕೀಡುಮಾಡಿದೆ. ಅತ್ಯಂತ ಹೆಚ್ಚು density ಇರುವುದರಿಂದ ಮಳೆಗಾಲದಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾತ್ರವಲ್ಲದೇ ಈಗಲೇ ರಸ್ತೆಯಲ್ಲಿ ಹೋಗಲಿಕ್ಕೆ ಸಾಧ್ಯವಿಲ್ಲ. ರಸ್ತೆ ಕೆಟ್ಟು ಹೋಗಿದೆ. ಮಳೆಗಾಲದಲ್ಲಿಯಂತೂ ಹೋಗಲಿಕ್ಕೆ ಸಾಧ್ಯವೇ ಇಲ್ಲ. ಈಗ ನಾವುಗಳೆಲ್ಲಾ ಬೇಲೂರು ಮೂಲಕ ಪ್ರಯಾಣಿಸುವುದಕ್ಕೆ ಪ್ರಾರಂಭಿಸಿದ್ದೇವೆ. ಹೀಗಾಗಿ ಪ್ರಸ್ತುತ ಪ್ರಯಾಣಿಸಲಿಕ್ಕೆ ಏನು ಸೌಲಭ್ಯ ಒದಗಿಸಿ ಕೊಡುತ್ತೀರಿ? ಚತುಷ್ಪಥ ರಸ್ತೆ ನಿರ್ಮಾಣ ಮಾಡುತ್ತೀರೋ ಅಥವಾ ಸುರಂಗ ಮಾರ್ಗ ನಿರ್ಮಾಣ ಮಾಡುತ್ತೀರೋ ಅಥವಾ ಹಾಲಿಯಿರುವ ರಸ್ತೆಯನ್ನು ದುರಸ್ತಿ ಮಾಡುತ್ತಿರೋ ರಸ್ತೆ ಅಗಲೀಕರಣ ಮಾಡುತ್ತೀರೋ ಇಂತಹ ಯಾವುದೇ ಕ್ರಮಗಳ ಬಗ್ಗೆ ಯಾರಿಗೂ ಗೊತ್ತಿಲ್ಲವಾದ್ದರಿಂದ ಈ ಬಗ್ಗೆ ಸ್ಪಷ್ಟ ಕಲ್ಪನೆ ಕೊಡಬೇಕೆಂದು ವಿನಂತಿಸುತ್ತೇನೆ.

**ಡಾ॥ ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಕೋಟ ಶ್ರೀನಿವಾಸ ಪೂಜಾರಿರವರುಗಳಿಗೆ ಈ ಕಾಮಗಾರಿಯು ಎಷ್ಟು ವರ್ಷಗಳಿಂದ ಸ್ಥಗಿತಗೊಂಡಿದೆ ಎಂಬ ಬಗ್ಗೆ ಗೊತ್ತಿದೆ. ಸುರಂಗ ಮಾರ್ಗವನ್ನು ನಿರ್ಮಾಣ ಮಾಡಲಿಕ್ಕೆ ಜಪಾನಿನ Environment Committee has submitted the final report to the Union Government and also to the State Government. ಅವರೂ ಕೂಡ ಬರುತ್ತಿದ್ದಾರೆ. ಸುರಂಗ ಮಾರ್ಗವನ್ನು ನಿರ್ಮಿಸುವ ಆಲೋಚನೆಯೂ ಕೂಡ ಇದೆ. ಮತ್ತೆ ಕೆಲವು ಕಡೆ ಚತುಷ್ಪಥ ರಸ್ತೆಯನ್ನು ನಿರ್ಮಿಸುವ ಉದ್ದೇಶವೂ ಇದೆ. ಕೆಲವು ಕಡೆ ಪರಿಸರಕ್ಕೆ ತೊಂದರೆ ಉಂಟಾದಲ್ಲಿ ಅಲ್ಲಿನ ರಸ್ತೆಯ ಎತ್ತರವನ್ನು 8.5 ಮೀಟರ್‌ಗೆ ಹೆಚ್ಚು ಮಾಡಿ, ಅಲ್ಲಿ ಒಂದು ಸುವ್ಯವಸ್ಥಿತವಾದ ರಸ್ತೆಯನ್ನು ನಿರ್ಮಾಣ ಮಾಡಲಿಕ್ಕೆ ನಾವು ಈಗಾಗಲೇ ಮಂಜೂರಾತಿಯನ್ನು ನೀಡಿದ್ದೇವೆ ಹಾಗೂ ಇದಕ್ಕೆ ಸಂಬಂಧಪಟ್ಟ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದೆ. It’s a matter of time. But, none the less, we will see that the road is made motorable.

**ಪ್ರಶ್ನೆ ಸಂಖ್ಯೆ: 6**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನನ್ನ (ಅ) ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಒಟ್ಟು 11 ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೆ ಏರಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುವ ಬಗ್ಗೆ ತಿಳಿಸಿರುತ್ತಾರೆ ಹಾಗೂ 2015 ರಿಂದ 2017 ರ ವರೆಗೆ 67 ರಸ್ತೆಗಳಿಗೆ ನಮ್ಮ ಕೇಂದ್ರ ಸರ್ಕಾರವು ತಾತ್ವಿಕ ಅನುಮೋದನೆ ನೀಡಿರುವುದನ್ನೂ ಸಹ ತಿಳಿಸಿರುತ್ತಾರೆ. ಅಂದರೆ, ಕೇಂದ್ರ ಸರ್ಕಾರವು ಎಷ್ಟು generous ಆಗಿದೆ ಎನ್ನುವುದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಡಾ|| ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಯು.ಪಿ.ಎ. ಸರ್ಕಾರ ಇದ್ದಾಗಲೂ ರಸ್ತೆಗೆ ಅನುಮೋದನೆ ಕೊಟ್ಟಿದೆ. ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡುವುದಕ್ಕೆ ಕೇಂದ್ರದ ಯು.ಪಿ.ಎ. ಹಾಗೂ ಬಿ.ಜೆ.ಪಿ. ಸರ್ಕಾರಗಳು ಅನುಮೋದನೆ ನೀಡಿವೆ. ನಿರ್ದಿಷ್ಟವಾಗಿ ಶ್ರೀ ನಿತಿನ್ ಗಡ್ಕರಿ ರವರು ಅನುಮೋದನೆ ನೀಡಿದ್ದಾರೆ. ಅವರಿಗೆ ಅಭಿನಂದಿಸುತ್ತೇನೆ. ಯು.ಪಿ.ಎ. ಸರ್ಕಾರವಿದ್ದಾಗ ಶ್ರೀ ಆಸ್ಕರ್ ಫರ್ನಾಂಡೀಸ್ ರವರೂ ಸಹ ಅನುಮೋದನೆಯನ್ನು ನೀಡಿದ್ದರು. ಅವರನ್ನೂ ಅಭಿನಂದಿಸುತ್ತೇನೆ. ನನಗೆ ಬೆಂಬಲ ನೀಡಿದಂತಹ ಎಲ್ಲಾ ಸಂಸದರಿಗೂ ಸಹ ಅಭಿನಂದಿಸುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರು–ಮೈಸೂರು ಹೆದ್ದಾರಿಯನ್ನು ಆರು ಪಥ ರಸ್ತೆಯನ್ನಾಗಿ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಮೇಲ್ದರ್ಜೆಗೆ ಏರಿಸಿದ್ದೀರಾ? ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಬೆಂಗಳೂರು–ತುಮಕೂರು ರಸ್ತೆ ಈಗಾಗಲೇ ಇಕ್ಕಟ್ಟಾಗಿದೆ. ಇದನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸುತ್ತಿದ್ದೀರಾ?

**ಡಾ|| ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಬೆಂಗಳೂರು–ಮೈಸೂರು ರಸ್ತೆಯ ಸರ್ವೇ ಕಾರ್ಯವು ಈಗಾಗಲೇ ಶೇಕಡ 85 ರಷ್ಟು ಮುಗಿದಿದೆ. ಎಲ್ಲೆಲ್ಲಿ ಚತುಷ್ಪಥ ರಸ್ತೆ ಬರುತ್ತದೆ ಅವುಗಳನ್ನು National Highway Authority of India (NHAI) ರವರೇ ನಿರ್ಮಾಣ ಮಾಡುತ್ತಾರೆ. ಆರು ಪಥ, ಎರಡು ಸರ್ವಿಸ್ ರಸ್ತೆಗಳು ಮತ್ತು ಅವುಗಳಿಗೆ shoulder ಹಾಕಿದರೆ ಹೆಚ್ಚು–ಕಡಿಮೆ 10 ಪಥಗಳ ರಸ್ತೆಯಾಗುತ್ತದೆ. ಸಚಿವ ಸಂಪುಟದ ತೀರ್ಮಾನದಂತೆ, ನಾನು NHAI ನ Executive Member ರವರನ್ನು ಖುದ್ದಾಗಿ ಮಾತನಾಡಿಸಿದ್ದು, ಬೆಂಗಳೂರು–ಮೈಸೂರು ರಸ್ತೆಯು ಪ್ರಮುಖವಾದ ರಸ್ತೆಯಾಗಿದ್ದು, ಈಗಾಗಲೇ ಶೇಕಡ 85 ರಷ್ಟು ಸರ್ವೇ ಕಾರ್ಯ ಮುಗಿದಿರುವುದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಸ್ತೆ ನಿರ್ಮಾಣ ಕಾಮಗಾರಿಯನ್ನು ಮೇ–ಜೂನ್ ಮಾಹೆಯಲ್ಲಿ ಪ್ರಾರಂಭಿಸುವ ಆಶ್ವಾಸನೆಯನ್ನು ನನಗೆ ಕೊಟಿದ್ದಾರೆ. ಇದು ಬಹಳ ಮುಖ್ಯವಾದುದು. This is the first Hybrid Annuity Road that has been taken up in India.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರು–ತುಮಕೂರು ರಸ್ತೆಗಳು ಇಕ್ಕಟ್ಟಾಗಿದ್ದು, ಇದರ ಬಗ್ಗೆ ಸಚಿವರು ಏನೂ ಹೇಳಲಿಲ್ಲ. ಇವುಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಯೋಚನೆಯನ್ನೇನಾದರೂ ಸರ್ಕಾರ ಮಾಡಿದೆಯೆ?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಬೆಂಗಳೂರು-ತುಮಕೂರು ರಸ್ತೆಯ ಅಭಿವೃದ್ಧಿಯ ಕಡೆಗೂ ಸಹ ಸರ್ಕಾರ ಗಮನಕೊಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಾರೆ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಬೆಂಗಳೂರು-ತುಮಕೂರು ರಸ್ತೆಯ ನಿರ್ಮಾಣ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ರಸ್ತೆಗಳನ್ನು Passenger Car Unit (PCU) ಆಧಾರದ ಮೇಲೆ ನಿರ್ಮಿಸುತ್ತಾರೆ. PCU ಆಧಾರದ ಮೇಲೆ ರಸ್ತೆಗಳನ್ನು ಮತ್ತಷ್ಟು ಅಭಿವೃದ್ಧಿ ಪಡಿಸುವುದಕ್ಕೆ we will examine and rectify it.

**ಸಭಾಪತಿಯವರು:-** ಶ್ರೀ ಟಿ.ಎ.ಶರವಣ ರವರೆ ನಿಮ್ಮ ಪ್ರಶ್ನೆಗೆ ನಂತರ ಅವಕಾಶ ಕೊಡುತ್ತೇನೆ. ನಿಮ್ಮ ನಂತರದಲ್ಲಿರುವ ಶ್ರೀ ವಿ.ಸೋಮಣ್ಣ ರವರು ಕೇಳಿರುವ ಪ್ರಶ್ನೆಯು ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ್ದು. ಆದ್ದರಿಂದ ಅದನ್ನು ಮೊದಲು ತೆಗೆದುಕೊಳ್ಳೋಣ. ಶ್ರೀ ಸೋಮಣ್ಣ ರವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ:34**

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಟೋಲ್ ಮತ್ತು ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೇನೆ. ಶ್ರೀ ಸೋಮಣ್ಣ ರವರು ನಿರ್ದಿಷ್ಟವಾಗಿ ಏನಾದರೂ ಕೇಳುವುದಾದರೆ ಕೇಳಲಿ, ಸಲಹೆ ಕೊಡುವುದಾದರೆ ಕೊಡಲಿ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅಧಿಕಾರ ವಹಿಸಿಕೊಂಡಾಗಿನಿಂದಲೂ ಹೇಳಿದ್ದನ್ನೇ ಹೇಳುತ್ತಿದ್ದಾರೆ. 2014, 2015 ಮತ್ತು 2016 ನೇ ಸಾಲುಗಳಲ್ಲಿ ಕೇಳಿರುವ ಪ್ರಶ್ನೆಗಳಿಗೆ ಹೇಳಿರುವ ಉತ್ತರವನ್ನೇ ಹೇಳುತ್ತಿದ್ದಾರೆ. ಇದರಲ್ಲಿ ಯಾವುದೇ ಬದಲಾವಣೆಯಿಲ್ಲ. ನನ್ನ ಬಳಿ ಎಲ್ಲಾ ಮಾಹಿತಿ ಇದೆ. ಇವತ್ತು ಮಾನ್ಯ ಸಭಾಪತಿಯವರೇ ತಾವು Military Commander ಆಗಿದ್ದೀರಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಎರಡು-ಮೂರು ಅಂಶಗಳ ಬಗ್ಗೆ ನಿರ್ದಿಷ್ಟವಾಗಿ ಪ್ರಶ್ನೆಯನ್ನು ಕೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 209 ಏನಿದೆ, ಇದು ಬೆಂಗಳೂರು–ಕಗ್ಗಲೀಪುರ–ಹಾರೋಹಳ್ಳಿ–ಕನಕಪುರ–ಕೊಳ್ಳೇಗಾಲ ಮುಖಾಂತರ ದಿಂಡಿಗಲ್‌ಗೆ ಹೋಗುವಂತಹ ರಸ್ತೆಯಾಗಿದೆ. ನನಗನ್ನಿಸಿದ ಹಾಗೆ ಮೂರು ವರ್ಷದಲ್ಲಿ ಈ ಸಂಬಂಧ ನಾನು ನಾಲ್ಕೈದು ಬಾರಿ ಪ್ರಶ್ನೆಯನ್ನು ಕೇಳಿದ್ದೇನೆ. ಕಾಮಗಾರಿಯನ್ನು ನಾಳೆ ಪ್ರಾರಂಭಿಸುತ್ತೇವೆ, ನಾಳೆ ಪ್ರಾರಂಭಿಸುತ್ತೇವೆ ಎಂಬುದಾಗಿ ಹೇಳುತ್ತಾ ಬಂದಿದ್ದು, ಈವರೆಗೆ ಕಾಮಗಾರಿ ಪ್ರಾರಂಭವಾಗಿರುವ ಬಗ್ಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ.

ಮತ್ತೊಂದು ವಿಚಾರವೆಂದರೆ, ಕಗ್ಗಲೀಪುರ–ಹಾರೋಹಳ್ಳಿ ಹತ್ತಿರ ರಸ್ತೆ ಅಗಲೀಕರಣ ಕಾರ್ಯ ಮುಂದುವರೆದಿದೆ. ಈ ರಸ್ತೆಯನ್ನು ಇವರು ಪೂರ್ಣವಾಗಿ ಅಗಲೀಕರಣ ಮಾಡುತ್ತಾರೆಯೋ ಅಥವಾ 'ರಸ್ತೆ ಅಗಲೀಕರಣ' ಎನ್ನುವ ನೆಪದಲ್ಲಿ ನಾಲ್ಕೈದು ತಿಂಗಳು ಆ ರಸ್ತೆಯನ್ನು ಮುಚ್ಚುತ್ತಾರೆಯೋ ಎನ್ನುವುದು ನನ್ನ ನೇರವಾದ ಪ್ರಶ್ನೆಯಾಗಿದೆ. ಏಕೆಂದರೆ ಅಲ್ಲಿ ಪ್ರಯಾಣಿಕರಿಗೆ ಆಗಿರುವ ಅನಾನುಕೂಲ ಇವರ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಇನ್ನು ಎರಡನೆಯ ವಿಚಾರ, ಹತ್ತು ರಸ್ತೆಗಳುಳ್ಳ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿರುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಅದರ ಬಗ್ಗೆ ನಾನು ಪ್ರಶ್ನೆಗಳನ್ನು ಕೇಳುವುದಿಲ್ಲ. 67 ರಾಷ್ಟ್ರೀಯ ಹೆದ್ದಾರಿಗಳ 6,215 ಕಿಲೋಮೀಟರ್‌ಗಳ ರಸ್ತೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ಈಗಾಗಲೇ ಅನುಮೋದನೆ ನೀಡಿದೆ. ಅನುಮೋದನೆ ನೀಡಿರುವಂತಹ ಕಾಮಗಾರಿಗಳಿಗೆ ನಿಮ್ಮ ಕಾರ್ಯ ಪ್ರವೃತ್ತಿ ಏನು? ಈ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತದೆ?

ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ಬಂದಿದೆ ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಅದಕ್ಕೆ ಲಿಖಿತವಾಗಿ ಕೊಟ್ಟಿರುವ ಉತ್ತರದಲ್ಲಿ 2013–14, 2014–15, 2015–16 ಮತ್ತು 2016–17 ನೇ ಸಾಲುಗಳಲ್ಲಿ 1,667 ಕೋಟಿ ರೂಪಾಯಿಗಳು ಬಿಡುಗಡೆಗೊಂಡಿದ್ದು, 851 ಕೋಟಿ ರೂಪಾಯಿಗಳು ಖರ್ಚು ಮಾಡಿರುವ ಬಗ್ಗೆ ತಿಳಿಸಿರುತ್ತಾರೆ. ಇನ್ನುಳಿದ ಅನುದಾನದ ಮೊತ್ತವನ್ನು ಯಾವ ಕಾರಣಕ್ಕಾಗಿ ಖರ್ಚು ಮಾಡಿಲ್ಲ? ಇಷ್ಟು ಮೊತ್ತದ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ? ಇಲ್ಲ ಎನ್ನುವುದಾದರೆ, ಈ ರೀತಿಯ ಅಂದಾಜನ್ನು ನೀಡಿದ ಅಧಿಕಾರಿಗಳ್ಯಾರು? ಟೋಲ್‌ಗಳಲ್ಲಿ ಎಷ್ಟು ಮೊತ್ತದ ಹಣ ಸಂಗ್ರಹವಾಗುತ್ತಿದೆ ಎಂಬ ಇನ್ನೊಂದು ಉಪ–ಪ್ರಶ್ನೆಯನ್ನು ನಾನು ಕೇಳಿದ್ದೇನೆಯೇ ಹೊರತು ಪಾಸ್‌ಗಳ ಬಗ್ಗೆ ಕೇಳಿಲ್ಲ. ಇದಕ್ಕೆ ಸರ್ಕಾರ ನಿರ್ದಿಷ್ಟವಾಗಿ ಉತ್ತರವನ್ನು ನೀಡಿಲ್ಲ. ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ ಎಂದು ತಿಳಿಸಲಾಗಿದೆ. ಅನುಬಂಧ–2

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನ್ನು ನಾನು ಸುಮಾರು ಬಾರಿ ಪರಿಶೀಲಿಸಿದ್ದೇನೆ. ಅದರಲ್ಲಿ ಯಾವ ಮಾಹಿತಿಯೂ ಇಲ್ಲ. ಬೆಂಗಳೂರು–ಮೈಸೂರು ಕಾರಿಡಾರ್‌ನ ಶೇಕಡಾ 60–70 ರಷ್ಟು ಭೂಸ್ವಾಧೀನ ಪ್ರಕ್ರಿಯೆಯು ಮುಗಿದಿದ್ದರೆ, ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸುವುದಾಗಿ ಇದೇ ಸದನದಲ್ಲಿ ಮಾನ್ಯ ಸಚಿವರು ಈ ಹಿಂದೆ ಹೇಳಿದ್ದು, ಈಗಲೂ ಸಹ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸುವುದಾಗಿ ಹೇಳಿ ಕಾಲ ಕಳೆಯುತ್ತಾರೆಯೋ ಅಥವಾ ಇದಕ್ಕೆ ಕ್ರಿಯಾ ಯೋಜನೆಯನ್ನು ಮಾಡಿ ಕೆಲಸವನ್ನು ಪ್ರಾರಂಭಿಸಲು ಅವರಿಗೆ ಅವಕಾಶವಿದೆಯೇ ಎಂಬ ಬಗ್ಗೆ ದಯವಿಟ್ಟು ನಿರ್ದಿಷ್ಟವಾಗಿ ಉತ್ತರವನ್ನು ನೀಡಬೇಕೆಂದು ಒತ್ತಾಯಿಸುತ್ತೇನೆ.

**ಡಾ||ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಣ್ಣನವರು ಸುದೀರ್ಘವಾಗಿ ಪ್ರಶ್ನೆ ಮೇಲೆ ಪ್ರಶ್ನೆಯನ್ನು ಕೇಳಿದ್ದಾರೆ. 2009 ನೇ ಸಾಲಿನಲ್ಲಿ ಪ್ರಾರಂಭವಾದ ಬೆಂಗಳೂರು–ಕನಕಪುರ–ಮಳವಳ್ಳಿ–ಕೊಳ್ಳೆಗಾಲ–ಸಂತೆಮಾರನಹಳ್ಳಿ–ಸತ್ಯಮಂಗಲ–ದಿಂಡಿಗಲ್ ರಸ್ತೆಯಲ್ಲಿ ಬೆಂಗಳೂರು–ಕನಕಪುರ ರಸ್ತೆಯು ಸುಮಾರು 35 ಕಿಲೋಮೀಟರ್ ರಸ್ತೆ ಆಗಿದ್ದು, ಇದನ್ನು ಚತುಷ್ಪಥ ರಸ್ತೆಯನ್ನಾಗಿ ಮಾಡುತ್ತೇವೆ. ಎಲ್ಲೆಲ್ಲಿ ಚತುಷ್ಪಥ ರಸ್ತೆ ಇರುತ್ತದೆಯೋ ಅದನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುತ್ತೇವೆ. ಈ ಸಂಬಂಧ ಈಗಾಗಲೇ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ ಕೆಲಸವನ್ನು ಮಾಡಿಸುತ್ತೇವೆ. ಕಗ್ಗಲೀಪುರ–ಹಾರೋಹಳ್ಳಿ ರಸ್ತೆಯಲ್ಲಿ ರಸ್ತೆ ಅಗಲೀಕರಣ ಕಾರ್ಯವು ಚಾಲ್ತಿಯಲ್ಲಿದೆ. ಕಳೆದ ವಾರ ನಾನು, ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಿವಕುಮಾರ್ ಮತ್ತು ಸಂಸದರಾದ ಶ್ರೀ ಸುರೇಶ್ ಕುಮಾರ್ ರವರು time and again ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದೇವೆ. ಅವರುಗಳು ನನ್ನನ್ನೂ ಭೇಟಿ ಮಾಡಿ ಈ ಸಂಬಂಧ ಕೇಳುತ್ತಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಟೆಂಡರ್ ಕರೆದು ಕೆಲಸವನ್ನು ಪ್ರಾರಂಭಿಸಿದೆ. Because it is four lane from Bengaluru to Kanakapura, NHAI has taken up the work. ಎರಡು ಪಥವುಳ್ಳ ರಸ್ತೆ ನಿರ್ಮಾಣ ಕಾರ್ಯವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಮಾಡುತ್ತದೆ. ಈಗಾಗಲೇ ರಸ್ತೆ ನಿರ್ಮಾಣ ಕೆಲಸವು ಪ್ರಾರಂಭವಾಗಿರುವುದರಿಂದ ರಸ್ತೆ ನಿರ್ಮಾಣದ ವಿಚಾರದಲ್ಲಿ ಯಾವುದೇ ಅನುಮಾನದ ಅಗತ್ಯತೆಯಿಲ್ಲ. ಟೆಂಡರ್ ಅವಾರ್ಡ್ ಆಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಕಾರುಗಳು ಹೋಗುವುದಕ್ಕೆ ಒಂದು ರಸ್ತೆ ಮಾಡಿಕೊಂಡರೆ, ಎಲ್ಲಾ ವಾಹನಗಳು ಜಲ ಮಂಡಳಿಯ ರಸ್ತೆಯ ಮೇಲೆ ಹೋಗುತ್ತಿವೆ. ಅದು 20 ಅಡಿ ಅಳತೆಯ ರಸ್ತೆಯಾಗಿದ್ದು, ಅದರ ಮೇಲೆ ವಾಹನಗಳು ಹೇಗೆ ಓಡಾಡಬೇಕು? ಅಂತಹ ರಸ್ತೆಗಳನ್ನು ನಿರ್ವಹಣೆ ಮಾಡಲೂ ಆಗುತ್ತಿಲ್ಲ.

***(10) 07.02.2017 11:50 MGN-MD***

**ಡಾ:ಹೆಚ್.ಸಿ.ಮಹದೇವಪ್ಪ:-** ರಸ್ತೆಯನ್ನು widen ಮಾಡುತ್ತಿರುವುದರಿಂದ ವಾಹನ ಸಂಚಾರಕ್ಕೆ ಆ ರೀತಿಯ ವ್ಯವಸ್ಥೆ ಮಾಡಲಾಗಿದೆ.

**ಶ್ರೀ ವಿ.ಸೋಮಣ್ಣ:-** ನೀವು ಏನಾದರೂ ಮಾಡಿ ಆ ರಸ್ತೆಯನ್ನು strengthening ಮಾಡಿ.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸೋಮಣ್ಣನವರು ಪ್ರಸ್ತಾಪ ಮಾಡುತ್ತಿರುವ ಆ ರಸ್ತೆಯನ್ನು ಕಳೆದ ವಾರ ಅಂದರೆ, ಕಳೆದ ಭಾನುವಾರದಂದು ನಾನೇ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಕಾಮಗಾರಿಗಳು ನಡೆಯುತ್ತಿರುವುದರಿಂದ ವಾಹನ ಸಂಚಾರಕ್ಕೆ ಸಹಜವಾಗಿ ಸ್ವಲ್ಪ ಮಟ್ಟಿಗೆ ಸಮಸ್ಯೆಗಳಾಗುತ್ತಿದ್ದು, ಪ್ರಯಾಣ ವಿಳಂಬವಾಗುತ್ತಿದೆ. Overnight we can't demolish the buildings that come across the road. ನಿರ್ವಹಣೆ ಮಾಡುವುದಕ್ಕೆ ಬೈಪಾಸ್ ಮಾಡಿದ್ದೇವೆ. ಅಲ್ಲಿ ಡಾ:ರವಿಶಂಕರ ಗುರೂಜಿ ಅವರ 'ಆರ್ಟ್ ಆಫ್ ಲಿವಿಂಗ್' ಸಂಸ್ಥೆ ಇದೆ. ಆ ಸಂಸ್ಥೆಯ ಮುಖಾಂತರ ಅಲ್ಲಿ ಪರ್ಯಾಯ ರಸ್ತೆಯನ್ನು ಮಾಡಿಕೊಟ್ಟಿದ್ದು, ನಾನು ಅದನ್ನೆಲ್ಲಾ ನೋಡಿಕೊಂಡು ಬಂದಿದ್ದೇನೆ. ಅಲ್ಲಿನ ಕೆಲಸಗಳು ನಡೆಯುತ್ತಿರುವುದು ಒಂದು ಭಾಗವಾದರೆ, ಇನ್ನೊಂದು ಬೆಂಗಳೂರು-ಮೈಸೂರು ರಸ್ತೆ. ಮೊದಲು ರಾಷ್ಟ್ರೀಯ ಹೆದ್ದಾರಿಯಾಗಿತ್ತು, ಯಾವಾಗ ಅದು six lanes, two service roads and shoulder ಆಯಿತು, ಹೆಚ್ಚು-ಕಡಿಮೆ 10 ಲೇನ್ ಆದಮೇಲೆ 4 ಲೇನ್ ಇದ್ದರೆ NHAI (National Highway Authority of India) ರವರು ತೆಗೆದುಕೊಳ್ಳುತ್ತಾರೆ. NHAI is an autonomous body. ಅವರು ತಮ್ಮದೇ ಆದಂತಹ ಕಾರ್ಯಕ್ರಮಗಳ ಮುಖಾಂತರ ಹಾಕುತ್ತಿದ್ದಾರೆ. ಅವರಿಗೆ 85% ಭೂಸ್ವಾಧೀನ ಆಗಿದೆ, ಮತ್ತೆ ಅದು ಸಚಿವ ಸಂಪುಟದ ಮುಂದೆ ಹೋಗಬೇಕು. Mr. Thavade is a NHAI Member and also a Senior Officer in Surface Transport Ministry, Government of India. ಅವರ ಜೊತೆಯಲ್ಲಿ ಮಾತನಾಡಿ, ಮೇ 2017ರ ವೇಳೆಗೆ ಈ ಕಾಮಗಾರಿಯನ್ನು ಪ್ರಾರಂಭ ಮಾಡುವಂತಹ ಎಲ್ಲ ಸಾಧ್ಯತೆಗಳಿರುವುದಾಗಿ ಅವರು ತಿಳಿಸಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಟೋಲ್ ಸಂಗ್ರಹಣೆ ಬಗ್ಗೆ ಕೂಡ ನಾನು ಅವರಿಗೆ ತಿಳಿಸಿದ್ದೇನೆ. NHAI Toll Plaza ದಲ್ಲಿ.. ಸರಾಸರಿ ಒಂದು ದಿನಕ್ಕೆ 346.1 ಲಕ್ಷ ಸಂಗ್ರಹವಾಗುತ್ತದೆ. ಹುಬ್ಬಳ್ಳಿ-ಧಾರವಾಡದಲ್ಲಿ 16 ಲಕ್ಷ ಸಂಗ್ರಹವಾಗುತ್ತದೆ. ನಮ್ಮ KRDCL (Karnataka Road Development Corporation Limited) ಯಲ್ಲಿ 3 ಪ್ಲಾಜಾಗಳಿದ್ದು, ಅಲ್ಲಿ ದಿನಕ್ಕೆ 10.50 ಲಕ್ಷ ಸಂಗ್ರಹವಾಗುತ್ತಿದೆ. ಪ್ರತಿ ದಿನ ಒಟ್ಟು 372.80 ಲಕ್ಷ ರೂಪಾಯಿಗಳಷ್ಟು ಹಣ ನಮ್ಮ ರಾಜ್ಯದಲ್ಲಿ ಟೋಲ್‌ನಿಂದ ಸಂಗ್ರಹಣೆಯಾಗುತ್ತಿದೆ. NHAI ಅವರದ್ದು ಮೇಜರ್ ಇದೆ, ಅಲ್ಲದೆ 3 ಕೆ.ಆರ್.ಡಿ.ಸಿ.ಎಲ್. ಕರ್ನಾಟಕದ್ದಿದ್ದು, 2 ನಂದಿ ಕಾರಿಡಾರ್ ಸಂಸ್ಥೆಯವರದ್ದಿವೆ. NHAI ಅವರಿಂದ ಪ್ರತಿ ದಿನ 346.10 ಲಕ್ಷ ರೂಪಾಯಿಗಳಷ್ಟು ಹಣ ಸಂಗ್ರಹವಾಗುತ್ತಿದೆ.

ಗ್ರಾಂಟ್ಸ್ ಏನೂ ಉಳಿದುಕೊಳ್ಳುವುದಿಲ್ಲ. ನಿರ್ವಹಣೆಗಾಗಿ ಕೊಡುವಂತಹ ಅನುದಾನ ಇರಬಹುದು ಅಥವಾ Annual Plan Grant ಇರಬಹುದು, ಅದು ಏನು ಬರುತ್ತದೆಯೋ ಅದನ್ನು ಖರ್ಚು ಮಾಡಲಾಗುತ್ತದೆ; ಅದನ್ನು ಖರ್ಚು ಮಾಡದಿರುವುದಿಲ್ಲ. All these things will be taken up at the National level. ಅವರು ಏನು grants ಮಾಡಿಕೊಡುತ್ತಾರೆಯೋ ಅದನ್ನು ಖರ್ಚು ಮಾಡಿ, ಅದರ ಉಸ್ತುವಾರಿ ನೋಡಿಕೊಳ್ಳುವುದು ನಮ್ಮ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಅದರಲ್ಲಿ ಉಳಿಸಿಬಿಡುವುದು ಅಥವಾ ತಪ್ಪಿಸಿಬಿಡುವುದು ಇಂಥದ್ದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

**ಚುಕ್ಕೆ ಪ್ರಶ್ನೆ ಸಂಖ್ಯೆ: 92**

**ಶ್ರೀ ಟಿ.ಎ.ಶರವಣ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಕಳೆದ 2 ವರ್ಷಗಳಲ್ಲಿ ಕೃಷಿ ಹೊಂಡಗಳಲ್ಲಿ ಆಕಸ್ಮಿಕವಾಗಿ ಬಿದ್ದು 59 ಜನರು ಮೃತಪಟ್ಟಿರುವುದಾಗಿ ಉತ್ತರದಲ್ಲಿ ತಿಳಿಸಲಾಗಿದೆ. ಆದರೆ ಈ ಸಮಸ್ಯೆಗೆ ಜನ/ಜಾನುವಾರುಗಳು ಒಳಗಾಗದಂತೆ ಸರ್ಕಾರ ಯಾವ ರೀತಿ ಸುರಕ್ಷತೆ ಕ್ರಮಗಳನ್ನು ಅನುಸರಿಸುತ್ತಿದೆ? ರೈತರಲ್ಲಿ ಈ ಬಗ್ಗೆ ಯಾವ ರೀತಿ ಜಾಗೃತಿಯನ್ನು ಮೂಡಿಸುತ್ತಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕಾಗಿದೆ. ಕಳೆದ 2 ವರ್ಷಗಳಲ್ಲಿ 59 ಜನರು ಮೃತಪಟ್ಟಿರುವುದರ ಜೊತೆಗೆ ಹಲವಾರು ಜಾನುವಾರುಗಳು ಸಹ ಈ ಕೃಷಿ ಹೊಂಡದಲ್ಲಿ ಆಕಸ್ಮಿಕವಾಗಿ ಬಿದ್ದು ಸಾವನ್ನಪ್ಪಿವೆ. ಹೀಗಾಗಿ ಸರ್ಕಾರ ನೀಡಿರುವಂತಹ ಉತ್ತರದಲ್ಲಿ ಈ ಬಗ್ಗೆ ಸರಿಯಾದಂತಹ ಸಮಜಾಯಿಷಿಯನ್ನು ಕೊಟ್ಟಿಲ್ಲ ಎನ್ನುವುದು ನನ್ನ ನೇರವಾದ ಆರೋಪವಾಗಿದೆ. ರೈತರಲ್ಲಿ ಈ ವಿಚಾರದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಸೂಕ್ತ ಮಾರ್ಗದರ್ಶನವನ್ನು ನೀಡಿ, ಅಲ್ಲಿ ಕೃಷಿ ಹೊಂಡಗಳಲ್ಲಿ ಪ್ಲಾಸ್ಟಿಕ್ ಪೇಪರ್‌ಗಳನ್ನು ಏನು ಬಳಕೆ ಮಾಡುತ್ತಿದ್ದಾರೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದನ್ನು ತಡೆಗಟ್ಟಲಿಕ್ಕೆ ಯಾವ ರೀತಿ ಅರಿವನ್ನು ಮೂಡಿಸಲಾಗುತ್ತಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕಾಗುತ್ತದೆ. ಕೃಷಿಭಾಗ್ಯ ಯೋಜನೆಯ ಮುಖಾಂತರ ರೈತರು ತಮ್ಮ ಜಮೀನುಗಳಲ್ಲಿ ಕೃಷಿ ಹೊಂಡಗಳನ್ನು ಅಳವಡಿಸಿಕೊಳ್ಳುವಂಥವರಿಗೂ ಸಹ ಕೆಲವು ಸಬ್ಸಿಡಿಗಳನ್ನು ಕೊಟ್ಟು, ಈ ರೀತಿ ಜನ ಮತ್ತು ಜಾನುವಾರುಗಳ ಜೀವಕ್ಕೆ ಅಪಾಯ ಉಂಟಾಗದ ರೀತಿಯಲ್ಲಿ ಕೃಷಿ ಹೊಂಡಗಳ ಅಗಲವನ್ನು ಹೆಚ್ಚಿಸಿ, ಆಳವನ್ನು ಕಡಿಮೆ ಮಾಡುವುದರ ಜೊತೆಗೆ ಆ ಕೃಷಿ ಹೊಂಡಗಳ ಸುತ್ತಲೂ ಬೇಲಿ ಹಾಕಿ ಒಂದು ಉತ್ತಮವಾದಂತಹ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ ಎನ್ನುವಂತಹ ಸಲಹೆಯನ್ನು ನೀಡುತ್ತಿದ್ದು, ಈ ಬಗ್ಗೆ ಸರ್ಕಾರದಿಂದ ಉತ್ತರವನ್ನು ಬಯಸುತ್ತಿದ್ದೇನೆ.

**ಡಾ:ಶರಣಪ್ರಕಾಶ ಆರ್.ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) (ಮಾನ್ಯ ಕೃಷಿ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಕೂಡಿದ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ 59 ಜನರು ಈ ಕೃಷಿ ಹೊಂಡಗಳಲ್ಲಿ ಆಕಸ್ಮಿಕವಾಗಿ ಬಿದ್ದು ಸಾವನ್ನಪ್ಪಿರುವುದರಿಂದ ಈ ಸಮಸ್ಯೆಯನ್ನು ಇಲಾಖೆ ಕೂಡ ಬಹಳ ಗಂಭೀರವಾಗಿ ಪರಿಗಣಿಸಿದೆ. ಈ ವಿಚಾರದಲ್ಲಿ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು, ನಮ್ಮ ರೈತರಿಗೆ ಕೊಡಬೇಕಾಗಿರುವ ತರಬೇತಿಯ ಜೊತೆಗೆ ಈ ರೀತಿಯ ಅವಗಡಗಳನ್ನು ತಪ್ಪಿಸುವುದಕ್ಕೆ ಕೂಡ ಸರ್ಕಾರ ಕ್ರಮ ಕೈಗೊಂಡಿದೆ. ಮಾನ್ಯ ಸದಸ್ಯರು ಸಲಹೆ ಕೊಟ್ಟಿರುವಂತೆ ಆ ಕೃಷಿ ಹೊಂಡಗಳಿಗೆ fencing ಮಾಡುವುದು, ನೆರಳು ಪರದೆ (shade net) ಅಳವಡಿಸುವುದರಿಂದ ಈ ರೀತಿಯ ಅವಗಡಗಳನ್ನು ನಾವು ತಪ್ಪಿಸಬಹುದು ಎನ್ನುವ ಬಗ್ಗೆ ಮಾನ್ಯ ಸದಸ್ಯರು ನೀಡಿರುವ ಸಲಹೆ ಏನಿದೆ, ಇದರ ಬಗ್ಗೆ ಈಗಾಗಲೇ ಸರ್ಕಾರ ಆಲೋಚನೆ ಮಾಡಿದೆ. Fencing and shade net ಗೆ 50% ಸಬ್ಸಿಡಿ ಕೊಡುವುದಕ್ಕೆ ಇದೇ ಜನವರಿಯಲ್ಲಿಯೇ ಸರ್ಕಾರ ಆದೇಶವನ್ನು ಹೊರಡಿಸಿದೆ. ಮುಂಬರುವಂತಹ ದಿನಗಳಲ್ಲಿ ಈ ರೀತಿ ಯಾವುದೇ ಅವಗಡಗಳು ಸಂಭವಿಸದ ರೀತಿಯಲ್ಲಿ ಸರ್ಕಾರ ಎಲ್ಲಾ ರೈತರಿಗೂ ಇದನ್ನು ಇಂಪ್ಲಿಮೆಂಟ್ ಮಾಡುವ ಸಂದರ್ಭದಲ್ಲಿ ಈ ರೀತಿಯ ಅವಗಡಗಳು ಸಂಭವಿಸುವ ಸಾಧ್ಯತೆಗಳಿವೆ, ಇದನ್ನು ನಾವು ನಿಯಂತ್ರಣ ಮಾಡಲು ಈ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಮಾಹಿತಿ ನೀಡಲು ರೈತರಿಗೆ ತರಬೇತಿ ನೀಡುವ ದಿಕ್ಕಿನಲ್ಲಿ ಕೂಡ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:-** ಈಗ ರೈತರಿಗೆ ಆ ಸಬ್ಸಿಡಿಯನ್ನು ನೀಡಲಾಗುತ್ತಿದೆಯೇ?

**ಡಾ:ಶರಣಪ್ರಕಾಶ ಆರ್.ಪಾಟೀಲ್:-** 50% ಸಬ್ಸಿಡಿ ಕೊಡಬೇಕು ಎಂದು ಜನವರಿಯಲ್ಲಿ ಆದೇಶ ಆಗಿದೆ. ಅದರ ಪ್ರಕಾರ ಮಾಡುತ್ತೇವೆ.

**ಸಭಾಪತಿಯವರು:-** ಆದೇಶ ಆಗಿದೆ, ಇನ್ನೂ ಸ್ಕೀಂ ಆಗಿಲ್ಲ. ಸ್ಕೀಂ ಆದಮೇಲೆ ಕೊಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 68**

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಂಧನ ಸಚಿವರು ಬಹಳ ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಆದರೆ ಏನು ಎಸ್ಕಾಂ ವಿದ್ಯುತ್ ದರವನ್ನು ಏರಿಕೆ ಮಾಡುತ್ತಿದೆ, ಅದರ ಆದಾಯ ಮತ್ತು ವೆಚ್ಚವನ್ನು ಅಳತೆಗೋಲಾಗಿ ಮಾಡಿ, ದರ ನಿಗದಿ ಮಾಡುವುದರ ಬಗ್ಗೆ ಉತ್ತರವನ್ನು ನೀಡಲಾಗಿದೆ. ಆದರೆ ಈ ದರ ಏರಿಕೆ ಬಗ್ಗೆ ರೈತರು ಹಾಗೂ ಗ್ರಾಹಕರುಗಳೆಲ್ಲರೂ ಒಕ್ಕೊರಲಿನಿಂದ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ವಿದ್ಯುತ್ ದರವನ್ನು ಸ್ವಲ್ಪವಾದರೂ ಕಡಿಮೆ ಮಾಬೇಕೆಂದು ನಾನು ಇಂಧನ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇದಕ್ಕೆ ಪೂರಕವಾಗಿ ದಿನಾಂಕ:27/02/2016ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಒಂದು ವರದಿಯನ್ನು ಪ್ರಕಟಿಸಲಾಗಿದ್ದು, *"ನೀರಾವರಿ ಪಂಪ್‌ಸೆಟ್‌ಗಳಿಗೆ ಶೇಕಡಾ 30ರಷ್ಟು ವಿದ್ಯುತ್ ಬಳಕೆಯಾಗುತ್ತದೆ ಎಂದು ಬೆಸ್ಕಾಂ ಹೇಳುತ್ತಿದೆ. ಆದರೆ ದಿನಕ್ಕೆ 2 ಅಥವಾ 3 ತಾಸು ಸಹ ವಿದ್ಯುತ್ ದೊರೆಯುತ್ತಿಲ್ಲವೆಂದು ರೈತರು ದೂರುತ್ತಿದ್ದಾರೆ. ಹೀಗಾಗಿ ಐಪಿ ಸೆಟ್ ಮತ್ತು ರೈತರ ಹೆಸರಿನಲ್ಲಿ ವಿದ್ಯುತ್ ಲೂಟಿ ನಡೆದಿರುವ ಶಂಕೆ ಇದೆ. ಈ ಬಗ್ಗೆ ಇಂಧನ ಉಪಯೋಗಕ್ಕೆ ಸಂಬಂಧಿಸಿದಂತೆ ಆಡಿಟ್ ಮಾಡಿದರೆ ನಿಜಾಂಶ ಹೊರಬರುತ್ತದೆ."* ಎಂದು ಪತ್ರಿಕೆಯಲ್ಲಿ ಲೇಖನ ಪ್ರಕಟವಾಗಿದೆ. ಅದರ ಜೊತೆಗೆ ವೆಚ್ಚ ಆಧಾರಿತ ಸೇವೆ ಇದೇರೀತಿ ಜಾರಿಗೆ ತಂದರೆ ಐಟಿ ಗ್ರಾಹಕರು ಬಚಾವಾಗುತ್ತಾರೆ. ಅಲ್ಲದೆ ಸರ್ಕಾರದ ನೀತಿ ಹಾಗೂ ಬೆಸ್ಕಾಂ ಕಾರ್ಯವಿಧಾನದಲ್ಲಿ ಬದಲಾವಣೆ ಆಗಬೇಕು. ಆದ್ದರಿಂದ ಸರ್ಕಾರ ಅನಗತ್ಯವಾಗಿ ವಿದ್ಯುತ್ ದರವನ್ನು ಹೆಚ್ಚಿಸಿ ಸಣ್ಣ ಕಾರ್ಖಾನೆಗಳ ಕತ್ತು ಹಿಸುಕುವ ಕೆಲಸಕ್ಕೆ ಕೈ ಹಾಕಬಾರದೆಂಬುದು ನಮ್ಮ ಕಳಕಳಿಯಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಇಡೀ ರಾಜ್ಯದ ಗ್ರಾಹಕರ ಪರವಾಗಿ ಮಾನ್ಯ ಅಪ್ಪಾಜಿಗೌಡರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಪತ್ರಿಕೆಯಲ್ಲಿ ಪ್ರಕಟವಾಗಿರುವ ಯಾವುದೋ ಒಂದು ವರದಿಯ ಆಧಾರದ ಮೇಲೆ ಅವರು ಮಾತನಾಡಿದ್ದಾರೆ. ಪತ್ರಿಕೆಯಲ್ಲಿ ಆ ರೀತಿಯ ವರದಿಗಳು ಬಂದಿರಬಹುದು. ನಾವಾಗಲಿ ಅಥವಾ ಕಂಪನಿಗಳಾಗಲಿ ಏಕಾಏಕಿ ಆ ರೀತಿ ವಿದ್ಯುತ್ ದರವನ್ನು ಏರಿಕೆ ಮಾಡುವುದಕ್ಕೆ ಬರುವುದಿಲ್ಲ.

ಎಷ್ಟು ಇಂಧನ ಖರ್ಚಾಗುತ್ತದೆ, ಎಷ್ಟು ಇಂಧನವನ್ನು ಖರೀದಿ ಮಾಡುತ್ತೇವೆ, ಅದಕ್ಕೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಲೆಕ್ಕಾಚಾರ ಮಾಡಿ ಪ್ರತಿ ವರ್ಷ ನಮ್ಮ ಆದಾಯ ಮತ್ತು ವೆಚ್ಚವನ್ನು ಲೆಕ್ಕಾಚಾರ ಹಾಕಿಕೊಂಡು ನಮ್ಮ ವಿದ್ಯುಚ್ಛಕ್ತಿ ಕಂಪನಿಗಳು ನಾವು ಕೆ.ಇ.ಆರ್.ಸಿ. ಗೆ ಕೇಳಿಕೊಳ್ಳುತ್ತೇವೆ. ಈ ರೀತಿ ದರದ ಬಗ್ಗೆ ಏನೇ ಕೇಳಿದರೂ ಸಹ ಅವರು ತೀರ್ಮಾನ ಮಾಡುವಂಥ ಸಂದರ್ಭದಲ್ಲಿ ಒಂದು ದರವನ್ನು ತೀರ್ಮಾನ ಮಾಡುತ್ತಾರೆ. ನಾನು ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ಆದರೂ ಸಹ ಅವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಸರಾಸರಿ 2007ರಿಂದ ಇಲ್ಲಿಯವರೆಗಿನ ಇತರೆ ವಿವರಗಳನ್ನು ಅಪೇಕ್ಷಿಸಿದಲ್ಲಿ ಒದಗಿಸಿ ಕೊಡುತ್ತೇವೆ. ಪ್ರತಿ ಯೂನಿಟ್‌ಗೆ 2012-13ನೇ ಸಾಲಿನಲ್ಲಿ ನಾವು ಅಂದರೆ, ಎಸ್ಕಾಮ್‌ಗಳು 73 ಪೈಸೆ ಹೆಚ್ಚಳಕ್ಕೆ ಮನವಿ ಮಾಡಿದ್ದವು, ಆದರೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ(ಕೆ.ಇ.ಆರ್.ಸಿ.)ದವರು ಕೇವಲ 13 ಪೈಸೆ ಹೆಚ್ಚಳಕ್ಕೆ ಅನುಮೋದನೆ ನೀಡಿದ್ದರು. ಅದೇರೀತಿ 2013-14ನೇ ಸಾಲಿನಲ್ಲಿ 70 ಪೈಸೆ ಹೆಚ್ಚಳಕ್ಕೆ ಮನವಿ ಮಾಡಿದಂತಹ ಸಂದರ್ಭದಲ್ಲಿ ಅವರು ಕೇವಲ 23 ಪೈಸೆ ಹೆಚ್ಚಳಕ್ಕೆ ಅನುಮೋದನೆ ನೀಡಿದ್ದರು. 2014-15ನೇ ಸಾಲಿನಲ್ಲಿ ನಾವು 66 ಪೈಸೆ ಹೆಚ್ಚಳಕ್ಕೆ ಮನವಿ ಮಾಡಿದಂತಹ ಸಂದರ್ಭದಲ್ಲಿ ಅವರು ಕೇವಲ 32 ಪೈಸೆ ಹೆಚ್ಚಳಕ್ಕೆ ಅನುಮೋದನೆ ನೀಡಿದ್ದರು. 2015-16ನೇ ಸಾಲಿನಲ್ಲಿ ನಾವು 80 ಪೈಸೆ ಹೆಚ್ಚಳಕ್ಕೆ ಮನವಿ ಮಾಡಿದಂತಹ ಸಂದರ್ಭದಲ್ಲಿ ಅವರು ಹೆಚ್ಚು-ಕಡಿಮೆ ಕೇವಲ 13 ಪೈಸೆಯಷ್ಟು ಮಾತ್ರ ವ್ಯತ್ಯಾಸ ಮಾಡಬಹುದು ಎಂದು ಹೇಳಿದರು. 2016-17ನೇ ಸಾಲಿನಲ್ಲಿ ನಾವು 1 ರೂ. 2 ಪೈಸೆ ಹೆಚ್ಚಳಕ್ಕೆ ಮನವಿ ಮಾಡಿದಂತಹ ಸಂದರ್ಭದಲ್ಲಿ ಅವರು ಕೇವಲ 48 ಪೈಸೆ ಹೆಚ್ಚಳಕ್ಕೆ ಅನುಮೋದನೆ ನೀಡಿದ್ದರು. ಕಳೆದ ಮೂರು ವರ್ಷಗಳಿಂದ ಸತತವಾಗಿ ಬರಗಾಲವಿದೆ. ಲಿಂಗನಮಕ್ಕಿ ಜಲಾಶಯ ಪ್ರದೇಶದಲ್ಲಿ 25 ವರ್ಷಗಳಿಂದ ಕಾಣದಂತಹ ಬರಗಾಲ ಈಗ ಬಂದಿದೆ. ಸಾಕಷ್ಟು ಜಲಾಶಯಗಳಲ್ಲಿ ಅರ್ಧದಷ್ಟು ಮಾತ್ರ ನೀರು ತುಂಬಿದೆ. ಪ್ರತಿ ಯೂನಿಟ್ ವಿದ್ಯುತ್ ದರ 1 ರೂಪಾಯಿ 50 ಪೈಸೆಗಳಷ್ಟಿದೆ. ಕಳೆದ ವರ್ಷ ನಾವು ಪ್ರತಿ ಯೂನಿಟ್‌ಗೆ 5 ರೂ. 8 ಪೈಸೆಯಂತೆ ವಿದ್ಯುತ್ತನ್ನು ಖರೀದಿ ಮಾಡಿದ್ದೇವು. ಹೀಗಾಗಿ ನಮಗೆ ಹೆಚ್ಚಿನ ವೆಚ್ಚ ಬರುತ್ತಿದೆ. ಈ ವರ್ಷವೇ ವೆಚ್ಚವನ್ನು ಸರಿದೂಗಿಸಿ ತೆಗೆದುಕೊಳ್ಳುವುದಕ್ಕೆ ಬಿಡುವುದಿಲ್ಲ. ಇದನ್ನು ಮುಂದಿನ ವರ್ಷ ತೆಗೆದುಕೊಂಡು ನಿಯಂತ್ರಣ ಮಾಡಲಿಕ್ಕೆ ಕೆ.ಇ.ಆರ್.ಸಿ. ವ್ಯವಸ್ಥೆ ಇದೆ.

ಮಾನ್ಯ ಸದಸ್ಯರು ಕೇವಲ ಎರಡು-ಮೂರು ಗಂಟೆಗಳ ಕಾಲ ಮಾತ್ರ ವಿದ್ಯುಚ್ಛಕ್ತಿಯನ್ನು ಪೂರೈಸಲಾಗುತ್ತಿದೆ ಎಂದು ಹೇಳಿದರು. ಬಹುಶಃ ಅವರು ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿಲ್ಲವೆಂದು ಕಾಣುತ್ತದೆ. ರೈತರಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಪ್ರಶ್ನೆ ಇದೆ. ಮಾನ್ಯ ಸದಸ್ಯರು ಇಲ್ಲಿಂದಲೇ ದೂರವಾಣಿ ಮಾಡಲಿ. ಇಡೀ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಜ್ಯದಲ್ಲಿ 7 ಗಂಟೆಗಳ ಕಾಲ ನಾನು ಸಂಪೂರ್ಣವಾಗಿ ವಿದ್ಯುಚ್ಛಕ್ತಿಯನ್ನು ಕೊಡುತ್ತಿಲ್ಲವೆಂದರೆ, ಅವರು ಯಾವ ಶಿಕ್ಷೆಯನ್ನು ಕೊಟ್ಟರೂ ಸಹ ಈ ಸಂದರ್ಭದಲ್ಲಿ ನಾನು ತೆಗೆದುಕೊಳ್ಳಲಿಕ್ಕೆ ತಯಾರಿದ್ದೇನೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಒಂದು ಸದನ ಸಮಿತಿಯನ್ನು ರಚನೆ ಮಾಡಿಬಿಡಲಿ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಮಾನ್ಯ ಸದಸ್ಯರು ಒಂದು ನಿಮಿಷ ಕೇಳಬೇಕಾಗುತ್ತದೆ. ನಮ್ಮ ರೈತರಿಗೆ ಸಂಬಂಧಿಸಿದಂತೆ ನಾವು ಮಾತು ಕೊಟ್ಟಿದ್ದೇವೆ.

**(11) 07.02.2017 12.00 ಎಸ್‌ವಿ–ಎಕೆ**

ರೈತರ ಹಿತದೃಷ್ಟಿಯನ್ನು ಕಾಯ್ದುಕೊಳ್ಳುವ ಸಲುವಾಗಿ ಕೈಗಾರಿಕೆಗಳವರನ್ನೂ ಒಳಗೊಂಡಂತೆ ಎಲ್ಲರಿಗೂ ನಾವು ಮಾತು ಕೊಟ್ಟಿದ್ದೇವೆ. ಇವತ್ತು ಡಿಮ್ಯಾಂಡ್ ಇಲ್ಲ. ನೀವು ಉತ್ತರ ಕರ್ನಾಟಕದ ಶಾಸಕರನ್ನು ಕೇಳಿ. ಕೆಲವು ಸಂದರ್ಭಗಳಲ್ಲಿ ಆರು–ಏಳು ಗಂಟೆ ವಿದ್ಯುತ್ ಪೂರೈಕೆ ಮಾಡಬೇಕಾದ ಕಡೆಯಲ್ಲಿ they are drawing ten hours power. ನೀರು ಇರಲಿ, ಇಲ್ಲದಿರಲಿ 9,500 ಮೆಗಾವ್ಯಾಟ್ ವಿದ್ಯುತ್‌ಗೆ ಡಿಮ್ಯಾಂಡ್ ಇದೆ. ಆದರೆ 10,500 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ನಾವು ಸಿದ್ಧಪಡಿಸಿಕೊಂಡಿದ್ದೇವೆ. ನೀವು ಯಾವ ಕೈಗಾರಿಕೆಗಳವರನ್ನು ಬೇಕಾದರೂ ಕರೆಯಿರಿ. 24 ಗಂಟೆಗಳ ಕಾಲ ವಿದ್ಯುತ್ ನೀಡುವುದಕ್ಕೆ ನಾನು ಸಿದ್ಧನಿದ್ದೇನೆ. ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿ ಉತ್ತಮ ವಾತಾವರಣವಿದೆ, ಉತ್ತಮ ವಿದ್ಯುಚ್ಛಕ್ತಿ ಸೌಲಭ್ಯವಿದೆ ಎಂದು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಕರ್ನಾಟಕ ರಾಜ್ಯದಲ್ಲಿ International Industries Meet ಅನ್ನು ಬೆಂಗಳೂರಿನಲ್ಲಿ ಮಾಡಿದರು. There is a very good foundation here. ಇಲ್ಲಿ ಒಳ್ಳೆಯ ಆಡಳಿತ ಇದೆ, ಒಳ್ಳೆಯ ವಿದ್ಯುಚ್ಛಕ್ತಿ ಇದೆ, ಒಳ್ಳೆಯ ವ್ಯವಹಾರ ಇದೆ ಎಂದು ಕರ್ನಾಟಕ ರಾಜ್ಯಕ್ಕೆ ಅಂತರರಾಷ್ಟ್ರೀಯ ಮಟ್ಟದ ಕೈಗಾರಿಕೋದ್ಯಮಿಗಳೆಲ್ಲರೂ ಬರುವಂತೆ ಮಾಡಿದರು. You bring any industry, we are ready to give power to them. ಪ್ರತಿ ವರ್ಷ 50,000 ರೈತರು ಜಾಸ್ತಿಯಾಗುತ್ತಿದ್ದಾರೆ. 8,500 ಕೋಟಿ ರೂಪಾಯಿಗಳಷ್ಟು ಹಣ ರೈತನಿಗೆ ಸಬ್ಸಿಡಿಯಾಗಿ ಹೋಗುತ್ತಿದೆ. ಒಬ್ಬ ರೈತನಿಗೆ 50 ರಿಂದ 70 ಸಾವಿರ ರೂಪಾಯಿಗಳನ್ನು ಉಚಿತವಾಗಿ ಅಂದರೆ ಸಬ್ಸಿಡಿಯಾಗಿ ನೀಡುತ್ತಿದ್ದೇವೆ. ಆದ್ದರಿಂದ ಗಾಬರಿಯಾಗುವುದು ಬೇಡ. It is your government... ನಮ್ಮ ಸರ್ಕಾರಕ್ಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಮಿಟ್‌ಮೆಂಟ್ ಇದೆ. ಎಲ್ಲಾ ತರಹದ ಗ್ರಾಹಕರಿಗೆ ನಮ್ಮ Plan of Action ಮೂಲಕ ಮುಂದಾಲೋಚನೆಯಿಂದ ಎಲ್ಲವನ್ನೂ ಮಾಡುತ್ತಿದ್ದೇವೆ. I am ready to answer any question. ಬಹಳ ಉತ್ತಮವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅವರ ಪ್ರಶ್ನೆಯ ಮೂಲಕ ರಾಜ್ಯಕ್ಕೆ ಒಂದು ಉತ್ತರವನ್ನೂ ಸಹ ನೀಡಿದ್ದೇನೆ.

**ಪ್ರಶ್ನೆ ಸಂಖ್ಯೆ: 52**

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಇವೆಲ್ಲವೂ ರೈತರಿಗೆ ಸಂಬಂಧಪಟ್ಟಂತಹ ಅಭಿವೃದ್ಧಿ ಕಾರ್ಯಗಳು. 7 ವರ್ಷಗಳ ಹಿಂದೆ ಎಮ್ಮೆ ತಳಿಯ ಅಭಿವೃದ್ಧಿಗಾಗಿ ಅನುದಾನವನ್ನೂ ಕೊಟ್ಟಿದ್ದೀರಿ. ಇದರ ಉದ್ದೇಶವೇನೆಂದರೆ, ಅಜ್ಜಂಪುರದಲ್ಲಿ ವಿಶೇಷ ಅಮೃತ ಮಹಲ್ ರಾಸುಗಳ ತಳಿಯ ಸಂಶೋಧನೆ ನಡೆಯುವಂತೆ ಯಾದಗಿರಿಯ ಡೊರನಳ್ಳಿಯಲ್ಲಿ ಎಮ್ಮೆ ತಳಿಗಳ ಸಂಶೋಧನೆ ನಡೆಯಬೇಕು ಎನ್ನುವುದಾಗಿದೆ. 'Activities Plan' ಅಡಿಯಲ್ಲಿ ಯಾವ ರೀತಿ ಉತ್ತರ ಕೊಟ್ಟಿದ್ದಾರೆಂದರೆ –

- "Plan to providing germ plasm to buffalo farmers.
- Plan to setting up of buffalo management and research units.
- Plan to produce high quality milk.
- Plan to provide advisory and consultancy services to livestock farmers.
- Plan to conducting need based training programmes."

ಈ activities ಆಗಿದೆಯೇ? ಇದರ ಫಲಿತಾಂಶ ಏನು? ರೈತರಿಗೆ ಏನಾದರೂ ಅನುಕೂಲವಾಗಿದೆಯೇ? ಇದರಿಂದ ಹಾಲು ಉತ್ಪಾದನೆ ಹೆಚ್ಚಾಗಿದೆಯೇ ಎನ್ನುವ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೇ, 2015-16ರಲ್ಲಿ ಸುಮಾರು 1396 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸೇರಿ 171 ಸಂಶೋಧನೆಗಳನ್ನು ಮಾಡಿದೆ. ಅದರಲ್ಲಿ 65 ಯೋಜನೆಗಳು ಪೂರ್ಣಗೊಂಡಿದೆ. ಚಾಲ್ತಿಯಲ್ಲಿರತಕ್ಕಂತಹದ್ದು 106. ಒಟ್ಟು 126 ಸಂಶೋಧನಾ ವಿದ್ಯಾರ್ಥಿಗಳು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅದರಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಶೋಧನೆಯನ್ನು ಮಾಡಿದ ಮೇಲೆ ಅವರು ಹಳ್ಳಿಗಳಿಗೆ ಹೋದಾಗ ಅವರಿಂದ ರೈತರಿಗೆ ನಿಜವಾಗಿಯೂ ಉಪಯೋಗವಾಗುತ್ತದೆ. ಲಸಿಕೆಗಳನ್ನು ಹಾಕುವುದಾಗಿರಲಿ, ಗೋವುಗಳನ್ನು ರಕ್ಷಣೆ ಮಾಡುವುದಾಗಿರಲಿ ಅಥವಾ ಹಾಲು ಉತ್ಪಾದನೆ ಹೆಚ್ಚು ಮಾಡುವುದಕ್ಕಾಗಲಿ ಇದು ಪೂರಕವಾಗಿದೆ. ಜೊತೆಗೆ 'ಸರ್ಕಾರ ಅನುದಾನ ಬಿಡುಗಡೆ ಮಾಡಿದೆಯೇ' ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಾವು ಅನುದಾನ ಬಿಡುಗಡೆ ಮಾಡದೆ ಯಾವುದೇ ಸಂಶೋಧನೆಯನ್ನು ಮಾಡುವುದಕ್ಕಾಗುವುದಿಲ್ಲ. ನಾವು ಅನುದಾನ ನೀಡಿರುವುದರಿಂದಲೇ ಇವತ್ತು ಆ ಸಂಶೋಧನೆಗಳು ಆಗಿರತಕ್ಕಂತಹದ್ದು. 'ದುಡ್ಡಿನ ಕೊರತೆ ಇದೆಯೇ' ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಮಗೆ ಯಾವುದೇ ರೀತಿಯ ದುಡ್ಡಿನ ಸಮಸ್ಯೆ ಇರುವುದಿಲ್ಲ. ಎಲ್ಲಾ ರೀತಿಯ ಹಣವನ್ನೂ ಒದಗಿಸಿದ್ದೇವೆ. ಜೊತೆಗೆ ಯಾದಗಿರಿಯ ಡೊರನಳ್ಳಿಯಲ್ಲಿ ಎಮ್ಮೆ ತಳಿ ಸಂಶೋಧನಾ ಕೇಂದ್ರವನ್ನು ರೂ.1005 ಲಕ್ಷ ಗಳನ್ನು ಕೊಟ್ಟು ಅಲ್ಲಿ ಮಾಡುತ್ತಿದ್ದೇವೆ. ಅದಕ್ಕೆ ಪೂರಕವಾಗಿ ವಿಶ್ವವಿದ್ಯಾಲಯದವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಅದನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ವಿಶ್ವವಿದ್ಯಾಲಯದವರು ಇದನ್ನು ಪೈಲಟ್ ಪ್ರಾಜೆಕ್ಟ್ ಆಗಿ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತಾರೆ. ನಿಜವಾಗಿಯೂ ಇದರಿಂದ ರೈತರಿಗೆ ಅನುಕೂಲವಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗಿರುವುದಕ್ಕೆ ಇಂದು ರಾಜ್ಯದಲ್ಲಿ ಹಾಲು ಉತ್ಪಾದನೆ ಹೆಚ್ಚಾಗಿರುವುದೇ ಸಾಕ್ಷಿ ಎಂದು ನಾನು ಅವರಿಗೆ ಹೇಳಬಯಸುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ರಾಜ್ಯದಲ್ಲಿ ಎಂದು ಜನರಲೈಸ್ ಮಾಡಿ ಹೇಳಬಾರದು. ಏಕೆಂದರೆ ಈ ಕೇಂದ್ರವು ಬೀದರ್ ವಿಶ್ವವಿದ್ಯಾಲಯದಿಂದ ಸ್ಥಾಪನೆಯಾಗಿದೆ. ಇಲ್ಲಿ ಸಂಶೋಧನೆಯಾದಂತಹ ಎಮ್ಮೆ ತಳಿಗಳು ಮಾರುಕಟ್ಟೆಗೆ ಬಂದು ರೈತರಿಗೆ ಅದರಿಂದ ಏನಾದರೂ ಅನುಕೂಲವಾಗಿದೆಯೇ; ಈ ಸಂಶೋಧನೆಯಿಂದ ರೈತರಿಗೆ ನಿರ್ದಿಷ್ಟವಾಗಿ ಏನಾದರೂ ಅನುಕೂಲವಾಗಿದೆಯೇ?

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೆ, ಇವರು ನಾವು ಡೊರನಳ್ಳಿಯಲ್ಲಿ ಮಾಡಿರುವಂತಹ ಸಂಶೋಧನಾ ಕೇಂದ್ರದ ಎಮ್ಮೆ ತಳಿಗಳ ಬಗ್ಗೆ ಕೇಳಿದ್ದಾರೆ. ನಾವು ಅದಕ್ಕೆ ಹಣವನ್ನೂ ಕೊಟ್ಟಿದ್ದೇವೆ. ಈಗ ತಳಿಗಳನ್ನು ತಯಾರು ಮಾಡುವುದಕ್ಕೆ ವಿಶ್ವವಿದ್ಯಾಲಯಗಳ ಪ್ರಾಜೆಕ್ಟ್‌ಗಳಲ್ಲಿ ತೆಗೆದುಕೊಂಡಿದ್ದಾರೆ. ಬಹುಶಃ ಮುಂದಿನ ದಿನಗಳಲ್ಲಿ ರೈತರಿಗೆ ಆ ತಳಿಗಳು ಸಿಗುವ ವ್ಯವಸ್ಥೆಯಾಗುತ್ತದೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಈಗ ಕೊಟ್ಟಿರುವ Action Plan ಪ್ರಕಾರ ತಳಿಗಳು ಅಭಿವೃದ್ಧಿಯಾಗಿವೆಯೇ? ತಳಿಗಳನ್ನು ವೃದ್ಧಿ ಮಾಡುವುದಕ್ಕೆ ಏಳು ವರ್ಷ ಬೇಕೇ? Cross breeding

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿ ಹಾಲು ಉತ್ಪಾದನೆಯನ್ನು ಹೆಚ್ಚು ಮಾಡಬೇಕು ಎಂದು ಹೇಳಲಾಗಿದ್ದು, ಆ ವ್ಯವಸ್ಥೆ ಆಗಿದೆಯೇ? ಹಾಗಿದ್ದರೆ, ಯಾವುದಾದರೂ ತಳಿಯನ್ನು ಯಾರಾದರೂ ರೈತರು ಬಳಸುತ್ತಿದ್ದಾರೆಯೇ? ಸುಮಾರು 65 ಸಂಶೋಧನೆಗಳನ್ನು ಮಾಡಿದ್ದು, ಆ ಸಂಶೋಧನೆಯ ಫಲಿತಾಂಶ ರೈತರಿಗೆ ಮುಟ್ಟಿದೆಯೇ?

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ತಳಿಗಳು ಸಂಪೂರ್ಣವಾಗಿ ಅಭಿವೃದ್ಧಿ ಆಗಿಲ್ಲ. ಆಗಬೇಕು ಎಂದು ಹೇಳಿ ಅಭಿವೃದ್ಧಿ ಮಾಡುವುದಕ್ಕೆ ನಾವು ಅನುದಾನವನ್ನು ಕೊಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ತಳಿಗಳು ಅಭಿವೃದ್ಧಿ ಆಗುತ್ತವೆ. ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳು, ವಿಜ್ಞಾನಿಗಳು ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ. ಇದನ್ನು ತುರ್ತಾಗಿ ಮಾಡುವುದಕ್ಕೆ ನಾನು ಕ್ರಮ ವಹಿಸುತ್ತೇನೆ. ವಿಶ್ವವಿದ್ಯಾಲಯದವರ ಜೊತೆಯಲ್ಲಿಯೂ ಮಾತನಾಡುತ್ತೇನೆ.

**ಪ್ರಶ್ನೆ ಸಂಖ್ಯೆ:36**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆ ರೋಣ ತಾಲ್ಲೂಕು ಗಜೇಂದ್ರಗಢ ಪಟ್ಟಣದಲ್ಲಿ ಪಶು ಆಸ್ಪತ್ರೆ ಶಿಥಿಲಗೊಂಡ ಕುರಿತು ಮತ್ತು ಅಲ್ಲಿನ ವೈದ್ಯರ ಕುರಿತು ಪ್ರಶ್ನೆಯನ್ನು ಕೇಳಿದ್ದೇನೆ. ಅದನ್ನು ಒಪ್ಪಿಕೊಂಡು ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಕೊಟ್ಟಿರುತ್ತಾರೆ. ಅದರಲ್ಲಿ ನನ್ನ ಎರಡು ಉಪ ಪ್ರಶ್ನೆಗಳಿವೆ. ಗಜೇಂದ್ರಗಢ ಪಟ್ಟಣದೊಳಗೆ ಪಶು ಆಸ್ಪತ್ರೆ ಪೂರ್ಣ ಶಿಥಿಲಗೊಂಡಿದುದಕ್ಕಾಗಿ ಹೊಸ ಆಸ್ಪತ್ರೆ ಕಟ್ಟಬೇಕೆಂದು ಅದನ್ನು ಪೂರ್ಣ ನೆಲಸಮಗೊಳಿಸಲಾಯಿತು. ಆದರೆ ಹೊಸ ಆಸ್ಪತ್ರೆಯನ್ನು ಕಟ್ಟಲಿಲ್ಲ.

***(12) 07-02-2017 RC-AK 12-10***

**ಶ್ರೀ ಎಸ್.ವ್ಹಿ.ಸಂಕನೂರ:–** ಮುಂದು, ಆದರೆ ಅದರ ಪಕ್ಕದಲ್ಲಿರುವಂತಹ ಸಣ್ಣ ಕಟ್ಟಡದಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದೆ. ಈಗೇನು ಸಣ್ಣ ಕಟ್ಟಡದಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದೆ ಅದೂ ಸಹ ಶಿಥಿಲಗೊಂಡಿದೆ. ನನ್ನ ಪ್ರಶ್ನೆ ಏನೆಂದರೆ, ಶಿಥಿಲಗೊಂಡಿರುವಂತಹ ಕಟ್ಟಡ ಬಿದ್ದಮೇಲೆ ಹೊಸ ಕಟ್ಟಡವನ್ನು ಕಟ್ಟುತ್ತೀರೋ ಹೇಗೆ? ನಾನು ಕೇಳಿರುವಂತಹ ಪ್ರಶ್ನೆ ಏನೆಂದರೆ, ನೂತನ ಆಸ್ಪತ್ರೆ ಕಟ್ಟಲು ಜಾಗವನ್ನು ಗುರುತಿಸಲಾಗಿದೆಯೇ? ಮತ್ತು ಮಂಜೂರಾಗಿರುವ ಅನುದಾನ ಎಷ್ಟು ಎಂಬ ಪ್ರಶ್ನೆಗೆ ಈ ರೀತಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಆ ಉತ್ತರ ನನಗೆ ಅರ್ಥವಾಗುತ್ತಿಲ್ಲ. ಕೊಟ್ಟಿರುವಂತಹ ಉತ್ತರದಲ್ಲಿ "ಆರ್.ಐ.ಡಿ.ಎಫ್ 16ರಲ್ಲಿ ಹುಯಿಲಗೋಳ ಪಶುವೈದ್ಯ ಸಂಸ್ಥೆ ನೂತನ ಕಟ್ಟಡ ಕಾಮಗಾರಿಯು ರೂ.17.15 ಲಕ್ಷಗಳಲ್ಲಿ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ಪ್ರಸ್ತುತ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹುಯಿಲಗೋಳದಲ್ಲಿ ಇ.ಎಸ್.ವಿ.ಹೆಚ್.ಡಿ.ಯಲ್ಲಿ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಹುಯಿಲಗೋಳ ಬದಲು ಗಜೇಂದ್ರಗಡದಲ್ಲಿ ನಿರ್ಮಿಸಲು ಸ್ಥಳ ಬದಲಾವಣೆ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆ ಸರ್ಕಾರದ ಪರಿಶೀಲನೆ ಹಂತದಲ್ಲಿರುತ್ತದೆ" ಎಂದು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿರುವಂತಹ ಮಾಹಿತಿಯನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಹಿಂದಿನ ಶಾಸಕರು ಗಜೇಂದ್ರಗಡದಲ್ಲಿ ಹಳೆಯ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ಕಟ್ಟಲು ಭೂಮಿ ಪೂಜೆಯನ್ನು ಮಾಡಿದ್ದಾರೆ. ಇದರ ಬಗ್ಗೆ ವರದಿಯಾಗಿ ದಾಖಲೆಯಾಗಿದೆ. ಇಷ್ಟೇ ಅಲ್ಲದೆ ಮುಂದುವರೆದು ಪತ್ರಿಕೆಯಲ್ಲಿಯು ವರದಿ ಮಾಡುತ್ತಾರೆ. ಏನೆಂದರೆ, ಈಗಿರುವಂತಹ ಸಚಿವರು ಗುಡ್ಡದ ಪಕ್ಕದಲ್ಲಿ ಒಂದು ಜಾಗವನ್ನು ನಿಗದಿಪಡಿಸಿದ್ದರು, ಆದರೆ ಅದು ಸರಿ ಇಲ್ಲವೆಂದು ಬಸವೇಶ್ವರ ರಂಗಮಂದಿರದ ಪಕ್ಕದಲ್ಲಿ ಒಂದು ಜಾಗವನ್ನು ಗುರುತಿಸಿದ್ದಾರೆ, ಈಗಿರುವಂತಹ ಎಂ.ಎಲ್.ಎ. ಅವರು 'yes' ಎಂದರೆ ಕಟ್ಟಡ ಪ್ರಾರಂಭ ಮಾಡುತ್ತೇವೆ, 20 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಎಂದು ಅವರು ಹೇಳುತ್ತಾರೆ. ಆದರೆ ನನಗೆ ಕೊಟ್ಟಿರುವಂತಹ ಉತ್ತರದಲ್ಲಿ ವಸ್ತುಸ್ಥಿತಿ ಏನೆಂದು ಅರ್ಥವಾಗುತ್ತಿಲ್ಲ. ಇವರು ಕೊಟ್ಟಿರುವಂತಹ ಉತ್ತರದಲ್ಲಿ ಹುಯಿಲಗೋಳದಲ್ಲಿರುವಂತಹ ಆಸ್ಪತ್ರೆಯನ್ನು ಬದಲಾವಣೆ ಮಾಡಿ ಗಜೇಂದ್ರಗಡದಲ್ಲಿ ನಿರ್ಮಿಸಲು ಸ್ಥಳ ಬದಲಾವಣೆ ಪ್ರಸ್ತಾವನೆ ಸಲ್ಲಿಸಿದ್ದು ಪ್ರಸ್ತಾವನೆ ಸರ್ಕಾರದ ಪರಿಶೀಲನೆ ಹಂತದಲ್ಲಿರುತ್ತದೆ ಎಂದು ಕೊಟ್ಟಿದ್ದಾರೆ. ಗದಗ ತಾಲ್ಲೂಕಿನಲ್ಲಿರುವಂತಹ ಹುಯಿಲಗೋಳದಲ್ಲಿ ಆಸ್ಪತ್ರೆಯನ್ನು ಕಟ್ಟುವುದಾದರೆ ಕಟ್ಟಿ. ಗಜೇಂದ್ರಗಡದಲ್ಲಿ ಪ್ರತ್ಯೇಕವಾಗಿ ಆಸ್ಪತ್ರೆ ಕಟ್ಟಡವನ್ನು ನಿರ್ಮಾಣ ಮಾಡಿ.

ಮಾನ್ಯ ಸಭಾಪತಿಯವರೇ, ತಮಗೆ ಒಂದು ಪತ್ರಿಕಾ ವರದಿಯನ್ನು ಕೊಡುತ್ತೇನೆ. ಈ ಹಿಂದೆ ಇದ್ದಂತಹ ಶಾಸಕರು ಭೂಮಿ ಪೂಜೆ ಮಾಡಿದ್ದಾರೆ, ಈಗ ಇರುವಂಥವರು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಇವರಿಬ್ಬರಲ್ಲಿ ಯಾರದು ಸರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:–** ಇದರ ಬಗ್ಗೆ ಮಾನ್ಯ ಸಚಿವರು ತಿಳಿಸುತ್ತಾರೆ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸದಸ್ಯರು ರೋಣ ತಾಲ್ಲೂಕಿನ ಗಜೇಂದ್ರಗಡದಲ್ಲಿರುವ ಪಶು ಆಸ್ಪತ್ರೆ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದರು. ನಿಜ ಪಶು ಆಸ್ಪತ್ರೆ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಸಂಪೂರ್ಣವಾಗಿ ನೆಲಸಮ ಮಾಡಿರುವುದು ಸಹ ತಮಗೆ ಗೊತ್ತಿದೆ. ಬಹುಶಃ ಅದರಲ್ಲಿ ನೀವು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೇಳುತ್ತಿರುವಂಥದ್ದು ಹುಯಿಲಗೋಳ ಹಳ್ಳಿಯಲ್ಲಿ ಆರ್.ಐ.ಡಿ.ಎಫ್. 16 ರಲ್ಲಿ ಒಂದು ಆಸ್ಪತ್ರೆ ಮಂಜೂರಾಗಿತ್ತು. ಆ ಆಸ್ಪತ್ರೆಯನ್ನು ಅಲ್ಲಿಯೇ ಉಳಿಸಿಕೊಂಡು, ಅಲ್ಲಿ ಎರಡು ಆಸ್ಪತ್ರೆಗಳು ಮಂಜೂರಾಗಿತ್ತು. Overlap ಆಗಿತ್ತು. ಒಂದು ಆರ್.ಐ.ಡಿ.ಎಫ್. 16ರಲ್ಲಿ ಹುಯಿಲಗೋಳ ಹಳ್ಳಿಯಲ್ಲಿ ಒಂದು ಆಸ್ಪತ್ರೆ. ಇನ್ನೊಂದು ಇ.ಎಸ್.ವಿ.ಹೆಚ್.ಡಿ.ಯಲ್ಲಿ ಒಂದು ಕಾಮಗಾರಿ. ಅಂದರೆ ಎರಡೂ ಕಾಮಗಾರಿಗಳು ಒಂದೇ ಕಡೆಯಲ್ಲಿಯೇ ಆಗಿತ್ತು. ಅದಕ್ಕೋಸ್ಕರ ಏನು ಮಾಡಿದ್ದೇವೆ ಎಂದರೆ, ಒಂದು ಕಾಮಗಾರಿಯನ್ನು ಅಲ್ಲಿಯೇ ಉಳಿಸಿಕೊಂಡು ಇನ್ನೊಂದು ಕಾಮಗಾರಿಯನ್ನು ಮಾನ್ಯ ಸದಸ್ರು ಎಲ್ಲಿ ಕೇಳಿದ್ದಾರೆ ಅಂದರೆ, ಗಜೇಂದ್ರಗಡಕ್ಕೆ ಶಿಫ್ಟ್ ಮಾಡುವುದಕ್ಕೆ ನಮ್ಮ ಮುಂದೆ ಪ್ರಸ್ತಾವನೆ ಬಂದಿದೆ ಅದನ್ನು ಶಿಫ್ಟ್ ಮಾಡಿ ಅಲ್ಲಿ ಆಸ್ಪತ್ರೆಯನ್ನು ಕಟ್ಟಿಕೊಡಲಾಗುವುದು. ಏಕೆಂದರೆ ಒಂದು ಊರಿನಲ್ಲಿ ಒಂದೇ ಆಸ್ಪತ್ರೆ ಇರಬೇಕು. ಆದರೆ ಅಲ್ಲಿ overlap ಆಗಿರುವುದು ನಮ್ಮ ಗಮನಕ್ಕೆ ಬಂದಿದೆ. ಅದನ್ನು ಅಲ್ಲಿಗೆ ಶಿಫ್ಟ್ ಮಾಡಿ ಆಸ್ಪತ್ರೆಯನ್ನು ಕಟ್ಟಿಕೊಡುವಂತಹ ಜವಾಬ್ದಾರಿ ನಮಗೆ ಸೇರಿದ್ದು. ಅದನ್ನು ನಾವು ಮಾಡಿಕೊಡುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಆ ವಿಷಯವನ್ನೇ ಉತ್ತರದಲ್ಲಿ ಹೇಳಬೇಕಾಗಿತ್ತಲ್ಲವೆ? ಒಂದೇ ಊರಿಗೆ ಎರಡು ಆಸ್ಪತ್ರೆಯಾಗಿತ್ತು ಎಂದು ತಿಳಿಸಿಲ್ಲ. ಕೊಟ್ಟಿರುವಂತಹ ಉತ್ತರವನ್ನು ಓದಿದೆ. It's a most confusing statement.

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೇ, ಅಲ್ಲಿಗೂ ಒಂದು ಆಸ್ಪತ್ರೆ ಬೇಕು ಎಂಬುದು ಮಾನ್ಯ ಸದಸ್ಯರ ಬೇಡಿಕೆಯಾಗಿದ್ದು, ಅಲ್ಲಿಗೂ ಒಂದು ಆಸ್ಪತ್ರೆಯನ್ನು ಕೊಡುತ್ತೇವೆ; ಇಲ್ಲಿಗೂ ಒಂದು ಆಸ್ಪತ್ರೆಯನ್ನು ಕೊಡುತ್ತೇವೆ. ಒಟ್ಟಿನಲ್ಲಿ ಎರಡೂ ಕಡೆಗಳಲ್ಲಿಯೂ ಆಸ್ಪತ್ರೆ ಆಗುತ್ತದೆ. ಅದು ನಮ್ಮ ಜವಾಬ್ದಾರಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನನ್ನ ಎರಡನೇ ಉಪ ಪ್ರಶ್ನೆ ಏನೆಂದರೆ, ಅಲ್ಲಿರುವಂತಹ ಸಿಬ್ಬಂದಿಯ ಕೊರತೆ ಬಗ್ಗೆ ಕೇಳಿದ್ದೆ. ಗಜೇಂದ್ರಗಡ ಪಟ್ಟಣದ ಪಶು ಆಸ್ಪತ್ರೆಗೆ ಗಜೇಂದ್ರಗಡ ಪಟ್ಟಣದ ಸುತ್ತಮುತ್ತಲಿರುವಂತಹ 14 ಗ್ರಾಮಗಳು ಬರುತ್ತವೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಈಗ ಕಟ್ಟಡ ಕೊಡುತ್ತೇವೆಂದು ಹೇಳಿದಿರಿ. ಅದೇ ರೀತಿ ಸಿಬ್ಬಂದಿಗಳ ಬಗ್ಗೆ ಏನು ಹೇಳುತ್ತೀರ ಹೇಳಿಬಿಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎ.ಮಂಜು:-** ಮಾನ್ಯ ಸಭಾಪತಿಯವರೇ, ಈಗ ಇಡೀ ರಾಜ್ಯದಲ್ಲಿ ವೈದ್ಯರ ಕೊರತೆ ಇದೆ ಎಂದು ಕಳೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ 650 ವೈದ್ಯರನ್ನು ನೇರ ನೇಮಕಾತಿ ಮಾಡಿಕೊಳ್ಳಬೇಕೆಂದು ನಮ್ಮ ಕ್ಯಾಬಿನೆಟ್ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ. ಈಗಾಗಲೇ ಅದು ಪ್ರಗತಿಯಲ್ಲಿದೆ. ಕೇವಲ ಒಂದೂವರೆ ತಿಂಗಳಿನಲ್ಲಿ ಇಡೀ ರಾಜ್ಯದಲ್ಲಿ ಪಶು ವೈದ್ಯರನ್ನು ನೇಮಕಾತಿ ಮಾಡುವಂತಹ ಜವಾಬ್ದಾರಿಯನ್ನು ಸರ್ಕಾರ ಒಪ್ಪಿಕೊಂಡಿದೆ ಅದನ್ನು ನಾವು ಮಾಡುತ್ತೇವೆ. It is our commitment.

**ಸಭಾಪತಿಯವರು:-** ಧನ್ಯವಾದಗಳು. ಸಿಬ್ಬಂದಿಗಳನ್ನು ಇನ್ನು ಒಂದೂವರೆ ತಿಂಗಳಿನಲ್ಲಿ ನೇಮಕ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಗಜೇಂದ್ರಗಡ ಆಸ್ಪತ್ರೆಗೆ ಸೀಮಿತವಾಗಿ ಸುತ್ತಮುತ್ತಲಿರುವಂತಹ 14 ಗ್ರಾಮಗಳು ಬರುತ್ತವೆ. 14 ಗ್ರಾಮದೊಳಗೆ ನಿಮ್ಮ ಇಲಾಖೆಯ ವರದಿ ಪ್ರಕಾರ 14 ಸಾವಿರ ದನ-ಕರುಗಳು, ಕುರಿಗಳು ಬರುತ್ತವೆ. ಇವತ್ತು ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆಯೆಂದರೆ, ದನಕರುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರೆ ಆಸ್ಪತ್ರೆಗೆ ಬೀಗ ಹಾಕಿರುತ್ತಾರೆ. 4 ಸ್ಯಾಂಕ್ಷನ್ಡ್ ಪೋಸ್ಟ್ ಇದೆ. ಇರುವುದು ಇಬ್ಬರು ಸಿಬ್ಬಂದಿ ಮಾತ್ರ. ಒಬ್ಬ ವೈದ್ಯರು, ಇನ್ನೊಬ್ಬ 'ಡಿ' ದರ್ಜೆ ನೌಕರ. ಅದರಲ್ಲಿ ವೈದ್ಯರು ಪಕ್ಕದ ಊರಾದ ಸೂಡಿಗೆ ಹೋಗಿ ಕೆಲಸ ಮಾಡುತ್ತಾರೆ. ರೈತರು ಆಸ್ಪತ್ರೆಗೆ ಹೋದರೆ ಯಾವಾಗಲು ಬೀಗ ಹಾಕಿರುತ್ತಾರೆ. ಅಲ್ಲಿ ಪಶುಗಳನ್ನು ಪರೀಕ್ಷೆ ಮಾಡುವವರು ಯಾರೂ ಇರುವುದಿಲ್ಲ. ಅದಕ್ಕೆ ಸರ್ಕಾರ ಏನು ಉತ್ತರ ಕೊಟ್ಟಿದೆ ಎಂದರೆ, ಇಲ್ಲಿನ ಹುದ್ದೆಯನ್ನು ಭರ್ತಿ ಮಾಡಲು ಹಾಗೂ ಖಾಲಿ ಇರುವ ಡಿ-ದರ್ಜೆ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದ್ದಾರೆ. ಒಟ್ಟಿನಲ್ಲಿ ಅಲ್ಲಿ ಮೂಕ ಪ್ರಾಣಿಗಳಾದಂತಹ ದನ-ಕರುಗಳನ್ನು ನೋಡುವವರೇ ಇಲ್ಲ.

**ಶ್ರೀ ಎ.ಮಂಜು:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿಜವಾಗಿಯು ಉತ್ತಮ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ನಾನೂ ಸಹ ರೈತಾಪಿ ಕುಟುಂಬದಿಂದ ಬಂದಂಥವನು. ಇಡೀ ರಾಜ್ಯದಲ್ಲಿ ಕೊರತೆ ಇರುವುದನ್ನು ಗಮನದಲ್ಲಿಟ್ಟುಕೊಂಡೇ ಇಡೀ ರಾಜ್ಯದಲ್ಲಿ 650 ಪಶುವೈದ್ಯ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಉದ್ದೇಶಿಸಿದೆ. ಇದು ಇವತ್ತಿನ ಸಮಸ್ಯೆ ಅಲ್ಲ, ಬಹುಶಃ ನೀವು ಹೇಳಿರುವಂಥದ್ದು ನಿಜವಾಗಿಯು ನನಗೆ ನಿಮ್ಮ concern ಅರ್ಥವಾಗುತ್ತದೆ. ಬಹುಶಃ 14 ಹಳ್ಳಿಗಳಿಗೆ ಹೋಗಬೇಕು ಎನ್ನುವಂಥ ದೃಷ್ಟಿಯಲ್ಲಿಯೇ ಸುಮಾರು ಎಲ್ಲಾ ತಾಲ್ಲೂಕುಗಳಿಗೂ ಕೂಡ ಸಂಚಾರಿ ವಾಹನಗಳನ್ನು ನಾವು ಕೊಟ್ಟಿದ್ದೇವೆ. ಆಂಬುಲೆನ್ಸ್ ಕೊಟ್ಟಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವೈದ್ಯರುಗಳು ಹಳ್ಳಿಗೆ ಹೋಗಿ ಪಶುಗಳಿಗೆ ಟ್ರೀಟ್‌ಮೆಂಟ್ ಮಾಡುವಂತಹ ವ್ಯವಸ್ಥೆ ಇದೆ. ಬಹುಶಃ ವೈದ್ಯರ ಕೊರತೆ ಇರುವುದರಿಂದ ಇದು ಆಗುತ್ತಿಲ್ಲ. ಆದುದರಿಂದ ಇನ್ನು ಒಂದೂವರೆ ತಿಂಗಳಿನಲ್ಲಿ ವೈದ್ಯರನ್ನು ನೇಮಕ ಮಾಡಲಾಗುವುದು. It is my commitment. ಇದು ನಮ್ಮ ಸರ್ಕಾರದ ಒಂದು ಚಿಂತನೆಯಾಗಿದೆ. ಅದರ ಉಪಯೋಗ ಆಗುತ್ತಿದೆ ಎಂದು ನಂತರ ಮಾನ್ಯ ಸದಸ್ಯರೇ ಹೇಳುತ್ತಾರೆ.

**ಸಭಾಪತಿಯವರು:–** 550 ಪಶುವೈದ್ಯ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಇದೆ ಎಂದು ಸರ್ಕಾರ ಕೊಟ್ಟಿರುವಂತಹ ಉತ್ತರದಲ್ಲಿದೆ. ಆದರೆ ನೀವು 650 ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ತಿಳಿಸಿದಿರಿ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ 550 ಹುದ್ದೆಗಳು ಎಂದು ಏನಿದೆ ಅದು ನಿಜ. ನಾವು ಇನ್ನೂ 100 ಹುದ್ದೆಗಳನ್ನು ಜಾಸ್ತಿ ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಯಿತು. ಅದರ ಮಾಹಿತಿಯನ್ನು ನಾವು ಅವರಿಗೆ ಕೊಟ್ಟಿಲ್ಲ. ಹಾಗಾಗಿ 650 ವೈದ್ಯರನ್ನು ನೇಮಕ ಮಾಡುತ್ತೇವೆ. ಅದೇ ರೀತಿ ಹೈದ್ರಾಬಾದ್ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಕೆ.ಪಿ.ಎಸ್.ಸಿ.ಯಲ್ಲಿ ಏನಾಗಿದೆ ಅದನ್ನು ಸೇರಿಸಿ ನಾನು ಹೇಳುತ್ತಿರುವಂಥದ್ದು.

**ಸಭಾಪತಿಯವರು:–** ಇನ್ನು ಒಂದೂವರೆ ತಿಂಗಳಿನಲ್ಲಿ ವೈದ್ಯರನ್ನು ನೇಮಕ ಮಾಡುತ್ತೇವೆಂದು ಸಚಿವರು ಹೇಳಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಖಾಲಿ ಇರುವ ಡಿ–ದರ್ಜೆ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದ್ದಾರೆ. ಆದ್ದರಿಂದ ಡಿ.ಸಿ. ಅವರ ಮೂಲಕ ಒಂದು ವಾರದೊಳಗೆ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಿಳಿಸಿದಂತೆ ಡಿ–ದರ್ಜೆ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ 14**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಲಿಖಿತವಾಗಿ ನೀಡಿರುವ ದೀರ್ಘವಾದಂತಹ ಉತ್ತರವನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ. ಉತ್ತರ ತೃಪ್ತಿದಾಯಕವಾಗಿದೆ. ಈಗಾಗಲೇ ಹಿಂಗಾರು ಮತ್ತು ಮುಂಗಾರು ಮಳೆ ವಿಫಲವಾಗಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ತೋಟಗಾರಿಕೆಯ ಮುಖ್ಯ ಬೆಳೆಗಳಾದಂತಹ ಮಾವು ಮತ್ತು ತೆಂಗಿನ ತೋಟಗಳಲ್ಲಿ ಇರುವಂತಹ ಬೋರ್‌ವೆಲ್‌ಗಳಲ್ಲಿ ನೀರಿಲ್ಲ. ಈಗಾಗಲೇ ಮಾನ್ಯ ಸಚಿವರು ಹೇಳಿದಂತೆ ನಮಗೆ ನಾಲ್ಕೈದು ತಾಸುಗಳು ಕರೆಂಟು ಬರುತ್ತದೆ, ಇಲ್ಲವೆಂದು ಹೇಳುವುದಿಲ್ಲ. ಕರೆಂಟ್ ಇದ್ದಾಗ ನೀರಿಲ್ಲ. ನೀರಿದ್ದಾಗ ಕರೆಂಟ್ ಇರುವುದಿಲ್ಲ. ಈಗ ನೀರಿಲ್ಲ, ಕರೆಂಟ್ ಇದೆ. ಅದನ್ನು ಒಪ್ಪುತ್ತೇನೆ. ಆದರೆ ಬೋರ್‌ವೆಲ್‌ನಲ್ಲಿ ಸಂಪೂರ್ಣವಾಗಿ ನೀರು ಬತ್ತಿ ಹೋಗಿದೆ. ನಾಲ್ಕೈದು ಬೋರ್‌ವೆಲ್‌ಗಳನ್ನು ಕೂಡಿಸಿ ಪೈಪ್‌ಲೈನ್ ಹಾಕಿಕೊಟ್ಟರೆ ಎಲ್ಲೋ ಒಂದು ಕಡೆ ಮುಕ್ಕಾಲು ಇಂಚು ಅಥವಾ ಒಂದು ಇಂಚು ನೀರು ಹೊರಗೆ ಹೋಗುತ್ತಿದೆ. ಆದುದರಿಂದ ಕರೆಂಟ್ ಇದ್ದಾಗ ಆ ನೀರನ್ನು ಸಂಗ್ರಹ ಮಾಡಿಕೊಳ್ಳುವುದಕ್ಕೆ ರೈತರಿಗೆ ಅನುಕೂಲ ಮಾಡಿಕೊಡಬೇಕು. ಹತ್ತು ವರ್ಷದ ಒಳಗೆ ಇರುವಂತಹ ತೆಂಗಿನ ಗಿಡ ಇರಬಹುದು, ಅಥವಾ ಮಾವಿನ ಗಿಡ ಇರಬಹುದು, ಅವುಗಳು ನೀರು ಇಲ್ಲದೆ ಮುಂದಿನ ಗೊನೆ ಅಂದರೆ ಚೆಂಡು ಸಂಪೂರ್ಣವಾಗಿ ಬಿದ್ದುಹೋಗುತ್ತಿವೆ. ಆದುದರಿಂದ ಅದಕ್ಕೆ ಸ್ವಲ್ಪ ನೀರು ಕೊಡುವುದರ ಮೂಲಕ ತೋಟಗಾರಿಕೆ ಇಲಾಖೆಯಿಂದ ರೈತರಿಗೆ ಒಂದು ಟ್ಯಾಂಕ್ ಅಂದರೆ storage tank ಕೊಡುವುದಕ್ಕೆ ವ್ಯವಸ್ಥೆ ಮಾಡಿ ಒಂದು ಹೆಚ್.ಪಿ. ಮೋಟರ್ ಸಪ್ಲೈ ಮಾಡಿ, ಅದಕ್ಕೆ ಒಂದು ಇಂಚಿನ ಪೈಪನ್ನು ಕೊಡುವಂತಹ ವ್ಯವಸ್ಥೆ ಮಾಡಿದರೆ ಕರೆಂಟ್ ಇದ್ದಾಗ ನೀರನ್ನು ಸ್ಟೋರೇಜ್ ಮಾಡಿಕೊಂಡು ಅದರ ಮುಖಾಂತರ, ಅಂದರೆ ಕೊಳಾಯಿ ಮುಖಾಂತರ ದೊಡ್ಡ ದೊಡ್ಡ ಪುನಗಳಲ್ಲಿ ಅಥವಾ ತೋಟಗಳಲ್ಲಿ ಹೂವಿನ ಗಿಡಗಳಿಗೆ ನೀರನ್ನು ಹೇಗೆ ಬಿಡುತ್ತಾರೆ ಆ ರೀತಿ ರೈತರಿಗೆ ಏನಾದರು ವ್ಯವಸ್ಥೆ ಮಾಡಲು ಒಂದು ಪ್ಯಾಕೇಜ್ ಮಾಡಿ, ಅವರಿಗೆ ಅನುಕೂಲ ಮಾಡಿಕೊಡುವಂತಹ ಯೋಜನೆ ಏನಾದರು ಸರ್ಕಾರ ಈ ವರ್ಷ ಮಾಡಿದರೆ ಒಳ್ಳೆಯದು. ಏಕೆಂದರೆ, ಇವತ್ತಿನ ದಿವಸ ಒಂದು ತೆಂಗಿನ ಗಿಡವನ್ನು ಬೆಳೆಸಬೇಕೆಂದರೆ ಸುಮಾರು ಐದು ಸಾವಿರ ರೂಪಾಯಿಗಳು ಬೇಕಾಗುತ್ತದೆ. ಈಗಿನ ಥಳಿ ಮೂರು ವರ್ಷಕ್ಕೆ ಫಲ ಕೊಡುತ್ತದೆ. ಆದರೆ ಈ ಹಿಂದಿನ ಥಳಿಗಳು ಎಂಟರಿಂದ ಹತ್ತು ವರ್ಷಕ್ಕೆ ಫಲ ಕೊಡುತ್ತಿದ್ದವು. ಹತ್ತು ವರ್ಷಗಳ ಕಾಲ ರೈತ ಕಷ್ಟಪಟ್ಟು ಬೆಳೆದಂತಹ ತೆಂಗಿನ ಗಿಡ ಇರಬಹುದು, ಅಥವಾ ಮಾವಿನ ಗಿಡ ಇರಬಹುದು, ಅವುಗಳು ನೀರು ಇಲ್ಲದೆ ಮುಂದಿನ ಗೊನೆ ಅಂದರೆ ಚೆಂಡು ಸಂಪೂರ್ಣವಾಗಿ ಬಿದ್ದುಹೋಗುತ್ತಿವೆ. ಒಂದು ಮಾವಿನ ಸಸಿ ತರಬೇಕೆಂದರೆ ಸುಮಾರು 350 ರೂಪಾಯಿಗಳಾಗುತ್ತದೆ. ಅದನ್ನು ತಂದು ಬೆಳೆಸಬೇಕೆಂದರೆ ಸುಮಾರು 1,500 ರೂಪಾಯಿಗಳು ಖರ್ಚು ಬರುತ್ತದೆ.

*(13) 07-02-2017 KG-RN 12.20*

ಮಾವು ಮತ್ತು ತೆಂಗು ಬೆಳೆಗಳನ್ನು ಉಳಿಸಿಕೊಳ್ಳುವುದಕ್ಕೆ ರೈತರಿಗೆ ಆಯಾ ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಏನಾದರೊಂದು ಪ್ಯಾಕೇಜ್ ಮಾಡಿ ಕೊಡಬೇಕು. ತಾವು ಈಗಾಗಲೇ ಇಪ್ಪತ್ತು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಇದೆ ಎಂದು ಹೇಳಿದ್ದೀರಿ. ಉದಾಹರಣೆಗೆ ಹೇಳುವುದಾದರೆ ಒಂದು ತಾಲ್ಲೂಕಿಗೆ ಐದು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಮತ್ತು ತೆಂಗು ಬರಬೇಕೆಂದರೆ ಬಹಳಷ್ಟು ವೆಚ್ಚ ಆಗುತ್ತದೆ. ಅಲ್ಲಿಯ ಅಂತಹ ರೈತರು ಯಾರು ಎಂಬುದನ್ನು ಈಗಾಗಲೇ ನಿಖರವಾಗಿ ಗುರುತಿಸಿರುವುದರಿಂದ ಆ ರೈತರಿಗೆ ಇಂತಹ ಒಂದು ಪ್ಯಾಕೇಜ್ ಮಾಡಿ, ಇಂತಹ ಅನುಕೂಲಗಳನ್ನು ಮಾಡಿ ಒಂದು ಮೋಟಾರ್, ಒಂದು ಪೈಪ್ ಮತ್ತು ಒಂದು ನೀರು ಸಂಗ್ರಹಣೆಯ ಟ್ಯಾಂಕ್ ಈ ಮೂರನ್ನೂ ಒದಗಿಸಿ ಕೊಟ್ಟರೆ ರೈತರು single phase ಕರೆಂಟ್ ಇದ್ದಾಗ ಸಂಗ್ರಹಣೆ ಮಾಡಿದ್ದಂತಹ ನೀರನ್ನು ಗಿಡಗಳಿಗೆ ಬಿಟ್ಟು ಆ ಗಿಡಗಳನ್ನು ಬದುಕಿಸಿಕೊಳ್ಳಬಹುದು ಎಂಬುದು ರೈತರ ಆಗ್ರಹವಾಗಿದೆ. ಅವರ ಪರವಾಗಿ ಕೊಟ್ಟರೆ ಅದನ್ನು ತಕ್ಷಣವೇ ಕೊಡಬೇಕು. ತಮಗೆ ಇವತ್ತಿನ ಪರಿಸ್ಥಿತಿ ಗೊತ್ತಿದೆ. ಇವತ್ತಿನ ದಿವಸ ಹೊರಗಡೆ ಹೋಗುವುದಕ್ಕೆ ಆಗುವುದಿಲ್ಲ. ಸರ್ಕಾರ ರೈತರನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ತಕ್ಷಣವೇ ಇವುಗಳನ್ನು ಕೊಡುವಂತಹ ಯೋಜನೆಯನ್ನು ಮಾಡಬೇಕು. ಈಗಾಗಲೇ ಮಳೆಗಾಲದ ಬೆಳೆ ಅಂತೂ ಹೋಗಿದೆ. ತೋಟಗಾರಿಗೆಯ ಬೆಳೆಗಳನ್ನಾದರೂ ಉಳಿಸಿಕೊಳ್ಳಲು ಸರ್ಕಾರ ವ್ಯವಸ್ಥೆ ಮಾಡಬೇಕೆಂಬುದು ನನ್ನ ಕಳಕಳಿಯಾಗಿದೆ.

**ಶ್ರೀ ಶರಣಪ್ರಕಾಶ್ ಆರ್.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು) (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಭೀಕರ ಬರಗಾಲದ ಹಿನ್ನೆಲೆಯಲ್ಲಿ ಈ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಇದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಮಾನ್ಯ ಸದಸ್ಯರ ಕಳಕಳಿಯನ್ನು ಸಚಿವರಿಗೆ ತಿಳಿಸುತ್ತೇನೆ ಹಾಗೂ ಇಲಾಖೆಯ ಮುಖ್ಯಸ್ಥರ ಜೊತೆಗೆ ಚರ್ಚೆ ಮಾಡಿ ಇದಕ್ಕೆ ಏನು ಮಾಡಲಿಕ್ಕೆ ಸಾಧ್ಯವಿದೆ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಸಚಿವರಿಗೆ ಮನವಿ ಮಾಡುತ್ತೇನೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ತೋಟಗಾರಿಕೆ ಅಥವಾ ಕೃಷಿ ಇಲಾಖೆಯಿಂದ ರಿಯಾಯಿತಿ ದರದಲ್ಲಿ ಕೊಡತಕ್ಕಂತಹ ಉಪಕರಣಗಳು ಸಂಪೂರ್ಣವಾಗಿ ಕಳಪೆ ಗುಣಮಟ್ಟದ್ದಾಗಿರುತ್ತವೆ. ಕಳಪೆ ಆಗಿರುವಂತಹದ್ದನ್ನು ಸರಿ ಮಾಡಿಸುತ್ತೇವೆಂದು ಹೇಳಿದ್ದರು. ರೈತರು ಏಜೆನ್ಸಿಯವರ ಹತ್ತಿರ ಹೋಗಿ ಕೇಳಿದರೆ ಶೇಕಡಾ 90 ರಷ್ಟು ಸರ್ಕಾರ ಕೊಡುತ್ತದೆ. ಶೇಕಡಾ 10ರಷ್ಟನ್ನು ಫಲಾನುಭವಿಗಳು ತುಂಬುತ್ತಾರೆ ಎಂದು ಹೇಳಿ ರೈತರಿಗೆ ಅಲ್ಲಿಂದ ಉಪಕರಣಗಳನ್ನು ತರುವುದಕ್ಕೆ ಆಗುವುದಿಲ್ಲವೆಂದು ದಬಾಯಿಸುವುದು ಉಂಟು. ಆದರೆ, ಒಂದು ಸಪ್ಲೈಯರ್ ಪಂಪ್ ಅಥವಾ ಒಂದು cultivation machine ತೆಗೆದುಕೊಂಡರೆ ಅದನ್ನು ರೈತನ ಹೊಲದಿಂದ ಅಥವಾ ಹಳ್ಳಿಯಿಂದ ಆತನ ಅಂಗಡಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತರಬೇಕೆಂದರೆ ಟೆಂಪೋ ಅಥವಾ ಟ್ರ್ಯಾಕ್ಟರ್‌ಗೆ ಒಂದು ಸಾವಿರ ಬಾಡಿಗೆ ಕೊಡಬೇಕಾಗುತ್ತದೆ. ಮತ್ತೇ ಮೂರು ದಿವಸಗಳಲ್ಲಿ ಅದು ಸಂಪೂರ್ಣವಾಗಿ ಕೆಟ್ಟುಹೋಗಿರುತ್ತದೆ. ಇದನ್ನು ಕಳೆದ ಬಾರಿ ಸದನದಲ್ಲಿ ಹೇಳಿದ್ದೆವು. ಸರ್ಕಾರ ರೈತರಿಗೆ 90% ಸಬ್ಸಿಡಿ ಕೊಡುವುದು ಸತ್ಯ, ಇನ್ನುಳಿದ ಶೇಕಡಾ 10ರಷ್ಟನ್ನು ರೈತರೇ ತುಂಬುತ್ತಾರೆ. ರೈತರು ಅಷ್ಟು ಸರಿ ಎನ್ನುವುದನ್ನು ಮಾಡುತ್ತಿದ್ದಾರೆ. ತಾವು ಅದನ್ನು ಸರಿ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ, ಅದನ್ನು ಇವತ್ತಿನವರೆಗೂ ಸರಿ ಮಾಡಿಲ್ಲ.

**ಶ್ರೀ ಶರಣಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಅದು ಸಮಂಜಸವಾಗಿರುತ್ತದೆ. ಮಾನ್ಯ ಸದಸ್ಯರ ಸಲಹೆ ಏನೆಂದರೆ, ನಾವು ಶೇಕಡಾ 90ರಷ್ಟು ಸಬ್ಸಿಡಿಯನ್ನು ನೇರವಾಗಿ ರೈತರಿಗೆ ಕೊಡುತ್ತೇವೆ. ನಾವು ಸಪ್ಲೈಯರ್‌ಗೆ ಸಬ್ಸಿಡಿ ಕೊಡುತ್ತಿಲ್ಲ. ಈಗ ರೈತರಿಗೆ ಸಬ್ಸಿಡಿ ಕೊಡುವುದರಿಂದ ರೈತರಿಗೆ ಯಾವುದು ತೆಗೆದುಕೊಳ್ಳಬೇಕೆಂದು choice ಇದೆ. ಇದು back ended subsidy ಇದೆ. ಈ ಸಬ್ಸಿಡಿ ಇರುವುದರಿಂದ ಇದನ್ನು ನೇರವಾಗಿ ರೈತರ ಖಾತೆಗೆ ಕೊಡಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಇರುವಂತಹ ಯೋಜನೆ. ಹಾಗಾಗಿ, ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಸಹ ಇದೆ. ಏನೆಂದರೆ, back ended subsidy ಯನ್ನು ನೇರವಾಗಿ ರೈತರಿಗೆ ಕೊಡಬೇಕು, ಸಪ್ಲೈಯರ್ಸ್‌ಗೆ ಕೊಡಬಾರದೆಂಬ ನಿರ್ಬಂಧ ಸಹ ಇದೆ. ಆ ಹಿನ್ನೆಲೆಯಲ್ಲಿ, ಈ ರೀತಿ ಆಗುತ್ತದೆ. ರೈತರಿಗೆ ಯಾವುದನ್ನು purchase ಮಾಡಬೇಕೆಂಬುದರ ಬಗ್ಗೆ choice ಇದೆ. ರೈತರು ಗುಣಮಟ್ಟದ ಉಪಕರಣವನ್ನು purchase ಮಾಡಿದರೆ ಈ ಪ್ರಶ್ನೆಯೇ ಬರುವುದಿಲ್ಲ. ಆದರೂ ಸಹ, ಮಾನ್ಯ ಸದಸ್ಯರ ಕಳಕಳಿ ಏನಿದೆ ಅದು ನಮಗೆ ಅರ್ಥವಾಗುತ್ತದೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ರೈತರ ಖಾತೆಗೆ ಮೊದಲೇ ಹಣ ಹಾಕುವುದಿಲ್ಲ. ತಾವು 3-4 ಏಜೆನ್ಸಿಗಳು ಎಂದು ಏನು ಕೋಟ್ ಮಾಡಿರುತ್ತೀರಿ, ಆ ಏಜೆನ್ಸಿಗಳ ಹತ್ತಿರ ತೆಗೆದುಕೊಂಡು ಬಂದು ಆರು ತಿಂಗಳು ಅಥವಾ ಒಂದು ವರ್ಷವಾದ ನಂತರ ರೈತರ ಖಾತೆಗೆ ಹಣವನ್ನು ಹಾಕುತ್ತಾರೆ. ಇದು ಮಾನ್ಯ ಸಚಿವರ ಗಮನಕ್ಕೆ ಬರಲಿ. ಮೊದಲೇ ರೈತರ ಖಾತೆಗೆ ಹಣ ಹಾಕಿದರೆ ರೈತರು ಮಾರುಕಟ್ಟೆಯಲ್ಲಿ ಒಳ್ಳೆಯ ಉಪಕರಣಗಳನ್ನು ಖರೀದಿಸಬಹುದು. ಆದರೆ ಇಂತಹ ಕಡೆಗಳಲ್ಲಿಯೇ ಉಪಕರಣಗಳನ್ನು ಖರೀದಿಸಬೇಕೆಂದು ತಮ್ಮ ಅಧಿಕಾರಿಗಳು ರೈತರಿಗೆ ಸೂಚನೆ ನೀಡುತ್ತಾರೆ. ಇದು ತಮ್ಮ ಗಮನಕ್ಕೆ ಇರಲಿ. ತೋಟಗಾರಿಕೆ ಇಲಾಖೆ ಇರಬಹುದು ಅಥವಾ ಕೃಷಿ ಇಲಾಖೆ ಇರಬಹುದು ಇಂತಹ ಏಜೆನ್ಸಿಯವರ ಹತ್ತಿರವೆ ಉಪಕರಣಗಳನ್ನು ತೆಗೆದುಕೊಳ್ಳಬೇಕೆಂದು ತಾವು ಕೋಟ್ ಮಾಡಿ, ಆ ಏಜೆನ್ಸಿಯವರನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಿಟ್ಟು ಬೇರೆ ಏಜೆನ್ಸಿಯವರ ಹತ್ತಿರ ತೆಗೆದುಕೊಳ್ಳಬಾರದೆಂದು ಮಾಡಿ. ಆ ಉಪಕರಣಗಳನ್ನು ಖರೀದಿ ಮಾಡಿದ bill ತೆಗೆದುಕೊಂಡು ಬಂದು ಅದನ್ನು ತೋಟಗಾರಿಕೆ ಕಛೇರಿಗೆ ಕೊಟ್ಟು, ಅಲ್ಲಿಂದ ಅದು ಉಪ ನಿರ್ದೇಶಕರಿಗೆ ಬಂದು, ಅಲ್ಲಿಂದ ಬೆಂಗಳೂರಿಗೆ ಬಂದು ವರ್ಷದ ನಂತರ ಸಬ್ಸಿಡಿ ಹಣ ರೈತರ ಖಾತೆಗೆ ಜಮೆ ಆಗುತ್ತದೆ. ಮಾನ್ಯ ಸಚಿವರು ಇದನ್ನು ಗಮನಕ್ಕೆ ತೆಗೆದುಕೊಳ್ಳಲಿ. ತಾವು ರೈತರಿಗೆ ಹಣ ಕೊಡಿ, ಆ ಉಪಕರಣ ಕೆಟ್ಟರೆ ಅವರೇ ಹೊಣೆಗಾರರಾಗುತ್ತಾರೆ. ಅಲ್ಲದೆ, ಅದನ್ನು ತೆಗೆದುಕೊಂಡು ರಶೀದಿಯನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಗಮನಕ್ಕೆ ಇನ್ನೊಂದು ವಿಷಯವನ್ನು ತರಬಯಸುತ್ತೇನೆ. ಸರ್ಕಾರ ರೈತರಿಗೆ ಕೃಷಿ ಹೊಂಡದ ಪ್ಯಾಕೇಜ್‌ನ್ನು ಮಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಇದು ಪ್ರಶ್ನೋತ್ತರ ಅವಧಿಯಾಗಿರುವುದರಿಂದ, ಕೃಷಿ ಹೊಂಡದ ಪ್ಯಾಕೇಜ್ ವಿಷಯವನ್ನು ಈಗ ಮಾತನಾಡುವುದು ಬೇಡ. ಈಗ ಇರುವ ವಿಷಯದ ಬಗ್ಗೆ ಅಷ್ಟೇ ಮಾತನಾಡಿ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆಯೇ ಮಾನ್ಯ ಸಚಿವರು ಹೇಳಲಿ.

**ಶ್ರೀ ಶರಣಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಯಾವುದೇ ಏಜೆನ್ಸಿಯಲ್ಲಿ ಉಪಕರಣ ಖರೀದಿ ಪ್ರಕ್ರಿಯೆ ಅಂತಿಮಗೊಳಿಸುವಂತಹ ಸಂದರ್ಭದಲ್ಲಿ ಅವರು ಬೇಕಾಬಿಟ್ಟಿಯಾಗಿ ಮಾಡುವುದಕ್ಕೆ ಆಗುವುದಿಲ್ಲ. They have to call a tender. ಆ ಟೆಂಡರ್ ಕರೆದು ಏಜೆನ್ಸಿಯನ್ನು ಫಿಕ್ಸ್ ಮಾಡಿರುತ್ತಾರೆ. ಆ ಏಜೆನ್ಸಿಗಳು ಫಿಕ್ಸ್ ಮಾಡಿದಾಗ, ಆ L-1(least one) ಪ್ರಕಾರ ಯಾರು ಯಾರು ಇರುತ್ತಾರೆ ಅದನ್ನು ಅವರು ಪಟ್ಟಿ ಹಾಕಿರುತ್ತಾರೆ. ಆ ಪಟ್ಟಿಯಲ್ಲಿರುವ ಯಾರ ಬಳಿಯೂ ತೆಗೆದುಕೊಳ್ಳತಕ್ಕಂತಹ choice ರೈತರಿಗೆ ಇದೆ, ಆದರೆ ಇಂತಹ ಏಜೆನ್ಸಿಯವರ ಹತ್ತಿರವೇ ಉಪಕರಣಗಳನ್ನು ತೆಗೆದುಕೊಳ್ಳಿ ಎಂದು ಯಾವ ಅಧಿಕಾರಿಗಳು ಸಹ ಹೇಳುವಂತಹ ಅವಕಾಶವಿಲ್ಲ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ರೈತರು ತೋಟಗಾರಿಕೆ ಇಲಾಖೆಯ ಕಛೇರಿಗೆ ಹೋದರೆ ಅಲ್ಲಿನ ಅಧಿಕಾರಿಗಳು ಉಪಕರಣಗಳನ್ನು ಇಂತಹ ಏಜೆನ್ಸಿಯವರ ಹತ್ತಿರವೇ ತೆಗೆದುಕೊಳ್ಳಬೇಕೆಂದು inform ಮಾಡುತ್ತಾರೆ. ಮಾನ್ಯ ಸಚಿವರು ನಾಳೆ ಡಿ.ಡಿಯವರನ್ನು ಕರೆಸಲಿ, ಅವರನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇವತ್ತು ಕರೆಸುವುದು ಬೇಡ; ಅವರು ಮತ್ತೆ ಟೈಮ್ ತೆಗೆದುಕೊಳ್ಳುವುದು ಬೇಡ. ಮಾನ್ಯ ಸಚಿವರು ತಪ್ಪು ಉತ್ತರ ಕೊಡುತ್ತಿದ್ದಾರೆ. ಆದ್ದರಿಂದ ನಾಳೆ ಅಧಿಕಾರಿಗಳನ್ನು ಕರೆಸಿ ಇದನ್ನು ಅವರು ಕ್ಲಿಯರ್ ಮಾಡಲಿ.

**ಶ್ರೀ ಶರಣಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಇರತಕ್ಕಂತಹ ನಿಯಮಗಳನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪು ಉತ್ತರ ಕೊಡುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಅಥವಾ ಮುಖ್ಯ ಕಾರ್ಯದರ್ಶಿಯವರ ಮುಖಾಂತರ ತೋಟಗಾರಿಕೆ ಇಲಾಖೆಯ ಡಿ.ಡಿ.ಯವರನ್ನು ಮತ್ತು ಕೃಷಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಈ ಬಗ್ಗೆ ನಾಳೆಯೇ ಸಭೆ ನಡೆಸಬೇಕಾಗುತ್ತದೆ. ಆದರೆ, ಮಾನ್ಯ ಸಚಿವರು ಈ ಸದನದ ಮೂಲಕ ತಪ್ಪು ಸಂದೇಶವನ್ನು ಕೊಡಬಾರದು.

**ಶ್ರೀ ಶರಣಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ತಪ್ಪು ಉತ್ತರವನ್ನು ಕೊಡುತ್ತಿಲ್ಲ. ನಾನು ಅದನ್ನು ಸ್ಪಷ್ಟಪಡಿಸುತ್ತಿದ್ದೇನೆ. ಇರುವ ವ್ಯವಸ್ಥೆಯನ್ನು ಹೇಳುತ್ತಿದ್ದೇನೆ. ಅವರು ಏನು ಹೇಳುತ್ತಿದ್ದಾರೆಂದರೆ, ಹಾವೇರಿ ಮತ್ತು ಶಿಗ್ಗಾವಿಯಲ್ಲಿ ಆ ರೀತಿ ನಡೆಯುತ್ತಿಲ್ಲವೆಂದು ಹೇಳುತ್ತಿದ್ದಾರೆ. ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಸಚಿವರು enquiry ಮಾಡುತ್ತೇನೆಂದು ಹೇಳುತ್ತಿದ್ದಾರೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ನೋವನ್ನು ಅನುಭವಿಸುವವರು ರೈತರು. ಇವತ್ತಿನ ಪರಿಸ್ಥಿತಿಯಲ್ಲಿ ರೈತರು ಕಂಗಾಲಾಗಿದ್ದಾರೆ. ಮಾನ್ಯ ಸಚುವರಯ ದಯವಿಟ್ಟು ನನ್ನ ಕಳಕಳಿಯನ್ನು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಶರಣಪ್ರಕಾಶ್ ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ, ಅದನ್ನು ಪರಿಶೀಲನೆ ಮಾಡಿ ಅವರಿಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ಹಾಗೂ ಆ ರೀತಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಯಾರಾದರೂ ಮಾಡಿದ್ದರೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ.78**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಚಿವರ ಉತ್ತರ ಕೈ ಸೇರಿದೆ. ಇದು ರಾಷ್ಟ್ರೀಯ ಹೆದ್ದಾರಿ-84 ರಿಂದ ಮೈಸೂರು-ಬೆಂಗಳೂರನ್ನು ಸೇರುವ ರಸ್ತೆ. ಕೌಡ್ಲೆ ಮಾರ್ಗದಲ್ಲಿ 60 ಕಿಲೋಮೀಟರ್ ಉದ್ದದ ರಸ್ತೆ ಇದೆ. ಕಳೆದ ಸುಮಾರು 6-7 ವರ್ಷಗಳಿಂದ ಈ ಹಾದಿಯ ನಡುವೆ ಬರುವ ನೂರಾರು ಹಳ್ಳಿಗಳ ಜನರ ಕಷ್ಟ ಆ ದೇವರಿಗೊಬ್ಬರಿಗೆ ಪ್ರೀತಿ. ಮೊದಲು ಒಬ್ಬನಿಗೆ ಟೆಂಡರ್‌ನ್ನು ಕೊಟ್ಟಿದ್ದೀರಿ. ಆದರೆ, ಅವರು ಎರಡು ವರ್ಷದಲ್ಲಿ ಯಾವುದೇ ಕಾಮಗಾರಿಯನ್ನು ಮಾಡದೇ ಮನೆಗೆ ಹೋದರು. ಈಗ ಟೆಂಡರ್ ಕೊಟ್ಟಿದ್ದೀರಿ. ಈ ಹಿಂದೆ ಉತ್ತರ ಕೊಟ್ಟಿರುವ ಪ್ರಕಾರ, ಬರುವ ಜೂನ್‌ಗೆ ಆ ಕಾಮಗಾರಿ ಮುಗಿಯಬೇಕಾಗಿತ್ತು. ಆದರೆ, 2017ರ ಡಿಸೆಂಬರ್ ವೇಳೆಗೆ ಮುಗಿಸುತ್ತೇವೆಂದು ಉತ್ತರದಲ್ಲಿ ತಿಳಿಸಲಾಗಿದೆ. ಆದರೆ, ಇಲ್ಲಿಯವರೆಗೂ ಶೇಕಡಾ 20ರಷ್ಟು ಕಾಮಗಾರಿ ಸಹ ಮುಗಿದಿಲ್ಲ. ಮೊನ್ನೆ ಕೆ.ಡಿ.ಪಿ. ಸಭೆಯಲ್ಲಿ ಉಸ್ತುವಾರಿ ಸಚಿವರಿಗೆ ನಾವು ಈ ಬಗ್ಗೆ ಪ್ರಸ್ತಾಪ ಮಾಡಿದ ಮೇಲೆ, ಅವರು ಆ ಕಾಮಗಾರಿ ನಡೆಯುವ ಸ್ಥಳಕ್ಕೆ ತನಿಖೆಗೆ ಬಂದಿದ್ದರು. ಅವರು ಆ ಕಾಮಗಾರಿಯ ತನಿಖೆಗೆ ಬರುತ್ತಾರೆಂದು ತಿಳಿದು, ಒಂದಿಷ್ಟು ಮಣ್ಣು ಹಾಕಿಬಿಟ್ಟರು. ಈಗ ಇಡೀ ಹಳ್ಳಿಮಣ್ಣಿನಿಂದ ಕೂಡಿದೆ. ಯಾರ ಮನೆ ಬಾಗಿಲನ್ನು ತೆಗೆದರೂ ಬರೀ ಮಣ್ಣು ತುಂಬಿದೆ, ಆದರೆ ರಸ್ತೆ ರಿಪೇರಿ ಕಾರ್ಯ ಮಾತ್ರ ಆಗುತ್ತಿಲ್ಲ. ಇವತ್ತಿನ ದಿವಸದಲ್ಲಿ ಕಾಮಗಾರಿ ಆಗುತ್ತಿರುವಂತಹ ವೇಗವನ್ನು ನೋಡಿದರೆ, ನಾವು ಈಗಾಗಲೇ ಏಳು ವರ್ಷಗಳ ಕಾಲ ನೋವನ್ನು ಅನುಭವಿಸಿದ್ದೇವೆ. ಆ ರಸ್ತೆ ಬಿಟ್ಟು ಬೇರೆ ಬೇರೆ ರಸ್ತೆಗಳ ಮುಖಾಂತರ ನಮ್ಮ ಊರಿಗೆ ನಾವು ಹೋಗುತ್ತಿದ್ದೇವೆ. ಅಲ್ಲಿ ಪರ್ಯಾಯ ರಸ್ತೆಯನ್ನು ಸಹ ಮಾಡಿಲ್ಲ. ಅವರಿಗೆ ಇನ್ನೂ ಮೂರು ವರ್ಷಗಳ ಸಮಯವನ್ನು ಕೊಟ್ಟರೂ ಸಹ, ಕಾಮಗಾರಿಯನ್ನು ಮುಗಿಸುವಂತಹ ಲಕ್ಷಣಗಳು ನನಗೆ ಕಾಣುತ್ತಿಲ್ಲ. ಹಾಗಾಗಿ, ತಾವು 21 ತಿಂಗಳು ಕಾಲಾವಧಿ ಎಂದು ಉತ್ತರ ಕೊಟ್ಟಿದ್ದೀರಿ. ಈಗಾಗಲೇ 20 ತಿಂಗಳುಗಳು ಕಳೆದಿದೆ. ಇನ್ನೊಂದು ತಿಂಗಳು ಬಾಕಿ ಉಳಿದಿದೆ. ಡಿಸೆಂಬರ್‌ವರೆಗೆ ಸ್ವಲ್ಪ ತಡವಾಗಿದೆ. ಪ್ರತಿನಿತ್ಯ ಅಲ್ಲಿ ಅನಾಹುತಗಳು, ಅಪಘಾತಗಳು ಆಗುತ್ತಿವೆ. ಅಲ್ಲಿನ ಜನರು ಆಸ್ಪತ್ರೆಗೆ ಹೋಗಬೇಕೆಂದರೆ, ಅಲ್ಲಿಗೆ ಬಸ್ಸ್‌ಗಳು ಬರುವುದಿಲ್ಲ, ದ್ವಿಚಕ್ರ ವಾಹನಗಳು ಬರುವುದಿಲ್ಲ, ಕಾರು ಓಡಿಸುವುದಕ್ಕೆ ಆಗುವುದಿಲ್ಲ. ಸುಮಾರು 20 ಕಿಲೋಮೀಟರ್‌ಗಳ ದೂರದ ನನ್ನೂರಿಗೆ ಹೋಗಬೇಕಾದರೆ, ಮದ್ದೂರಿಗೆ ಬಂದು 46 ಕಿಲೋಮೀಟರ್‌ಗಳನ್ನು ಸುತ್ತಿಕೊಂಡು ಹೋಗಬೇಕಾಗಿದೆ. ತಾವು ಇದಕ್ಕೆ ಕೂಡಲೇ ಸೂಕ್ತ ಕ್ರಮ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೈಗೊಳ್ಳಬೇಕು. ತಾವು ಯಾವುದೋ ಒಂದು ಕಾರ್ಯಕ್ರಮಕ್ಕೆ ಅಲ್ಲಿಗೆ ಬಂದಾಗ ನೋಡಿ ಹೋಗಿದ್ದೀರಿ. ಇನ್ನೂ ಸುಧಾರಿಸುವ ಪ್ರಗತಿ ವೇಗವಾಗಿ ಸಾಗುವಂತಹ ಯಾವ ಸೂಚನೆಗಳು ಅಲ್ಲಿ ಇಲ್ಲ. ಅದಕ್ಕೆ ಸಚಿವರು ಏನು ವ್ಯವಸ್ಥೆ ಮಾಡುತ್ತಾರೆ ಎನ್ನುವುದರ ಜೊತೆಗೆ ದಯಮಾಡಿ ಎಷ್ಟು ತಿಂಗಳೊಳಗೆ ಆ ಕಾಮಗಾರಿಯನ್ನು ಮುಗಿಸಿಕೊಡುತ್ತಾರೆ ಎನ್ನುವುದನ್ನು ಸದನಕ್ಕೆ ತಿಳಿಸಬೇಕು.

**ಡಾ॥ಹೆಚ್.ಸಿ.ಮಹದೇವಪ್ಪ (ಲೋಕೋಪಯೋಗಿ ಮತ್ತು ಇಂದನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರಿಗೆ ಬಹಳ ಕಷ್ಟ ಇದೆ. 2012ನೇ ಸಾಲಿನಲ್ಲಿ *KSHIP (Karnataka State Highways Improvement Project*) ಕೆಳಗಡೆ ಈ ಕೆಲಸವನ್ನು ಕೈಗೆತ್ತಿಕೊಂಡಿದ್ದು, ಅದು ಸುಮಾರು 108 ಕಿಲೋಮೀಟರ್ ಉದ್ದದ ರಸ್ತೆಯಾಗಿರುತ್ತದೆ. *KSHIP-II*ಕೆಳಗಡೆ ರಾಜ್ಯದಲ್ಲಿ 616 ಕಿಲೋಮೀಟರ್ ರಸ್ತೆಯನ್ನು ಅಭಿವೃದ್ಧಿ ಮಾಡಬೇಕೆಂದು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ 315 ಮಿಲಿಯನ್ ಡಾಲರ್‌ಗಳನ್ನು ಸಾಲವಾಗಿ ತೆಗೆದುಕೊಂಡಿರುವಂತಹ ಕಾಮಗಾರಿಯಾಗಿರುತ್ತದೆ. ಆ ಕಾಮಗಾರಿಯ ಕೆಲಸ ನಡೆಯದೆ ಇದ್ದುದರಿಂದ ನಾವು ಅಧಿಕಾರಕ್ಕೆ ಬಂದನಂತರ ಅದನ್ನು ರದ್ದು ಮಾಡಿ, ಬೇರೆಯವರಿಗೆ entrust ಮಾಡಿದ್ದೆವು. *Entrust* ಮಾಡಿದ ನಂತರ ಅಲ್ಲಿ ಜಲ್ಲಿ ಮತ್ತು ಇತರೆ ಅಗ್ರಿಗೇಟ್ಸ್ ಲಭ್ಯವಾಗಿರುತ್ತದೆ. 'SafeZone Concept' ಅನ್ನು ಸುಪ್ರೀಂ ಕೋರ್ಟ್ ಮಾಡಿದ ಮೇಲೆ ಅದು ಸ್ವಲ್ಪ ತಡವಾಯಿತು ಮತ್ತು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ತಡವಾಯಿತು. ಸ್ವತಃ ನಾನು ಮಂಡ್ಯ ಕೆರಗೋಡು ಮುಖಾಂತರ ಪರಿವೀಕ್ಷಣೆ ಮಾಡಿ ಅಲ್ಲಿ ಕೆಟ್ಟು ಹೋಗಿರುವಂತಹ ರಸ್ತೆಯನ್ನು matarable ಮಾಡುವುದಕ್ಕೆ ಕ್ರಮ ತೆಗೆದುಕೊಂಡು ಈಗ ಅಲ್ಲಿ ಎರಡು ಹಂತಗಳನ್ನು ಮಾಡಿದ್ದೇವೆ. ಅದರಲ್ಲಿ ಒಂದು ಮಂಡ್ಯದಿಂದ ಯಡಿಯೂರಿನವರೆಗೆ, ಇನ್ನೊಂದು ಯಡಿಯೂರಿನಿಂದ ಕೌಡ್ಲೆ ಗುಬ್ಬಿಯವರೆಗೆ. ಆ 108 ಕಿಲೋಮೀಟರ್ ರಸ್ತೆ ಕಾಮಗಾರಿಯನ್ನು 2017 ಡಿಸೆಂಬರ್ ಅಂತ್ಯದವರೆಗೆ *KSHIP* ರಡಿಯಲ್ಲಿ ಸಂಪೂರ್ಣ ಮಾಡುವುದಕ್ಕೆ ಕಾಲ ಕಾಲಕ್ಕೆ ಅವರಿಗೆ ಯಾವ ಯಾವ ತಿಂಗಳಿನಲ್ಲಿ ಎಷ್ಟೆಷ್ಟು ಅಭಿವೃದ್ಧಿ target achieve ಆಗಬೇಕು, ಆ ಬಗ್ಗೆ ಕಡ್ಡಾಯವಾಗಿ ಸಭೆಗಳನ್ನು ನಡೆಸಿ ಕಟ್ಟುನಿಟ್ಟಿನ ಸೂಚನೆಯನ್ನು ಕೊಟ್ಟು, ಅಲ್ಲಿ 2012ರಿಂದ ಏನೇನು ಅನಾನುಕೂಲ ಆಗಿತ್ತು ಅದನ್ನೆಲ್ಲಾ ಡಿಸೆಂಬರ್ 31ಕ್ಕೆ ಒಮ್ಮೆಗೆ ಸರಿಪಡಿಸುವಂತಹ ಕೆಲಸವನ್ನು ಮಾಡಿದ್ದೇವೆ. ಮಂಡ್ಯ ಜಿಲ್ಲೆಯಲ್ಲಿ ಹಿಂದೆ ಇದ್ದಂತಹ ರಸ್ತೆಗಳು ಮತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಸ್ತೆಗಳಿಗೆ ಅನುದಾನಗಳನ್ನು ಕೊಟ್ಟಿರುವುದು ಮಾನ್ಯ ಶ್ರೀಕಂಠೇಗೌಡರವರಿಗೆ ಗೊತ್ತಿದೆ.

*(14) 12.30 07-02-2017 ಸಿಎಸ್:ಆರ್‌ಎನ್*

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಂದಿನ ಉಸ್ತುವಾರಿ ಸಚಿವರಾಗಿದ್ದ ಮಾನ್ಯ ಅಂಬರೀಷ್‌ರವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಆ ಕೆಲಸಕ್ಕೆ ಸಾಕಷ್ಟು ಒತ್ತನ್ನು ನೀಡಿದ್ದಾರೆ. ಡಿಸೆಂಬರ್ ಅಂತ್ಯದೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ನಾನು ಸೂಚನೆಯನ್ನು ನೀಡಿದ್ದೇನೆ. ಪ್ರತಿ ತಿಂಗಳು ಆ ತಿಂಗಳಿನಲ್ಲಿ ಏನೇನು ಕಾರ್ಯಸಾಧನೆ ಆಗಿದೆ ಎನ್ನುವುದನ್ನು ಪರಿಶೀಲಿಸಲಾಗುತ್ತಿದೆ.

**ಸಭಾಪತಿಯವರು:–** ಪ್ರತಿ ತಿಂಗಳು ಕ್ಯಾಲೆಂಡರ್ ಹಾಕುತ್ತೀರಾ?

**ಡಾ॥ಹೆಚ್.ಸಿ.ಮಹದೇವಪ್ಪ:–** ಪ್ರತಿ ತಿಂಗಳು ರಿವ್ಯೂ ಮಾಡಲಾಗುತ್ತಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೇ, ಈ ರಸ್ತೆ ಎರಡು ಚುನಾವಣೆಗಳ ಪ್ರಚಾರದ ಸಮಯದಲ್ಲಿ ಇಬ್ಬರು ಶಾಸಕರನ್ನು ಬಲಿ ತೆಗೆದುಕೊಂಡಿದೆ. ಅವರು take up ಆಗುವುದಕ್ಕೆ ಆಗಲಿಲ್ಲ. ಮಂಡ್ಯದಿಂದ ಇನ್ನೂ ಕಾಮಗಾರಿಯೇ ಪ್ರಾರಂಭಗೊಂಡಿಲ್ಲ. ಅವರು ಸುಮ್ಮನೆ ಗುಂಡಿ ತೋಡಿ ಬಿಟ್ಟಿದ್ದಾರೆ. ಸುಮ್ಮನೆ ಎಲ್ಲಾ ಕಡೆ ಮಣ್ಣು ಹರಡಿದೆ. ಅವರು ಏನೂ ಕೆಲಸ ನಡೆಯುತ್ತಿಲ್ಲ. ಇನ್ನೂ ತಿಂಗಳಲ್ಲ, ಮೂರು ವರ್ಷ ಆದರೂ ಸಹ ಕೆಲಸ ಮುಗಿಯುವುದಿಲ್ಲ.

**ಸಭಾಪತಿಯವರು:–** ಇನ್ನು 10 ತಿಂಗಳಿನಲ್ಲಿ ಕಾಮಗಾರಿಯನ್ನು ಮುಗಿಸುವುದಾಗಿ ಸಚಿವರು ಹೇಳಿದ್ದಾರೆ.

**ಡಾ॥ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಗಳೇ, Let him not anticipate anything about this. By 31st of December they will see that the road will be completed.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೇ, ಈ ಅಧಿವೇಶನ ಮುಗಿದ ಮೇಲೆ ಸಚಿವರು ಆ ರಸ್ತೆಯನ್ನು ನೋಡಲು ಬರಬೇಕೆನ್ನುವುದು ನನ್ನ ಪ್ರಾರ್ಥನೆ.

**ಡಾ॥ಹೆಚ್.ಸಿ.ಮಹದೇವಪ್ಪ:–** ನಾನು ಬಹಳಷ್ಟು ಸಲ ಹೋಗಿದ್ದೇನೆ. ಕೆರಗೋಡು ಹಾಗೂ ಮಂಡ್ಯ ಜಿಲ್ಲೆಯಲ್ಲೆಲ್ಲಾ ಪ್ರವಾಸ ಮಾಡಿದ್ದೇನೆ. I personally visted to inspect it.

<u>**ಪ್ರಶ್ನೆ ಸಂಖ್ಯೆ 54**</u>



" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಗಳೇ, ವಿಮಾ ಕಂಪನಿಗಳಾಗಲಿ, ಅಧಿಕಾರಿಗಳಾಗಲಿ, ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ ಅವರ್‍ಯಾರು ರೈತರ ಬಗ್ಗೆ ಕಾಳಜಿಯನ್ನು ವಹಿಸುತ್ತಿಲ್ಲ. ಈ ಬಗ್ಗೆ ಸಚಿವರು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಕೋರುತ್ತೇನೆ.

**ಡಾ॥ಶರಣಪ್ರಕಾಶ್ ಆರ್. ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು, ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ಅವರ ಮೊದಲನೆಯ ಪ್ರಶ್ನೆಗೆ ವಿವರವಾದ ಉತ್ತರವನ್ನು ಒದಗಿಸಲಾಗಿದೆ. ಅವರ ಎರಡನೆಯ ಪ್ರಶ್ನೆಯಲ್ಲಿ ಯಾರು ವಿಮೆ ಮಾಡಿಸಿರುವುದಿಲ್ಲ ಅವರಿಗೆ ಸರ್ಕಾರ ಯಾವ ರೀತಿಯ ಸಹಾಯವನ್ನು ಮಾಡುತ್ತದೆ ಎಂದು ಕೇಳಿದ್ದಾರೆ. ಈ ವಿಷಯವಾಗಿ ಕೇಂದ್ರ ಸರ್ಕಾರಕ್ಕೆ ಒಂದು ಮೆಮೋರೆಂಡಮ್ ನೀಡಲಾಗಿದೆ. ರಾಜ್ಯದಲ್ಲಿ ಬರಗಾಲವಿರುವ ಹಿನ್ನೆಲೆಯಲ್ಲಿ NDRF norms ಪ್ರಕಾರ ಏನೇನು ರೈತರಿಗೆ ನೀಡಬೇಕೋ ಅದನ್ನು ಕೊಡುವ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತದೆ. ಅದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಒಂದು ಮೆಮೋರೆಂಡಮ್ ಅನ್ನು ನೀಡಲಾಗಿದೆ. ಕೇಂದ್ರ ಸರ್ಕಾರದಿಂದ ಹಣ ಬಂದ ಕೂಡಲೇ ರೈತರಿಗೆ ನೀಡಲಾಗುವುದು.

ಮೂರನೆಯ ಪ್ರಶ್ನೆಯ ರೂಪದಲ್ಲಿ ಸದಸ್ಯರು ಒಂದು ಉತ್ತಮವಾದ ಸಲಹೆಯನ್ನು ನೀಡಿದ್ದಾರೆ. ಅದೇನೆಂದರೆ, ವಿಮೆಯ ಮೂಲಕ ಬರುವ ಹಣವನ್ನು ರೈತರ ಸಾಲಕ್ಕೆ ಹೊಂದಾಣಿಕೆ ಮಾಡುವ ಬಗ್ಗೆ ಹೇಳಿದ್ದಾರೆ. ರೈತರಿಗೆ ಬರುವ ವಿಮೆಯ ಹಣ ನೇರವಾಗಿ ಆರ್‌ಟಿಜಿಎಸ್ ಮೂಲಕ ರೈತರ ಉಳಿತಾಯ ಖಾತೆಗೆ ಜಮಾ ಆಗುತ್ತದೆ. ಆದರೆ ಕೆಲವೊಂದು ಡಿಸಿಸಿ ಬ್ಯಾಂಕ್‌ನಲ್ಲಿ ಅದು pooled account ಗೆ ಹೋಗಿ ರೈತರಿಗೆ ಸರಿಯಾದ ಸಮಯಕ್ಕೆ ಹಣ ದೊರೆಯುತ್ತಿರಲಿಲ್ಲ. ಈಗ ಸರ್ಕಾರ ಡಿಸಿಸಿ ಬ್ಯಾಂಕ್‌ನಲ್ಲಿಯೂ ರೈತರ ಉಳಿತಾಯ ಖಾತೆಯನ್ನು ತೆರೆದು ಅದಕ್ಕೆ ಆರ್‌ಟಿಜಿಎಸ್ ಮಾಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಿದೆ. ವಿಮೆಯಲ್ಲಿ ಬರುವ ಹಣವನ್ನು ರೈತರ ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಬಾರದೆಂದು ನಾವು ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಲಾಗಿದೆ. ಆದರೆ ರೈತರು ಆ ಹಣವನ್ನು ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದಾದರೆ ಅವರು ಮಾಡಿಕೊಳ್ಳಬಹುದು. ಅದಕ್ಕೆ ಸರ್ಕಾರದಿಂದ ಯಾವುದೇ ಅಭ್ಯಂತರವಿರುವುದಿಲ್ಲ.

**ಚುಕ್ಕೆ ಪ್ರಶ್ನೆ ಸಂಖ್ಯೆ 90**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವೀರಯ್ಯನವರು ಸದನದಲ್ಲಿ ಹಾಜರಿರದ ಕಾರಣ ಅವರ ಪ್ರಶ್ನೆ ಸಂಖ್ಯೆ: 90 ನ್ನು ಚರ್ಚೆಗೆ ತೆಗೆದುಕೊಳ್ಳಲಿಲ್ಲ.)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಕ್ತಾಯವಾಯಿತು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ||ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಸಮೂಹ 2ರಲ್ಲಿನ ಮೊದಲನೇ ಪಟ್ಟಿಯ 82 ಪ್ರಶ್ನೆಗಳ ಪೈಕಿ 62 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ತಮಿಳುನಾಡು ರಾಜ್ಯದ ಮಲ್ಟಿಪ್ಲೆಕ್ಸ್ ಚಲನಚಿತ್ರಮಂದಿರಗಳಲ್ಲಿ ಕೂಲ್ ಡ್ರಿಂಕ್ಸ್ ಮಾರಾಟ ರದ್ದುಪಡಿಸಿ, ಎಳೆನೀರು ಮಾರಾಟ ಮಾಡುತ್ತಿರುವ ರೀತಿ ಕರ್ನಾಟಕ ರಾಜ್ಯದಲ್ಲಿಯೂ ಅಳವಡಿಸಿ ರೈತರಿಗೆ ನೆರವಾಗುವ ಕುರಿತು.

~~~~~~~

**ಶ್ರೀ ಎಂ.ಕೆ.ಪ್ರಾಣೇಶ್:-** ಕಳೆದ ಕೆಲವು ದಿನಗಳ ಹಿಂದೆ ನಮ್ಮ ನೆರೆ ರಾಜ್ಯವಾದ ತಮಿಳುನಾಡಿನಲ್ಲಿ ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದಿರಗಳಲ್ಲಿ ಕೂಲ್ ಡ್ರಿಂಕ್ಸ್(ತಂಪು ಪಾನಿಯಗಳ) ಮಾರಾಟವನ್ನು ರದ್ದುಪಡಿಸಿ, ಎಳನೀರು ಮಾರಲು ಆದೇಶಿಸಿದ್ದು ಅಲ್ಲಿನ ರೈತರಲ್ಲಿ ಹೊಸ ಹುಮ್ಮಸ್ಸು ಬಂದಂತಾಗಿದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದ ರೈತರಿಗೂ ಅವಕಾಶ ಕಲ್ಪಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ.

ನಮ್ಮ ರಾಜ್ಯದಲ್ಲಿ ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದಿರಗಳು ಸೇರಿ ಒಟ್ಟಾರೆಯಾಗಿ ಸುಮಾರು 1000 ದಿಂದ 1500 ಚಿತ್ರ ಮಂದಿರಗಳು ಇರಬಹುದು. ಕೂಲ್ ಡ್ರಿಂಕ್ಸ್ ಕಂಪನಿಗಳಿಗೆ ಅವರ ಕಂಪನಿಗಳಲ್ಲಿ ಸಿದ್ಧಪಡಿಸುವ ತಂಪು ಪಾನೀಯಗಳನ್ನು ಮಾರಾಟ ಮಾಡಿಕೊಳ್ಳಲು ರಾಜ್ಯಾದ್ಯಂತ ಬೀದಿ ಬೀದಿಗಳಲ್ಲಿ ಸಾವಿರಾರು ಅಂಗಡಿಗಳು ಮತ್ತು ಹೋಟೆಲ್‌ಗಳು ಇವೆ. ನಮ್ಮ ರಾಜ್ಯದ ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದಿರಗಳಲ್ಲಿ ಎಳನೀರು ಮಾರಲು ಅವಕಾಶ ಕಲ್ಪಿಸಿಕೊಟ್ಟರೆ, ಆ ಕಂಪನಿಗಳಿಗೆ ಯಾವ ರೀತಿಯ ನಷ್ಟ ಆಗುವುದಿಲ್ಲ. ಮೇಲಾಗಿ ನಮ್ಮ ರಾಜ್ಯದ ರೈತರ ಹಿತಕ್ಕಿಂತ ಅವರ ಕಂಪನಿಗಳು ಮುಖ್ಯವಲ್ಲ. ಕೂಲ್ ಡ್ರಿಂಕ್ಸ್‌ಗಳಿಗೆ ಇರುವ ಬೆಲೆಯೇ ನಮ್ಮ ರೈತರು ಬೆಳೆಯುವ ಎಳನೀರಿಗೂ ಇದೆ, ಒಂದು ಪೆಪ್ಸಿ, ಕೋಕಾಕೋಲಾಗೆ ರೂ.25-30 ಇದ್ದು, ಎಳನೀರಿನ ಬೆಲೆಯು ಸಹ ರೂ.25-30 ಇದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~

ಕಳೆದ 3-4 ವರ್ಷಗಳಿಂದ ಮಳೆ ಬೆಳೆ ಇಲ್ಲದೆ ಕಂಗಾಲಾಗಿರುವ ರಾಜ್ಯದ ರೈತರಿಗೆ ಈ ರೀತಿಯಾದರೂ ಒಂದು ಅನುಕೂಲ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ. ರೈತ ದೇಶದ ಬೆನ್ನೆಲುಬು ಎಂದು ಹೇಳಿಕೊಂಡು ರಾಜಕೀಯ ಮಾಡುವ ನಾವುಗಳು ರೈತರಿಗಾಗಿ ಈ ರೀತಿಯ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುವುದರ ಮೂಲಕ ಸರ್ಕಾರಗಳ ಮೇಲೆ ಅವರಿಗಿರುವ ನಂಬಿಕೆಯನ್ನು ಹೆಚ್ಚಿಸಬಹುದು.

ಕಾರಣ ರೈತರಿಗಾಗಿ ಮತ್ತು ರೈತರಿಗೋಸ್ಕರ ರಾಜ್ಯದಲ್ಲಿರುವ ಎಲ್ಲಾ ಮಲ್ಟಿಪ್ಲೆಕ್ಸ್ ಮತ್ತು ಚಲನಚಿತ್ರ ಮಂದಿರಗಳಲ್ಲಿ ಕೂಲ್ ಡ್ರಿಂಕ್ಸ್(ತಂಪು ಪಾನೀಯಗಳ) ಮಾರಾಟವನ್ನು ರದ್ದುಪಡಿಸಿ, ಕೇವಲ ಎಳನೀರು ಮಾರುವಂತೆ ವಿಶೇಷ ಆದೇಶವನ್ನು ಹೊರಡಿಸಲು ಸೂಕ್ತ ಕ್ರಮ ಕೈಗೊಳ್ಳುವ ವಿಚಾರವಾಗಿ ಶೂನ್ಯವೇಳೆಯಲ್ಲಿ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಡಾ||ಜಿ.ಪರಮೇಶ್ವರ್(ಸಭಾನಾಯಕರು):- ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳಿಂದ ನಂತರ ಉತ್ತರವನ್ನು ಕೊಡಿಸಲಾಗುವುದು.

ಆ) ನ್ಯಾಯಾಧೀಶರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಶಾಸಕರು
ಮತ್ತು ಸಚಿವರನ್ನು ಆಹ್ವಾನಿಸಬಾರದೆಂಬ ಸುತ್ತೋಲೆಯ ಬಗ್ಗೆ.
~~~~~~~

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ನ್ಯಾಯಾಲಯಗಳ ಸಮಾರಂಭಗಳಲ್ಲಿ ಶಾಸಕರು, ಮಂತ್ರಿಗಳನ್ನು ಆಹ್ವಾನಿಸಬಾರದು ಅಥವಾ ಅವರು ನ್ಯಾಯಾಧೀಶರುಗಳ ಜೊತೆ ವೇದಿಕೆ ಹಂಚಿಕೊಳ್ಳಲು ಅವಕಾಶ ನೀಡಬಾರದು ಎಂದು ಹೈಕೋರ್ಟ್ ಹೊರಡಿಸಿರುವ ಸುತ್ತೋಲೆಯು ಶಾಸಕಾಂಗಕ್ಕೆ ಮಾಡಿರುವ ಅವಮಾನವಾಗಿದ್ದು, ಸಂವಿಧಾನಿಕ ಸಂಸ್ಥೆಗಳಾದ ಶಾಸಕಾಂಗ ಹಾಗೂ ನ್ಯಾಯಾಂಗದ ನಡುವೆ ಸಂಘರ್ಷ ಉಂಟುಮಾಡುವ ಕುತಂತ್ರವಾಗಿದ್ದು, ನ್ಯಾಯಾಂಗವು ಶಾಸಕಾಂಗವನ್ನು ಕೀಳಾಗಿ ಪರಿಗಣಿಸುವುದು ಹಾಗೂ ಜನಪ್ರತಿನಿಧಿಗಳನ್ನು ನಿರ್ಲಕ್ಷಿಸುವುದು ಸರ್ವತ್ರ ಖಂಡನೀಯ; ಸರ್ವಕಾಲಿಕ ಸಾಮಾಜಿಕ ಮೌಲ್ಯಗಳಾದ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಬೇಧಭಾವರಹಿತ ನಿಲುವುಗಳನ್ನು ನಮ್ಮ ಸಂವಿಧಾನವು ಪ್ರತಿಪಾದಿಸಿದ್ದು, ಅವುಗಳ ಅನುಷ್ಠಾನ ನಮ್ಮೆಲ್ಲರ ಕರ್ತವ್ಯ. ಆದರೆ ಅನಪೇಕ್ಷಣೀಯವಾದ ಈ ಸುತ್ತೋಲೆಯಿಂದಾಗಿ ಚುನಾಯಿತ ಪ್ರತಿನಿಧಿಗಳೆಲ್ಲ ಒಳ್ಳೆಯವರಲ್ಲ ಹಾಗೂ ನ್ಯಾಯಾಂಗದಲ್ಲಿ ಜವಾಬ್ದಾರಿ ವಹಿಸುವ ನ್ಯಾಯಾಧೀಶರುಗಳೆಲ್ಲ ಬಹಳ ಉನ್ನತ ಆದರ್ಶಗಳನ್ನು ನಿತ್ಯ ಪರಿಪಾಲಿಸುವಂತಹ ವರ್ಗ ಎನ್ನುವುದಾದರೆ ನಾಡಿನ ಜನತೆ ಸ್ವೀಕಾರ ಮಾಡದಿರುವ ಒಂದು ತಪ್ಪು ಸಂದೇಶವನ್ನು ಉಚ್ಚ ನ್ಯಾಯಾಲಯದ ಈ ಸುತ್ತೋಲೆ ಮೂಲಕ ಜನರಿಗೆ ತಲುಪಿಸಿದಂತಾಗಿದೆ. ಈ ಹಿಂದೆ ಪತ್ರಿಕಾ ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ನಾಡಿನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~~~~~

ನ್ಯಾಯಾಧೀಶರುಗಳ ವ್ಯವಹಾರಗಳ ಕುರಿತು ಸಾರ್ವಜನಿಕ ಅಭಿಪ್ರಾಯ ಅಷ್ಟೇನು ಒಳ್ಳೆದಿಲ್ಲದಿರುವ ಈ ಕಾಲಘಟ್ಟದಲ್ಲಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳು ತಮ್ಮದೆ ಆದ ನಿರ್ದಿಷ್ಟ ಸಂವಿಧಾನಿಕ ಚೌಕಟ್ಟಿನ ಒಳಗೆ ಕಾರ್ಯನಿರ್ವಹಿಸಬೇಕಾದ ಅನಿವಾರ್ಯತೆ ಇರುವುದರಿಂದ ಈ ಸುತ್ತೋಲೆಗಳು ಅನಪೇಕ್ಷಣೀಯವಾಗಿದ್ದು ಖಂಡನಾರ್ಹವಾಗಿದೆ. ಉಚ್ಚ ನ್ಯಾಯಾಲಯದ ಈ ಸುತ್ತೋಲೆಯ ತಪ್ಪು ಕ್ರಮದಿಂದಾಗಿ ಜನಪ್ರತಿನಿಧಿಗಳ ಭಾವನೆಗಳಿಗೆ ತೀವ್ರ ಘಾಸಿಯಾಗಿರುವ ವಿಷಯವನ್ನು ಸರಕಾರದ ಗಮನಕ್ಕೆ ತರುತ್ತ ನಮ್ಮೆಲ್ಲರ ಭಾವನೆಗಳನ್ನು ನ್ಯಾಯಾಲಯದ ಗಮನಕ್ಕೆ ತಂದು ಇನ್ನು ಮುಂದೆ ಸಂವಿಧಾನಿಕ ಸಂಸ್ಥೆಗಳ ನಡುವೆ ಅಪನಂಬಿಕೆ, ಭಿನ್ನಾಭಿಪ್ರಾಯ ಹಾಗೂ ಘರ್ಷಣೆಗಳನ್ನು ಉಂಟು ಮಾಡುವ ಈ ರೀತಿಯ ಚಟುವಟಿಕೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಶಾಸಕಾಂಗದ ಘನತೆಯನ್ನು ಎತ್ತಿ ಹಿಡಿಯಲು ಅನುಕೂಲವಾಗುವಂತೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಡಾ॥ಜಿ.ಪರಮೇಶ್ವರ್(**ಸಭಾನಾಯಕರು**):- ಮಾನ್ಯ ಸಭಾಪತಿಗಳೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರುಗಳಿಂದ ನಂತರ ಉತ್ತರವನ್ನು ಕೊಡಿಸಲಾಗುವುದು.

ಶ್ರೀ ರಾಮಚಂದ್ರಗೌಡ:- ಮಾನ್ಯ ಸಭಾಪತಿಗಳೇ, ವಿಚಾರದ ಮೇಲೆ ಚರ್ಚೆ ಆಗಬೇಕಾಗಿದೆ.

ಶ್ರೀ ಐವನ್ ಡಿ'ಸೋಜಾ:- ಮಾನ್ಯ ಸಭಾಪತಿಗಳೇ, ಇದರ ಬಗ್ಗೆ ಚರ್ಚೆ ಆಗಬೇಕೆಂದೇ ನಾವು ಸಹ ಒತ್ತಾಯಿಸುವುದು.

ಶ್ರೀ ವಿ.ಎಸ್.ಉಗ್ರಪ್ಪ:- ಮಾನ್ಯ ಸಭಾಪತಿಗಳೇ, ಇದು ಬಹಳ ಗಹನವಾದ ವಿಚಾರ. ಇದನ್ನು ದಯಮಾಡಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸುಪ್ರೀಮ್ ಕೋರ್ಟ್‌ನ ಆದೇಶಗಳನ್ನು ಕೂಡ ನಾನು ಸಂಗ್ರಹಿಸಿದ್ದೇನೆ.

ಸಭಾಪತಿಯವರು:- ನನಗೆ ಈ ಬಗ್ಗೆ ಒಂದು ನೋಟಿಸ್ ಕಳುಹಿಸಿಕೊಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(15) 07.02.2017 ಎಂವಿ-ವಿಕೆ 12.40**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇವರನ್ನು "my lord" ಎಂದು ಸಂಭೋದಿಸಿದಾಕ್ಷಣಕ್ಕೆ, ಇಡೀ ದೇಶಕ್ಕೆ ಮತ್ತು ರಾಜ್ಯಕ್ಕೆ ಇವರು lords ಗಳೇನು? ಇದು ನನಗೆ ಅರ್ಥವಾಗುತ್ತಿಲ್ಲ.

**“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”**

**ಸಭಾಪತಿಯವರು:–** ತಾವು ಏನು ಹೇಳಬೇಕು ಎನ್ನುತ್ತಿದ್ದೀರೋ ಅದನ್ನು ಹೇಳಿ. ಅವರಿಗೆ ಅವಕಾಶ ಕೊಟ್ಟಿದ್ದೇನೆ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಮಾನವಾಗಿದೆ.

**ಸಭಾಪತಿಯವರು:–** ಮಾನ್ಯ ಕೆ.ಬಿ.ಶಾಣಪ್ಪನವರೆ, ತಾವು ಕುಳಿತುಕೊಳ್ಳಿ ಅವರು ಹೇಳುತ್ತಿರುವುದನ್ನು ಕೇಳೋಣ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ನ್ಯಾಯಾಧೀಶರು ಇಡೀ ಶಾಸಕಾಂಗಕ್ಕೆ ಮಾಡಿದಂತಹ ಒಂದು ರೀತಿಯ ಅಪಮಾನ, ಇದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕು, ನ್ಯಾಯಾಧೀಶರೆಂದರೆ ಅವರು ಆಕಾಶದಿಂದ ಅಥವಾ ಸ್ವರ್ಗದಿಂದ ಬಂದವರೇನೂ ಅಲ್ಲ.

**ಸಭಾಪತಿಯವರು:–** ಅದು ಸರಿ ಇದೆ. ಈಗ ಅದನ್ನು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದು ಬೇಡ. ಆದುದರಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡಲು ನನಗೆ ಒಂದು ನೋಟಿಸ್ ಕೊಡಿ, ಅದರಲ್ಲಿ ಈ ವಿಷಯವನ್ನು ಸೇರಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಅವಕಾಶ ಕೊಡಿ. ಆ ನೋಟಿಸ್‌ನಲ್ಲಿ ಅವರು ಏನು ಆರ್ಡರ್ ಮಾಡಿದ್ದಾರೆಂದರೆ, ಇಡೀ ಮೇಲ್ಮನೆಯನ್ನು ಅಪಮಾನ ಮಾಡಿದ್ದಾರೆ. ಮೊದಲನೆಯದಾಗಿ ಡಯಾಸ್‌ನಲ್ಲಿ ಎಂ.ಪಿ.ಗಳನ್ನು ಮತ್ತು ಎಂ.ಎಲ್.ಎ.ಗಳನ್ನು ಕೂರಿಸಬಾರದು ಎಂದು ಹೇಳಿದ್ದಾರೆ. ಎರಡನೆಯದಾಗಿ ಅಲ್ಲಿ ಎಂ.ಎಲ್.ಸಿ.ಗಳಿಗೆ ಜಾಗವೇ ಇಲ್ಲ. ಅಂದರೆ, ಅವರು ಏನು ತಿಳಿದುಕೊಂಡಿದ್ದಾರೆ, “My lord” ಎಂದು ಅಡ್ವೊಕೇಟ್‌ಗಳು ನ್ಯಾಯಾಧೀಶರನ್ನು ಸಂಭೋದಿಸುವುದರಿಂದ ಅವರು ಇಡೀ ರಾಜ್ಯಕ್ಕೆ ನಾವು lords ಎನ್ನುವಂತಹ ರೀತಿಯಾಗಿ ತಿಳಿದುಕೊಂಡಿದ್ದಾರೆ. ಇದು ಬಹುಶಃ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೊಡಲಿ ಪೆಟ್ಟು. ಸಂವಿಧಾನವನ್ನು ಯಾರು interpret ಮಾಡಬೇಕೋ ಅವರೇ

ಕೊಡಲಿ ಪೆಟ್ಟನ್ನು ಕೊಡುತ್ತಿದ್ದಾರೆಂದು ಹೇಳಿದರೆ ಬಹುಶಃ ಇದನ್ನು ಸಹಿಸಲಿಕ್ಕೆ ಸಾಧ್ಯವಿಲ್ಲ. ದಯಮಾಡಿ ಇದರ ಬಗ್ಗೆ ಚರ್ಚೆ ಆಗಬೇಕು.

**ಸಭಾಪತಿಯವರು:–** ಖಂಡಿತ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ. ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಬಿ.ಶಾಣಪ್ಪನವರು ಏನೋ ಹೇಳುತ್ತಿದ್ದಾರೆ ಅದನ್ನು ಕೇಳೋಣ.

**ಶ್ರೀ ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನ್ನ ಅನಿಸಿಕೆ ಇಷ್ಟೆ. We are in the democratic system of the Government. We are people's representative and they are the part of this institution. They are not far away from this institution. ಈ ಸಂವಿಧಾನದ ಒಳಗೆ ನೀವು, ನಾವು ಮತ್ತು ನ್ಯಾಯಾಂಗ ಎಲ್ಲಾ ಕೂಡಿಕೊಂಡು ಈ ದೇಶವನ್ನು ನಡೆಸಲಿಕ್ಕೆ ನಾವು ಕೊಟ್ಟಂತಹ ಹಣವನ್ನು ಇವರು ಖರ್ಚು ಮಾಡಬೇಕು. We pass the Budget for everybody in this country and how can they run away from this responsibilities. ಕಾರ್ಯಕ್ರಮಗಳು ನಡೆದಾಗ ನಾವು ಹೈಕೋರ್ಟ್‌ನವರನ್ನು ಆಹ್ವಾನಿಸುತ್ತೇವೆ. We won't differentiate them and we respect them. ಈ ಸುತ್ತೋಲೆ ಏನು ಬಂದಿದೆ, It is very very dangerous circular and they should withdraw it.

**ಸಭಾಪತಿಯವರು:–** ಸರ್ಕಾರಿ ಮುಖ್ಯ ಸಚೇತಕರು ಏನೋ ಹೇಳುತ್ತಿದ್ದಾರೆ ಕೇಳಿ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸಂವಿಧಾನವನ್ನು ರಕ್ಷಣೆ ಮಾಡುವಂತಹವರು ನ್ಯಾಯಾಂಗದವರು. ಅವರುಗಳೇ ಈ ರೀತಿಯಾಗಿ ಶಾಸಕರುಗಳನ್ನು ಕೂರಿಸಬೇಡಿ, ಮಂತ್ರಿಗಳನ್ನು ಕರೆಯಬೇಡಿ ಎಂದು ಹೇಳಿದರೆ, ಬೇರೆ ಎಲ್ಲಾ ರೀತಿಯ ಕೆಲಸಗಳು, ಕಾಮಗಾರಿಗಳು ಆಗಬೇಕು. ಬಿಲ್ಡಿಂಗ್ ಆಗಲಿಲ್ಲ, ಬೇರೆ ಕೆಲಸವಾಗಿಲ್ಲವೆಂದರೆ ಬೆಂಚ್ ಮೇಲೆ ಕುಳಿತುಕೊಂಡು ಸರ್ಕಾರವನ್ನು ಹಿಗ್ಗಾಮುಗ್ಗಾ ಬೈಯುವುದಕ್ಕೆ ಪ್ರಾರಂಭ ಮಾಡುತ್ತಾರೆ. ಮಂತ್ರಿಗಳು ಏನು ಮಾಡುತ್ತಾರೆ, ಚುನಾಯಿತ ಪ್ರತಿನಿಧಿಗಳು ಏನು ಮಾಡುತ್ತಾರೆ ಎಂದು ಕೇಳುತ್ತಾರೆ. ಎಲ್ಲಾ ಬಿಲ್ಡಿಂಗ್ ಕಾಮಗಾರಿ ಮುಗಿದ ಮೇಲೆ ಉದ್ಘಾಟನೆಗೆ ನಾವುಗಳು ಅವರ ಜೊತೆ ಕುಳಿತುಕೊಳ್ಳಬಾರದಂತೆ. ಹಾಗಾದರೆ ನಾವುಗಳೇನು? ಸಂವಿಧಾನವನ್ನು ಎತ್ತಿಹಿಡಿಯುವವರೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂವಿಧಾನದ ಬಗ್ಗೆ ಈ ರೀತಿ ಮಾತನಾಡುತ್ತಾರೆ ಎಂದರೆ, ಇದರ ಬಗ್ಗೆ ಚರ್ಚೆ ಆಗಬೇಕು. ಅವರ ಪಾತ್ರವೇನು? ಚುನಾಯಿತ ಪ್ರತಿನಿಧಿಗಳ ಪಾತ್ರವೇನು ಎನ್ನುವುದರ ಬಗ್ಗೆ ಕೂಲಂಕಷವಾಗಿ ಚರ್ಚೆ ಆಗಬೇಕು.

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಗೌರವಾನ್ವಿತ ಸದಸ್ಯರಾದಂತಹ ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಒಂದು ವಿಷಯ ಪ್ರಸ್ತಾಪ ಮಾಡಿದ್ದಾರೆ. ಇದು ಎಲ್ಲರ ಭಾವನೆ ಹೇಗಿದೆ ಎನ್ನುವುದನ್ನು ನಾನು ಗಮನಿಸಿ ಕೆಲವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುತ್ತೇನೆ. ನನ್ನ ಮನಸ್ಸಿಗೂ ಸಹ ಇದು ಘಾಸಿಯಾಗಿದೆ ಮತ್ತು ನೋವಾಗಿದೆ. ಇದು ನಾವೆಲ್ಲರೂ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿರುವಂತಹ ಒಂದು ಸಂಗತಿಯಾಗಿದೆ. ಆದರೆ ಶೂನ್ಯವೇಳೆಯಲ್ಲಿ ಚರ್ಚೆಯಾದರೆ ಉತ್ತರ ಕೊಡುವವರು ಯಾರು? ಅದಕ್ಕಾಗಿ ಮಾನ್ಯ ಸಭಾನಾಯಕರು ಬಹಳ ಚೆನ್ನಾಗಿ ಹೇಳಿದರು, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅಥವಾ ಉತ್ತರ ಕೊಡುವುದಕ್ಕೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಲ್ಲಿ ಅಥವಾ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ, ಅವರು ಉತ್ತರ ಕೊಡುತ್ತಾರೆಂದು ಹೇಳಿದರು. ಆದರೆ ನಾನು ಯಾವುದಾದರೊಂದು ವಿಷಯ ಸುಮ್ಮನೆ ಚರ್ಚೆಯಾಗಲಿ ಎಂದು ಹೇಳುವುದಕ್ಕೆ ಬರುವುದಿಲ್ಲ. ನಾನು ಒಂದು ನಿಬಂಧನೆಗೆ ಒಳಪಟ್ಟು ಕೆಲಸ ಮಾಡಬೇಕಾಗುತ್ತದೆ. ಗೌರವಾನ್ವಿತ ಸದಸ್ಯರು ಶೂನ್ಯವೇಳೆಗೆ ಒಂದು ನೋಟಿಸ್ ಕೊಟ್ಟರೆ, ಅರ್ಧಗಂಟೆ ಎಂದು ಹೇಳಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈ ದಿವಸ ಹೇಗೆ ತಮ್ಮ–ತಮ್ಮ ಅಭಿಪ್ರಾಯ ಹೇಳಿದ್ದೀರಿ, ಎರಡರಿಂದ ನಾಲ್ಕು ನಿಮಿಷದ ಒಳಗೆ 16 ಜನ ಸದಸ್ಯರು ತಮ್ಮ ಅಭಿಪ್ರಾಯ ಹೇಳಿದರೆ, ಅದರಿಂದ ಸರ್ಕಾರಕ್ಕೂ ಒಂದು ದಾರಿ ಸಿಕ್ಕಿದಂತಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಏನು ಮಾಡಬೇಕು ಎಂಬುದು ಸಹ ಸರ್ಕಾರಕ್ಕೆ ಸ್ಪಷ್ಟವಾಗಿ ಗೊತ್ತಾಗುತ್ತದೆ, ಅದನ್ನು ಮಾಡೋಣ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ತಾವು ಅನೇಕ ವಿಚಾರಗಳಿಗೆ ವಿಶೇಷವಾದಂತಹ ಚರ್ಚೆಗೆ ಅವಕಾಶ ಮಾಡಿದ್ದೀರಿ. ನಾನು ಸಂವಿಧಾನದ ಅನುಚ್ಛೇದ 211 ಹಾಗೂ ಅದರಲ್ಲಿನ restrictions ಬಗ್ಗೆಯೂ ಸಹ ನೋಡುತ್ತಿದ್ದೇನೆ. ನ್ಯಾಯಾಂಗದ ಬಗ್ಗೆ ನಾವುಗಳು ಏನೆಲ್ಲಾ ಚರ್ಚೆ ಮಾಡಬಹುದು, ಮಾಡಬಾರದು ಎಂಬುದಾಗಿ ಸಂವಿಧಾನದಲ್ಲಿದೆ. ಹಾಗೆಯೇ ನಾನು ಎಲ್ಲಾ ರೀತಿಯಿಂದ ತಯಾರಾಗಿ ಬಂದಿದ್ದೇನೆ. ದಯಮಾಡಿ ನಿಮ್ಮನ್ನು ಕೇಳುವುದೇನೆಂದರೆ, ನಾವುಗಳು ಕೃಷಿಕರ ವಿಚಾರದ ಬಗ್ಗೆ, ಮಹಿಳೆ ಮತ್ತು ಮಕ್ಕಳ ಸಮಸ್ಯೆಗಳ ಬಗ್ಗೆ ಹೇಗೆ ಚರ್ಚೆ ಮಾಡುತ್ತೇವೆಯೋ. ಹಾಗೆಯೇ ಒಂದು ದಿವಸ ಅಥವಾ ಒಂದೆರಡು ಗಂಟೆಗಳ ಕಾಲ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗ ವಿಚಾರದ ಬಗ್ಗೆ ತಾವು ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಎಲ್ಲೋ ಒಂದು ಕಡೆ ಮಿತಿಯನ್ನು ಹಾಕದೇ ಇದ್ದರೆ, ಬಹುಶಃ ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಳಿದುಕೊಳ್ಳುತ್ತಾರೆ, ನಾವುಗಳು ಇರುವುದೇ ಅವರುಗಳ ಮೇಲೆ ಧಾಳಿ ಮಾಡುವುದಕ್ಕೆ ಎನ್ನುವಂತಹ ರೀತಿಯಲ್ಲಿ ಅವರು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಪ್ರವೃತ್ತಿಯನ್ನು ಎಲ್ಲೋ ಒಂದು ಕಡೆ ನಿಲ್ಲಿಸದೆ ಇದ್ದರೆ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಅರ್ಥವೇ ಇರುವುದಿಲ್ಲ. ದಯಮಾಡಿ ಅನುಚ್ಛೇದ 211 ಒಂದು ಕಡೆ ಮತ್ತು ಸುಪ್ರೀಂ ಕೋರ್ಟ್‌ನ ಕೆಲವು ಜಡ್ಜ್‌ಮೆಂಟ್‌ಗಳಿವೆ. ದಯಮಾಡಿ ತಾವೇ ಒಂದು ಅವಕಾಶವನ್ನು ಮಾಡುವುದು ಉತ್ತಮ. ಈ ವಿಷಯದಿಂದ ಸದನಕ್ಕೆ ಅಪಮಾನವಾಗಿದೆ. ವಿಧಾನ ಪರಿಷತ್ತಿನ ಸದಸ್ಯರಿಗೆ ಅತ್ಯಂತ ಕೆಟ್ಟ ರೀತಿಯಲ್ಲಿ ಅಪಮಾನವಾಗಿದೆ.

**ಸಭಾಪತಿಯವರು:-** ತಮ್ಮ ಅಭಿಪ್ರಾಯಗಳಿಗೆ ನಾನು ಒಪ್ಪಿದ್ದೇನೆ. ನನ್ನ ಮನಸ್ಸಿಗೂ ನೋವಾಗಿದೆ ಎನ್ನುವ ಕಾರಣಕ್ಕೆ ಇಷ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಸಾಮಾನ್ಯವಾಗಿ ಶೂನ್ಯವೇಳೆಯಲ್ಲಿ ಪ್ರಸ್ತಾಪವಾದಂತಹ ವಿಷಯಗಳ ಚರ್ಚೆಗೆ ನಾನು ಅವಕಾಶ ಕೊಡುವುದಿಲ್ಲ. ಆದರೆ, ಇದು ಸದನದ ಒಂದು ಘನತೆ, ಗಾಂಭೀರ್ಯದ ಪ್ರಶ್ನೆಯಾಗಿರುವುದರಿಂದ ಚರ್ಚೆಗೆ ಸ್ವಲ್ಪ ಅವಕಾಶ ಕೊಟ್ಟಿದ್ದೇನೆ. ತಾವೆಲ್ಲ ನೋಡಿದ ಹಾಗೆ ಸ್ವಲ್ಪ ಸಮಯ ಚರ್ಚೆ ಮಾಡುವುದಕ್ಕೆ ಈ ಸದನದಟಲ್ಲೇ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಮುಂದಿನ ವಿಷಯಕ್ಕೆ ಹೋಗೋಣ.

(ಇ) ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿನ ಅಜ್ಜಂಪುರ ಗ್ರಾಮದ ತಳಿ ಸಂವರ್ಧನಾ ಕೇಂದ್ರದಲ್ಲಿ ಅಮೃತಮಹಲ್ ತಳಿಯ ರಾಸುಗಳ ಸಾವಿನ ಕುರಿತು.

- - - -

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ರಾಜ್ಯದಲ್ಲಿ ಭೀಕರ ಬರಗಾಲದ ಛಾಯೆ ಆವರಿಸಿದ್ದು, ರಾಜ್ಯದಲ್ಲಿ ಮೇವು ಮತ್ತು ನೀರಿಲ್ಲದೆ ದನ-ಕರುಗಳು ಸಂಕಷ್ಟಕ್ಕೆ ಸಿಲುಕಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅದರಲ್ಲೂ ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿನ ಅಜ್ಜಂಪುರ ಗ್ರಾಮದ ತಳಿ ಸಂವರ್ಧನಾ ಕೇಂದ್ರದಲ್ಲಿ ಅಮೃತಮಹಲ್ ಕೇಂದ್ರ ಮತ್ತು ಉಪ ಕೇಂದ್ರಗಳಲ್ಲಿ ಸುಮಾರು 1819 ರಾಸುಗಳಿದ್ದು, ಇಲ್ಲಿ ಕಳೆದ ನವೆಂಬರ್ ತಿಂಗಳಿನಿಂದ ಇದುವರೆಗೆ ರಾಸುಗಳಲ್ಲಿ ಅತ್ಯಂತ ಪ್ರಮುಖ ಜಾತಿಯಲ್ಲೊಂದಾದ ಮತ್ತು ಮೈಸೂರು ಅರಸರ ಕಾಲದಲ್ಲಿ "ಬೆಣ್ಣೆಚಾವಡಿ" ಎಂದು ಕರೆಯುತ್ತಿದ್ದ "ಅಮೃತಮಹಲ್" ರಾಸುಗಳು ಪ್ರತಿದಿನ ಮೇವಿನ ಕೊರತೆಯಿಂದ ಹಸಿವಿನಿಂದ ಬಳಲಿ ಮರಣ ಹೊಂದುತ್ತಿವೆ ಎಂಬ ವಿಷಯವು ಈಗಾಗಲೇ ದಿನಾಂಕ 28.01.2017ರಂದು ವಿಜಯ ಕರ್ನಾಟಕ, ಪ್ರಜಾವಾಣಿ ಮತ್ತು ಕನ್ನಡಪ್ರಭ ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಆದರೆ ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳು ಹೇಳುವುದು ಬೇರೆಯೇ ಇದ್ದು, ಸದರಿ ರಾಸುಗಳು ಜ್ವರದಿಂದ ವಿಷಭಾದೆಯಿಂದ ಸತ್ತಿವೆ ಎಂದು ಹೇಳಿರುತ್ತಾರೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆದರೆ ವಿಶಾಲವಾದ ಈ ಕಾವಲುಗಳಲ್ಲಿ ಭತ್ತ–ಜೋಳದ ಹುಲ್ಲಿನ ಬಣವೆಗಳೇ ಇಲ್ಲ, ಇಲ್ಲಿ ಜಾಲೀ ಗಿಡಗಳೆ ಹೆಚ್ಚಾಗಿದ್ದು, ಹಸಿವಿನಿಂದ ಬಳಲುತ್ತಿರುವ ರಾಸುಗಳು ಮುಳ್ಳು–ಗಟ್ಟಿ ತಿನ್ನಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗೂ ಸದರಿ ಸಂವರ್ಧನಾ ತಳಿ ಕೇಂದ್ರದ ಗೋಪಾಲಕರು ಇವುಗಳಿಗೆ ಮುಷ್ಠಿಯಷ್ಟು ಆಹಾರ ಮಾತ್ರ ನೀಡುತ್ತಿರುವುದು ತಿಳಿದು ಬಂದಿದ್ದು, 'ಡಿ' ದರ್ಜೆಯ ನೌಕರರ ಸಂಖ್ಯೆ:62 ಅದರ ಬದಲಾಗಿ ಕೇವಲ 4 ನೌಕರರು ಮಾತ್ರ ಇರುವುದು ತಿಳಿದು ಬಂದಿದ್ದು, ಆದರೆ ಇಲ್ಲಿ ಹೆಚ್ಚಿನ ಜನ ನೌಕರರಾಗಿದ್ದಾರೆ ಎಂದು ಹಾಜರಾತಿ ನೀಡಿ ಹಣ ಲಪಟಾಯಿಸುತ್ತಿರುವ ಬಗ್ಗೆ ಆರೋಪಗಳು ಸಹ ಕೇಳಿಬಂದಿರುತ್ತವೆ. ಈ ಬಗ್ಗೆ ಸರ್ಕಾರದಿಂದ 2013–14ನೇ ಸಾಲಿನಲ್ಲಿ 3.24 ಕೋಟಿ ರೂಪಾಯಿ ಅನುದಾನ ಬಂದಿದ್ದು, 2014–15ನೇ ಸಾಲಿನಲ್ಲಿ 1.65 ಕೋಟಿ ರೂಪಾಯಿ, 2015–16ನೇ ಸಾಲಿನಲ್ಲಿ 4.73 ಕೋಟಿ ರೂಪಾಯಿ ಬಿಡುಗಡೆಯಾಗಿರುತ್ತದೆ. ಆದರೆ 2016–17ರಲ್ಲಿ ಇಂತಹ ಭೀಕರ ಬರಗಾಲದ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಕೇವಲ 87.26 ಲಕ್ಷ ರೂಪಾಯಿ ಮಾತ್ರ ಅನುದಾನ ಬಿಡುಗಡೆಯಾಗಿರುವುದು ವಿಷಾದನೀಯವಾಗಿರುತ್ತದೆ.

ಆದರೆ ಪ್ರಸ್ತುತ ದೇಶದಲ್ಲಿ ವಿಶಿಷ್ಟವಾದ ಕೆಲವೇ ಕೆಲವು ತಳಿಗಳು ಮಾತ್ರ ಬದುಕುಳಿದಿದ್ದು ಅಂತಹ ವಿಶಿಷ್ಟವಾದ ಗೋ ತಳಿಗಳಲ್ಲಿ ಒಂದಾದ ಅಮೃತಮಹಲ್ ತಳಿಯನ್ನು ಸಂವರ್ಧಿಸಿ ಬೆಳೆಸಬೇಕಾದ ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಆದರೆ ಇವುಗಳ ಸರಣಿ ಸಾವಿನ ಬಗ್ಗೆ ಅಲ್ಲಿನ ಜಿಲ್ಲಾಡಳಿತ ಯಾವುದೇ ಗಮನ ಹರಿಸದೇ ಇರುವುದು, ತಳಿಯ ಪುನರುತ್ಥಾನಕ್ಕೆ ಶ್ರಮಿಸುವಂತಹ ನಿಷ್ಠಾವಂತ ಅಧಿಕಾರಿಗಳ ಕೊರತೆ ಇರುವುದರಿಂದ ಇಂತಹ ತಳಿಗಳು ನಶಿಸಿ ಹೋಗುವಂತಾಗಿದೆ.

ಆದ್ದರಿಂದ ಈ ಬಗ್ಗೆ ಸರ್ಕಾರವು ಶೀಘ್ರವಾಗಿ ಎಚ್ಚೆತ್ತುಕೊಂಡು ರಾಜ್ಯದಲ್ಲಿ ಯಾವ ಯಾವ ಪ್ರದೇಶದಲ್ಲಿ ತಳಿ ಸಂವರ್ಧನಾ ಕೇಂದ್ರಗಳಿವೆ, ಅಲ್ಲಿನ ರಾಸುಗಳಿಗೆ ಬೇಕಾದಂತಹ ಸಮರ್ಪಕ ಆಹಾರ, ಹುಲ್ಲು, ಮೇವು, ನೀರಿನ ಸರಬರಾಜು ಮಾಡುವುದರ ಜೊತೆಗೆ ಗೋಪಾಲಕರು ಮತ್ತು ನೌಕರರ ಕೊರತೆಯನ್ನು ನೀಗಿಸುವುದರ ಮೂಲಕ ಸರ್ಕಾರದ ಅನುದಾನವನ್ನು ಸೂಕ್ತ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲು ಜಿಲ್ಲಾಡಳಿತಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕಾಳಜಿ ವಹಿಸುವಂತೆ ಸೂಕ್ತ ಕ್ರಮ ಕೈಗೊಳ್ಳಲು ಕೋರುವುದರ ಜೊತೆಗೆ, ಹೆಚ್ಚಿನ ಬರಗಾಲವಿರುವ ಇಂತಹ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ತಳಿ ಕೇಂದ್ರಗಳನ್ನು ಮತ್ತು ಗೋ ಶಾಲೆಗಳನ್ನು ಸ್ಥಾಪಿಸಲು ಮತ್ತು ಖಾಸಗಿ ವಲಯದ ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸುವಂತಹ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಶೂನ್ಯವೇಳೆಯಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎ.ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ನಮ್ಮ ಗೌರವಾನ್ವಿತ ಸದಸ್ಯರು ಈಗ ಏನು ಹೇಳಿದ್ದಾರೆ, ಅಮೃತ್‌ಮಹಲ್ ತಳಿಯ ಸುಮಾರು ಆರು ರಾಸುಗಳು ಮೃತಪಟ್ಟಿವೆ. ಬಹುಶಃ ಅವರು ಹೇಳಿರುವಂಥದ್ದು ಮತ್ತು ಪತ್ರಿಕೆಯಲ್ಲಿ ಬಂದಿರುವಂಥದ್ದನ್ನು ನಾನು ಕೂಡ ಓದಿದ್ದೇನೆ. ಅದು ಮೇವಿನಿಂದ ಸಂಭವಿಸಿರುವಂತಹ ಸಾವು ಅಲ್ಲ. ಅಜ್ಜಂಪುರದಲ್ಲಿ ಸುಮಾರು 794 ಎಕರೆ ಇದೆ, ಅದರಲ್ಲಿ ನಾವು 275 ರಾಸುಗಳನ್ನು ಪಾಲನೆ ಮಾಡುತ್ತಿದ್ದೇವೆ. ಬಿರೂರು ಸಮೀಪದಲ್ಲಿ ಬಾಸೂರು ಕೇಂದ್ರದಲ್ಲಿರತಕ್ಕಂಥ 220 ರಾಸುಗಳಿಗೆ ಮೇವು ಇಲ್ಲ ಎಂದು ಹೇಳಿ, ಅದನ್ನು ಅಮೃತ್‌ಮಹಲ್‌ಗೆ shift ಮಾಡಿದ್ದರು. ಇದನ್ನು ಯಾವ ರೀತಿ ರಕ್ಷಣೆ ಮಾಡುವುದು ಎಂದು ಹೇಳಿದರೆ, ಈ ಅರಣ್ಯದ ತರಹ ಸ್ವಾಭಾವಿಕವಾಗಿ ಇಲ್ಲಿ ತಿರುಗಾಡಿಕೊಂಡು ಹುಲ್ಲನ್ನು ಮೇಯ್ದುಕೊಂಡು ಬರತಕ್ಕಂತಹ ಪದ್ಧತಿ ಇರತಕ್ಕಂಥದ್ದು. ಬಹುಶಃ ಇದರಲ್ಲಿ ಯಾವುದೇ ಸಾವು ಬಂದಿರುವಂತಹುದು ಕೇವಲ ಅದಕ್ಕೆ ವಯಸ್ಸಾದ ಮೇಲೆ, ಅಂದರೆ 18 ವರ್ಷ ಮೀರಿದ ಹಸುಗಳು ಮಾತ್ರ ಸತ್ತಿರುವಂಥದ್ದು. ಅದರಲ್ಲಿ ಎರಡು ಕರುಗಳು ಸತ್ತಿರುವುದು ನಮ್ಮ ಗಮನಕ್ಕೆ ಬಂದಿದೆ.

*(16)/7-2-2017/ಎಲ್‌ಎಂ/ಎಕೆ/12-50*

**ಶ್ರೀ ಎ.ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮುಂದು. ಇದರಲ್ಲಿ ಶ್ವಾಸಕೋಶದ ತೊಂದರೆಯಿಂದ ಸತ್ತಿರುವ ಬಗ್ಗೆ ನಮಗೆ ವರದಿ ಬಂದಿದೆ. ಇದನ್ನು ವೈದ್ಯರು ದೃಢೀಕರಿಸಿದ್ದಾರೆ. 205 ಮೆಟ್ರಿಕ್ ಟನ್ ಮೇವು ಉತ್ಪಾದಿಸಲು ಕ್ರಮವನ್ನು ತೆಗೆದುಕೊಂಡಿದ್ದೇವೆ. 10 ಟನ್ ಬೀಜಗಳನ್ನು ಬಿತ್ತಿ ಅದರಿಂದ ಹುಲ್ಲು ಉತ್ಪಾದನೆ ಮಾಡಿ ಅದನ್ನು ರಕ್ಷಿಸುವಂತಹ ಕೆಲಸವನ್ನು ಮಾಡಿದ್ದೇವೆ. ವಯಸ್ಸಾಗಿರುವುದರಿಂದ ಹಸು ಸತ್ತಿದೆ ಹೊರತು ಬೇರೆ ಕಾರಣಕ್ಕೆ ಅಲ್ಲ. ಸಂಬಂಧಪಟ್ಟವರಿಂದ ವರದಿಯನ್ನು ತರಿಸಿಕೊಂಡಿದ್ದೇನೆ. ಹಸುಗಳನ್ನು ಏಕೆ ಸರಿಯಾಗಿ ನೋಡಿಕೊಂಡಿರುವುದಿಲ್ಲ ಎಂದು ಡಾಕ್ಟರ್‌ಗಳನ್ನು ಅಮಾನತು ಮಾಡಿದ್ದೇವೆ. ಡಾಕ್ಟರ್‌ಗಳಿಂದ ಉತ್ತರ ಬಂದ ಮೇಲೆ ಏನು ವಿಷಯ ಎನ್ನುವುದನ್ನು ಹೇಳುತ್ತೇವೆ.

ಈಗಾಗಲೇ 37 ಮೆಟ್ರಿಕ್ ಟನ್ ಮೇವನ್ನು ಸಂಗ್ರಹ ಮಾಡಿದ ದಾಸ್ತಾನು ಇದೆ. ಇದು ಕೊಟ್ಟಿಗೆಯಲ್ಲಿ ಕಟ್ಟಿ ಮೇಯಿಸುವಂತಹ ಹಸು ಅಲ್ಲ. 4.5 ಮೆಟ್ರಿಕ್ ಟನ್ ಆಹಾರ ಲಭ್ಯವಿದೆ ಅದನ್ನು ಕೊಡುತ್ತಿದ್ದೇವೆ. ಇವತ್ತು ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಬರಗಾಲ ಇರುವುದನ್ನು ಎಲ್ಲರೂ ಕಂಡಿದ್ದೇವೆ. ಎಲ್ಲಿ ಮೇವು ಬೇಕು ಅಂತಹ ಸ್ಥಳಗಳಲ್ಲಿ ಅಲ್ಲಿಯ ಶಾಸಕರ ಸಹಾಯದಿಂದ ಮೇವು ಸಂಗ್ರಹ ಮಾಡುತ್ತಿದ್ದೇವೆ. 6ರೂ.ಗೆ ಮೇವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಖರೀದಿ ಮಾಡಿ 2 ರೂ.ಗೆ ರೈತರಿಗೆ ಕೊಡುವಂತಹ ಕ್ರಮವನ್ನು ನಮ್ಮ ಸರ್ಕಾರ ಈಗಾಗಲೇ ತೆಗೆದುಕೊಂಡಿದೆ. ಇಡೀ ರಾಜ್ಯದಲ್ಲಿ ಮೇವಿನ ಕೊರತೆ ಇಲ್ಲ. ಯಾರು ಬಂದು ಕೇಳಿದರೂ 2ರೂ.ಗೆ ಮೇವನ್ನು ಕೊಡಲು ನಾವು ತಯಾರಿದ್ದೇವೆ. ಬರ ಬಂದಿರುವ ಪ್ರತಿ ತಾಲ್ಲೂಕಿಗೆ, ಜಿಲ್ಲಾ ಕೇಂದ್ರಗಳಿಗೆ ಜಿಲ್ಲಾಧಿಕಾರಿಯವರ ಮುಖಾಂತರ 20 ಲಕ್ಷ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ.

**(ಈ) ನಾಗರಹೊಳೆ ಹುಲಿ ರಕ್ಷಿತಾರಣ್ಯ ಪ್ರದೇಶದಲ್ಲಿ ಆರು ಹುಲಿಗಳು ಸತ್ತಿರುವ ಬಗ್ಗೆ.**

~~~~~

**ಶ್ರೀ ಸಂದೇಶ ನಾಗರಾಜ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅತ್ಯಂತ ಪ್ರಸಿದ್ಧವಾದ ರಾಜ್ಯದ ನಾಗರಹೊಳೆ ಹುಲಿ ರಕ್ಷಿತಾರಣ್ಯದಲ್ಲಿ 2017ರ ಜನವರಿ ತಿಂಗಳಲ್ಲಿ 20 ದಿವಸದ ಅವಧಿಯಲ್ಲಿ ಆರು ಹುಲಿಗಳು ಸತ್ತಿವೆ. ಜನವರಿ 2ರಂದು ಡಿ.ಬಿ.ಕುಪ್ಪೆ ವಲಯದ ತೋಡು ಬಳಿ ನೀರಿನಲ್ಲಿ ಹೆಣ್ಣು ಹುಲಿ ಶವ ಪತ್ತೆಯಾಗಿತ್ತು. ಜನೆವರಿ 17ರಂದು ಅಂತರಸಂತೆ ವಲಯದಲ್ಲಿ ಹುಲಿಯನ್ನು ಸೆರೆ ಹಿಡಿಯುವಾಗ ಹೆಚ್ಚು ಪ್ರಮಾಣದ ಅರಿವಳಿಕೆಯನ್ನು ಅದಕ್ಕೆ ನೀಡಿದ ಕಾರಣ ಹುಲಿ ಮೃತಪಟ್ಟಿತ್ತು. ಜನವರಿ 20ರಂದು ಕೊಡಗು ಜಿಲ್ಲೆಯ ಪೋನ್ನಂಪೇಟೆ ಸಮೀಪ ಉರುಳಿಗೆ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದ ಎರಡು ವರ್ಷದ ಗಂಡು ಹುಲಿ ಮೈಸೂರಿನ ಕೂರ್ಗಹಳ್ಳಿ ಚಾಮುಂಡಿ ವನ್ಯ ಜೀವಿ ಪುನರ್ವಸತಿ ಕೇಂದ್ರದಲ್ಲಿ ಸರಿಯಾದ ಚಿಕಿತ್ಸೆ ಇಲ್ಲದೆ ಮೃತಪಟ್ಟಿತ್ತು. ಜನವರಿ 22ರಂದು ಗೋಣಿ ಕೊಪ್ಪಲಿನ ಸಮೀಪ ಹುಲಿ ಮೃತಪಟ್ಟಿತ್ತು ಅದನ್ನು ಎಲ್ಲಿಂದಲೋ ತಂದು ಎಳೆದು ಹಾಕಿ ಅದಕ್ಕೆ ಮುಳ್ಳು ಹಂದಿಯ ಮುಳ್ಳನ್ನು ಚುಚ್ಚಿ ಮುಳ್ಳುಹಂದಿಯಿಂದ ಸಾವನ್ನಪ್ಪಿದೆ ಎಂದು ಹೇಳಲಾಯಿತು. ಜನವರಿ 29ರಂದು ಶ್ರೀಮಂಗಲದ ಸಮೀಪ ಕುಮಟೂರಿನಲ್ಲಿ ಹೆಣ್ಣು ಹುಲಿ ಸಾವನ್ನಪ್ಪಿತ್ತು. ಈ ಹುಲಿಯೂ ಉರುಳಿಗೆ ಸಿಲುಕಿದೆ ಎಂದು ಹೇಳಲಾಯಿತು.

ಈ ಬಗ್ಗೆ ಅನೇಕ ಪತ್ರಿಕೆಗಳು ಸಂಪಾದಕೀಯವನ್ನೂ, ದೊಡ್ಡ ದೊಡ್ಡ ಲೇಖನಗಳನ್ನು ಬರೆದು ತಮ್ಮ ಕಳವಳ ವ್ಯಕ್ತಪಡಿಸಿ, ನಮ್ಮ ರಾಜ್ಯ ಅರಣ್ಯ ಅಧಿಕಾರಿಗಳ ಉದಾಸೀನತೆ ಮತ್ತು ನಿರ್ಲಕ್ಷ್ಯತೆಯನ್ನು ಟೀಕಿಸಿವೆ.

ನಾಗರಹೊಳೆ ಟೈಗರ್ ರಿಸರ್ವ್ ಇಡೀ ದೇಶದಲ್ಲಿ ಹೆಸರುವಾಸಿಯಾಗಿದೆ. ಆದರೆ ಈಚೆಗೆ ಸರಿಯಾದ ನಿರ್ವಹಣೆ ಇಲ್ಲದೆ, ಅರಣ್ಯ ಅಧಿಕಾರಿಗಳ ಉಪೇಕ್ಷೆಯ ಫಲವಾಗಿ ಹುಲಿಗಳ ಸಾವು ಜಾಸ್ತಿಯಾಗುತ್ತಿದೆ. 2016 ರಲ್ಲಿ ಇಡೀ ದೇಶದಲ್ಲಿ 98 ಹುಲಿಗಳು ಸಾವನ್ನಪ್ಪಿದ್ದರೆ, ಅದರಲ್ಲಿ 17 ಹುಲಿಗಳು ಕರ್ನಾಟಕದಲ್ಲಿ ಸಾವನ್ನಪ್ಪಿದ್ದವು. ನಾಗರಹೊಳೆ ಅರಣ್ಯದಲ್ಲಿ 10 ಮತ್ತು ಬಂಡೀಪುರದಲ್ಲಿ 4 ಹುಲಿಗಳು ಹಾಗೂ ಬೇರೆ ಕಡೆ 3 ಹುಲಿಗಳು ಸಾವನ್ನಪ್ಪಿದ್ದವು. ಆ ಸಂದರ್ಭದಲ್ಲಿ ದೇಶದ ವನ್ಯ ಜೀವಿ ತಜ್ಞರು ಕಳವಳ ವ್ಯಕ್ತಪಡಿಸಿದ್ದರು. ಕೇಂದ್ರದ ಅರಣ್ಯ ಸಚಿವಾಲಯವೂ ಕೂಡಾ ಈ ಬಗ್ಗೆ ಕಳವಳ ವ್ಯಕ್ತಪಡಿಸಿತ್ತು. ಇದರಿಂದ ನಮ್ಮ ಅರಣ್ಯ ಅಧಿಕಾರಿಗಳು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~

ಎಚ್ಚೆತ್ತುಕೊಂಡಿಲ್ಲ. ಇದೇ ಜನವರಿ 2017ರಲ್ಲಿ ದೇಶದಲ್ಲಿ 11 ಹುಲಿಗಳು ಸತ್ತಿವೆ. ಅದರ ಪೈಕಿ ರಾಜ್ಯದಲ್ಲಿಯೇ 6 ಹುಲಿಗಳು ಸಾವನ್ನಪ್ಪಿವೆ. ನಾಗರಹೊಳೆಯಲ್ಲಿ 5 ಹಾಗೂ ಬಂಡೀಪುರದಲ್ಲಿ 1 ಹುಲಿ ಸಾವನ್ನಪ್ಪಿವೆ. ಪ್ರತಿ ಬಾರಿ ಹುಲಿಗಳು ಸತ್ತಾಗಲೂ ವಯಸ್ಸಾಗಿ ಸತ್ತು ಹೋಯಿತು, ಪ್ರಾಣಿಗಳ ಕಾದಾಟದಲ್ಲಿ ಸತ್ತು ಹೋಯಿತು ಎಂದು ಹೇಳಿಕೊಂಡು ಬರಲಾಗುತ್ತಿದೆ. ಹಾಗಾದರೆ ಪ್ರತಿವರ್ಷ ಹುಲಿಗಳಿಗೆ ವಯಸ್ಸಾಗುತ್ತಿದೆಯೇ? ಎರಡು-ಮೂರು ವರ್ಷದ ಹುಲಿಗಳೆ ಸಾಯುತ್ತಿವೆ. ಬೇಟೆಗಾರರ ಕಾಟ ಜಾಸ್ತಿಯಾಗಿದೆ. ಅವರು ಉರುಳನ್ನು ಇಡುತ್ತಿದ್ದಾರೆ.

ಅಂತರ ರಾಜ್ಯ ಬೇಟೆಗಾರರ ಗ್ಯಾಂಗ್ ಸಕ್ರಿಯವಾಗಿರುವ ಸೂಚನೆಗಳು ಸಹ ದೊರೆತಿವೆ. ಹೆಚ್.ಡಿ.ಕೋಟೆಯ ಗುಂಡ್ರೆ ಅರಣ್ಯದಲ್ಲಿ ದೊರೆತ ಎರಡು ವರ್ಷದ ಹುಲಿಯ ಶವದ ದವಡೆ ಹಾಗೂ ಕಾಲಿನ ಭಾಗಗಳನ್ನು ಕೊಚ್ಚಿ ತೆಗೆದುಕೊಂಡು ಹೋಗಿದ್ದರು. ಇದು ಹುಲಿಯ ಹಲ್ಲು ಮತ್ತು ಉಗುರುಗಳನ್ನು ಮಾರಾಟ ಮಾಡುವ ಉದ್ದೇಶದಿಂದ ವ್ಯವಸ್ಥಿತವಾಗಿ ಮಾಡಿರುವ ಕೊಲೆ, ಕರುವಿನ ಮಾಂಸಕ್ಕೆ ವಿಷ ಹಾಕಿ ಕೊಲ್ಲಲಾಗಿದೆ. ಹುಲಿಗಳ ಜೊತೆಗೆ ಚಿರತೆಗಳೂ ಸಾವನ್ನಪ್ಪುತ್ತಿವೆ. ಚಿರತೆಗಳ ಬಗ್ಗೆ ಅರಣ್ಯಾಧಿಕಾರಿಗಳು ಸರಿಯಾಗಿ ಗಮನ ಹರಿಸುತ್ತಿಲ್ಲ. ಏನಿದ್ದರೂ, ಆನೆ ಮತ್ತು ಹುಲಿಗಳ ಬಗ್ಗೆ ಇವರ ಗಮನ.

ಅರಣ್ಯ ಇಲಾಖೆಯವರು ಬಿಗಿಯಾದ ಕಾವಲನ್ನು ಏರ್ಪಡಿಸಿಲ್ಲ. ವನ್ಯ ಪ್ರಾಣಿಗಳ ರಕ್ಷಣೆಗೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ವನ್ಯ ಪ್ರಾಣಿ ಸಂಘರ್ಷವನ್ನು ತಡೆಗಟ್ಟಲು ಯಾವುದೇ ವೈಜ್ಞಾನಿಕ ಕ್ರಮ ಜರುಗಿಸಿಲ್ಲ. ಈ ಬಗ್ಗೆ ವನ್ಯ ಜೀವಿ ತಜ್ಞರು ಅಧ್ಯಯನ ನಡೆಸಿ ವರದಿ ನೀಡಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಈ ಸಲ ಅರಣ್ಯದಲ್ಲಿ ವನ್ಯ ಪ್ರಾಣಿಗಳಿಗೆ ಆಹಾರ ನೀರಿನ ಅಭಾವ ಉಂಟಾಗಿದೆ. ಮುಂದಿನ ತಿಂಗಳುಗಳಲ್ಲಿ ಮಾನವ ಮತ್ತು ವನ್ಯ ಪ್ರಾಣಿ ಸಂಘರ್ಷ ಇನ್ನೂ ತಾರಕಕ್ಕೆ ಏರುತ್ತದೆ. ಅರಣ್ಯ ಅಧಿಕಾರಿಗಳು ಕಚೇರಿಗಳಲ್ಲಿ ಕುಳಿತು ಅಧಿಕಾರ ನಡೆಸುತ್ತಿದ್ದಾರೆ. ಅರಣ್ಯದ ಬಗ್ಗೆ; ವನ್ಯ ಜೀವಿಗಳ ಬಗ್ಗೆ ಅವರಿಗೆ ಉಪೇಕ್ಷೆ ಇದೆ. ಅವುಗಳ ರಕ್ಷಣೆಗೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ಕಚೇರಿಯಲ್ಲಿ ಸೇರಿಕೊಂಡಿರುವ ಎಲ್ಲ ಅಧಿಕಾರಿಗಳನ್ನು ಅರಣ್ಯದ ಕಾವಲಿಗೆ ಕಳುಹಿಸಿ.

ಹುಲಿ ಹಿಡಿಯುವ ಕಾರ್ಯಾಚರಣೆಯಲ್ಲಿ ಅರಣ್ಯ ಅಧಿಕಾರಿಗಳು ಗುಂಡು ಹಾರಿಸಿ ಒಬ್ಬನು ಮೃತಪಟ್ಟ ಘಟನೆಯೂ ನಡೆದಿದೆ. ಅಲ್ಲಿಗೆ ಅರಣ್ಯ ಅಧಿಕಾರಿಗಳು ಎಷ್ಟರಮಟ್ಟಿಗೆ ಪರಿಣಿತರು ಎಂಬುದನ್ನು ಊಹಿಸಬಹುದು. ತನಿಖೆ ಮಾಡಲು ಸಮಿತಿ ನೇಮಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಇವರಲ್ಲಿ ಪರಿಣಿತರು ಇಲ್ಲ. ನಾಲ್ಕು ಎನ್.ಜಿ.ಓ. ಸದಸ್ಯರು ಇದ್ದಾರೆ. ಒಬ್ಬರು ಎ.ಸಿ.ಸಿ.ಎಫ್. ಇದ್ದಾರೆ. ಸ್ಥಳೀಯ ಜನರನ್ನು, ಆದಿವಾಸಿಗಳನ್ನು ಇವರು ಲೆಕ್ಕಕ್ಕೇ ತೆಗೆದುಕೊಂಡಿಲ್ಲ. ವನ್ಯ ಜೀವಿ ವಿಚಾರದಲ್ಲಿ ಗಿರಿಜನರಿಗೆ ಅಪಾರ ಅನುಭವ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇರುತ್ತದೆ. ಆದರೆ ಇವರು ಗಿರಿಜನರನ್ನು ಲೆಕ್ಕಕ್ಕೇ ಇಟ್ಟಿಲ್ಲ. ಅವರನ್ನು ಕಾಡಿನಿಂದ ಓಡಿಸುವುದು ಮಾತ್ರ ಇವರಿಗೆ ಗೊತ್ತು. ಈಚೆಗೆ ಭದ್ರಾ ಅಭಯಾರಣ್ಯದಲ್ಲಿ ಬೇಟೆಗಾರರ ಹಾವಳಿ ಇರುವುದನ್ನು ಪತ್ರಿಕೆಗಳು ದೀರ್ಘವಾಗಿ ವರದಿ ಮಾಡಿವೆ. ಅರಣ್ಯ ಇಲಾಖೆಯವರೆ ಅದಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆ. ಅರಣ್ಯ ಇಲಾಖೆಯ ಬಂದೂಕವೇ ಕಳೆದು ಹೋಗಿದೆಯಂತೆ, ಅದನ್ನೇ ಬೇಟೆಗಾರರು ತೆಗೆದುಕೊಂಡು ವನ್ಯ ಜೀವಿಗಳ ಮೇಲೆ ಗುಂಡು ಹಾರಿಸಿದ್ದಾರಂತೆ. ಒಬ್ಬ ಬೇಟೆಗಾರರನ್ನೂ ಹಿಡಿದಿಲ್ಲ, ಅವರಿಗೆ ಶಿಕ್ಷೆ ಆಗಿಲ್ಲ. ನಾಗರಹೊಳೆ ಬಂಡಿಪುರ ಅಭಯಾರಣ್ಯಗಳಲ್ಲಿ ಮೊಳಿಯೂರು ವನ್ಯಜೀವಿ ವಲಯದ ನುಗು ಹಿನ್ನೀರಿನಲ್ಲಿ ಕಳೆದ ಡಿಸೆಂಬರ್ 22 ನೇ ತಾರೀಖು ಒಂದು ಆನೆ ಮೃತಪಟ್ಟಿದೆ. ಅದರ ಕಾಲಿನಲ್ಲಿ ಗುಂಡಿನಿಂದ ಹೊಡೆದು ರಂಧ್ರವಾಗಿ ಮೂಳೆ ಮುರಿದು, ಕೀವು ತುಂಬಿ ಮೃತಪಟ್ಟಿತ್ತು. ಪಿರಿಯಾಪಟ್ಟಣ ತಾಲ್ಲೂಕು ಮುತ್ತೂರು ಅರಣ್ಯದ ಮಲಗಹಾದಿ ಸಮೀಪ ಇದೇ ದಿನ ಒಂದು ಆನೆ ಕಾಲಿಗೆ ಗಾಯವಾಗಿ ನೀರಿನಲ್ಲಿ ನಿಂತು ಬಿಟ್ಟಿದೆ. ಅದರ ಕಾಲಿಗೂ ಗುಂಡೇಟು ತಗುಲಿರುವ ಶಂಕೆ ಇದೆ. ಅರಣ್ಯ ಅಧಿಕಾರಿಗಳು ಮತ್ತು ಪೊಲೀಸರು ಈ ಬೇಟೆಗಾರರ ಗ್ಯಾಂಗನ್ನು ಪತ್ತೆ ಹಚ್ಚಲು ಸೂಕ್ತ ಕ್ರಮ ಜರುಗಿಸಬೇಕು. ನಮ್ಮ ರಾಜ್ಯದಲ್ಲಿ ಇರುವುದೇ ಸುಮಾರು 200-300 ಹುಲಿಗಳು. ಅವು ಸತ್ತರೆ ಹುಲಿಗಳನ್ನು ಕೇವಲ ಫೋಟೋದಲ್ಲಿ, ಸಿನಿಮಾದಲ್ಲಿ ನೋಡಬೇಕಾಗುತ್ತದೆ. ಈ ಬಗ್ಗೆ ಅತ್ಯಂತ ಉನ್ನತ ಮಟ್ಟದ ತನಿಖೆಯನ್ನು ನಡೆಸಬೇಕು. ಅರಣ್ಯ ಅಧಿಕಾರಿಗಳಿಗೆ ಸರಿಯಾಗಿ ತಾಕೀತು ಮಾಡಬೇಕು. ತಪ್ಪಿತಸ್ಥ ಅರಣ್ಯಾಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

**ಡಾ:ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಅರಣ್ಯ ಸಚಿವರಿಂದ ಉತ್ತರವನ್ನು ಒದಗಿಸಿಕೊಡುತ್ತೇವೆ.

### (ಉ) ವಸತಿ ಇಲಾಖೆ ಬಡವರ ಮನೆಗಳ ಆಯ್ಕೆ ಪ್ರಕ್ರಿಯೆ ಗ್ರಾಮ ಸಭೆಯಿಂದ ಹಿಂಪಡೆದು ಪಂಚಾಯತ್ ಕಾಯ್ದೆಗೆ ವಿರುದ್ಧವಾಗಿರುವ ಕುರಿತು.

~~~~~~~~

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಗಳೆ, ಇಲ್ಲಿಯವರೆಗೆ ರಾಜ್ಯದಲ್ಲಿ ಬಡ ವಸತಿರಹಿತರ ಬಸವ ವಸತಿ ಯೋಜನೆಯ ಮನೆಗಳನ್ನು ಪಂಚಾಯತ್ ರಾಜ್ ಕಾಯಿದೆಗೆ ಅನುಗುಣವಾಗಿ, ಪಾರದರ್ಶಕವಾಗಿ ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಲಾಗುತ್ತಿತ್ತು. ಸರಕಾರ ವಸತಿ ಇಲಾಖೆಯ ಮೂಲಕ ನೀಡಿರುವ ಮನೆಗಳ ನಿಗದಿಯನ್ನು, ಜನಸಾಮಾನ್ಯರ ಸಮ್ಮುಖದಲ್ಲಿ ಕಡು ಬಡವರಿಗೆ ಹಂಚುವ ಕೆಲಸಗಳನ್ನು ಇಲ್ಲಿಯವರೆಗೆ ಗ್ರಾಮಪಂಚಾಯತ್‌ಗಳು ಮಾಡುತ್ತಿದ್ದವು. ಆದರೆ ವಸತಿ ಇಲಾಖೆ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ, ಬಡವರ ಮನೆಗಳ ಆಯ್ಕೆ ಪ್ರಕ್ರಿಯೆಯನ್ನು ಗ್ರಾಮ ಸಭೆಯಿಂದ ಹಿಂಪಡೆದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~~

ಜಾಗೃತ ಸಮಿತಿಗೆ ವಹಿಸಲಾಗಿದ್ದು, ಮಾತ್ರವಲ್ಲ ಅಗತ್ಯವೆನಿಸಿದರೆ ಜಿಲ್ಲಾಪಂಚಾಯತ್‌ನ ಸಿಇಓಗಳು ಗುರಿ ನಿಗದಿಪಡಿಸಿ ಆಯ್ಕೆ ಪ್ರಕ್ರಿಯೆ ನಡೆಸಲು ವಸತಿ ಇಲಾಖೆ ಅಧಿಕಾರ ನೀಡಿದೆ. ಸಂವಿಧಾನದ 73ನೇ ಕಲಂ ತಿದ್ದುಪಡಿಗೆ ಅನುಗುಣವಾಗಿ, ಕರ್ನಾಟಕ ರಾಜ್ಯ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 3-ಇ ಗ್ರಾಮ ಸಭೆ-(1)ರಲ್ಲಿ ಗ್ರಾಮಸಭೆ, ಗ್ರಾಮ ಪಂಚಾಯಿತಿಯಲ್ಲಿ ಅನುಷ್ಠಾನಗೊಳ್ಳುವ ಎಲ್ಲಾ ರೀತಿಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳ ಮತ್ತು ಕೇಂದ್ರ, ರಾಜ್ಯ ಮತ್ತು ಜಿಲ್ಲಾ ವಲಯದ ಎಲ್ಲಾ ಸರ್ಕಾರಿ ಸ್ಕೀಮ್‌ಗಳನ್ನು ಯೋಜಿಸಿ ಅನುಷ್ಠಾನಕ್ಕೆ ತರುವುದರಲ್ಲಿ, ಮೇಲ್ವಿಚಾರಣೆ ಮಾಡುವುದರಲ್ಲಿ ಮತ್ತು ಮೌಲ್ಯಮಾಪನ ಮಾಡುವುದರಲ್ಲಿ ಆಯಾಯ ಗ್ರಾಮದ ಎಲ್ಲಾ ನಾಗರೀಕರು ನೇರವಾಗಿ ಭಾಗಿಯಾಗಿರುವುದನ್ನು ನಿಶ್ಚಿತಪಡಿಸಿಕೊಳ್ಳಲು ಗ್ರಾಮಸಭೆ ಗ್ರಾಮಮಟ್ಟದಲ್ಲಿ ಸ್ಥಳೀಯ ಸ್ವಯಂ ಆಡಳಿತದ ಮೂಲ ಘಟಕವಾಗಿರತಕ್ಕದ್ದು ಎಂದು ಸ್ಪಷ್ಟಪಡಿಸಲಾಗಿದೆ. ಆದಾಗ್ಯೂ ವಸತಿ ಇಲಾಖೆ ರಾಜಕಾರಣದ ಒತ್ತಡಕ್ಕೆ ಮಣಿದು, ಸ್ವೇಚ್ಛಾಚಾರಿಯಾಗಿ ವರ್ತಿಸಿ ಕಾನೂನು-ಕಾಯಿದೆ, ನಿಯಮಗಳಿಗೆ ವಿರುದ್ಧವಾಗಿ ಇಲಾಖೆಯು ಅಕ್ರಮ ಸುತ್ತೋಲೆಯ ಮೂಲಕ ಅಧಿಕಾರ ಕೇಂದ್ರಿಕರಣ ವ್ಯವಸ್ಥೆಗೆ ತಿಲಾಂಜಲಿ ಇಟ್ಟಿದೆ. ವಸತಿ ಇಲಾಖೆ ಸಂವಿಧಾನದ 73ನೇ ತಿದ್ದುಪಡಿಯ ಮೂಲ ಆಶಯದ ಬುಡಕ್ಕೆ ಕೊಡಲಿ ಹಾಕಿದೆ. ವಸತಿ ಇಲಾಖೆಯಂತೆ ಇತರೆ ಇಲಾಖೆಗಳು ಇಂತಹ ವರ್ತನೆ ಮುಂದುವರೆಸಿದರೆ ರಾಜ್ಯದಲ್ಲಿ ಪಂಚಾಯತ್ ರಾಜ್ ಕಾಯಿದೆ ಇದ್ದು ಸತ್ತಂತೆ ಆಗುತ್ತದೆ. ಈ ಬಗ್ಗೆ ಪಂಚಾಯತ್ ರಾಜ್ ಇಲಾಖೆ, ವಸತಿ ಇಲಾಖೆಗೆ ಪತ್ರವನ್ನು ಬರೆದು, ಸದರಿ ಸುತ್ತೋಲೆ ಕಾಯಿದೆಗೆ ವಿರುದ್ಧವಾಗಿದೆ ಎಂದು ಎಚ್ಚರಿಕೆ ನೀಡಿದ್ದರೂ, ವಸತಿ ಇಲಾಖೆ ತನ್ನ ಉಡಾಫೆತನ ಮುಂದುವರೆಸಿ ಸಂವಿಧಾನಕ್ಕೆ ಸವಾಲೆಸೆದಿದೆ. ಅತ್ಯಂತ ನೋವಿನ ಸಂಗತಿ ಎಂದರೆ, ಕಳೆದ ಬೆಳಗಾವಿ ಅಧಿವೇಶನದಲ್ಲಿ ಸರಕಾರ ಭರವಸೆ ಕೊಟ್ಟು ಕಾಯಿದೆಯನ್ನು ಎತ್ತಿಹಿಡಿಯುವುದಾಗಿ ಹೇಳಿತ್ತು. ಕೊಟ್ಟಿರುವ ಭರವಸೆ ಈವರೆಗೂ ಈಡೇರಿಸಲಿಲ್ಲ. ವಸತಿ ಇಲಾಖೆಯ ಅಕ್ರಮ ಸುತ್ತೋಲೆ ಕುರಿತು ಶೂನ್ಯವೇಳೆಯ ಪ್ರಸ್ತಾವನೆಯ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಗೌರವಾನ್ವಿತ ಮಂತ್ರಿಗಳಾದ ಶ್ರೀ ರಮೇಶ ಕುಮಾರ್‌ರವರು ಕಾಯಿದೆಗೆ ವಿರುದ್ಧವಾಗಿ ಬಂದಿರುವ ಯಾವುದೇ ಇಲಾಖೆಯ ಸುತ್ತೋಲೆ ಶಾಸನಬದ್ಧವಲ್ಲ ಎಂದು ಸಮಾಜಾಯಿಷಿ ನೀಡಿದ್ದರು. ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿನ ಅಧಿಕಾರಿಗಳಿಂದ ಹಿಡಿದು ಪಂಚಾಯತ್‌ಗಳ ಪಿಡಿಓ ಗಳವರೆಗೆ ಯಾವುದೇ ಅಧಿಕಾರಿ ಸರ್ಕಾರಿ ಸುತ್ತೋಲೆ ಕಾಯಿದೆಗೆ ವಿರುದ್ಧವಾಗಿದ್ದರೂ, ಸುತ್ತೋಲೆ ತಿರಸ್ಕರಿಸುವ ಧೈರ್ಯ ತೋರುತ್ತಿಲ್ಲ. ಇದರಿಂದಾಗಿ ಗ್ರಾಮಸಭೆಯ ಅಧಿಕಾರ ಮೊಟಕುಗೊಂಡಿದೆ. ಸರ್ಕಾರದ ಈ ಸುತ್ತೋಲೆ ಸಂವಿಧಾನಕ್ಕೆ ಸವಾಲಾಗಿದೆ. ಗ್ರಾಮ ಸರ್ಕಾರಗಳು ಆತಂಕದಲ್ಲಿವೆ. ಒಂದು ಲಕ್ಷದಷ್ಟು ಪಂಚಾಯತ್ ರಾಜ್ ಜನಪ್ರತಿನಿಧಿಗಳು ಪಂಚಾಯತ್‌ಗಳ ಹಕ್ಕು ಹರಣವಾಗುತ್ತಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಸದನದಲ್ಲಿ ತಮ್ಮ ಮೂಲಕ ನಾವೆಲ್ಲ ಶಾಸಕರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗ್ರಹಿಸುವುದೇನೆಂದರೆ, ತಕ್ಷಣ ಸರಕಾರ ಈ ಸುತ್ತೋಲೆ ವಾಪಸ್ ಪಡೆದು, ಅಧಿಕಾರ ವಿಕೇಂದ್ರೀಕರಣ ಹಾಗೂ ಪಂಚಾಯತ್ ರಾಜ್ ಕಾಯಿದೆಯ ಆಶಯಗಳನ್ನು ಎತ್ತಿಹಿಡಿಯಬೇಕೆಂದು ಈ ಮೂಲಕ ಆಗ್ರಹಿಸುತ್ತೇವೆ.

**ಡಾ:ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ವಸತಿ ಸಚಿವರಿಂದ ಉತ್ತರವನ್ನು ಒದಗಿಸಿ ಕೊಡುತ್ತೇವೆ. ಈ ಶೂನ್ಯವೇಳೆ ಪ್ರಸ್ತಾವಕ್ಕೆ ಬಹಳ ಜನ ಶಾಸಕರು ಸಹಿ ಹಾಕಿ ಕೊಟ್ಟಿದ್ದಾರೆ. ಆದ್ದರಿಂದ ಇದು ಗಂಭೀರವಾದ ವಿಷಯವಾಗಿದೆ.

**(17) 07.02.2017 01-00 LL-GR**

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಹೆಚ್.ಕೆ. ಪಾಟೀಲ್‌ರವರು ಈ ಸದನದಲ್ಲಿ ಹಾಜರಿದ್ದಾರೆ. ಅವರ ದೃಷ್ಟಿ ಎಲ್ಲೋ ಇದ್ದರೂ ಕೂಡ, ಕಿವಿ ಮಾತ್ರ ಸದನದಲ್ಲಿಯೇ ಇದೆ. ಇದು ಪಂಚಾಯತ್ ರಾಜ್ ವ್ಯವಸ್ಥೆಗೆ ಒಂದು ರೀತಿಯ ಕೊಡಲಿ ಪೆಟ್ಟು. ಈ ರೀತಿ ಮಾರಣ ಹೋಮ ಮಾಡಲು ಹೊರಟಿರುವುದು ಸರಿಯಲ್ಲ. ಯಾವುದೇ ಕಾರಣಕ್ಕೂ ಆ ಇಲಾಖೆಯವರನ್ನು ಕರೆದು ಕೇಳುತ್ತೇವೆ, ಮಾಡುತ್ತೇವೆ, ಉತ್ತರ ನೀಡುತ್ತೇವೆ, ಈ ರೀತಿಯ ಉತ್ತರಗಳು ನಮಗೆ ಬೇಕಾಗಿಲ್ಲ. ಮಾನ್ಯ ಸಭಾನಾಯಕರಿಗೆ ಅಧಿಕಾರ ಇದೆ. ಮಾನ್ಯ ಪಂಚಾಯತ್ ರಾಜ್ ಸಚಿವರೂ ಕೂಡ ಪಕ್ಕದಲ್ಲಿಯೇ ಕುಳಿತಿದ್ದಾರೆ. ಈ ಸುತ್ತೋಲೆಯನ್ನು ತಕ್ಷಣವೇ ವಾಪಸ್ಸು ತೆಗೆದುಕೊಳ್ಳಬೇಕು. ಅದರ ಹೊರತಾಗಿ ಸರ್ಕಾರದಿಂದ ಏನು ಮಾಹಿತಿ ಬರುತ್ತದೆಂದು ಕಾಯುತ್ತಾ ಕೂರುವುದಕ್ಕೆ ನಾವುಗಳು ತಯಾರಿಲ್ಲ. ಈ ವಿಚಾರವನ್ನು ಬೆಳಗಾವಿ ಅಧಿವೇಶನದಲ್ಲಿಯೇ ನಾವುಗಳು ಪ್ರಸ್ತಾಪ ಮಾಡಿದ್ದೇವೆ. ಆ ಸಂದರ್ಭದಲ್ಲಿ ಶ್ರೀ ಕೆ.ಆರ್.ರಮೇಶ್ ಕುಮಾರ್‌ರವರು ಹೇಳಿರುವಂತಹ ವಿಚಾರವನ್ನು ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈ ರೀತಿ ಒಂದು ಇಲಾಖೆಗೂ ಮತ್ತೊಂದು ಇಲಾಖೆಗೂ ತಾಳ-ಮೇಳ ಇಲ್ಲವೆನ್ನುವುದಾದರೆ ವಿಧಾನ ಪರಿಷತ್ತಿನ ಸದನದಲ್ಲಿ ನಾವುಗಳು ಏತಕ್ಕೆ ಭಾಗವಹಿಸಬೇಕು? ಗ್ರಾಮಸಭೆ ಕಾನೂನುಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಎತ್ತಿ ಹಿಡಿಯುತ್ತೇವೆಂದು ಕೇವಲ ತಮ್ಮ ಭಾಷಣದಲ್ಲಿ ಹೇಳುತ್ತಾರೆಯೇ? ಅದಕ್ಕಾಗಿಯೇ ನಾನು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿಸುವುದೇನೆಂದರೆ, ಸರ್ಕಾರದವರು ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆಂದು ಹೇಳಬೇಕು. ಅದನ್ನು ಹೊರತುಪಡಿಸಿ, ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುವವರೆಗೂ ನಾವುಗಳು ಕಾಯುತ್ತಾ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ವಿಚಾರದ ಬಗ್ಗೆ ನಾವುಗಳು ಕಳೆದ ಬೆಳಗಾವಿ ವಿಧಾನಮಂಡಲದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದು, ಅದಕ್ಕೆ ಸರ್ಕಾರದಿಂದ ಭರವಸೆ ಸಿಕ್ಕಿದೆಯೇ ಹೊರೆತು ಇದುವರೆವಿಗೂ ಸದರಿ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಂಡಿರುವುದಿಲ್ಲ. ಆದುದರಿಂದ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿರುವುದೇನೆಂದರೆ, ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಂಡಿಲ್ಲವೆಂದರೆ, ಸದನ ನಡೆಯುವುದಕ್ಕೆ ನಾವುಗಳು ಅವಕಾಶ ನೀಡುವುದಿಲ್ಲ. ಮಾನ್ಯ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರವರೇ ಈ ಬಗ್ಗೆ ಉತ್ತರ ನೀಡಬೇಕು.

**ಸಭಾಪತಿಯವರು:–** ಮಾನ್ಯ ಸಚಿವರೇ ಈ ಸುತ್ತೋಲೆ ಬಗ್ಗೆ ಉತ್ತರ ನೀಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಎಂಬ ಪ್ರಶ್ನೆ ಬರುವುದಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆಯ ಕಾಯಿದೆಗೆ ಒಂದು ಮಾರಣ ಹೋಮ. ಇದಕ್ಕೆ ತಿಲಾಂಜಲಿ ಇಡುವುದಕ್ಕೆ ಸರ್ಕಾರ ಹೊರಟಿದೆ. ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಸಂಬಂಧ ಇಲ್ಲ. ಗ್ರಾಮ ಸಭೆಗಳಿಗೆ ಅಧಿಕಾರ ಕೊಡುತ್ತೇವೆಂದು ಒಂದು ಕಡೆ ಹೇಳಿಕೆ ನೀಡಿ ಮತ್ತೊಂದು ಕಡೆ ಪಂಚಾಯತ್ ರಾಜ್ ವ್ಯವಸ್ಥೆಗೆ ಬಹಳ ಬೆಲೆ ಕೊಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಅಧಿಕಾರಿಗಳ ಕೈಯಲ್ಲಿ ಆಡಳಿತ ನಡೆಸುವುದಕ್ಕೆ ಕೊಟ್ಟಿದ್ದಾರೆ. ಆದುದರಿಂದ, ನಾನು ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ಸರ್ಕಾರದವರು ಸದರಿ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲವಾದರೆ, ಸದನ ನಡೆಯುವುದಕ್ಕೆ ನಾವುಗಳು ಅವಕಾಶ ನೀಡುವುದಿಲ್ಲ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅಧಿಕಾರ ವಿಕೇಂದ್ರಿಕರಣ ಇಲ್ಲವೆಂದು ಸರ್ಕಾರ ಹೇಳಿಕೆ ನೀಡಲಿ.

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಕೆ.ಸಿ. ಕೊಂಡಯ್ಯನವರು ಸುತ್ತೋಲೆ ಬಗ್ಗೆ ಧ್ವನಿಗೂಡಿಸಲು ಬಯಸಿದರೆ ಹೆಚ್ಚು ಸಮಯಾವಕಾಶ ತೆಗೆದುಕೊಳ್ಳದೇ ಹೇಳಬಹುದು.

**ಶ್ರೀ ಕೆ.ಸಿ. ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಳೆದ ಬೆಳಗಾವಿ ಅಧಿವೇಶನದಲ್ಲಿ ಸುತ್ತೋಲೆ ಬಗ್ಗೆ ಒಂದು ನೋಟಿಸ್ ಕೊಟ್ಟು ವಿಷಯವನ್ನು ರೈಸ್ ಮಾಡಿ ವಸತಿ ಇಲಾಖೆಯ ಆಯುಕ್ತರು ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆ ಬಗ್ಗೆ ಹೊರಡಿಸಿರುವ ಸುತ್ತೋಲೆಯನ್ನು ಓದಿ, ಅದರಲ್ಲಿ ಈ ಅಧಿಕಾರವನ್ನು ಶಾಸಕರ ಜಾಗೃತಿ ಸಮಿತಿಗೆ ವಹಿಸಿದ್ದೇವೆಂದು ಹೊರಡಿಸಿರುವ ಸುತ್ತೋಲೆಯನ್ನು ಸದನದ ಗಮನಕ್ಕೆ ತಂದಿದ್ದೆವು. ಆದರೆ, ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾನೂನಿನ ಪ್ರಕಾರ ಫಲಾನುಭವಿಗಳು ಗ್ರಾಮ ಸಭೆಗಳಲ್ಲಿಯೇ ಆಯ್ಕೆಯಾಗಬೇಕು. ಆ ಸಂದರ್ಭದಲ್ಲಿ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಸದರಿ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಭರವಸೆ ನೀಡಿದ್ದು, ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾಪಸ್ಸು ತೆಗೆದುಕೊಂಡಿರುವುದಿಲ್ಲ. ಪುನಃ ಡಿಸೆಂಬರ್ ತಿಂಗಳಿನಲ್ಲಿ ಸದರಿ ಸುತ್ತೋಲೆಗೆ ಹಿಂದೆ ಇದ್ದಂತಹ ಕೆಲವೊಂದು ನಿಯಮಗಳನ್ನು ಉಲ್ಲೇಖಿಸಿ ಮತ್ತೊಂದು ಸುತ್ತೋಲೆ ಹೊರಡಿಸಲಾಗಿದೆ. ಈ ವಿಚಾರದಲ್ಲಿ ನಾವುಗಳು ಇನ್ನು ಹೆಚ್ಚಿನ ಒತ್ತಾಯ ಮಾಡುತ್ತಿರುವುದೇನೆಂದರೆ, ಗ್ರಾಮ ಸಭೆಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು. ಎಲ್ಲಾ ಇಲಾಖೆಯ ಫಲಾನುಭವಿಗಳನ್ನು ಗ್ರಾಮ ಸಭೆಗಳೇ ಆಯ್ಕೆ ಮಾಡಬೇಕೆಂದು ನಿಯಮ ಇರುವಾಗ, ಮನೆಗಳನ್ನು ನೀಡುವುದಕ್ಕೆ ಪ್ರತ್ಯೇಕವಾಗಿ ಎಂ.ಎಲ್.ಎ. ರವರಿಗೆ ಹೆಚ್ಚಿನ ಅಧಿಕಾರ ಕೊಡುವುದರಲ್ಲಿ ಅರ್ಥವಿಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಅತ್ಯಂತ ಮಹತ್ವವಾದ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ, ಈ ವಿಚಾರದ ಬಗ್ಗೆ ನಮಗಾಗಲಿ ಅಥವಾ ಅವರಿಗಾಗಲಿ ಕೂಡಲೇ ವಿವರಣೆ ಕೊಡುವುದಾಗಲಿ, ತೆಗೆದುಕೊಂಡ ಕ್ರಮಗಳ ಬಗ್ಗೆ ಹೇಳುವುದಾಗಲಿ ಸ್ವಲ್ಪಮಟ್ಟಿಗೆ ಅನಾನುಕೂಲ ಮಾಡಬಹುದು. ಆದರೆ, ವಿಷಯದ ಮಹತ್ವವನ್ನು ಗಮನಿಸಿದಾಗ, ಈ ರೀತಿಯ ಮಹತ್ವದ ನಿಯಮಾವಳಿಗಳನ್ನು ಮಾಡಿದಾಗ ಕಾನೂನಿಗೆ, ಸಂವಿಧಾನಕ್ಕೆ ವ್ಯತಿರಿಕ್ತವಾಗಿ ಸುತ್ತೋಲೆಯನ್ನು ಹೊರಡಿಸಿದಾಗ ನಾವುಗಳು ಸ್ಪಂದಿಸಲೇಬೇಕಾಗುತ್ತದೆ. ಸಂವಿಧಾನದ ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು ನಾವುಗಳು ಕರ್ನಾಟಕ ಗ್ರಾಮ ಸ್ವರಾಜ್ಯ ಹಾಗೂ ಪಂಚಾಯತ್ ರಾಜ್ ಕಾನೂನನ್ನು ಮಾಡಿದ್ದೇವೆ ಮತ್ತು ಅವುಗಳಿಗೆ ವಸತಿ ಇಲಾಖೆಯವರು ಹೊರಡಿಸಿರುವಂತಹ ಸುತ್ತೋಲೆ ಬಗ್ಗೆ ಏನು ವಿಷಯ ಪ್ರಸ್ತಾಪ ಆಗಿದೆ, ಅದು ತಾತ್ವಿಕವಾಗಿ ಸಂಪೂರ್ಣ ಭಿನ್ನವಾಗಿರತಕ್ಕಂತಹದ್ದು. ಆ ಹಿನ್ನೆಲೆಯಲ್ಲಿ ನಾವೆಲ್ಲರೂ ಸಂವಿಧಾನವನ್ನು ಹಾಗೂ ಕಾನೂನನ್ನು ಎತ್ತಿ ಹಿಡಿಯಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿದೆ. ಒಂದು ವೇಳೆ ಬದಲಾವಣೆ ಆಗಬೇಕಾದರೆ ಅವರಿಂದಲೇ ನಾವುಗಳು ಕಾನೂನು ತಿದ್ದುಪಡಿಯನ್ನು ತೆಗೆದುಕೊಂಡು ಬರಬೇಕಾಗುತ್ತದೆ. ಸಂವಿಧಾನದ ತಿದ್ದುಪಡಿಯನ್ನು ಮಾಡಿಸಬೇಕಾಗುತ್ತದೆ. In the absence of that, nobody can violate or circumvent the law which is in force. ಆ ಹಿನ್ನೆಲೆಯೊಳಗೆ ನಾನು ವಸತಿ ಸಚಿವರ ಜೊತೆಗೆ ಇಂದೇ ಸಭೆ ನಡೆಸುತ್ತೇನೆ. ಅವಶ್ಯವೆನಿಸಿದರೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಇಬ್ಬರು ಸಚಿವರು ಚರ್ಚೆ ಮಾಡಿ ಒಂದು ಹೇಳಿಕೆಯನ್ನು ನಾನಾಗಲಿ ಅಥವಾ ವಸತಿ ಸಚಿವರಾಗಲಿ ಈ ಸದನದಲ್ಲಿ ಮಾಡುತ್ತೇವೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ಹೊಸದಾಗಿ ಸದನದಲ್ಲಿ ತಂದಿರುವುದಿಲ್ಲ. ಕಳೆದ ಬಾರಿ ಬೆಳಗಾವಿಯಲ್ಲಿ ನಡೆದ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಮಾನ್ಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಂಡಯ್ಯನವರು ತಂದಿದ್ದಾರೆ. ಆ ಸಂದರ್ಭದಲ್ಲಿ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ನಮಗೆ ಭರವಸೆ ಸಿಕ್ಕಿದೆ. ಈ ಬಗ್ಗೆ ಮತ್ತೊಂದು ಬಾರಿ ಮುಖ್ಯಮಂತ್ರಿಗಳ ಜೊತೆ ಅಥವಾ ಮತ್ತೊಬ್ಬರ ಜೊತೆ ಸಭೆ ನಡೆಸುತ್ತಾರೋ ಅದು ನಮಗೆ ಸಂಬಂಧ ಇಲ್ಲ. ಆ ಸಂದರ್ಭದಲ್ಲಿ ನಮಗೆ ಕೊಟ್ಟಂತಹ ಭರವಸೆಯಂತೆ ಕ್ರಮ ತೆಗೆದುಕೊಳ್ಳಬೇಕು. ಇದುವರೆವಿಗೂ ಮಾನ್ಯ ಸಚಿವರು ಭಾಷಣವನ್ನು ಚೆನ್ನಾಗಿ ಮಾಡಿದ್ದಾರೆ. ಕೊನೆಯಲ್ಲಿ ಸದರಿ ಸುತ್ತೋಲೆಯನ್ನು ರದ್ದು ಮಾಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಸಚಿವರು, ಮಾನ್ಯ ಮುಖ್ಯಮಂತ್ರಿಗಳ ಜೊತೆ ಮತ್ತು ವಸತಿ ಸಚಿವರ ಜೊತೆ ಸಭೆ ನಡೆಸುತ್ತೇನೆಂದು ಪ್ರತಿಕ್ರಿಯೆ ನೀಡಿದ್ದಾರೆ. ಸಚಿವರ ಸಭೆಗೆ ನಾವುಗಳು ಬೆಲೆ ಕೊಡುವುದಿಲ್ಲ. ಸಂವಿಧಾನ ಬದ್ಧವಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಾನೂನುಬದ್ಧವಾಗಿ ಹೊರಡಿಸಿರುವಂತಹ ಸುತ್ತೋಲೆಗೆ ನಾವುಗಳು ಬದ್ಧರಾಗಿದ್ದೇವೆಂದು ಮತ್ತು ಹಾಲಿ ಹೊರಡಿಸಿರುವ ಸುತ್ತೋಲೆಯನ್ನು ರದ್ದು ಮಾಡುತ್ತೇವೆಂದು ಹೇಳಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸಭೆ ನಡೆಸುವುದು ನನಗೆ ಗೊತ್ತಿದೆ. ಆದುದರಿಂದ, ಈ ಬಗ್ಗೆ ಸರ್ಕಾರದವರು ಉತ್ತರ ನೀಡಲಿ.

(ಗೊಂದಲ)

**ಸಭಾಪತಿಯವರು:-** ಸರ್ಕಾರದ ಪರವಾಗಿ ಮಾನ್ಯ ಸಚಿವರೇ ಉತ್ತರ ನೀಡುತ್ತಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಸರ್ಕಾರದವರು ಕಳೆದ ಅಧಿವೇಶನದಲ್ಲಿ ಏನು ಹೇಳಿಕೆಯನ್ನು ನೀಡಿದ್ದರು, ಆ ಹೇಳಿಕೆ ಜಾರಿಗೆ ಬಂದಿರುವುದಿಲ್ಲ. ಇನ್ನು ನಾಲ್ಕೈದು ದಿನಗಳಲ್ಲಿ ಈ ಸದನವು ಕೂಡ ಮುಕ್ತಾಯವಾಗುತ್ತದೆ. ಆದರೆ, ಕಾನೂನು ಮಾತ್ರ ಜಾರಿಗೆ ಬರುವುದೇ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಈಗ ಜಾರಿಗೆ ತಂದಿರುವ ಕಾಯಿದೆ ಕಾನೂನಿಗೆ ವಿರುದ್ಧವಾಗಿದೆಯೆಂದು ಸರ್ಕಾರದವರೇ ಹೇಳಿಕೆ ನೀಡಿದ್ದಾರೆ. ಆದುದರಿಂದ, ತಕ್ಷಣದಿಂದಲೇ ಸದರಿ ಸುತ್ತೋಲೆಯನ್ನು ವಾಪಸ್ಸು ಪಡೆಯುವುದಕ್ಕೆ ಏನು ತೊಂದರೆಯಿದೆ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ವಸತಿ ಇಲಾಖೆಯ ಗೌರವಾನ್ವಿತ ಮಂತ್ರಿಗಳು ಸದರಿ ಸುತ್ತೋಲೆ ಬಗ್ಗೆ ತಮ್ಮ ಇಲಾಖೆಯಿಂದ ಪ್ರತಿಕ್ರಿಯೆ ನೀಡಿಸಿ, ಇದು ಕಾನೂನಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರುದ್ಧವಾಗಿದೆಯೆಂದು ಹೇಳಿದ್ದಾರೆ. ಈ ರೀತಿ ಹೇಳಿಕೆ ನೀಡಿದಾಗಲೂ ಸಹ ಸದರಿ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲವೆಂದರೆ ಸರ್ಕಾರದ ಅಸಹಾಯಕತೆ ಏನು?

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಬೆಳಗಾವಿ ಅಧಿವೇಶನ ನಡೆದು ಸುಮಾರು ತಿಂಗಳು ಕಳೆದಿವೆ.

**ಸಭಾಪತಿಯವರು:–** ತಾವುಗಳು ಕೇಳಿರುವಂತಹ ಪ್ರಶ್ನೆಗೆ ಸರ್ಕಾರದ ಉತ್ತರ ಬೇಡವೇ? ತಾವುಗಳೇ ಎಲ್ಲಾ ವಿಚಾರವನ್ನು ಹೇಳುತ್ತೀರಿಯೇ? ಮಾನ್ಯ ಸಚಿವರು ಸರ್ಕಾರದ ಪರವಾಗಿ ಉತ್ತರ ನೀಡುತ್ತಾರೆ. ಅವರು ಏನು ಹೇಳುತ್ತಾರೆ ಕೇಳೋಣ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರುಗಳು ಈ ರೀತಿ ಮಾತನಾಡಿದರೆ ಹೇಗಾಗುತ್ತದೆ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಗೆ ಮಾತನಾಡಬೇಕೆಂದು ಹೇಳಲಿ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಾವು ನಡೆಸುವಂತಹ ಸಭೆಗೆ ಮಹತ್ವ ಕೊಡುವುದಿಲ್ಲವೆಂದು ಹೇಳಿದ್ದಾರೆ. ಎರಡು ಇಲಾಖೆಗಳು, ಇಬ್ಬರು ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ಸರ್ಕಾರದ ನಿಲುವನ್ನು ಹೇಳುತ್ತೇವೆಂದು ಹೇಳಿದಾಗ, ಅದಕ್ಕೆ ಮಹತ್ವ ನೀಡುವುದಿಲ್ಲವೆಂದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಏತಕ್ಕಾಗಿ ಮಹತ್ವ ನೀಡುತ್ತಿಲ್ಲವೆಂದರೆ, ಶ್ರೀ ಕೆ.ಆರ್. ರಮೇಶ್‌ಕುಮಾರ್ ಕಳೆದ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಮಾನ್ಯ ಸಚಿವರಿಗಿಂತಲೂ ಬಹಳ ಚೆನ್ನಾಗಿ ಉಪನ್ಯಾಸ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅವರಿಗಿಂತಲೂ ಚೆನ್ನಾಗಿ ಯಾವುದೇ ಮಂತ್ರಿಗಳು ಉಪನ್ಯಾಸ ನೀಡುವುದಿಲ್ಲ. ಅವರನ್ನು ಬಿಟ್ಟರೆ ಮಾನ್ಯ ಸಚಿವರು ಚೆನ್ನಾಗಿ ಉಪನ್ಯಾಸ ನೀಡುತ್ತಾರೆ. ರಾಜ್ಯದಲ್ಲಿ ಪಂಚಾಯತ್ ರಾಜ್ ವಿಷಯದ ಬಗ್ಗೆ ಉಪನ್ಯಾಸ ಏರ್ಪಡಿಸಿದರೆ ಎಂತಹ ನೊಬೆಲ್ ಪ್ರಶಸ್ತಿಗಳು ಸಹ ಇವರಿಗೆ ಸಿಗುತ್ತವೆ. ಪುನಃ ಸರ್ಕಾರದವರು ನಮ್ಮನ್ನು ಗುಂಡಿಗೆ ಬೀಳಿಸುತ್ತಿದ್ದಾರೆಯೇ? ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸುತ್ತೇವೆ,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಸತಿ ಸಚಿವರ ಜೊತೆ ಸಭೆ ನಡೆಸುತ್ತೇವೆ, ಇಲ್ಲ. ನಾವುಗಳು ಯಾವುದೇ ಸಭೆಗೆ ಕಾಯುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ಉತ್ತರದ ಬಗ್ಗೆ ವಿರೋಧ ಪಕ್ಷದವರಿಗೆ ಆಸಕ್ತಿ ಇಲ್ಲವೆಂದು ತೋರುತ್ತಿದೆ. ಏಕೆಂದರೆ, ಸರ್ಕಾರದವರು ಉತ್ತರ ನೀಡುವುದಕ್ಕೆ ಮೊದಲೇ ಕೋಟ ಶ್ರೀನಿವಾಸ ಪೂಜಾರಿಯವರು ಸದನದ ಬಾವಿಗೆ ಬರುವ ಉದ್ದೇಶವಿದ್ದರೆ, ಅವರುಗಳ ಉದ್ದೇಶವೇನು?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸದಸ್ಯರುಗಳೇ, ಮಾನ್ಯ ಸಚಿವರು ಉತ್ತರ ನೀಡುವುದಕ್ಕೆ ಮುಂಚೆ ಸದನದ ಬಾವಿಗೆ ಹೋಗಬೇಡಿ. ಸಚಿವರು ಉತ್ತರ ನೀಡಿದ ನಂತರವೇ ಸದನದ ಬಾವಿಗೆ ಹೋಗಿ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ಉತ್ತರಕ್ಕಾಗಿ ಸಮಯ ನಿಗದಿ ಮಾಡಿ. ಸಂಜೆ 5 ಗಂಟೆಗೆ ಸದನದಲ್ಲಿ ನಾನು ಮತ್ತು ವಸತಿ ಸಚಿವರು ಕೂಡಿಯೇ ಉತ್ತರ ನೀಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅದು ಸಾಧ್ಯವಿಲ್ಲ. ಇದುವರೆವಿಗೂ ಮಾನ್ಯ ಸಚಿವರು ಹೇಳಿರುವಂತಹದ್ದು ಏನು? ಈ ಕಾಯಿದೆ ಕಾನೂನಿಗೆ ವಿರುದ್ಧ ಎನ್ನುವುದು ರೆಕಾರ್ಡ್ ತೆಗೆದು ನೋಡಿದರೆ ಗೊತ್ತಾಗುತ್ತದೆ. ಕಾನೂನಿಗೆ ವಿರುದ್ಧ ಎಂದು ಹೇಳಿದಾಗಲೂ ಕೂಡ ವಿರೋಧ ಪಕ್ಷದವರು ಕೇಳಿಕೊಂಡು ಸುಮ್ಮನೆ ಕೂರಬೇಕೇ? ಸರ್ಕಾರದವರಿಗೆ ಈ ರೀತಿ ಗ್ರಾಮ ಸಭೆಗಳ ಮತ್ತು ಪಂಚಾಯತ್ ರಾಜ್ ಬಗ್ಗೆ ಗೌರವ ಇಲ್ಲವೆನ್ನುವುದಾದರೆ, ನಾವು ಯಾವ ಕಾರಣಕ್ಕೂ ಒಪ್ಪುವುದಿಲ್ಲ. ಪಂಚಾಯತ್ ರಾಜ್ ವಿಚಾರದ ಬಗ್ಗೆ ಎತ್ತಿಹಿಡಿಯವರೆಗೂ ನಾವು ಧರಣಿ ಕೂರುತ್ತೇವೆ. ಅವರು ಸಭೆ ನಡೆಸಿಕೊಂಡು ಬರಲಿ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಕೆ.ಎಸ್.ಈಶ್ವರಪ್ಪನವರು, ಉಪ ನಾಯಕರಾದ ಶ್ರೀ ಕೆ.ಬಿ. ಶಾಣಪ್ಪನವರು ಮತ್ತು ಬಿ.ಜೆ.ಪಿ. ಪಕ್ಷದ ಸದಸ್ಯರಾದ ಶ್ರೀ ರಾಮಚಂದ್ರಗೌಡರವರನ್ನು ಹೊರತುಪಡಿಸಿ ಉಳಿದೆಲ್ಲಾ ಬಿ.ಜೆ.ಪಿ. ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ಸದಸ್ಯರುಗಳು ಧರಣಿ ನಡೆಸಲು ಸದನದ ಬಾವಿಗೆ ಧಾವಿಸಿದರು.)**

*(18) 07-02-2017(01-10)BSD-GR*

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮುಂದು.ಗ್ರಾಮ ಸಭೆ ಮತ್ತು ಪಂಚಾಯತ್ ರಾಜ್ ಬಗ್ಗೆ ಗೌರವ ಇಲ್ಲ ಎಂದರೆ ನಾವು ಇದನ್ನು ಯಾವ ಕಾರಣಕ್ಕೂ ಒಪ್ಪುವುದಿಲ್ಲ. ಪಂಚಾಯತ್ ರಾಜ್ ವಿಚಾರವನ್ನು ಎತ್ತಿ ಹಿಡಿಯುವವರೆಗೂ ನಾವು ಧರಣಿ ಕೂರುತ್ತೇವೆ. ಅವರು ಸಭೆ ಮಾಡಿಕೊಂಡು ಬರಲಿ. ಪಂಚಾಯತ್ ರಾಜ್ ಕಾಯ್ದೆಯ ವಿರುದ್ಧವಾಗಿ ಸುತ್ತೋಲೆ ಹೊರಡಿಸಲು ಅಧಿಕಾರ ಇದೆಯೇ? ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಲ್ಲವೇ? ಅಂತಹ ಅಧಿಕಾಗಳಿಗೆ ಹೇಗೆ ಮತ್ತು ಯಾರು ಅಧಿಕಾರ ಕೊಟ್ಟರು? ಅವರ ಬಗ್ಗೆ ಕ್ರಮ ತೆಗೆದುಕೊಳ್ಳಲಿ. ಗ್ರಾಮ ಸಭೆ ಬಗ್ಗೆ ಬೆಲೆ ಇಲ್ಲ. ಪಂಚಾಯತ್ ರಾಜ್ ಕಾಯ್ದೆ ಬಗ್ಗೆ ಬೆಲೆ ಇಲ್ಲ. ಅವರ ಇಷ್ಟ ಬಂದ ಹಾಗೆ ಕಾನೂನು ತಿದ್ದುಪಡಿ ಮಾಡಿಕೊಂಡು ಸುತ್ತೋಲೆ ಹೊರಡಿಸಬಹುದು. ಇದನ್ನು ಕೇಳುವುದಕ್ಕೆ ನಾವು ಕುಳಿತುಕೊಂಡಿದ್ದೇವೆಯೇ? ನಮಗೆ ಅವರಿಬ್ಬರ ಬಗ್ಗೆ ಗೌರವ ಇದೆ. ಈ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಹೇಳಬೇಕು. ದಯವಿಟ್ಟು ಸಮಯವನ್ನು ವ್ಯರ್ಥ ಮಾಡಬಾರದು.

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರ ಮತ್ತು ಮಂತ್ರಿಮಂಡಲದಲ್ಲಿ ಅನ್ಯೋನ್ಯತೆ ಇದ್ದರೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವ ಅವಶ್ಯಕತೆ ಇಲ್ಲ. ಇದು ಕಾನೂನಿಗೆ ವಿರುದ್ಧವಾಗಿದೆ ಎಂದು ಮಾನ್ಯ ಸಚಿವರಿಗೆ ಗೊತ್ತಿದೆ. ಅಂದಮೇಲೆ ಅವರೇ ಕ್ರಮ ತೆಗೆದುಕೊಳ್ಳಬಹುದು. You are the Government. Once you are convinced that it is against the Act and Rules, you yourself can withdraw it. There is no need to consult the Chief Minister or any other Minister. ಆದ್ದರಿಂದ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು. ಸರ್ಕಾರದಲ್ಲಿ ಅನ್ಯೋನ್ಯತೆ ಇದೆ ಎನ್ನುವುದಾದರೆ ಇದನ್ನು ವಿಥ್‌ಡ್ರಾ ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾನಾಯಕರು ಹಾಗೂ ಪಂಚಾಯತ್ ರಾಜ್ ಸಚಿವರು ಅಸಹಾಯಕರಾಗಿ ಕುಳಿತುಬಿಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳನ್ನು ಒಪ್ಪಿಸಲು ಅವರಿಗೆ ಶಕ್ತಿ ಇಲ್ಲವೇ? ಅವರೇನು ಜುಭಿಣಚಿಣಂಡಿ ಆಗಿದ್ದಾರೆಯೇ? ಕಾನೂನಿಗಿಂತ ದೊಡ್ಡವರು ಯಾರು? ಇದನ್ನು ಹೇಗೆ ಮಾಡಿದರು? ಇದಕ್ಕೆ ಅರ್ಥ ಇಲ್ಲ. ಬಹಳ ಸ್ಪಷ್ಟವಾಗಿ ಕಾನೂನಿಗೆ ವಿರುದ್ಧ ಎಂದು ಅವರೇ ಹೇಳುತ್ತಿದ್ದಾರೆ. ಇದು ಪಂಚಾಯತ್ ರಾಜ್ ಸಚಿವರ ಇಲಾಖೆ ಮೇಲೆ ಆಗಿರುವ ಗದಾಪ್ರಹಾರ! ನಾವು ಅವರಿಗೆ support ಮಾಡುತ್ತಿದ್ದೇವೆ. ಅವರು ಇಷ್ಟೊತ್ತಿಗೆ ಈ ಕೆಲಸ ಮಾಡಬೇಕಾಗಿತ್ತು. ಮಾನ್ಯ ರಮೇಶ್‌ಕುಮಾರ್ ರವರು ಸದನದಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಬೆಳಗಾವಿ ಅಧಿವೇಶನದಲ್ಲಿ ಅವರು ಬಹಳ ಚೆನ್ನಾಗಿ ಹೇಳಿದ್ದರು. ಈಗ ವಿಧಾನ ಪರಿಷತ್ತಿನ ಸಮಯವನ್ನು ಸರ್ಕಾರ ವ್ಯರ್ಥ ಮಾಡುವುದು ಬೇಡ. ಆದ್ದರಿಂದ ಕಾನೂನಿಗೆ ವಿರುದ್ಧವಾಗಿ ಹೊರಡಿಸಿರುವ ಸುತ್ತೋಲೆಯನ್ನು ರದ್ದು ಮಾಡಿದ್ದೇವೆ ಎಂದು ಹೇಳಬೇಕು. ಇದು ನಮ್ಮ ಒತ್ತಾಯವಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ವೀಕ್ ಇದ್ದಾರೆಯೇ?

**ಸಭಾಪತಿಯವರು:-** ಮಾನ್ಯ ಸಚಿವರು ಏನು ಹೇಳುತ್ತಾರೆ ಎಂದು ಕೇಳೋಣ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲ್ಲಿದ್ದಾಗ ಮತ್ತು ಆ ಕಡೆ ಇದ್ದಾಗ ಬಹಳ ಚೆನ್ನಾಗಿ ಹಾಗೂ ಕಾನೂನುಬದ್ಧವಾಗಿ ಅವರ ಶಕ್ತಿಯನ್ನು ಉಪಯೋಗ ಮಾಡಿದ್ದಾರೆ. ಈಗ ಕಾನೂನಿಗೆ ವಿರುದ್ಧವಾಗಿದ್ದರೂ ಪರ್ಮಿಟ್ ಮಾಡುತ್ತದೆಯೇ? Kindly ask them to withdraw it.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇಡೀ ಕರ್ನಾಟಕ ರಾಜ್ಯ ಇದನ್ನು ನೋಡುತ್ತಿರಬೇಕಾದರೆ ಮಾನ್ಯ ಸಭಾನಾಯಕರು ಏಕೆ ಇಷ್ಟೊಂದು ಶಕ್ತಿಹೀನರಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರನ್ನು ಬಿಟ್ಟರೆ ಮಾನ್ಯ ಗೃಹ ಸಚಿವರು ನಂತರ ಎಂದು ಹೇಳಬಹುದು. ಮಾನ್ಯ ಸಚಿವರು ಸಭೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನಮಗೆ ಸಭೆ ಏನೂ ಬೇಡ. ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ಹೇಳುವುದಕ್ಕೆ ಅವಕಾಶ ಕೊಡುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವರಿಗೆ ಮಾತನಾಡಲು ಬಿಡಿ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಸಭೆ ಮಾಡುತ್ತೇವೆಯೋ, ಸಮಾಲೋಚನೆ ಮಾಡುತ್ತೇವೆಯೋ ಅಥವಾ ನಮ್ಮ efficiency ಸಲುವಾಗಿ ಚರ್ಚೆ ಮಾಡುತ್ತೇವೆಯೋ ಅದೆಲ್ಲಾ ಇರಲಿ. ಆದರೆ ಸಂಜೆ 5:00 ಗಂಟೆಗೆ ಸರ್ಕಾರದ ನಿಲುವಾಗಿ ಏನು ಮಾಡುತ್ತೇವೆ ಎಂದು ಸದನಕ್ಕೆ ಹೇಳುತ್ತೇನೆ. ಆದ್ದರಿಂದ ಸಂಜೆ 5:00 ಗಂಟೆಗೆ ನಾನು ಅಥವಾ ಮಾನ್ಯ ವಸತಿ ಸಚಿವರು ಸದನದಲ್ಲಿ ಉತ್ತರವನ್ನು ಹೇಳುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ನಡೆದ ವಿಧಾನ ಪರಿಷತ್ತಿನ ಅಧಿವೇಶನ ನಡೆದು 6 ತಿಂಗಳು ಕಳೆದಿದೆ. ಇಲ್ಲಿಯವರೆಗೂ ಏನು ಮಾಡುತ್ತಿದ್ದರು? ನಿದ್ದೆ ಮಾಡುತ್ತಿದ್ದರೇ! ಮತ್ತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾವು ಇಲ್ಲಿ ಪ್ರಸ್ತಾಪ ಮಾಡಬೇಕೆ? ಇಬ್ಬರು ಸಚಿವರಿಗೆ ಜವಾಬ್ದಾರಿ ಇಲ್ಲವೇ? ಅದು ಅವರ ಕರ್ತವ್ಯ ಅಲ್ಲವೇ? ವಿಧಾನ ಪರಿಷತ್ತಿನ ವಿರೋಧ ಪಕ್ಷವಾಗಿ ನಮ್ಮ ಕರ್ತವ್ಯವನ್ನು ಮಾಡುತ್ತಿರುವಾಗ ಸರ್ಕಾರದ ಕರ್ತವ್ಯವನ್ನು ಅವರು ಮಾಡಬೇಕಲ್ಲವೇ?

**Sri K.B.SHANAPPA:-** Mr.Chairman Sir, this House is discussing. The subject is before the House. Hon'ble Minister is here to give a proper answer to this House. Hon'ble Minister himself has consciously accepted that there is a rule, which has violated.

**ಸಭಾಪತಿಯವರು:-** ಅವರು ಏನು ಹೇಳುತ್ತಾರೆ ಎಂದು ಕೇಳೋಣ.

**Sri H.K.PATIL:-** Mr.Chairman Sir, you know the democratic procedure. Can I take...

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈಗ ಪ್ರಜಾಪ್ರಭುತ್ವದ ಪ್ರೊಸೀಜರ್ ಹಾಳಾಗಿ ಹೋಗಿದೆ. ಸುತ್ತೋಲೆಯನ್ನು ಹೊರಡಿಸಿ ಹಾಳು ಮಾಡಿಬಿಟ್ಟರು.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಅವರನ್ನು ಕೇಳುತ್ತಿದ್ದೇವೆ. ಸ್ವತ: ಮಾನ್ಯ ಸಚಿವರು ಕನ್‌ವಿನ್ಸ್ ಆದಮೇಲೆ ವಿಥ್‌ಡ್ರಾ ಮಾಡಿಕೊಳ್ಳಬೇಕು.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಪ್ರಶ್ನೆ ಮಾಡುತ್ತಿರುವುದೇ ಪ್ರಜಾಪ್ರಭುತ್ವದ ಪದ್ಧತಿ. ಆ ಪದ್ಧತಿಯನ್ನು ಹಾಳು ಮಾಡಿದ್ದಾರೆ ಎಂದರೆ, ....

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಚಿವರ ಎದುರಿಗೆ ಹಾಳಾಗಿದೆ. ಈ ಸುತ್ತೋಲೆ ಹೇಗೆ ಬಂತು? ಅವರು ಹೇಳಿದಂತೆ ಈ ಸುತ್ತೋಲೆ ಕಾನೂನಿಗೆ ವಿರುದ್ಧವಾಗಿದೆಯಲ್ಲವೇ?

**(ಗೊಂದಲ)**

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಾನು ಉತ್ತರ ಹೇಳುತ್ತೇನೆ.



" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಉತ್ತರ ಅಲ್ಲ, ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ ಎಂದು ಹೇಳಬೇಕು. ಅವರ ಉತ್ತರ ತೆಗೆದುಕೊಂಡು.......

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಯಾವುದಕ್ಕೆ ಇಷ್ಟು ಒತ್ತಡ ಕೊಡುತ್ತಿದ್ದಾರೆ, ಅವರೆಲ್ಲರೂ ಪತ್ರಿಕೆಗಳಲ್ಲಿ ನೋಡಿದ್ದಾರೆ. ಮಾನ್ಯ ಶ್ರೀನಿವಾಸ ಪೂಜಾರಿಯವರಿಗೆ ಒಂದೊಂದೇ ಎಣಿಸಿ ಎಣಿಸಿ ಹೇಳುತ್ತಿದ್ದೆನು. ಮಾನ್ಯ ಮಹಾಂತೇಶ ಕವಟಗಿಮಠ್ ರವರು ಬಂದಿದ್ದರು. ನಾವು ಹೇಳುವುದನ್ನು ನೋಡಿ ಅಲ್ಲಿಂದ ಅವರು ಒಂದೇ ದಿವಸಕ್ಕೆ ಹೊರಟು ಹೋದರು. ಸಂವಿಧಾನ ಮತ್ತು ಕಾನೂನಿನ ವಿರುದ್ಧ 20 ಸುತ್ತೋಲೆಗಳನ್ನು ಹೊರಡಿಸಲಾಗಿತ್ತು. There were 20 Circulars and we have withdrawn all those Circulars. This is what our credibility is.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸಿಬಿಟ್ಟಿದ್ದೇವೆ. ಅವರು ಒಳ್ಳೆಯ ಕೆಲಸ ಮಾಡಿದಾಗ ಇವತ್ತಿನವರೆಗೂ ಅಭಿನಂದನೆ ಸಲ್ಲಿಸಿದ್ದೇವೆ.

**ಶ್ರೀ ಹೆಚ್.ಕೆ. ಪಾಟೀಲ್:-** ಈ ಸಂದರ್ಭದಲ್ಲಿ ಯಾವುದು ಚರ್ಚಾ ವಸ್ತುವಾಗಿದೆ, ಅದರ ಬಗ್ಗೆ ಇಲಾಖಾ ಸಚಿವರ ಜೊತೆ ಇವತ್ತೇ ಚರ್ಚೆ ಮಾಡಿ 5:00 ಗಂಟೆಗೆ ನಾನು ಅಥವಾ ಅವರು ಉತ್ತರವನ್ನು ಹೇಳುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾವು ಸಂಜೆ 5:00 ಗಂಟೆಯವರೆಗೂ ಕಾಯುವುದಿಲ್ಲ. ಈಗಾಗಲೇ 6 ತಿಂಗಳು ಸಮಯವನ್ನು ಕೊಟ್ಟಾಗಿದೆ. ಮತ್ತೆ 5:00 ಗಂಟೆ ಎಂದು ಕೇಳಲು ತಯಾರಿಲ್ಲ. ಆದ್ದರಿಂದ ತಕ್ಷಣ ಸಭೆ ಮಾಡಿ, ಈಗಲೇ ಸದನದಲ್ಲಿಯೇ ವಿಥ್‌ಡ್ರಾ ಮಾಡಬೇಕು, ಇಲ್ಲದಿದ್ದರೆ ಬಿಡುವುದಿಲ್ಲ.

**(ಈ ಹಂತದಲ್ಲಿ ಧರಣಿನಿರತರಾಗಿದ್ದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಬಾವಿಯಿಂದ ಸ್ವಸ್ಥಾನಕ್ಕೆ ತೆರಳಿದರು)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಾನೂನಿನ ವಿರುದ್ಧ ಯಾವುದೇ ಒಂದು ಇಲಾಖೆ ಸುತ್ತೋಲೆ ಹೊರಡಿಸಲು ಸಾಧ್ಯವೇ ಎಂಬ ಪ್ರಶ್ನೆ ಇದೆ. ಮಾನ್ಯ ಸಚಿವರು ಈ ರೀತಿ 20 ಸುತ್ತೋಲೆಗಳು ಕಾನೂನಿಗೆ ವಿರುದ್ಧವಾಗಿ ಬಂದಿದ್ದವು ಎಂದು ಒಪ್ಪಿಕೊಂಡರು. ನಾವು ಇಲ್ಲಿ ಯಾವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಶ್ನೆಯನ್ನು ಎತ್ತಿದ್ದೇವೆ ಎಂದರೆ, ಗ್ರಾಮ ಪಂಚಾಯತ್ ಕಾಯ್ದೆ ಪ್ರಕಾರ ಗ್ರಾಮ ಸಭೆಗೆ ಪೂರ್ಣ ಅಧಿಕಾರ ಇದೆ. ಅದನ್ನು ಬದಲಾವಣೆ ಮಾಡುವ ಅಧಿಕಾರ ವಸತಿ ಇಲಾಖೆಗೆ ಇದೆಯೇ? ಮಾನ್ಯ ಸಚಿವರು ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಮಾತನಾಡಿದರು. ಆ ಇಲಾಖೆಯವರು ಮಾನ್ಯ ಸಚಿವರನ್ನು ಈ ವಿಷಯವಾಗಿ ಕೇಳಿದ್ದರೇ? ಇದು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಟ್ಟ ವಿಷಯ.

**ಶ್ರೀ ಹೆಚ್.ಕೆ.ಪಾಟೀಲ್:–** ಅವರು ನಮ್ಮನ್ನು ಕೇಳಿದ್ದು, ಅದಕ್ಕೆ ನಾವು ಏನು ಹೇಳಬೇಕೋ, ಅದನ್ನು ಹೇಳಿದ್ದೇವೆ ಕ್ಯಾಪ್ಟನ್ ರವರೇ, Please understand. It is not a one Circular which has come as a bolt from the blue. This type of Circulars were there earlier, from the same Department.

**Capt.GANESH KARNIK:-** That should be stopped.

**Sri H.K.PATIL:-** Mr.Chairman Sir, I have stopped it. You are also understanding my mind and we are understanding the feeling of the House. I have said give me time. Democratic step has be initiated. I will discuss with the concerned Minister and if need be, I will discuss with the Chief Minister. I will get back to you at 5 O’clock.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮತ್ತೆ ಮತ್ತೆ ಸದನವನ್ನು ಕರೆಯುತ್ತಿದ್ದು, 20 ಸುತ್ತೋಲೆಗಳು ಇವೆ ಎಂದು ಹೇಳುತ್ತಿದ್ದಾರೆ. ಇದನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆ ಎಲ್ಲಿದೆ?

**(ಗೊಂದಲ)**

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, 20 ಸುತ್ತೋಲೆಗಳನ್ನು ನಾವು ಹೊರಡಿಸಿಲ್ಲ. ಅವು ಅವರು ಅಧಿಕಾರದಲ್ಲಿ ಇದ್ದಾಗ ಹೊರಡಿಸಿದ ಸುತ್ತೋಲೆಗಳಾಗಿವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಇದನ್ನು ಯಾವುದೇ ಇಲಾಖೆ ಹೊರಡಿಸಿರಲಿ ಅಥವಾ ಈ ಸುತ್ತೋಲೆಗಳನ್ನು ಹೊರಡಿಸುವ ವಿಚಾರದಲ್ಲಿ ನಾವು–ನೀವು ಎಂಬ ಪ್ರಶ್ನೆ ಅಲ್ಲ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಶ್ರೀನಿವಾಸ ಪೂಜಾರಿಯವರ ವಿಶೇಷ ಮಾರ್ಗದರ್ಶನದಲ್ಲಿ ನಮ್ಮ ಕಾನೂನಿನ ವಿರುದ್ಧ ಸುತ್ತೋಲೆಗಳನ್ನು ಹೊರಡಿಸಿದ್ದಾಗಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ಕಾನೂನಿಗೆ ವಿರುದ್ಧವಾಗಿ ಹೊರಡಿಸಿರುವ ಸುತ್ತೋಲೆಯನ್ನು ವಿಥ್‌ಡ್ರಾ ಮಾಡುತ್ತೇವೆ ಎಂದು ಹೇಳಿಬಿಟ್ಟರೆ ನಾವು ಮುಗಿಸುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರು ಏನು ಹೇಳುತ್ತಾರೆ ಎಂದು ಕೇಳೋಣ.

**ಡಾ|| ಹೆಚ್.ಸಿ.ಮಹದೇವಪ್ಪ (ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರು ಎತ್ತಿದ್ದು, ಇದು 73ರ ತಿದ್ದುಪಡಿಗೆ ಸಂಬಂಧಪಟ್ಟ ವಿಷಯವಾಗಿದೆ. ಇದು devolution of power ಗೆ ಸಂಬಂಧಪಟ್ಟಿದೆ. ಅಂದರೆ ರಾಜ್ಯ ವಲಯದ ಜಿಲ್ಲಾ ವಲಯಗಳಿಗೆ ಕೊಟ್ಟ ನಂತರ ಗ್ರಾಮ ಸಭೆಯಲ್ಲಿ ಎಲ್ಲಾ ವಿಷಯಗಳು ಚರ್ಚೆಯಾಗಿ ಫಲಾನುಭವಿಗಳ ಆಯ್ಕೆಯಾಗಬೇಕು ಎಂಬುದು ಮೂಲ ತತ್ವವಾಗಿದೆ. ಪ್ರಜಾಪ್ರಭುತ್ವ ವೇದಿಕೆ ಗ್ರಾಮ ಸಭೆ ಎಂಬುದು ಮೂಲ ತತ್ವವಾಗಿದೆ. ಸಂವಿಧಾನದ 73ನೇ ತಿದ್ದುಪಡಿ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಿದ್ದಾಗಿದೆ. ಆ ಇಲಾಖೆ ಒಂದು ಸುತ್ತೋಲೆ ಕಳುಹಿಸಿ ವಿಜಿಲೆನ್ಸ್ ಕಮಿಟಿಗೆ ಕೊಡಬೇಕೆಂದು ಹೊರಡಿಸಿದೆ. ಅದು 73ರ ತಿದ್ದುಪಡಿ ವ್ಯಾಪ್ತಿಯಲ್ಲಿದೆಯೋ ಅಥವಾ ಹೊರಗಡೆ ಇದೆಯೋ ಎಂಬ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಅದಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು 'I will discuss with my colleague and come back to you by 5 O'clock and either myself will make a statement or I will ask my colleague to make a statement and if need be, we will discuss with the Hon'ble Chief Minister also under the provisions of 73rd Amendment Act.' ಎಂದು ಹೇಳಿದ್ದಾರೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ...

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಹೆಚ್.ಸಿ.ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಈ ರೀತಿ ಶೂನ್ಯವೇಳೆಯಲ್ಲಿ ಸ್ಪಷ್ಟವಾಗಿ ಹೇಳಿದ ಮೇಲೆ ಈಗಲೇ ಹೇಳಿಬಿಡಿ, ಈಗಲೇ ಮಾಡಿ ಎಂದರೆ ಹೇಗೆ? ಅವರು ಸರ್ಕಾರವನ್ನು ನಡೆಸಿದ್ದಾರೆ. ಹಿಂದೆ ಅವರ ಸರ್ಕಾರ ಇದ್ದಾಗ ಈ ಇಲಾಖೆಯು ಸಂವಿಧಾನಕ್ಕೆ ವಿರುದ್ಧವಾದ 20 ಸುತ್ತೋಲೆಗಳನ್ನು ಮಾನ್ಯ ಸಚಿವರು ವಾಪಸ್ಸು ಪಡೆದಿದ್ದಾರೆ.

**(ಗೊಂದಲ)**

***(19) ವೈಎಲ್–ಎಂಡಿ/07.02.2017/1.20***

**ಡಾ॥ ಹೆಚ್.ಸಿ.ಮಹದೇವಪ್ಪ:–** ಮುಂದು ಇದನ್ನು ಚರ್ಚೆ ಮಾಡಿ ಮತ್ತೆ ಸಂಜೆ 5:00 ಗಂಟೆಗೆ ಉತ್ತರವನ್ನು ಒದಗಿಸುತ್ತೇವೆಂದು ನಾವು ತಿಳಿಸಿದ್ದರೂ ಕೂಡಾ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ ತಕ್ಷಣ ಉತ್ತರವನ್ನು ಕೊಡಿ ಎಂದು ಹೇಳುವುದು ಸಮಂಜಸವಲ್ಲ. ಸಂವಿಧಾನದಲ್ಲಿ 73 ಮತ್ತು 74ನೇ ತಿದ್ದುಪಡಿಯನ್ನು ತಂದವರು ದಿವಂಗತರಾದ ಪ್ರಧಾನಿ ರಾಜೀವ್‌ಗಾಂಧಿಯವರು. ಈ ಅಧಿಕಾರದ ವಿಕೇಂದ್ರೀಕರಣವನ್ನು ಬಲಪಡಿಸುವುದಕ್ಕೆ ಈಗಿರತಕ್ಕಂಥ ಸುತ್ತೋಲೆ ಪೂರಕವಾಗಿದೆಯೇ ಇಲ್ಲವೆ ಎನ್ನುವಂಥದ್ದನ್ನು ಇನ್ನೊಂದು ಇಲಾಖೆಯ ಸಚಿವ ಸಹದ್ಯೋಗಿಯವರೊಂದಿಗೆ ಚರ್ಚೆ ಮಾಡಿ ಸಂಜೆ 5:00 ಗಂಟೆಗೆ ಉತ್ತರವನ್ನು ಒದಗಿಸುತ್ತೇವೆಂದು ಹೇಳಿದ್ದರೂ ಕೂಡ ಈಗ ಶೂನ್ಯ ವೇಳೆಯಲ್ಲಿಯೇ ಉತ್ತರವನ್ನು ಒದಗಿಸಿ ಎಂದು ಹೇಳುವುದು ಸರಿಯಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಶ್ರೀ ರಾಜೀವ್‌ಗಾಂಧಿಯವರು ತಂದಿರತಕ್ಕಂಥ ಸಂವಿಧಾನದ ತಿದ್ದುಪಡಿಯನ್ನು ಇವರು ಸ್ವಾಗತ ಮಾಡಿದ್ದಾರೆ. ಅದಕ್ಕೆ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ. ಅವರು ರಾಜೀವ್‌ಗಾಂಧಿಯವರನ್ನು ಗೌರವಿಸುವುದಾದರೆ ತಕ್ಷಣವೇ ಈ ಸುತ್ತೋಲೆಯನ್ನು ಹಿಂಪಡೆಯಬೇಕು. ಅವರು ನಮಗೆ ಕಥೆ ಹೇಳಬೇಕಾಗಿಲ್ಲ. ಅವರು ಕೊಡತಕ್ಕಂಥ ಉತ್ತರವು ಕಾನೂನಿಗೆ ಬದ್ಧವಾಗಿರುತ್ತದೆ.

**(ಗೊಂದಲ)**

**Dr. H.C.MAHADEVAPPA:-** Sir, How can they insist the Government to give the answer immediately in the zero Hour?

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಲೋಕೋಪಯೋಗಿ ಸಚಿವರು ಏನು ಹೇಳುತ್ತಿದ್ದಾರೆ? (ಗೊಂದಲ) ಮಾನ್ಯ ಪಂಚಾಯತ್ ರಾಜ್ ಸಚಿವರು ಏನೆಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೇಳಿದ್ದಾರೆಂದರೆ, ಇಲ್ಲಿ ಪ್ರಶ್ನೆ ಬಂದಿರುವುದು ಕಾನೂನಿಗೆ ವಿರುದ್ಧವಾಗಿ ಬಂದಿರತಕ್ಕಂಥ ಸುತ್ತೋಲೆ ಎಂದು ಒಪ್ಪಿಕೊಂಡಿದ್ದಾರೆ. ಅವರು ಬಹಳ ಹಿಂದೆ ಉಳಿದಿದ್ದಾರೆ. ಅದು ಹೌದೋ, ಅಲ್ಲವೋ? -ಎಂದು ಸಭೆ ಕರೆದು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಮೊದಲನೆಯದಾಗಿ ಮಾನ್ಯ ಪಂಚಾಯತ್ ರಾಜ್ ಸಚಿವರು ಈ ಸುತ್ತೋಲೆಯೂ ಕಾನೂನಿಗೆ ವಿರುದ್ಧವಾಗಿದೆ ಎಂದು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದಾರೆ. ಎರಡನೆಯದಾಗಿ ಇದು ತಕ್ಷಣವೇ ಶೂನ್ಯ ವೇಳೆಯಲ್ಲಿ ಬಂದಿರತಕ್ಕಂಥ ಪ್ರಶ್ನೆ ಅಲ್ಲ. ಆರು ತಿಂಗಳ ಮೊದಲೇ ಬೆಳಗಾವಿ ಅಧಿವೇಶನದಲ್ಲಿ ನಿಮ್ಮ ಕಾಂಗ್ರೆಸ್ ಪಕ್ಷದ ಶಾಸಕರೆ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರು. ಆರು ತಿಂಗಳ ಮುಂಚೆಯೇ ಬೆಳಗಾವಿ ಅಧಿವೇಶನದಲ್ಲಿಯೇ ಗೌರವಾನ್ವಿತ ಸಚಿವರಾದ ಶ್ರೀ ರಮೇಶ ಕುಮಾರ್‌ರವರು 'ಈ ಸುತ್ತೋಲೆಯೂ ತಪ್ಪಾಗಿದೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಸ್ಪಷ್ಟವಾಗಿ ಹೇಳಿದ್ದರು. ಇಷ್ಟೆಲ್ಲಾ ಮಾಡಿದ್ದರೂ ಕೂಡಾ ಈ ರೀತಿಯ ಭಂಡತನ ಏಕೆ? ಏತಕ್ಕಾಗಿ ಈ ರೀತಿಯ ಭಂಡತನ?

**ಡಾ: ಎಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಸಂಜೆ 5.00 ಗಂಟೆಗೆ ಉತ್ತರವನ್ನು ಒದಗಿಸಿದರೆ ಅಷ್ಟರಲ್ಲಿ ಏನಾಗುತ್ತದೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮಂತ್ರಿಯಾದ ರಮೇಶ್ ಕುಮಾರ್‌ರವರು ಆರು ತಿಂಗಳ ಮುಂಚೆ ಈ ಸುತ್ತೋಲೆಯೂ ಕಾನೂನಿಗೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ.

**ಶ್ರೀ ಆರ್.ವಿ.ದೇಶಪಾಂಡೆ, ಬೃಹತ್-ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವರು:-** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:-** ಹಿರಿಯ ಸಚಿವರಾದ ಮಾನ್ಯ ಆರ್.ವಿ.ದೇಶಪಾಂಡೆಯವರು ಏನು ಹೇಳುತ್ತಾರೆಂದು ಕೇಳೋಣ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷ ನಾಯಕರಲ್ಲಿ ಮತ್ತು ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಲೋಕೋಪಯೋಗಿ ಸಚಿವರು ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ಅವರ ಅಭಿಪ್ರಾಯ ಸಹ ಸದನಕ್ಕೆ ಗೊತ್ತಾಗಿದೆ. ಸಂಜೆ 5:00 ಗಂಟೆಗೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸಿದ ಮೇಲೆ ಅಷ್ಟು ಸಮಯವನ್ನಾದರು ಸರ್ಕಾರಕ್ಕೆ ಕೊಡಬೇಕಾಗುತ್ತದೆ. Democratic system ನಲ್ಲಿ ಈ ಪ್ರಕಾರ ಹೇಳುವುದಾದರೆ ಇವತ್ತೆ ಹೇಳಿ, ಈಗಲೇ ಹೇಳಿ, ಈ ರೀತಿಯೇ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿ ಎಂದು ವಿರೋಧ ಪಕ್ಷದ ನಾಯಕರು ಹೇಳಬಹುದು. ಆ ಅಧಿಕಾರ ಅವರಿಗೆ ಇದೆ. But the Government has its own right to work. ಇರಬಹುದು, ಆದರೆ ಸಂಜೆ 5:00 ಗಂಟೆಗೆ ಉತ್ತರವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಸದನದಲ್ಲಿ ಇನ್ನು ಅನೇಕ ಮುಖ್ಯವಾದ ವಿಷಯಗಳು ಪ್ರಸ್ತಾಪವಾಗಬೇಕು. ಈ ಸಂದರ್ಭದಲ್ಲಿ 5:00 ಗಂಟೆಯವರೆಗೆ ಸಮಯ ಕೇಳಿದ್ದಾರೆ. ಇದರ ಅರ್ಥ ಏನೆಂದರೆ, they don't want to discuss about it. ಅವರಿಗೆ ಈ ಚರ್ಚೆಯ ಅವಶ್ಯಕತೆ ಇಲ್ಲ ಎಂಥಾಯಿತು. ಆದ್ದರಿಂದ ಮಾನ್ಯ ಸಭಾಪತಿಯವರೆ ತಮ್ಮ ಮುಖಾಂತರ ವಿನಂತಿಸಿಕೊಳ್ಳುವುದೇನೆಂದರೆ, ಸಂಜೆ 5:00 ಗಂಟೆಯವರೆಗೆ ಸಮಯ ಕೊಡಬೇಕಾಗಿ ಕೋರುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸಂಜೆ 5:00 ಗಂಟೆಯವರೆಗೆ ಕಾಯುವ ಅವಶ್ಯಕತೆ ಏನಿದೆ?

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಈಗಾಗಲೇ ಸಾಕಷ್ಟು ವಾದ ವಿವಾದಗಳು ನಡೆದಿದೆ.

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ನನ್ನ ಅನುಮಾನವನ್ನು ಒಂದು ನಿಮಿಷ ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಬೇಗ ಹೇಳಿ. ಒಂದು ನಿಮಿಷದಲ್ಲಿ ಹೇಳಿ.

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ಬೆಳಗಾವಿ ಅಧಿವೇಶನದಲ್ಲಿ ತಾವು ಮತ್ತು ಸಭಾನಾಯಕರು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮೂರು ಜನರು ಒಂದು ದಿನ ಪೂರ್ತಿ ಬೆಂಗಳೂರು ಅಧಿವೇಶನದಲ್ಲಿ ಪಂಚಾಯತ್ ರಾಜ್ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆಂದು ಹೇಳಿದ್ದಿರಿ. ಇದು ಕೇವಲ ವಸತಿ ಇಲಾಖೆಗೆ ಸಂಬಂಧಪಟ್ಟ ವಿಚಾರವಲ್ಲ. ಗ್ರಾಮ ಪಂಚಾಯಿತಿ ಸದಸ್ಯರ ಸಂಭಾವನೆಯಿಂದ ಹಿಡಿದು ಅನೇಕ ವಿಚಾರಗಳನ್ನು ಇಲ್ಲಿ ಚರ್ಚಿಸಬೇಕಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಪಂಚಾಯತ್ ರಾಜ್ ವ್ಯವಸ್ಥೆ ಸದಸ್ಯರ ಬಗ್ಗೆ ಇರುವಂತಹ ಹಕ್ಕನ್ನು ಉಳಿಸುವ ಸಲುವಾಗಿ ಒಂದು ದಿವಸ ಚರ್ಚೆ ಮಾಡಲು ಸಂಪೂರ್ಣ ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಧನ್ಯವಾದಗಳು, ಈಗ ಬಂದಿರತಕ್ಕಂಥ ಸಮಸ್ಯೆ ಏನೆಂದರೆ, ಗೌರವಾನ್ವಿತ ಸದಸ್ಯರು . .

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಸಮಸ್ಯೆ ಏನೆಂಬುದರ ಬಗ್ಗೆ ಹೇಳುತ್ತೇನೆ.

**ಸಭಾಪತಿಯವರು:-** ಸಮಸ್ಯೆ ಬಗ್ಗೆ ಬೇಡ. ಸಮಸ್ಯೆ ಬಗ್ಗೆ ಹೋದರೆ ಚರ್ಚೆ ಬಹಳ ವಿಸ್ತಾರವಾಗುತ್ತದೆ. ಈಗ ನಿರ್ಮಾಣವಾಗಿರುವ ಪರಿಸ್ಥಿತಿ ತಿಳಿಗೊಳಿಸುವುದು ಹೇಗೆ ಎನ್ನುವುದನ್ನು ನೋಡೋಣ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ತಾವು ಈ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡಬೇಕೆನ್ನುವುದರ ಬಗ್ಗೆ ಮಾತನಾಡಬೇಕೆಂದು ಹೇಳಿದ್ದೀರಿ. ನಿಜ, ಇದು ಒಳ್ಳೆಯ ವಿಚಾರ. ಸಂವಿಧಾನ ದತ್ತವಾಗಿರತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಮಂತ್ರಿಗಳು ಸಹ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದು ಸಂವಿಧಾನದ ಅನುಚ್ಛೇದ 243 ಗೆ ವಿರುದ್ಧವಾಗಿದೆ ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಹುಶ: ಈ ಹಂತದಲ್ಲಿ ದಯಮಾಡಿ ನನ್ನ ಎಲ್ಲಾ ಸನ್ಮಿತ್ರರಲ್ಲಿ ಹಾಗೂ ತಮ್ಮಲ್ಲಿಯೂ ಕೂಡ ಕೇಳುವುದಕ್ಕೆ ಬಯಸುವುದೇನೆಂದರೆ, ಮೊದಲನೆಯದಾಗಿ ಇದು ಶೂನ್ಯ ವೇಳೆ. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇರುವಂತಹ ಅವಕಾಶ 24:00 ಗಂಟೆಯಲ್ಲಿ ಅಥವಾ ಇತ್ತೀಚೆಗೆ ಯಾವ ಘಟನೆ ನಡೆದಿರುತ್ತದೆ ಅದರ ಬಗ್ಗೆ ಚರ್ಚೆ ಮಾಡಬೇಕು ಎನ್ನುವಂತಹದು. ಎರಡನೆಯದಾಗಿ ಮೂರು ದಿನ ಸಮಯ ತೆಗೆದುಕೊಂಡು ಶೂನ್ಯ ವೇಳೆಯಲ್ಲಿ ಹೇಳಿಕೆ ಕೊಡುವುದಕ್ಕೆ ಸರ್ಕಾರದಲ್ಲಿ ಅವಕಾಶವಿದೆ. ಆದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು 3:00 ಗಂಟೆಗಳ ಕಾಲ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. 3:00 ಗಂಟೆಗಳ ಕಾಲ ಅವಕಾಶ ಕೊಟ್ಟರೆ ಏನಾಗುವುದಿಲ್ಲ. ದಯಮಾಡಿ ಸನ್ಮಿತ್ರರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇಷ್ಟು ದಿವಸವೇ ಕಾದಿದ್ದೇವೆ. ಇನ್ನು 3:00 ಗಂಟೆಗಳ ಕಾಲ ಅವಕಾಶ ಕೊಡಿ ಸರ್ಕಾರದ ತೀರ್ಮಾನ ಏನೆಂಬುದನ್ನು ಹೇಳುತ್ತಾರೆ. ನಾವು ಸಂವಿಧಾನದ ಆಶಯಗಳ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಿಯಮಾವಳಿಗಳ ಆಶಯಗಳ ಬಗ್ಗೆ ಸಹ ನಾವು ಗಮನ ಹರಿಸಬೇಕಾಗಿದೆ. ಆದ್ದರಿಂದ 3:00 ಗಂಟೆಗಳ ಕಾಲಾವಕಾಶ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಈಗಾಗಲೇ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಗಂಭೀರವಾಗಿರತಕ್ಕಂಥ ವಿಚಾರವು ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗಿದೆ. ಶೂನ್ಯ ವೇಳೆಯಲ್ಲಿ ನಾನು ಅದನ್ನು ತಂದಿದ್ದು ಏಕೆಂದರೆ ಸದನವು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಯತಕ್ಕಂಥದ್ದು ಸ್ವಲ್ಪ ದಿವಸಗಳು ಮಾತ್ರ. ಸಾಕಷ್ಟು ವಿಷಯಗಳ ಬಗ್ಗೆ ಮಾತನಾಡಬೇಕಾಗಿದೆ. ಅದರಲ್ಲಿ ಇದು ಬಹಳ ಗಂಭೀರವಾಗಿರತಕ್ಕಂಥದ್ದು. ಬೆಳಗಾವಿ ಅಧಿವೇಶನದಲ್ಲಿ ನಡೆದಂತಹ ಘಟನೆಗಳ ಹಿನ್ನೆಲೆಯಲ್ಲಿ ಅಲ್ಲಿ ನಡೆದಂತಹ ಚರ್ಚೆ ಮತ್ತು ಸರ್ಕಾರದ ನಿಲುವಿನ ಹಿನ್ನೆಲೆಯಲ್ಲಿ ಇದನ್ನು ಬೇರೆ ಮಾರ್ಗದಲ್ಲಿ ತರುವುದಕ್ಕೆ ಸಮಯವಿಲ್ಲ ಎನ್ನುವುದಕೋಸ್ಕರ ಈ ವಿಚಾರವನ್ನು ಶೂನ್ಯ ವೇಳೆಯಲ್ಲಿ ತಂದಿದ್ದೇನೆ. ಸರ್ಕಾರವು ಅದಕ್ಕೆ ಸ್ಪಂಧಿಸಿದೆ. ಸರ್ಕಾರದ ಪರವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದು ಮೇಲ್ನೋಟಕ್ಕೆ ತಪ್ಪಾಗಿರುವಂತೆ ಕಾಣುತ್ತದೆಂದು ಹೇಳಿದ್ದಾರೆ. ಆದರೆ democratic setup ನಲ್ಲಿ ನಾನು ನಿಂತ ಕಾಲಿನಲ್ಲಿಯೇ ಆದೇಶ ಮಾಡುವುದಕ್ಕೆ ಬರುವುದಿಲ್ಲ. ನಾನು ಅದಕ್ಕೆ ಸಂಬಂಧಪಟ್ಟ ಸಚಿವರ ಹತ್ತಿರ ಮತ್ತು ಅವಶ್ಯಕತೆ ಇದ್ದರೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಸಂಜೆ 5:00 ಗಂಟೆಗೆ . . .

**(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಆಗಮಿಸಿದರು)**

**ಸಭಾಪತಿಯವರು:–** ನಾನು ಈ ವಿಷಯದ ಬಗ್ಗೆ ಮೊದಲಿನಿಂದ ಪ್ರಾರಂಭ ಮಾಡಬೇಕಾಗುತ್ತದೆ.

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು):–** ಈ ಹಿಂದೆಯೇ ಬೆಳಗಾವಿ ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಆದ್ದರಿಂದ ಶೂನ್ಯ ವೇಳೆಯಲ್ಲಿ ಇದಕ್ಕೆ ಉತ್ತರ ಕೊಡುವುದಕ್ಕೆ ಬರುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಇವತ್ತಿನ ದಿವಸ ಶೂನ್ಯ ವೇಳೆಯಲ್ಲಿ ತೆಗೆದುಕೊಂಡಿರುವುದಿಲ್ಲ. ಬೆಳಗಾವಿ ಅಧಿವೇಶನದಲ್ಲಿ ಆರು ತಿಂಗಳ ಮುಂಚೆಯೇ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಅದನ್ನು ಮುಖ್ಯಮಂತ್ರಿಯವರು ಗಮನಿಸಬೇಕು. ಅವತ್ತಿನ ದಿವಸವೇ ತಪ್ಪಾಗಿದೆ ಎಂದು ಸರ್ಕಾರದವರು ಒಪ್ಪಿಕೊಂಡಿದ್ದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಪಂಚಾಯತ್ ರಾಜ್ ಕಾಯ್ದೆಯಂತೆ ಬಡವರ ಮನೆಗಳನ್ನು ಆಯ್ಕೆ ಮಾಡುವಂಥ ಅಧಿಕಾರ ಇರುವುದು ಗ್ರಾಮ ಸಭೆಗಳಿಗೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸಚಿವರು ಸಂಜೆ 5:00 ಗಂಟೆಗೆ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಸರ್ಕಾರದಿಂದಲೂ ಆಶ್ವಾಸನೆ ಇದೆ. ನಾಳೆ ಉತ್ತರ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒದಗಿಸುತ್ತೇವೆಂದು ಹೇಳಿಲ್ಲ. ಇವತ್ತೇ ಉತ್ತರವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಸಂಜೆ 5:00 ಗಂಟೆಗೆ ಉತ್ತರವನ್ನು ಒದಗಿಸುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಕಳೆದ ಬೆಳಗಾವಿ ಅಧಿವೇಶನದಲ್ಲಿ ಈ ವಿಚಾರವನ್ನು ಸ್ವತಃ ಶ್ರೀ ಕೆ.ಸಿ.ಕೊಂಡಯ್ಯನವರು ಪ್ರಸ್ತಾಪ ಮಾಡಿದ್ದರು. (ಗೊಂದಲ) ಸ್ವಲ್ಪ ನಾನು ಮಾತನಾಡುವುದಕ್ಕೆ ಬಿಡಿ. ಆ ಸಂದರ್ಭದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು . . .

**ಶ್ರೀ ವಿ.ಎಸ್.ಉಗ್ರಪ್ಪ:–** ಶೂನ್ಯ ವೇಳೆಯಲ್ಲಿ ಇಷ್ಟೆಲ್ಲಾ ಆಶ್ವಾಸನೆ ಕೊಟ್ಟಿದ್ದರೂ ಈ ರೀತಿ ಮಾಡುತ್ತೀರಿ. ಏನಿದು? ಸದನವೇ ಅಥವಾ ಏನಿದರರ್ಥ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಹಿಂದು ಬೆಳಗಾವಿ ಅಧಿವೇಶನದಲ್ಲಿ ಮಾತನಾಡಿರತಕ್ಕಂಥದ್ದು ರೆಕಾರ್ಡ್‌ನಲ್ಲಿದೆ. ಶ್ರೀ ರಮೇಶ್ ಕುಮಾರ್‌ರವರು ಇದು ಕಾನೂನಿಗೆ ವಿರುದ್ಧವಾಗಿದೆ ಖಂಡಿತವಾಗಿಯೂ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಅವರು ಹೇಳಿ 6 ತಿಂಗಳಾಗಿದೆ. 6 ತಿಂಗಳು ಕಳೆದ ಮೇಲೆ ಶೂನ್ಯ ವೇಳೆಯಲ್ಲಿ ಈ ವಿಷಯವೂ ಪ್ರಸ್ತಾಪವಾಗುತ್ತಿದೆ. ಮಾನ್ಯ ಪಂಚಾಯತ್ ರಾಜ್ ಸಚಿವರು ಈಗಾಗಲೇ ಸ್ಪಷ್ಟವಾಗಿ ಕಾನೂನಿಗೆ ವಿರುದ್ಧವಾಗಿ ಸುತ್ತೋಲೆಯನ್ನು ಹೊರಡಿಸಿದ್ದಾರೆಂದು ಹೇಳಿದ್ದಾರೆ. ಅವರು ಹೇಳಿರುವುದು ರೆಕಾರ್ಡ್ ಕೂಡ ಆಗಿದೆ. ಮುಖ್ಯಮಂತ್ರಿಗಳು ಬರುವುದಕ್ಕೆ ಮೊದಲು ಭೇಟಿ ಮಾಡಿ ತಿಳಿಸುತ್ತೇವೆ ಎಂದು ಹೇಳಿದ್ದರು. ಅದೇ ರೀತಿ ಮುಖ್ಯಮಂತ್ರಿಗಳು ಸಹ ಸದನಕ್ಕೆ ಭಗವಂತ ಬಂದ ಹಾಗೆ ಬಂದಿದ್ದಾರೆ. ಬಹಳ ಸಂತೋಷ. ಮತ್ತೆ ಇದರ ಬಗ್ಗೆ ಸಭೆ ಮಾಡಬೇಕೇ? ನಿಮ್ಮ ಹತ್ತಿರ ಚರ್ಚೆ ಮಾಡಿ, ಕಾನೂನಿಗೆ ವಿರುದ್ಧ ಎಂದು ಹೇಳಿದ ಮೇಲೆ ಸಂಜೆ 5:00 ಗಂಟೆಯವರೆಗೂ ಏಕೆ ಕಾಯಬೇಕೆಂದು ನೀವೇ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ವಸತಿ ಸಚಿವರು ಅದು ಅಕ್ರಮವಾಗಿರುವುದರಿಂದ ಅದನ್ನು ವಿತ್‌ಡ್ರಾ ಮಾಡಿದ್ದೇವೆ ಎಂದು ಹೇಳಿದ್ದರೆ ಮುಗಿಯುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇಷ್ಟು ಬಿಟ್ಟರೆ ಮತ್ತೇನಿದೆ. ಕಾನೂನಿಗೆ ವಿರುದ್ಧವಾಗಿದೆ ಎಂದು ಮಾನ್ಯ ಪಂಚಾಯತ್ ರಾಜ್ ಸಚಿವರು ಒಪ್ಪಿಕೊಂಡಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಒಪ್ಪಿಕೊಂಡಿದ್ದು ಆಗಿದೆ.

20/07.02.2017/1.30/hv.md

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಿದರೆ, 'ಈಗಲೇ, ಈ ಗಳಿಗೆಯಲ್ಲಿಯೇ ಸರ್ಕಾರ ಉತ್ತರವನ್ನು ಕೊಡಬೇಕು' ಎಂದು ಒತ್ತಾಯ ಮಾಡುವುದು ಶೂನ್ಯವೇಳೆಯ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಸಹ ಈಗಾಗಲೇ ಸರ್ಕಾರದ ವತಿಯಿಂದ ಈ ದಿನ ಸಂಜೆ ಐದು ಗಂಟೆಗೆ ಈ ವಿಚಾರವಾಗಿ ಉತ್ತರವನ್ನು ನೀಡುತ್ತೇವೆ ಎನ್ನುವ ಭರವಸೆಯನ್ನು ನೀಡಲಾಗಿದೆ. ಇದರಲ್ಲಿ ಸರ್ಕಾರದ ವತಿಯಿಂದ ಏನಾದರೂ ಲೋಪವಾಗಿದೆಯೇ ಎಂದು ನೋಡಿದರೆ ಯಾವುದೇ ಲೋಪವಾಗಿಲ್ಲ. ವಿರೋಧ ಪಕ್ಷದವರು ಧರಣಿ ಮಾಡುತ್ತಿರುವುದೇ ಲೋಪವಾಗಿದೆ. ಅವರುಗಳು ಮಾಡುತ್ತಿರುವ ಧರಣಿ ನಿಯಮಾವಳಿಗಳ ವಿರುದ್ಧವಾಗಿ ನಡೆಯುತ್ತಿದೆ. ನಾನು, ವಸತಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಎಲ್ಲರೂ ಸೇರಿ ಚರ್ಚೆ ಮಾಡಿ ಈ ವಿಚಾರಕ್ಕೆ ಸಮರ್ಪಕವಾಗಿರುವ ಉತ್ತರವನ್ನು ಈ ದಿನ ಸಂಜೆ 5 ಗಂಟೆಗೆ ನೀಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವುದು ನಾವು ಇಲ್ಲಿ. . . .

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಸುಮ್ಮನೆ ಲಂಬಿಸುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು, ನಾವು ಧರಣಿ ಮಾಡುತ್ತಿರುವುದೇ ಲೋಪ ಎನ್ನುವ ಮಾತನ್ನು ಹೇಳಿದ್ದಾರೆ. ಕಾನೂನಿಗೆ ವಿರುದ್ಧವಾಗಿ ಸುತ್ತೋಲೆ ಹೊರಡಿಸಲಾಗಿದೆ ಎಂದು ಹೇಳಿರುವುದು ಅವರ ಲೋಪವೋ, ಆ ಸುತ್ತೋಲೆಯನ್ನು ಹೊರಡಿಸಿರುವ ಅಧಿಕಾರಿಗಳ ಲೋಪವೋ ಅಥವಾ ಕಾನೂನಿಗೆ ವಿರುದ್ಧವಾಗಿರುವ ಸುತ್ತೋಲೆಯನ್ನು ಹೊರಡಿಸಿರುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿರುವ ಈ ಸರ್ಕಾರದ ಲೋಪವೋ ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತಮ ವಾಕ್ ಚತುರರು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಅವರಷ್ಟು ವಾಕ್ ಚಾತುರ್ಯ ನನಗಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರು ನಮ್ಮಷ್ಟು ವಾಕ್ ಚತುರರಲ್ಲದಿದ್ದರೂ ಸಹ ತಮ್ಮ ಅಧಿಕಾರಾವಧಿಯಲ್ಲಿ ನಾಲ್ಕೂವರೆ ವರ್ಷಗಳನ್ನು ಪೂರೈಸಿದ್ದಾರೆ. ಈಗ ನನ್ನ ಪ್ರಶ್ನೆ ಅದಲ್ಲ.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ನಾಲ್ಕೂವರೆ ವರ್ಷಗಳು ಮಾತ್ರವಲ್ಲ ಮುಂದಿನ ಐದು ವರ್ಷಗಳ ಕಾಲ ನಮ್ಮ ಪಕ್ಷದ ಸರ್ಕಾರವೇ ಅಧಿಕಾರದಲ್ಲಿರುತ್ತದೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮತ್ತು ಶ್ರೀ ಕೆ.ಎಸ್.ಈಶ್ವರಪ್ಪನವರು ಏತಕ್ಕೋಸ್ಕರ ಇಷ್ಟೊಂದು ಭ್ರಮೆಯಲ್ಲಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅವರ ಪಕ್ಷ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಮಾಡಬಾರದ ಕೆಲಸಗಳನ್ನು ಮಾಡಿ, ಪುನಃ ಅಧಿಕಾರಕ್ಕೆ ಬರುತ್ತೇವೆಂದು ಹೇಳುವುದು ಭ್ರಮೆಯಲ್ಲವೇ? ಮುಂದಿನ ಚುನಾವಣೆಯಲ್ಲಿ ಪುನಃ ನಾವೇ ಅಧಿಕಾರಕ್ಕೆ ಬರುವುದು ಖಂಡಿತ. ಆದ್ದರಿಂದ ನಾಲ್ಕೂವರೆ ವರ್ಷಗಳಲ್ಲ, ಇನ್ನೂ ಐದು ವರ್ಷಗಳ ಕಾಲ ನಮ್ಮ ಸರ್ಕಾರವೇ ಅಧಿಕಾರದಲ್ಲಿ ಇರುತ್ತದೆ. ನಾವೇ ಅಧಿಕಾರಕ್ಕೆ ಬರುತ್ತೇವೆ.

**ಶ್ರೀ ಅರುಣ ಶಹಾಪುರ(ಸದನದ ಬಾವಿಯಿಂದ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು 'ನಮ್ಮ ಸರ್ಕಾರವೇ ಅಧಿಕಾರಕ್ಕೆ ಬರುತ್ತದೆ' ಎಂದು ಹೇಳುವುದಕ್ಕೆ ಬದಲಾಗಿ 'ನನ್ನ ಸರ್ಕಾರವೇ ಅಧಿಕಾರಕ್ಕೆ ಬರುತ್ತದೆ' ಎಂದು ಹೇಳಬೇಕು.

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಈ ಅವಧಿ ಪೂರೈಸುವವರೆಗೆ ನಾನೇ ಮುಖ್ಯಮಂತ್ರಿಯಾಗಿರುತ್ತೇನೆ. ಆ ನಂತರ ಹೈಕಮಾಂಡ್ ಯಾರನ್ನು ಮುಖ್ಯಮಂತ್ರಿ ಮಾಡಬೇಕೆಂದು ತೀರ್ಮಾನ ಮಾಡುತ್ತದೆ, ಅವರು ಮುಖ್ಯಮಂತ್ರಿಗಳಾಗುತ್ತಾರೆ. ಆದರೆ, ನಮ್ಮ ಪಕ್ಷವೇ ಮುಂದಿನ ಐದು ವರ್ಷಗಳ ಕಾಲ ಅಧಿಕಾರದಲ್ಲಿ ಇರುತ್ತದೆ. ಅವರ ಯಾವ ಭ್ರಮೆಯೂ ವರ್ಕ್‌ಔಟ್ ಆಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ರಾತ್ರಿ ಹೊತ್ತಿನಲ್ಲಿ ಮಾತ್ರ ಕನಸು ಕಾಣುತ್ತಾರೆಂದು ನಾವು ಭಾವಿಸಿದ್ದೆವು. ಆದರೆ, ಹಗಲು ಹೊತ್ತಿನಲ್ಲಿ ಗೊರಕೆ ಹೊಡೆಯುತ್ತಿರುವಾಗಲೂ ಕನಸು ಕಾಣುತ್ತಿದ್ದಾರೆ ಎನ್ನುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ಅವರು ಕನಸು ಕಾಣುವುದನ್ನು ನಾವು ಬೇಡವೆಂದು ಹೇಳುವುದಿಲ್ಲ. ಆದರೆ, ಇಲ್ಲಿರುವ ಪ್ರಶ್ನೆಯೇನೆಂದರೆ, ಆರು ತಿಂಗಳ ಹಿಂದೆ...

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಅವರು ಎಷ್ಟು ಹೇಳಿದರೂ ಅಷ್ಟೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಈ ದಿನ ಸಂಜೆ 5 ಗಂಟೆಗೆ ಉತ್ತರ ಕೊಡುತ್ತೇವೆಂದು ಹೇಳಿದ್ದೇವೆ, ಅದೇ ರೀತಿಯಲ್ಲಿ ಸಂಜೆ 5 ಗಂಟೆಗೆ ಉತ್ತರವನ್ನು ಕೊಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಕಾನೂನಿಗೆ ವಿರುದ್ಧವಾಗಿ ಇವರು ಸುತ್ತೋಲೆಯನ್ನು ಹೊರಡಿಸಿರುವುದರಿಂದ ಮತ್ತು ಆ ಸುತ್ತೋಲೆ ಕಾನೂನಿಗೆ ವಿರುದ್ಧವಾಗಿದೆಯೆಂದು ಇವರೇ ಒಪ್ಪಿಕೊಂಡಿರುವುದರಿಂದ ಹಾಗೂ ಬೆಳಗಾವಿ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆಯಾಗಿದ್ದರೂ ಸಹ . . . .  . . .

**ಶ್ರೀ ಸಿದ್ದರಾಮಯ್ಯ:–** ಸನ್ಮಾನ್ಯ ಸಭಾಪತಿಯವರೇ, ಈಗ ಚರ್ಚೆ ಮಾಡುವುದಕ್ಕೆ ಅವರ ಬಳಿ ಬೇರೆ ಯಾವುದೇ ವಿಷಯವಿಲ್ಲ. ಆದ್ದರಿಂದ ಈ ರೀತಿ ಕಾಲಹರಣ ಮಾಡುತ್ತಿದ್ದಾರೆ. ಇದು ಸರಿಯಲ್ಲ. ತಾವು ಇದಕ್ಕೆ ಅವಕಾಶ ಮಾಡಿಕೊಡಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕಿಂತ ಗಂಭೀರವಾದ ವಿಚಾರ ಬೇರೆ ಯಾವುದಿದೆ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇವರು ಕೊಲೆ ಮಾಡುತ್ತಿದ್ದಾರೆ. ಚರ್ಚೆ ಮಾಡುವುದಕ್ಕೆ ಈ ವಿಚಾರಕ್ಕಿಂತ ಬೇರೆ ವಿಚಾರ ಬೇಕೇ? ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕೊಲೆ ಮಾಡಿ, ಚರ್ಚೆಯ ಅವಶ್ಯಕತೆಯೇ ಇಲ್ಲವೆಂದು ಅವರು ಹೇಳಿದರೆ ಹೇಗೆ? ಅದಕ್ಕೋಸ್ಕರ...

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಗೌರವಾನ್ವಿತ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಸದನವನ್ನು ಸುಗಮವಾಗಿ ನಡೆಸಲು ಅನುವು ಮಾಡಿಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಬೇರೆ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವರ ಬಳಿ ವಿಷಯವಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು:-** ದಯವಿಟ್ಟು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳಬೇಕು. ಹಿಂದೆ ಶೂನ್ಯವೇಳೆಯಲ್ಲಿ ಯಾವ ವಿಚಾರದ ಬಗ್ಗೆಯೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಚರ್ಚೆ ನಡೆದಿಲ್ಲ. ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ನಾನು ಇಂದು ಅವಕಾಶ ಮಾಡಿಕೊಟ್ಟಿದ್ದೇನೆ. ಅದಕ್ಕೆ ಸರ್ಕಾರವೂ ಸಹ ಸ್ಪಂದಿಸಿದೆ. ಸರ್ಕಾರ ಶೂನ್ಯವೇಳೆಯ ಪ್ರಸ್ತಾಪಕ್ಕೆ ಉತ್ತರವನ್ನು ನೀಡಲು ಮೂರು ದಿನಗಳ ಕಾಲಾವಕಾಶವನ್ನು ತೆಗೆದುಕೊಳ್ಳಬಹುದಾಗಿತ್ತು. ಆದರೆ, ಮಾನ್ಯ ಸಚಿವರು ಈ ದಿನ ಸಂಜೆ 5 ಗಂಟೆಗೆ ಉತ್ತರವನ್ನು ನೀಡುತ್ತೇವೆಂದು ಹೇಳಿದ್ದಾರೆ. ಸಂಜೆ 5 ಗಂಟೆಗೆ ಈ ವಿಚಾರವಾಗಿ ಸರ್ಕಾರ ಉತ್ತರವನ್ನು ನೀಡುತ್ತದೆ. ಅಲ್ಲಿಯವರೆಗೆ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ವಿನಂತಿಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ, ಕಾನೂನು ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಉಳಿಸುವ ನಿಟ್ಟಿನಲ್ಲಿ ನಾವು ಇಂದು ಧರಣಿ ಮಾಡುತ್ತಿದ್ದೇವೆ. ಯಾವುದೇ ಕಾರಣಕ್ಕೂ ಕಾನೂನಿನ ವಿರುದ್ಧವಾಗಿ ಹೋಗುವುದಕ್ಕೆ ನಾವು ಬಿಡುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಂತೆ ವಿರೋಧ ಪಕ್ಷದ ಎಲ್ಲ ಸದಸ್ಯರು ಸರ್ಕಾರದ ಧೋರಣೆಯನ್ನು ಖಂಡಿಸಿ ಸದನದ ಬಾವಿಯಲ್ಲಿ ಧರಣಿ ಕುಳಿತರು.)**

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸುವ ಮಾತನಾಡಿ, ಈಗ ಅದಕ್ಕೆ ವಿರುದ್ಧವಾದ ಕೆಲಸವನ್ನು ಮಾಡುತ್ತಿದ್ದಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವಿ.ಎಸ್.ಉಗ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮಾತ್ರ ಅವಕಾಶವಿದೆಯೇ ಹೊರತು ಚರ್ಚೆ ಮಾಡುವುದಕ್ಕೆ ಅಲ್ಲ. ಶೂನ್ಯವೇಳೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಗಿರುವುದನ್ನು ನಾವು ಎಲ್ಲಿಯೂ ನೋಡಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಹಠ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ರೀತಿ ಧರಣಿ ಮಾಡುವುದು ಸಂಸದೀಯ ಸಂಪ್ರದಾಯಗಳಿಗೆ ಮತ್ತು ನಿಯಮಾವಳಿಗಳಿಗೆ ವಿರುದ್ಧವಾಗಿದೆ. ತಾವು ಇದಕ್ಕೆ ಅವಕಾಶ ಮಾಡಿಕೊಡಬಾರದು. ಅವರುಗಳು ಈ ರೀತಿ ವರ್ತಿಸಿದರೆ ಸದನ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾವೇ ರಚನೆ ಮಾಡಿಕೊಂಡಿರುವ ನಿಯಮಾವಳಿಗಳ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ಉತ್ತರ ಕೊಡುವುದಿಲ್ಲವೆಂದು ನಾವು ಹೇಳಿದರೆ ಅದು ಬೇರೆ ವಿಚಾರವಾಗುತ್ತಿತ್ತು. ಆದರೆ, ಸಂಜೆ 5 ಗಂಟೆಗೆ ಉತ್ತರ ಕೊಡುತ್ತೇವೆಂದು ಹೇಳಿದ ಮೇಲೆಯೂ ಧರಣಿ ಮಾಡುವುದು ಮೊಂಡುತನವಾಗಿದೆ. ಅವರ ಈ ಒತ್ತಾಯವನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇರುವವರು ಮಾಡುವ ಕೆಲಸವೇ ಇದು?

**(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಅವರ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಕಾನೂನಿನ ವಿರುದ್ಧ ಒಂದಲ್ಲ ಎರಡಲ್ಲ ಸುಮಾರು 20 ಸುತ್ತೋಲೆಗಳನ್ನು ಹೊರಡಿಸಿದ್ದಾರೆ. ಈಗ ಅವರೇ ನಮಗೆ ಪಾಠ ಹೇಳಿಕೊಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ(ಸದನದ ಬಾವಿಯೊಳಗಿನಿಂದ):-** ಸನ್ಮಾನ್ಯ ಸಭಾಪತಿಯವರೇ, ಅವರ ಭಾಷಣ ಕೇಳಿಕೇಳಿ ಸಾಕಾಗಿದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಕೆ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಅವರ ಭಾಷಣವನ್ನು ನಾವು ಕೇಳಬೇಕು, ಉಳಿದವರು ಮಾತನಾಡುವಾಗ ಅವರು ಕೇಳುವುದು ಬೇಡವೇ? ಅವರು ಮಾಡಿರುವ ಅಪರಾಧಗಳನ್ನು ಹೇಳಿದರೆ ಅದು ಭಾಷಣವಾಗುತ್ತದೆ.

**(ಗೊಂದಲ)**

**ಸಭಾಪತಿಯವರು:-** ದಯಮಾಡಿ ಎಲ್ಲ ಗೌರವಾನ್ವಿತ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ಆರ್.ವಿ.ದೇಶಪಾಂಡೆ:-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಮಾತಿಗೂ ಅವರುಗಳು ಬೆಲೆ ಕೊಡದಿದ್ದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಗುತ್ತಿದೆ.

21/7-2-2017/3.30/ಡಿಎಸ್-ಆರ್ಎನ್

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 37 ನಿಮಿಷಗಳಿಗೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಮಧ್ಯಾಹ್ನ 3 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**(ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾಗಿದ್ದರು)**

**ಡಾ:ಜಿ.ಪರಮೇಶ್ವರ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದಂತಹ ವಿಷಯವನ್ನು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಮಧ್ಯಾಹ್ನ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಬಹಳ ಜವಾಬ್ದಾರಿಯುತವಾಗಿ ಉತ್ತರ ಕೊಟ್ಟಿದ್ದಾರೆ. ಇದು ಸಂವಿಧಾನಕ್ಕೆ ವಿರೋಧವಾಗಿದೆ ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ಪಂಚಾಯತ್ ರಾಜ್ ಇಲಾಖೆ ಹಾಗೂ ವಸತಿ ಇಲಾಖೆಗೆ ಪತ್ರವನ್ನು ಬರೆದಿದ್ದೇವೆಂದು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಹೇಳಿದ್ದಾರೆ. ನಾನು ವಸತಿ ಸಚಿವರ ಜೊತೆ ಮಾತನಾಡುತ್ತೇನೆ, ನಾನು ಅವರ ಜೊತೆಯಲ್ಲಿ ಮಾತನಾಡಿಕೊಂಡು ತೀರ್ಮಾನಕ್ಕೆ ಬರುತ್ತೇನೆಂದು ಮಾನ್ಯ ಸಚಿವರು ಜವಾಬ್ದಾರಿಯುತವಾಗಿ ಹೇಳಿದ್ದಾರೆ. ಅಗತ್ಯವಿದ್ದರೆ ನಾವು ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಐದು ಗಂಟೆಗೆ ಉತ್ತರ ಕೊಡುತ್ತೇವೆ ಎನ್ನುವ ಮಾತನ್ನು ಸಹ ಅವರು ಹೇಳಿದ್ದಾರೆ. ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಎಲ್ಲಾ ಸದಸ್ಯರು ಕೂಡ ತಮ್ಮ ಸ್ಥಾನಗಳಿಗೆ ಹೋಗಿ, ಐದು ಗಂಟೆಗೆ ಇನ್ನೇನು ಒಂದೂವರೆ ಗಂಟೆ ಇದೆ, ಉತ್ತರ ಕೊಡುತ್ತೇವೆ. ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದರೆ, ಹಾಗಾದರೆ ಸರ್ಕಾರ ಸಂವಿಧಾನಕ್ಕೆ ವಿರುದ್ಧವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದು ನಮಗೂ ಅರ್ಥವಾಗುತ್ತದೆ, ನಿಮಗೂ ಅರ್ಥವಾಗುತ್ತದೆ. ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ. ಇನ್ನು ಬೇರೆ ಬೇರೆ ವಿಷಯಗಳಿವೆ, ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರ ಕೋರಿಕೆಯ ಮೇರೆಗೆ, ಅವರ ಹೇಳಿಕೆಯ ಮೇಲೆ ಸಭೆ ನಡೆಸೋಣ. ಐದು ಗಂಟೆಗೆ ಬಂದು ಅವರು ಏನು ಉತ್ತರ ಕೊಡುತ್ತಾರೆ ಎಂಬುದನ್ನು ನೋಡೋಣ. ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸಭೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಮಗೆ ಹಾಗೂ ಮಾನ್ಯ ಸಭಾನಾಯಕರಿಗೆ ಗೌರವ ಕೊಡುವುದರಲ್ಲಿ ನಾವು ಖಂಡಿತವಾಗಿಯೂ ಮೊದಲನೆಯ ಸ್ಥಾನದಲ್ಲಿಯೇ ಇದ್ದೇವೆ. ಸಭಾನಾಯಕರಿಗಾಗಲಿ, ತಮಗಾಗಲಿ, ತಮ್ಮ ಪೀಠಕ್ಕಾಗಲಿ ಗೌರವ ಕೊಡಬಾರದು ಎಂಬುದು ನಮ್ಮ ಉದ್ದೇಶವಲ್ಲ. ಮಾನ್ಯ ಸಭಾನಾಯಕರು, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ಸಂವಿಧಾನ ವಿರೋಧಿ ಕಾನೂನು ಮಾಡಿರುವುದು ಹಾಗೂ ಆ ಸುತ್ತೋಲೆ ತಪ್ಪಿದೆ ಎಂಬುದನ್ನು ಈಗಲೂ ಸರ್ಕಾರದವರು ಒಪ್ಪಿಕೊಳ್ಳುತ್ತಿದ್ದಾರೆ. ಒಪ್ಪಿಕೊಂಡು, ನೀವು ಐದು ಗಂಟೆಯವರೆಗೆ ಕಾಯಿರಿ ಎಂದು ಹೇಳುವುದು ನನಗೆ ಅರ್ಥವಾಗುತ್ತಿಲ್ಲ. ಹೋಗಲಿ ಎನ್ನುವುದಕ್ಕೆ ಇದು ಇವತ್ತಿನದೂ ಅಲ್ಲ, ಹೊಸದಾಗಿ ನಾವು ಇವತ್ತೇ ಶುರು ಮಾಡಿದ್ದೇವೆಂದರೆ, ಹೌದು ಎಂದು ಹೇಳಬಹುದು. ಇದು ಕಳೆದ ಬೆಳಗಾವಿಯ ವಿಧಾನ ಮಂಡಲದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯದಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿವೇಶನದಲ್ಲಿ ಅವರು ಕೊಟ್ಟಂಥ ಆಶ್ವಾಸನೆ. ನಾವು ಏಕೆ ಇಷ್ಟೊಂದು ಧರಣಿ ಮಾಡಬೇಕಾಗಿತ್ತು? ಕಳೆದ ಬಾರಿ ಬೆಳಗಾವಿಯಲ್ಲಿ ಈ ವಿಚಾರವನ್ನು ಅವರ ಗಮನಕ್ಕೆ ತಂದಾಗ ಅವರು ಮಾಡಿದ್ದರೆ ಮತ್ತೊಮ್ಮೆ ಇವತ್ತು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಇದನ್ನು ಪ್ರಸ್ತಾಪ ಮಾಡುವಂತಹ ಅವಶ್ಯಕತೆಯೂ ಬರುತ್ತಿರಲಿಲ್ಲ. ಮುಖ್ಯಮಂತ್ರಿಗಳಾಗಲಿ, ಸಭಾನಾಯಕರಾಗಲಿ, ಪಂಚಾಯತ್ ರಾಜ್ ಸಚಿವರಾಗಲಿ ಇದನ್ನು ಹೇಳುವ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾವು ನಿಂತುಕೊಂಡಾಗ ಇಲ್ಲ ಎಂದು ಹೇಳುತ್ತೀರಿ. ವಿರೋಧ ಪಕ್ಷದವರು ನಿಂತುಕೊಂಡಾಗ ಅವಕಾಶ ಕೊಡುತ್ತೀರಿ. ಇದು ಸರಿ ಕಾಣುವುದಿಲ್ಲ.

**ಸಭಾಪತಿಯವರು:–** ನೀವು ಹಾಗೆಲ್ಲಾ ಮಾತನಾಡಬಾರದು. ಶೂನ್ಯ ವೇಳೆಯಲ್ಲಿ ಬೇರೆ ವಿಷಯ ಬಂದಾಗ ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅದರ ಬಗ್ಗೆ ಇರಲಿ, ಈಗ ಸದನ ನಡೆಸಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ಶೂನ್ಯ ವೇಳೆಯಲ್ಲಿ ಈ ರೀತಿ ಚರ್ಚೆ ಮಾಡುವ ಸಂಪ್ರದಾಯ ಇಲ್ಲ. ಸದನದ ಘನತೆ, ಗೌರವಕ್ಕೆ ಚ್ಯುತಿ ಬರುತ್ತದೆ. ನಿಯಮಾವಳಿಗಳಿಗೆ ತೊಂದರೆಯಾಗುತ್ತದೆ.

**ಸಭಾಪತಿಯವರು:–** ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇಲ್ಲಿ ನಿಯಮಾವಳಿಗಳ ಬಗ್ಗೆ ಹೇಳುತ್ತಿದ್ದಾರೆ. ಸಂವಿಧಾನದ ಬಗ್ಗೆ ಹೇಳುತ್ತಿಲ್ಲ. ಮಾನ್ಯ ಉಗ್ರಪ್ಪನವರು ಒಳ್ಳೆಯ ಕಾನೂನು ತಜ್ಞರು. ಕಾನೂನು ತಜ್ಞರಿಗೆ ಸಂವಿಧಾನದ ವಿರೋಧವಾದರೂ ಪರವಾಗಿಲ್ಲ. ನೀತಿ ನಿಯಮ ಉಳಿಯಬೇಕು. ಬೆಳಿಗ್ಗೆ ಶೂನ್ಯ ವೇಳೆಯಲ್ಲಿ ಹೈಕೋರ್ಟ್ ಬಗ್ಗೆ ಬಂದಾಗ ಅವರೇ ಮಾತನಾಡಿದರು.

**ಶ್ರೀ ವಿ.ಎಸ್.ಉಗ್ರಪ್ಪ:–** ಇವರಿಗೆ ರಾಜ್ಯದ ಇನ್ನಿತರ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಮಾಹಿತಿ ಇಲ್ಲ.

**ಸಭಾಪತಿಯವರು:–** ಈಗ ಆ ಬಗ್ಗೆ ಚರ್ಚೆ ಬೇಡ. ಈಗ ಸದನ ನಡೆಸೋಣ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಈಗಾಗಲೇ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶವನ್ನು ಕೊಟ್ಟಾಗಿದೆ. Now this subject is the property of this House. ಯಾವುದೇ ಆಗಲಿ, ಒಂದು ಸಲ ಅವಕಾಶ ಕೊಟ್ಟುಬಿಟ್ಟರೆ ಆಗಿಹೋಯಿತು.

**ಡಾ:ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮತ್ತೊಂದು ಸಲ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುತ್ತೇನೆ. ಮಾನ್ಯ ರಾಮಚಂದ್ರಗೌಡರು ಟೆಕ್ನಿಕಲ್ ಡೀಟೈಲ್ಸ್‌ಗೆ ಹೋಗುವುದು ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಹೈಕೋರ್ಟ್ ಬಗ್ಗೆ ಉಗ್ರಪ್ಪನವರು ಮಾತನಾಡಬೇಕಾದರೆ ನೀತಿ–ನಿಯಮಗಳಿಲ್ಲ, ಉಗ್ರಪ್ಪ ಬೇಕಾದರೆ ಮಾತನಾಡಬಹುದು. ಆದರೆ ಗ್ರಾಮಸಭೆ ಬಗ್ಗೆ ಮಾತನಾಡುವಾಗ ನೀತಿ–ನಿಯಮಗಳು ಬರುತ್ತವೆ. ನಾವು ಪಂಚಾಯತ್ ರಾಜ್ ಬಗ್ಗೆ ಮಾತ್ರ ಮಾತನಾಡುವ ಹಾಗಿಲ್ಲ, ಆದರೆ ಅವರು ಮಾತ್ರ ಹೈಕೋರ್ಟ್ ಬಗ್ಗೆ ಮಾತನಾಡಬಹುದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಆ ವಿಚಾರ ಪ್ರಸ್ತಾಪವಾದಾಗ ಇದನ್ನು ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಇದು ಗಹನವಾಗಿರುವಂತಹ ವಿಚಾರವಾಗಿದೆ ಮಾತನಾಡಿ ಎಂದು ಹೇಳಿದ್ದರಿಂದ ಮಾತನಾಡಿದ್ದೇನೆ. ಆದರೆ, ಇವರಿಗೆ ರಾಜ್ಯದ ಯಾವುದೇ ಸಮಸ್ಯೆಗಳ ಬಗ್ಗೆ ಆಸಕ್ತಿ ಇಲ್ಲ.

**ಸಭಾಪತಿಯವರು:–** ಈಗ ಇದರ ಬಗ್ಗೆ ವಾದ ವಿವಾದ ಬೇಡ, ಇದರ ಬಗ್ಗೆ ಚರ್ಚೆ ಬೇಡ. ಈಗ ಒಂದು ಪ್ರಕಟಣೆ ಇದೆ.

### 3. **ಪ್ರಕಟಣೆ**

**ಸಭಾಪತಿಯವರು:–** ದಿನಾಂಕ:07.02.2017 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ಸದನದ ಕಾರ್ಯಕಲಾಪ ನಡೆಸಲು ತೀರ್ಮಾನಿಸಲಾಯಿತು.

1. ದಿನಾಂಕ:13.02.2017 ಮತ್ತು 14.02.2017 ರಂದು ಅಧಿವೇಶನವನ್ನು ನಡೆಸಲಾಗುವುದು.
2. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.
3. ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎರಡು ದಿನ ಅಧಿವೇಶನವನ್ನು ವಿಸ್ತರಣೆ ಮಾಡುವುದಕ್ಕೆ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿದೆ. ಈ ವರದಿಗೆ ಸದನದ ಅಂಗೀಕಾರವಿದೆ ಎಂದು ನಾನು ಭಾವಿಸುತ್ತೇನೆ. ಈಗ ಸದನವನ್ನು ಸಂಜೆ 4.00 ಗಂಟೆಯವರೆಗೆ ಮುಂದೂಡಿದ್ದೇನೆ.

(ಮಧ್ಯಾಹ್ನ **3 ಗಂಟೆ 40 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಮತ್ತೆ ಸಂಜೆ 5 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು**)

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

*(22) 07.02.2017 ಎಂವಿ–ವಿಕೆ 5.20*

**ಸಭಾಪತಿಯವರು:–** ಸಂಜೆ ನಾಲ್ಕು ಗಂಟೆಗೆ ಸೇರೋಣವೆಂದು ನಾನು ಹೇಳಿದ್ದು ಹೌದು. ಆದರೆ ಸಾಕಷ್ಟು ಚರ್ಚೆ ಮಾಡಬೇಕಾದಂತಹ ಸಂದರ್ಭ ಬಂದ ಕಾರಣಕ್ಕಾಗಿ ತಡವಾಗಿದೆ, ಸಭೆಯಲ್ಲಿ ಎಲ್ಲಾ ಸದಸ್ಯರು ದಯವಿಟ್ಟು ಗಮನಿಸಬೇಕು, ಈಗ ಗೌರವಾನ್ವಿತ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನದಲ್ಲಿ ಆಸೀನರಾದರೆ, ಸರ್ಕಾರದ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆ. ಉತ್ತರ ಕೊಟ್ಟ ನಂತರ ಏನು ಮಾಡಬೇಕು ಎಂಬುದನ್ನು ಆಮೇಲೆ ಯೋಚನೆ ಮಾಡೋಣ. ಉತ್ತರ ಕೊಡುವಾಗ the House should be in order. Please go back to your respective seats. ದಯಮಾಡಿ ಕುಳಿತುಕೊಳ್ಳಿ ಆಮೇಲೆ ಅವರು ಉತ್ತರ ಕೊಡುತ್ತಾರೆ.

**ಡಾ.ಜಿ.ಪರಮೇಶ್ವರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ವಸತಿ ಸಚಿವರು ಬಂದಿದ್ದಾರೆ ಮತ್ತು ಪಂಚಾಯತ್ ರಾಜ್ ಸಚಿವರು ಕೂಡ ಇದ್ದಾರೆ. ಅವರು ಉತ್ತರವನ್ನು ಕೊಡುತ್ತಾರೆ, ಸದಸ್ಯರು ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಲಿ.

**ಸಭಾಪತಿಯವರು:–** ನೀವು ಹೀಗೆ ಕುಳಿತರೆ, ಅವರ ಉತ್ತರ ಉಪಯೋಗವಾಗುವುದಿಲ್ಲ. Please go back to your seats.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಏನು ಉತ್ತರ ಕೊಡುತ್ತಾರೆ ಎಂಬುದರ ಮೇಲೆ ನಾವು ತೀರ್ಮಾನ ಮಾಡುತ್ತೇವೆ.

**ಸಭಾಪತಿಯವರು:-** ಅದು ಆ ರೀತಿಯಾಗುವುದಿಲ್ಲ, ಸದಸ್ಯರು ತಮ್ಮ ಸ್ಥಾನದಲ್ಲಿ ಕುಳಿತಾಗಲೆ ಉತ್ತರ, ಆಮೇಲೆ ಬೇಕಾದರೆ ಏನು ಬೇಕಾದರೂ ಆಗಲಿ.

**ಡಾ.ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೇ, ಉತ್ತರ ಕೊಡುವುದಕ್ಕೆ ಆಗುವುದಿಲ್ಲ, ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು, ಆಗ ನಾವು ಉತ್ತರ ಕೊಡುವುದು, ಇಲ್ಲವಾದರೆ ಉತ್ತರ ಕೊಡುವುದಿಲ್ಲ. ಸದಸ್ಯರು ದಯಮಾಡಿ ಸಹಕರಿಸಬೇಕು.

**(ಗೊಂದಲ)**

**ಡಾ.ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೇ, ಏನು ಇದು. There is a limit.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರದವರು ಪ್ರಜಾಪ್ರಭುತ್ವವನ್ನು ಉಳಿಸುತ್ತಾರೆ ಎನ್ನುವಂತಹ ವಿಶ್ವಾಸದಲ್ಲಿ ಮತ್ತು ಸಂವಿಧಾನವನ್ನು ಉಳಿಸುತ್ತಾರೆ ಎನ್ನುವಂತಹ ನಂಬಿಕೆಯ ಮೇಲೆ ನಾವು ವಾಪಸ್ಸು ಬರುತ್ತಿದ್ದೇವೆ.

**(ಈ ಹಂತದಲ್ಲಿ ಬಾವಿಗೆ ಬಂದು ಧರಣಿ ನಡೆಸುತ್ತಿದ್ದ ಸದಸ್ಯರು ಸದನದ ಬಾವಿಯಿಂದ ಹೊರ ನಡೆದರು)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾವುಗಳು ಸುಮಾರು ನಾಲ್ಕು ಗಂಟೆಯಿಂದ ಇದುವರೆವಿಗೂ ಕಾಯುತ್ತಾ ಕುಳಿತಿದ್ದೇವೆ. ಈ ರೀತಿ ಮಾಡುವುದಕ್ಕೆ ಹೋಗಬೇಡಿ, ಸದನವನ್ನು ನಡೆಸಿ. ಅನೇಕ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ಅದಕ್ಕೆ ನಾನು ಕ್ಷಮೆ ಕೇಳಿದ್ದೇನೆ. ಸರ್ಕಾರ ಐದು ಗಂಟೆಗೆ ಉತ್ತರ ಹೇಳುತ್ತೇನೆ ಎಂದು ಹೇಳಿತ್ತು. ಸ್ವಲ್ಪ ತಡವಾಯಿತು, ಐದು ಗಂಟೆಯೂ ದಾಟಿ ಆಗಿದೆ. ಸರ್ಕಾರದ ಪರವಾಗಿ ತಾವು ಏನು ಹೇಳುತ್ತೀರಾ ಆ ವಿಷಯದ ಬಗ್ಗೆ ಪ್ರಸ್ತಾವನೆ ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಬೆಲ್ ಹಾಕಿ ಮತ್ತೆ ಐದೂವರೆಗೆ ಸೇರುತ್ತೇವೆ ಎಂದು ಹೇಳಿ, ನಮಗೆಲ್ಲರಿಗೂ ಸಹ ನಮ್ಮದೆ ಆದಂತಹ ಜವಾಬ್ದಾರಿಗಳು ಇರುತ್ತವೆ.

**ಸಭಾಪತಿಯವರು:–** ನೀವು ಅದನ್ನೆ ಪದೇ ಪದೇ ಹೇಳುತ್ತೀರಲ್ಲ, ನಾನು ಹೇಳಿದ್ದು ಅರ್ಥವಾಗುವುದಿಲ್ಲವೆ? ಕನ್ನಡ ಬರುತ್ತದೆ ಅಲ್ಲವೆ ನಿಮಗೆ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನೀವು ಪ್ರತಿ ಬಾರಿ ಹೀಗೆ ಮಾಡುತ್ತಿದ್ದೀರಿ.

**ಸಭಾಪತಿಯವರು:–** ಬಂದ ತಕ್ಷಣ ಕೇಳಿದ್ದೇನೆ, ಅದಕ್ಕೆ ಪದೇ ಪದೇ ಹೋಗಬೇಡಿ. ಈಗ ಸರ್ಕಾರದ ಪರವಾಗಿ ಯಾರು ಉತ್ತರ ಹೇಳುತ್ತೀರಾ?

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಕಳೆದ ಕೆಲವು ಗಂಟೆಗಳಿಂದ, ನಮ್ಮ ಸರ್ಕಾರದ ಸಂವಿಧಾನ ಹಾಗೂ ನಾವು ಮಾಡಿರತಕ್ಕಂಥ ಕಾನೂನಿನ ಬಗೆಗೆ ಇರುವ ಬದ್ಧತೆ, ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಮಗೆ ಇರುವ ಆಸಕ್ತಿ ಹಾಗೂ ನಮ್ಮ ಪ್ರಯತ್ನಗಳನ್ನು, ಮೇಲ್ಮನೆಯ ಕೆಲವು ಸದಸ್ಯರು ಹಲವಾರು ಕಾರಣಗಳಿಂದ ಅನುಮಾನಪಟ್ಟುಕೊಂಡರು. ಏಕೆ ಅನುಮಾನಪಟ್ಟುಕೊಂಡರೋ ಗೊತ್ತಿಲ್ಲ. ನಾವು ಎಷ್ಟೇ ಅವರಿಗೆ ಮನವರಿಕೆ ಮಾಡಿಕೊಡುವಂತಹ ಪ್ರಯತ್ನ ಮಾಡಿದಾಗಲೂ ಸಹ ಸಾಧ್ಯವಾಗಲಿಲ್ಲ. ನಾನು ಈ ಸದನಕ್ಕೆ ಅತ್ಯಂತ ನಮ್ರತೆಯಿಂದ ನಿವೇದನೆ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಸೋಮಣ್ಣನವರು ಇಲ್ಲೇ ಇದ್ದಾರೆ, ಸಂವಿಧಾನದ 243ನೇ ಅನುಚ್ಛೇದ ಅದರ ಮೂಲಕ ಹರಿದು ಬಂದಂತಹ ಅಧಿಕಾರ ವಿಕೇಂದ್ರೀಕರಣದ ಮೂಲಕ ಗ್ರಾಮಸಭೆ ಮತ್ತು ಪಂಚಾಯಿತ್‌ಗಳಿಗೆ ಬಂದಿರತಕ್ಕಂತಹ ಆ ಶಕ್ತಿ, ಅದನ್ನು ಮಾನ್ಯ ಸೋಮಣ್ಣನವರು ವಸತಿ ಸಚಿವರಾಗಿದ್ದಂತಹ ಮತ್ತು ಸನ್ಮಾನ್ಯ ಜಗದೀಶ್ ಶೆಟ್ಟರು ಆರ್.ಡಿ.ಪಿ.ಆರ್. ಮಂತ್ರಿಗಳಾಗಿದ್ದಾಗ, ಒಂದೇ ಸಲವೇ ಎಲ್ಲವನ್ನೂ ಗಾಳಿಗೆ ತೋರಿಬಿಟ್ಟರು. ಇದೆಲ್ಲಾ ರದ್ದಾಗಿದೆ, ಇನ್ನು ಮೇಲೆ ಲಾಟರಿ ಮೂಲಕ ಮಾಡಿ ಎಂದು ಅದನ್ನು ಮಾಡಿಬಿಟ್ಟರು.

**ಶ್ರೀ ವಿ.ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿ ಹೋಗಬಾರದು, ದಯಮಾಡಿ ತಾವು ಹಿರಿಯ ಸಚಿವರಿದ್ದೀರಿ, ನಾನು ಮಂತ್ರಿಯಾಗಿದ್ದೆ, ಮಾನ್ಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಜೀವ್‌ಗಾಂಧಿಯವರು ಈ ಒಂದು ಕಾಯಿದೆಯನ್ನು ದೇಶಕ್ಕೆ ಕೊಟರು, ಅನವಶ್ಯಕವಾಗಿ ಅದನ್ನು ನೀವು ತಿರುಚಿ ಮಾಡಿ, ಇರುವ ಇನ್ನು ಒಂದು ವರ್ಷಕ್ಕೆ ಈ ಗೊಂದಲ ಸೃಷ್ಟಿ ಮಾಡಿ, ಯಾರು ಗ್ರಾಮಪಂಚಾಯಿತಿ ಸದಸ್ಯರುಗಳು ಇದ್ದಾರೆ, ಗ್ರಾಮ ಪಂಚಾಯಿತಿ, ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಲಾಟರಿ ಎನ್ನುವುದನ್ನು ನಾವು ಎಲ್ಲೂ ಮಾಡಿಲ್ಲ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ತಮ್ಮಿಂದ ಯಾವುದೇ ಕಾರಣಕ್ಕೂ ಅಪಚಾರದ ಭಾಷೆಗಳು ಬರುವುದು ಬೇಡ. ತಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಉತ್ತರ ಹೇಳುತ್ತೇನೆ. ನಂತರದಲ್ಲಿ ಒಂದು ಸನ್ನಿವೇಶ, ಎಲ್ಲಾ ಪಕ್ಷದ ಶಾಸಕರುಗಳು ಮಾನ್ಯ ವಸತಿ ಸಚಿವರಿಗೆ ಮನವಿ ಕೊಟ್ಟರು. ಮನವಿ ಕೊಟ್ಟ ಮೇಲೆ ಈ ರೀತಿ ಮಾಡಬೇಕು, ಆ ರೀತಿ ಮಾಡಬೇಕೆಂದು ತಮ್ಮ ವಾದವನ್ನು ನಮ್ಮ ಎದುರಿಗೆ ಇಟ್ಟಾಗ, ವಸತಿ ಸಚಿವರ ಗಮನಕ್ಕೆ ತಂದಾಗ, ಅವರು ದಿನಾಂಕ 03.10.2016ರಂದು ಒಂದು ಆದೇಶವನ್ನು ಹೊರಡಿಸಿದರು, ಆದೇಶವನ್ನು ಹೊರಡಿಸಿ, ಏನೂ ಸದ್ಯದ ಪದ್ಧತಿ ಇತ್ತು, ಗ್ರಾಮಸಭೆಯ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ಪ್ರಕ್ರಿಯೆಯನ್ನು ಆದೇಶದ ಮುಖಾಂತರ ಸ್ಥಗಿತಗೊಳಿಸಿದರು. ಅದೇ ಆದೇಶದಲ್ಲಿ ಮುಂದಿನ ಕ್ಯಾಬಿನೇಟ್‌ಗೆ ತಂದು ಇದರ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲಾಗುತ್ತದೆ ಎನ್ನುವುದನ್ನು ಸಹ ಕಾಣಿಸಿದ್ದರು. ಆ ಕಡತದಲ್ಲಿ ಈ ರೀತಿಯಾಗಿ ಇರುವಂತಹ ಒಕ್ಕಣಿಕೆಯನ್ನು ತಾವು ಗಮನಿಸಬಹುದು. ಅದು ಆದ ಮೇಲೆ ಅವರು ತಾವು ಕೊಟ್ಟಿರತಕ್ಕಂಥ ಹೇಳಿಕೆಯಂತೆ ಅಥವಾ ಆದೇಶ ಕಡತದಲ್ಲಿ ಬರೆದಂತೆ, ಕ್ಯಾಬಿನೆಟ್‌ಗೂ ಆ ವಿಷಯವನ್ನು ತೆಗೆದುಕೊಂಡು ಬಂದರು, ದಿನಾಂಕ 14.11.2016ರಂದು ಒಂದು ಸುದೀರ್ಘವಾಗಿರತಕ್ಕಂಥ ಆದೇಶವನ್ನು ಹೊರಡಿಸಿದರು. ಆ ಆದೇಶದಲ್ಲಿ ಏನೇನು clarification ಕೇಳಿದ್ದೆವು, ಈ ದಿವಸ ನಮ್ಮೆಲ್ಲರ ಮನಸ್ಸಿನಲ್ಲಿ ಏನೇನು ಅನುಮಾನಗಳು ಬರುತ್ತವೆಯೋ ಆ ಎಲ್ಲಾ ಅನುಮಾನಗಳಿಗೆ, ಒಂದಲ್ಲ ಹತ್ತು ಅಂಶಗಳನ್ನು ಹಾಕಿ, ಆ ಆದೇಶವನ್ನು ಹೊರಡಿಸಿದರು. ಆ ಆದೇಶ ಸ್ಪಷ್ಟವಾಗಿದೆ, ಎಷ್ಟು ಸ್ಪಷ್ಟವಾಗಿದೆ ಎನ್ನುವುದನ್ನು ಅವರು ತಮ್ಮ ಹೇಳಿಕೆಯಲ್ಲಿ ಹೇಳುತ್ತಾರೆ. ಮಾನ್ಯ ಸೋಮಣ್ಣನವರು ನಾವು ಹೇಳಿರುವುದಕ್ಕೆ ಒಪ್ಪಲಿಲ್ಲವೆಂದು ಹೇಳಿ, ಅವರಿಗೆ ಉತ್ತರಿಸಬೇಕು ಎನ್ನುವ ಉದ್ದೇಶದಿಂದ ಅಲ್ಲ. ನಾನು ನಮ್ಮ ವಸತಿ ಸಚಿವರನ್ನೆ ಕೇಳಿದ್ದೇನೆ, ತಾವು ದಿನಾಂಕ 03.10.2016ರಲ್ಲಿ ಏನೋ nullify ಮಾಡುವುದಕ್ಕೆ ಆದೇಶ ಮಾಡಿದ್ದೀರಿ, ಅದನ್ನು ಆದೇಶದಲ್ಲಿ ಕಾಣಿಸಿದ್ದೀರಿ. ಈ ಹಿಂದೆ ಯಾವ ಸಂದರ್ಭಗಳಲ್ಲಿ ಲಾಟರಿ ಮಾಡಿದ್ದರೋ ಅಥವಾ ಮತ್ತೊಂದನ್ನು ಮಾಡಿದ್ದರೋ ಅವುಗಳನ್ನು ತಾವು ಏಕೆ ಕಾಣಿಸಲಿಲ್ಲವೆಂದು ನಮ್ಮ ಮತ್ತು ಅವರ ವಾದ ವಿವಾದ ನಡೆಯುತ್ತಿದೆ. ಅದಕ್ಕೆ ಅವರು ನಮ್ಮ ಸರ್ಕಾರ ಬಂದ ಮೇಲೆ ಮಾತ್ರ ಪರಿಗಣನೆಗೆ ತೆಗೆದುಕೊಂಡೆ, ಹಿಂದಿನ ಸರ್ಕಾರಗಳಲ್ಲಿ ಏನಾಗಿತ್ತು, ಅದರ ಬಗ್ಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಮ್ಮ ಅಧಿಕಾರಿಗಳು put up ಮಾಡಲಿಲ್ಲ, ನಾನು ಕೂಡ ಅದರ ಕಡೆ ಲಕ್ಷ್ಯ ಮಾಡಲಿಲ್ಲ ಎನ್ನುವಂತಹ ಮಾತನ್ನು ಹೇಳಿದರು. ಮಾನ್ಯ ಸೋಮಣ್ಣನವರು, ದಿನಾಂಕ 18ನೇ ಮೇ, 2010ರಲ್ಲಿ ವಸತಿ ಸಚಿವರಾಗಿದ್ದರು ಎಂದು ನನ್ನ ಅಭಿಪ್ರಾಯ ಮತ್ತು ಸನ್ಮಾನ್ಯ ಜಗದೀಶ್ ಶೆಟ್ಟರು, ಆರ್.ಡಿ.ಪಿ.ಆರ್. ಮಂತ್ರಿಯಾಗಿದ್ದರು ಎಂದು ನಾನು ಭಾವಿಸುತ್ತೇನೆ. ಅವರು ಮಾಡಿರತಕ್ಕಂಥ ಆದೇಶದಲ್ಲಿ ಏನಿದೆ ನೋಡಿ, ನಾನು ಇದನ್ನು ತಮಗೆ ಕಳುಹಿಸಿಕೊಡುತ್ತೇನೆ.

(23) 07-02-2017(05-30)BSD-VK

**ಶ್ರೀ ಹೆಚ್.ಕೆ.ಪಾಟೀಲ್:-** ಮುಂದು. ಹೊಸ ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳನ್ನು ಈ ಕೆಳಕಂಡಂತೆ ತಿಳಿಸಲಾಗಿದ್ದು, ಅದರಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ ಎಂದು ತಿಳಿಸಲಾಗಿದೆ. ಅದರಲ್ಲಿ 1) ಮಹಿಳಾ ಫಲಾನುಭವಿಗಳಿಗೆ ಮಾತ್ರ 2) ಅರ್ಹತೆಗಳು 3) ಅರ್ಹ ಫಲಾನುಭವಿಗಳ ಪಟ್ಟಿ ತಯಾರಿಕೆ ಹಾಗೂ ಗ್ರಾಮಗಳ ಆಯ್ಕೆ ಪ್ರಕ್ರಿಯೆ, ಇದರಲ್ಲಿ ಗುಡಿಸಲು ಮತ್ತು ಗುಡಿಸಲು ವಾಸಿಗಳ ಸಮೀಕ್ಷೆ ಎಂದಿದೆ. ಸರ್ಕಾರವು ನೀಡಲಾದ ಗುರಿಗೆ ಅನುಗುಣವಾಗಿ ಪ್ರತಿವರ್ಷ ಗ್ರಾಮಗಳ ಆಯ್ಕೆಯನ್ನು ಜಾಗೃತಿ ಸಮಿತಿಯು ಜಿಲ್ಲಾ ಉಸ್ತುವಾರಿ ಮಂತ್ರಿಗಳ ಸಮ್ಮುಖದಲ್ಲಿ ಲಾಟರಿ ಮೂಲಕ ಮಾಡುತ್ತದೆ. ಈ ರೀತಿ 5 ವರ್ಷಗಳ ಕಾಲಾವಧಿಯಲ್ಲಿ ವಿಧಾನ ಸಭಾ ಕ್ಷೇತ್ರದ ಎಲ್ಲಾ ಗ್ರಾಮಗಳನ್ನು ಗುಡಿಸಲು ರಹಿತ ಗ್ರಾಮಗಳೆಂದು ಮಾಡಲಾಗುವುದು ಎಂದು ತಿಳಿಸಲಾಗಿದೆ. ಅಂದರೆ ಲಾಟರಿ ಪದ್ಧತಿಯನ್ನು ಸಹಿತ ಈ ವ್ಯವಸ್ಥೆಯಲ್ಲಿ ತಂದಿದ್ದು, ಆ ಸಂದರ್ಭದಲ್ಲಿ ಏನೇನು ಕಾರಣಗಳು ಇತ್ತೋ ಎಂಬುದಕ್ಕೆ ನಾನು ಹೋಗುವುದಿಲ್ಲ. ಆದರೆ ಮಾನ್ಯ ವಸತಿ ಸಚಿವರು ಕೊಟ್ಟ ಭಾಷೆಯಂತೆ, ಅವರು ಬೆಳಗಾವಿ ಅಧಿವೇಶನದಲ್ಲಿ ಶ್ರೀಯುತ ಕೋಟ ಶ್ರೀನಿವಾಸ ಪೂಜಾರಿಯವರು ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಹೇಳಿಕೆಯನ್ನು ಮಾಡಿದ್ದು, ಆ ಹೇಳಿಕೆಯಲ್ಲಿ ದಿನಾಂಕ:03-10-2016ರಿಂದ ಸ್ಥಗಿತಗೊಳಿಸಲಾಗಿರುವುದನ್ನು ಸ್ಪಷ್ಟಗೊಳಿಸಿ, ಮುಂದೆ ಫಲಾನುಭವಿಗಳ ಆಯ್ಕೆಯನ್ನು ಕರ್ನಾಟಕ ಗ್ರಾಮ ಸ್ವರಾಜ್ಯ ಪಂಚಾಯತ್ ರಾಜ್ ಅಧಿನಿಯಮ, ಪ್ರಕರಣ 3(ಇ)ರಡಿ ತಿಳಿಸಿದಂತೆ ಗ್ರಾಮ ಸಭೆಯ ಮೂಲಕವೇ ಆಯ್ಕೆ ಮಾಡಲಾಗುತ್ತದೆ. ಮುಂದುವರೆದು ಅವರು ಹೇಳಿಕೆಯನ್ನು ಮಾಡಿದ್ದು, ಈಗ ಮತ್ತೆ ಹೇಳಿಕೆಯನ್ನು ಮಾಡುತ್ತಾರೆ. ಅಂದರೆ ಅವರು ಹೇಳಿದ ಮಾತು ನೂರಕ್ಕೆ ನೂರರಷ್ಟು ನಡೆಸಿಕೊಟ್ಟು, ಇವತ್ತಿನ ಈ ಗೊಂದಲ ಕನ್‌ಫ್ಯೂಷನ್ ಮತ್ತು ಅನುಮಾನಗಳಿಗೆ ಒಂದು ರೀತಿ ಮಾನ್ಯ ವಸತಿ ಸಚಿವರು, ನಮ್ಮ ಸರ್ಕಾರ ಹಾಗೂ ನಾವೆಲ್ಲರೂ ಕೂಡಿ ಸಂವಿಧಾನವನ್ನು ತಿರುಚಿಬಿಟ್ಟಿದ್ದೇವೆ, ಸಂವಿಧಾನವನ್ನು ತಿರಸ್ಕಾರ ಮಾಡಿದ್ದೇವೆ, ನಾವು ಮಾಡಿರುವ ಕರ್ನಾಟಕ ಗ್ರಾಮ ಸ್ವರಾಜ್ಯ ಹಾಗೂ ಪಂಚಾಯತ್ ರಾಜ್ ಕಾನೂನನ್ನು ಗಾಳಿಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೂರಿಬಿಟ್ಟಿದೇವೆ, ಅಧಿಕಾರ ವಿಕೇಂದ್ರೀಕರಣದಲ್ಲಿ ನಮಗೆ ವಿಶ್ವಾಸವೇ ಇಲ್ಲ ಎನ್ನುವ ಎಲ್ಲಾ ರೀತಿಯ ಟೀಕೆ ಟಿಪ್ಪಣಿಗಳನ್ನು ಕೆಲವೇ ನಿಮಿಷಗಳ ಹಿಂದೆ ಕೇಳಿದ್ದೇವೆ. ಬಹುಶ: ಮಾನ್ಯ ವಸತಿ ಸಚಿವರ ಹೇಳಿಕೆ ಪೂರ್ಣವಾದಾಗ ಅನುಮಾನಗಳು ಅವರಿಂದ ಪೂರ್ಣ ದೂರವಾಗಿ, ಮಾನ್ಯ ವಸತಿ ಸಚಿವರು ಕೊಟ್ಟಿರುವ ಮಾತಿಗೆ ಮತ್ತು ಅವರು ಹೊರಡಿಸಿರುವ ಆದೇಶ ಹಾಗೂ ನಮ್ಮ ಸರ್ಕಾರದ ಬದ್ಧತೆ ಅವರೆಲ್ಲರೂ ಸಹಜವಾಗಿ ಕ್ರೀಡಾ ಮನೋಭಾವದಿಂದ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ ಎಂದು ಭಾವಿಸುತ್ತೇನೆ. ಅಂದರೆ ಇದು ಯಾರಿಗೂ ಗೊತ್ತಿಲ್ಲದಿರುವ ವಿಷಯವಾಗಿತ್ತೇ? ಕೆಲವರು ಗೊತ್ತಿದ್ದೂ ಇದನ್ನು ಪ್ರಸ್ತಾಪ ಮಾಡಿರಬಹುದು. ನಾನು ಎಲ್ಲರಿಗೂ ಗೊತ್ತಿದೆ ಎಂದು ಹೇಳುವುದಿಲ್ಲ. ಮಾನ್ಯ ಗಣೇಶ್ ಕಾರ್ಣಿಕ್‌ರವರಿಗೆ ಒಮ್ಮೊಮ್ಮೆ ಕಾಗದಗಳನ್ನು ಕೊಟ್ಟಾಗ ಅವರು ಪೂರ್ಣ ನೋಡಿಲ್ಲ ಎಂದರೆ ಅವರಿಗೆ ಗೊತ್ತಿರಲಿಕ್ಕಿಲ್ಲ. ಆದರೆ ಅವರ ಪಕ್ಕದ ಮಾನ್ಯ ಶ್ರೀನಿವಾಸ ಪೂಜಾರಿಯವರಿಗೆ ಇದು ಗೊತ್ತಿತ್ತು ಎಂದು ನನ್ನ ಅನಿಸಿಕೆ. ಗೊತ್ತಿದ್ದೂ ಸದನದ ಸಮಯವನ್ನು ಹಾಳು ಮಾಡಿದರೇನೋ ಎಂದು ನಮಗೆ ಅನುಮಾನ ಬರುತ್ತದೆ. ಆದರೆ ನಾನು ಇದನ್ನು ಹೆಚ್ಚು ಬೆಳೆಸಲು ಹೋಗುವುದಿಲ್ಲ. ನಮ್ಮ ಸರ್ಕಾರ ಸಂವಿಧಾನದ 243ನೇ ಅನುಚ್ಛೇದ ಇದ್ದು, ಮಾನ್ಯ ರಾಜೀವ್ ಗಾಂಧಿಯವರು ಏನು ತಿದ್ದುಪಡಿ ಮಾಡಿದ್ದಾರೋ, ಅದರ ಬಗ್ಗೆ ವಿಶೇಷ ಬದ್ಧತೆಯಿಂದ ಕೆಲಸ ಮಾಡುತ್ತಿದ್ದೇವೆ. ನಾವು ವಿಕೇಂದ್ರೀಕರಣದಲ್ಲಿ ವಿಶ್ವಾಸ ಇಟ್ಟಿದ್ದೇವೆ, ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ನನಸು ಮಾಡಬೇಕು ಎನ್ನುವವರಾಗಿದ್ದು, ಆ ಹಿನ್ನೆಲೆಯಲ್ಲಿ ವಿಕೇಂದ್ರೀಕರಣಕ್ಕೆ ಏನು ಬೇಕೋ, ಜನರಿಗೆ ಏನು ಅಧಿಕಾರ ಕೊಡಬೇಕಾಗಿತ್ತೋ, ಗ್ರಾಮ ಸಭೆಗಳಿಗೆ ಏನು ಅಧಿಕಾರ ಕೊಟ್ಟಿದ್ದೇವೋ, ಅದನ್ನು ಯಥಾವತ್ತಾಗಿ ಬದ್ಧತೆಯಿಂದ ಇಳಿಸಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದಿಷ್ಟು ಗೊಂದಗಳಿಗೆ ಕಾರಣ ಮಾನ್ಯ ಹೆಚ್.ಕೆ.ಪಾಟೀಲರು ಬೆಳಿಗ್ಗೆ ಮಾಡಿದ ಹೇಳಿಕೆಯಿಂದ ಆಗಿದೆ. ನಾನು ಮಾನ್ಯ ಹೆಚ್.ಕೆ.ಪಾಟೀಲರು ಮಾತನಾಡಿದ ಹೇಳಿಕೆಯ ಒಂದು ಪ್ರತಿಯನ್ನು ಕೊಡುವಂತೆ ತಮ್ಮ ಆಪ್ತ ಕಾರ್ಯದರ್ಶಿಯವರಿಗೆ ಕೇಳಿದ್ದೆನು. ಏಕೆಂದರೆ ನೇರವಾಗಿ ಅವರು ಇದರಿಂದ ಸಂವಿಧಾನವನ್ನು ಗಾಳಿಗೆ ತೂರಿದಂತಾಗಿದೆ, ತಪ್ಪಾಗಿದೆ, ಇದು ವಸತಿ ಇಲಾಖೆಯಿಂದ ಆಗಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ ಮಾನ್ಯ ಸಚಿವರು ನಾವುಗಳು ಮಾತ್ರ ಮಾತನಾಡಿಬಿಟ್ಟೆವು ಎಂದು ಹೇಳಿದರು. ಇಲ್ಲಿ ಅನೇಕ ಹಿರಿಯ ಸದಸ್ಯರಿದ್ದಾರೆ. ಅದನ್ನು ನಾವೇ ಮಾಡಿದೆವೋ ಅಥವಾ ಮಾನ್ಯ ಹೆಚ್.ಕೆ. ಪಾಟೀಲರು ಸಂವಿಧಾನದ ವಿರುದ್ಧವಾದ ಆದೇಶ ಇರುವುದರಿಂದ ಅದನ್ನು ಸರಿಪಡಿಸಿಕೊಳ್ಳುತ್ತೇವೆ ಎಂದು ಮಧ್ಯಾಹ್ನ ಉತ್ತರ ಕೊಡುತ್ತೇನೆ ಎಂದು ಹೇಳಿದರು. ಈಗ ಅವರು ಮಾತ್ರವಲ್ಲ, ನಾವೆಲ್ಲ ತಪ್ಪು ತಿಳಿದುಕೊಂಡಿದ್ದೇವೆ ಎಂದು ಹೇಳಿರುವುದು ಮಂತ್ರಿ ಸ್ಥಾನಕ್ಕೆ ಶೋಭೆ ತರುತ್ತದೆಯೇ? ಅವರು ಏನೇನು ಮಾತನಾಡಿದ್ದಾರೆ ಎಂಬ ಬಗ್ಗೆ ನಡವಳಿಕೆ ಪಡೆಯಲು ಪತ್ರ ಕಳುಹಿಸಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅದು ಬರುವುದು ಸ್ವಲ್ಪ ತಡವಾಗುತ್ತಿದೆ. ಆಗಲಿ, ಎಲ್ಲಿಯೂ ಹೋಗುವುದಿಲ್ಲ. ಇಲ್ಲಿ ಸಭಾನಾಯಕರಾಗಿದ್ದ ಮಾನ್ಯ ಎಸ್.ಆರ್. ಪಾಟೀಲರು ಇದ್ದಾರೆ. ಮಾನ್ಯ ಸಭಾನಾಯಕರು ಮಾನ್ಯ ವಸತಿ ಸಚಿವರು ಬಂದು ಹೇಳುತ್ತಾರೆ ಎನ್ನುವ ಬದಲು ಅವರೇ ಉತ್ತರ ಕೊಟ್ಟಿದ್ದರೆ ಮುಗಿಯುತ್ತಿತ್ತು. ಮಾನ್ಯ ಸಚಿವರ ಉತ್ತರದಲ್ಲಿ ಸಂವಿಧಾನಕ್ಕೆ ವಿರುದ್ಧವಾಗಿದ್ದು, ವಿಕೇಂದ್ರೀಕರಣದ ವ್ಯವಸ್ಥೆಗೆ ಸರಿಯಿಲ್ಲ, ಏಕೆಂದರೆ ಅವರು ಮಾತನಾಡಿರುವುದನ್ನು ನನ್ನ ಲೆಟರ್ ಪ್ಯಾಡ್‌ನಲ್ಲಿ ನಮೂದಿಸಿ ಕಳುಹಿಸುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್:-** ಆಗ ಮಾನ್ಯ ಶ್ರೀನಿವಾಸ ಪೂಜಾರಿಯವರ ಹೇಳಿಕೆ ಮೇಲೆ ಶೂನ್ಯವೇಳೆಯಲ್ಲಿ ಚರ್ಚೆ ನಡೆದಿತ್ತು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬೆಳಗ್ಗೆ ಹೇಳಿದಂತಹ ಮಾತುಗಳನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಅವರ ಗಮನಕ್ಕೆ ತರಬಯಸುತ್ತಿರುವುದರಿಂದ ಅದನ್ನು ಉಲ್ಲೇಖಿಸುತ್ತಿದ್ದೇನೆ. ***"ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಅತ್ಯಂತ ಮಹತ್ವದ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಈ ವಿಚಾರದ ಬಗ್ಗೆ ನಿಮಗಾಗಲೀ, ಅವರಿಗಾಗಲೀ, ಕೂಡಲೇ ವಿವರಣೆ ಕೊಡುವುದಾಗಲೀ, ತೆಗೆದುಕೊಂಡ ಕ್ರಮದ ಬಗ್ಗೆ ಹೇಳುವುದಾಗಲೀ, ಸ್ವಲ್ಪಮಟ್ಟಿಗೆ ಅನಾನುಕೂಲ ಮಾಡಬಹುದು. ಆದರೆ ವಿಷಯದ ಮಹತ್ವವನ್ನು ಗಮನಿಸಿದಾಗ, ಈ ರೀತಿಯ ಮಹತ್ವದ ನಿಯಮಗಳನ್ನು ಮಾಡಿದಾಗ ಕಾನೂನಿಗೆ ಸಂವಿಧಾನಕ್ಕೆ ವ್ಯತಿರಿಕ್ತವಾಗಿ ಸುತ್ತೋಲೆಯನ್ನು ಹೊರಡಿಸಿದಾಗ ನಾವು ಸ್ಪಂದಿಸಲೇಬೇಕಾಗುತ್ತದೆ."*** ಎಂದು ಅವರು ಹೇಳಿದ್ದಾರೆ.

**ಶ್ರೀ ಹೆಚ್.ಕೆ.ಪಾಟೀಲ್:-** ನಾನು ಅದನ್ನು ಓದಿದ್ದೇನೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಇದು ಶೂನ್ಯವೇಳೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮುಂದುವರೆದು ಅವರು ಹೇಳಿರುವುದೇನೆಂದರೆ, "ಆದರೆ ವಿಷಯದ ಮಹತ್ವವನ್ನು ಗಮನಿಸಿದಾಗ, ಈ ರೀತಿ ನಿಯಮಾವಳಿಗಳನ್ನು ಮಾಡಿದಾಗ, ಕಾನೂನಿಗೆ ಸಂವಿಧಾನಕ್ಕೆ ವ್ಯತಿರಿಕ್ತವಾಗಿ ಸುತ್ತೋಲೆ ಹೊರಡಿಸಿದಾಗ ನಾವು ಸ್ಪಂದಿಸಲೇಬೇಕಾಗುತ್ತದೆ, ಸಂವಿಧಾನದ ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು ನಾವುಗಳು ಕರ್ನಾಟಕ ಗ್ರಾಮ ಸ್ವರಾಜ್ಯ ಹಾಗೂ ಪಂಚಾಯತ್ ರಾಜ್

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಾನೂನನ್ನು ಮಾಡಿದ್ದೇವೆ ಮತ್ತು ಅವುಗಳಿಗೆ ವಸತಿ ಇಲಾಖೆಯವರು ಹೊರಡಿಸಿದಂತಹ ಸುತ್ತೋಲೆಗಳು.... ಸಂಪೂರ್ಣ ಭಿನ್ನವಾಗಿರುವುದು.”

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಶೂನ್ಯವೇಳೆಯಲ್ಲಿ ಅವರಿಗೆ ಒಂದು ಗಂಟೆ ಸಮಯವನ್ನು ಕೊಟ್ಟರೆ ಹೇಗೆ? ಬೇರೆಯವರು ಏನು ಮಾಡುವುದು? ಮಂತ್ರಿಗಳ ಹೇಳಿಕೆ ಎಲ್ಲವೂ ಆಯಿತು.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿ ಇರುವ ಬೇರೆ ಸದಸ್ಯರ ವಿಷಯಗಳು ಏನಾಗಬೇಕು? ಇದಕ್ಕೆ ನಿಯಮಾವಳಿಗಳು ಏಕೆ ಇರಬೇಕು. ಹೇಳಿಕೆ ಮಾಡಿದ ಮೇಲೆ ಮತ್ತೆ ಚರ್ಚೆ ಮಾಡುತ್ತಾರೆ. ಈ ಸದನದಲ್ಲಿ ನಿಯಮಾವಳಿಗಳು ಪಾಲನೆ ಆಗುತ್ತಿವೆಯೇ? ಮಾನ್ಯ ಈಶ್ವರಪ್ಪನವರೊಬ್ಬರಿಗೆ ಬಿಟ್ಟುಬಿಡಿ. ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಬೇಡವೇ?

**(ಗೊಂದಲ)**

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಶೂನ್ಯವೇಳೆಯಲ್ಲಿ ವಿಷಯ ತಂದು, ನ್ಯಾಯ ಕೊಡಿ ಎಂದು ಧರಣಿ ಕುಳಿತಿದ್ದೇವೆ. ಸರ್ಕಾರ ಉತ್ತರ ಕೊಡುತ್ತಿದೆ. ಮಾನ್ಯ ಉಗ್ರಪ್ಪನವರನ್ನು ಕೇಳಿ ಸದನವು ನಡೆಯಬೇಕಾಗಿದೆಯೇ?

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ನಿಯಮಾವಳಿಗಳು ಇಲ್ಲವೇ? ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಬೇಡವೇ? ಹಾಗಾದರೆ ಹೇಳಿ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ನಿಮ್ಮ ಅಭಿಪ್ರಾಯ ಹೇಳಿದ್ದು ಆಯಿತು, ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ತಾವು ದಯಮಾಡಿ ಹೇಳಬೇಕಾಗುತ್ತದೆ.

**ಸಭಾಪತಿಯರು:–** ಮಾನ್ಯ ಸಚಿವರು ಮಾತನಾಡುವಾಗ ಮಧ್ಯೆ ಬಾಯಿ ಹಾಕಬೇಡಿ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಡಾ: ಜಿ. ಪರಮೇಶ್ವರ್ (ಗೃಹ ಸಚಿವರು):–** ಉತ್ತರ ಕೊಟ್ಟ ನಂತರ ಅವರು ಪ್ರಶ್ನೆ ಕೇಳಬಹುದಲ್ಲವೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಜವಾಬ್ದಾರಿಯುತ ಮಂತ್ರಿಗಳು ಬೆಳಿಗ್ಗೆ ಏನು ಹೇಳಿದ್ದಾರೆ, ಈಗ ಪ್ಲೇಟ್ ಅನ್ನು ಬದಲಾವಣೆ ಮಾಡುತ್ತಿದ್ದಾರೆ.

**ಡಾ: ಜಿ. ಪರಮೇಶ್ವರ್:–** ಮಾನ್ಯ ವಸತಿ ಸಚಿವರು ಉತ್ತರ ಕೊಡಲಿ, ನಂತರ ಅವರು ಮಾತನಾಡಲಿ. ಸುಮ್ಮನೆ ಅದನ್ನೆ ಮಾತನಾಡಿ, ವಿಶ್ಲೇಷಣೆ ಮಾಡಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಹೆಚ್.ಕೆ.ಪಾಟೀಲರು ಬೆಳಿಗ್ಗೆ ಏನು ಹೇಳಿದರು, ಈಗ ಏನು ಹೇಳುವುದಕ್ಕೆ ಹೊರಟಿದ್ದಾರೆ ಎಂದು ರಾಜ್ಯದ ಜನರು ಊಹಿಸುತ್ತಿದ್ದಾರೆ. ಸಮಯ ಹಾಳು ಮಾಡಿದ್ದು ನಾವೋ ಅಥವಾ ಅವರೋ ಎಂಬ ಪ್ರಶ್ನೆ ಇದ್ದು, ಅದಕ್ಕಾಗಿ ದಯವಿಟ್ಟು 2 ನಿಮಿಷ ಅವಕಾಶ ಕೊಡಿ.

**ಡಾ: ಜಿ. ಪರಮೇಶ್ವರ್:–** ಅದು ಅಪ್ರಸ್ತುತ.

*(24) 07.02.2017 05.40 LL-GR*

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ನಾನು ಎರಡು ನಿಮಿಷ ಕಾಲಾವಕಾಶ ತೆಗೆದುಕೊಳ್ಳುತ್ತೇನೆ. ದಯಮಾಡಿ, ತಾವುಗಳು ಅವಕಾಶ ಮಾಡಿಕೊಡಬೇಕು.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಹೇಳುತ್ತಾರೆ, "ಈ ಬಗ್ಗೆ ಪಂಚಾಯತ್ ರಾಜ್ ಇಲಾಖೆಯು ವಸತಿ ಇಲಾಖೆಗೆ ಪತ್ರವನ್ನು ಬರೆದು", ಈ ಬಗ್ಗೆ ಚರ್ಚೆ ನಡೆಯಿತು. ಅದಕ್ಕೆ ನಾನು ಕೂಡ ಸ್ಪಂದನೆ ಮಾಡಿದೆನು. "ಸದರಿ ಸುತ್ತೋಲೆ ಕಾಯಿದೆಗೆ ವಿರುದ್ಧವಾಗಿದೆ ಎಂದು ಎಚ್ಚರಿಕೆ ನೀಡಿದ್ದರು." ಇದು ನಿಮ್ಮ ಹೇಳಿಕೆ. I am reading your statement.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನೇ ಹೇಳಿದ್ದು.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, "ವಸತಿ ಇಲಾಖೆ ತನ್ನ ಉಡಾಫೆತನ ಮುಂದುವರೆಸಿ ಸಂವಿಧಾನಕ್ಕೆ ಸವಾಲೆಸಗಿದೆ." ಇದರ ಬಗ್ಗೆ ಚರ್ಚೆ ನಡೆದಿತ್ತು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಮಾನ್ಯ ಸಚಿವರು ಏನು ಹೇಳಿದ್ದಾರೆ? ಅದು ಬೇಕು.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ನಾವುಗಳು ಸ್ಪಂದಿಸಬೇಕೋ ಅಥವಾ ಬೇಡವೋ? ಅದನ್ನೇ ನಾನು ಹೇಳುತ್ತಿರುವುದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದಾಗ ನಮ್ಮ ಇಲಾಖೆಯ ನಿಲುವನ್ನು...

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ಮಾನ್ಯ ಸಚಿವರು ಉತ್ತರ ನೀಡುವುದಕ್ಕೆ ದಯಮಾಡಿ ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. **(ಗೊಂದಲ)** ನಾನು ಹೇಳುವುದನ್ನು ಕೇಳಿ. ಈಗ ತಾಂತ್ರಿಕ ವಿಷಯಗಳು ಬೇಡ. ಬಹಳ ಗಂಭೀರವಾದಂತಹ ವಿಷಯದ ಬಗ್ಗೆ ಬೆಳಿಗ್ಗೆ ಪ್ರಸ್ತಾಪ ಆಯಿತು. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಗ್ರಾಮ ಸಭೆಗಳಿಗೆ ಇರತಕ್ಕಂತಹ ಅಧಿಕಾರವನ್ನು ಮೊಟಕುಗೊಳಿಸತಕ್ಕಂತಹ ಒಂದು ಸುತ್ತೋಲೆ ಸರ್ಕಾರದಿಂದ ಬಂದಿದೆ. ಆ ಹಿನ್ನೆಲೆಯಲ್ಲಿ ಚರ್ಚೆ ನಡೆದಿದೆ. ಅದರ ಬಗ್ಗೆ ಬಳಸಿದ ಭಾಷೆ, ಬಳಸಿದ ಶೈಲಿ ಎನ್ನುವುದರ ಬಗ್ಗೆ ಚರ್ಚೆ ಬೇಡ. ಅಲ್ಲದೇ, ಇದು ನಮ್ಮ ಗ್ರಾಮ ಸ್ವರಾಜ್ ಯೋಜನೆಗೆ ಧಕ್ಕೆ ಬರತಕ್ಕಂತಹ ವಿಷಯ ಎನ್ನುವಂತಹ ರೀತಿಯಲ್ಲಿ ಪ್ರಸ್ತಾಪ ಆಗಿತ್ತು. ಈಗ ಅದು ಆ ರೀತಿ ಆಗುವುದಿಲ್ಲ. ಗ್ರಾಮ

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಭೆಗಳಿಗೆ ಸಂವಿಧಾನದತ್ತವಾಗಿ ಇರತಕ್ಕಂತಹ ಅಧಿಕಾರಕ್ಕೆ ಯಾವುದೇ ರೀತಿಯಲ್ಲಿ ಚ್ಯುತಿ ಬರುವುದಿಲ್ಲ ಎನ್ನುವಂತಹ ವಿಚಾರವನ್ನು ಅರ್ಧದಲ್ಲಿ ನಿಲ್ಲಿಸಿದ್ದೀರಿ. ಅದಕ್ಕೆ ಸ್ಪಷ್ಟೀಕರಣ ನೀಡಿ, ಆ ಅಧಿಕಾರ ಹಾಗೆ ಇರುತ್ತದೆ ಎನ್ನುವ ವಿಚಾರವನ್ನು ಪೂರ್ತಿ ಮಾಡಿದರೆ ಅಲ್ಲಿಗೆ ಈ ವಿಷಯವನ್ನು ಮುಗಿಸಿ ಬೇರೆ ವಿಷಯಕ್ಕೆ ನಾವು ಹೋಗಬಹುದು. ಈಗ ಮಾನ್ಯ ಸಚಿವರು ಉತ್ತರ ನೀಡುವುದಕ್ಕೆ ಅವಕಾಶ ಮಾಡಿಕೊಡಿ. ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಕಳೆದ ಬೆಳಗಾವಿ ಅಧಿವೇಶನದಲ್ಲಿಯೂ ಸಹ ಇದೇ ರೀತಿ ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅವರಿಗೆ ಏನು ಉತ್ತರ ಕೊಟ್ಟಿದ್ದೆ, I stand by that. ಅದನ್ನು quote ಮಾಡಿದ್ದಾರೆ. I stand by that. ಅವರು ಹೇಳಿದ್ದಾರೆ. ಅದನ್ನು ಹೇಳುತ್ತೇನೆ, ಕೇಳಿ. "ಸರ್ಕಾರವು ದಿನಾಂಕ:14.11.2016ರಲ್ಲಿನ ಇತ್ತೀಚಿನ ಆದೇಶದಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆಯನ್ನು ಕರ್ನಾಟಕ ಗ್ರಾಮ ಸ್ವರಾಜ್ ಪಂಚಾಯತ್ ರಾಜ್ ಅಧಿನಿಯಮದ 3(ಇ) ರಡಿಯಲ್ಲಿ ತಿಳಿಸಿದಂತೆ ಗ್ರಾಮ ಸಭೆಯ ಮೂಲಕವೇ ಆಯ್ಕೆ ಮಾಡಲು ತಿಳಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:33ಹೆಚ್‌ಎಹೆಚ್2016 ಭಾಗ–2, ದಿನಾಂಕ:14.11.2016ರಂದು ರಾಜ್ಯಮಟ್ಟದಿಂದ ಬಸವ ವಸತಿ ಯೋಜನೆಯಡಿ ಗುರಿಯನ್ನು ತಾಲ್ಲೂಕುವಾರು ನೀಡಲಾಗಿರುತ್ತದೆ. ಆದರೆ, ಈ ಆದೇಶದಲ್ಲಿಯೂ, ವ್ಯಕ್ತಿಗತ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಯ ಮೂಲಕವೇ ಸರ್ಕಾರದ ಆದೇಶ ಸಂಖ್ಯೆ:ವಇ 67 ಹೆಚ್‌ಎಹೆಚ್ 2015 ದಿನಾಂಕ:16.11.2015ರಂತೆ ಮಾಡಬೇಕೆಂದು ನಿರ್ದೇಶಿಸಲಾಗಿದೆ. ಫಲಾನುಭವಿಗಳ ಆಯ್ಕೆಯಲ್ಲಿ ಸರ್ಕಾರದ ಹಸ್ತಕ್ಷೇಪ ಆಗಿರುವುದಿಲ್ಲ. ಸಂವಿಧಾನದ ಹಾಗೂ ಪಂಚಾಯತ್ ರಾಜ್ ಅಧಿನಿಯಮದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಹಾಗೂ ಗ್ರಾಮ ಸಭೆಗಳಿಗೆ ನೀಡಿರುವ ಅಧಿಕಾರವನ್ನು ಗೌರವದಿಂದ ಪುರಸ್ಕರಿಸಲಾಗಿದೆ. ಪಕ್ಷಾತೀತವಾಗಿ ಮಾನ್ಯ ಶಾಸಕರುಗಳ ಕೋರಿಕೆಯಂತೆ ಗ್ರಾಮ ಪಂಚಾಯಿತಿಗಳಲ್ಲಿ ವಾಸವಿರುವ ನಿರ್ಗತಿಕರು ಇತರೆ ವಿಶೇಷ ವರ್ಗದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳನ್ನು ಗಮನದಲ್ಲಿರಿಸಿಕೊಂಡು ಸ್ಥಳೀಯವಾಗಿ ಆದ್ಯತೆ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಗುರಿಯನ್ನು ತಾಲ್ಲೂಕುವಾರು ನೀಡುವುದು ಸೂಕ್ತವಾಗಿರುತ್ತದೆಯೆಂಬ ಅಭಿಪ್ರಾಯದ ಮೇರೆಗೆ, ಸರ್ಕಾರವು ಈ ಹಿಂದೆ ಗ್ರಾಮ ಪಂಚಾಯಿತಿವಾರು ನಿಗದಿಪಡಿಸಲಾದಂತಹ ಗುರಿಯನ್ನು ಹಿಂಪಡೆದು ತಾಲ್ಲೂಕುವಾರು ನೀಡಲಾಗಿದೆ." –ಎಂಬುದನ್ನು ಉಲ್ಲೇಖಿಸಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವಿ.ಸೋಮಣ್ಣ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಗುರಿಯನ್ನು ಹಿಂಪಡೆಯಲಾಗಿದೆಯೇ?

**ಸಭಾಪತಿಯವರು:-** ಮಾನ್ಯ ಸಚಿವರು ಹೇಳುವುದನ್ನು ಪೂರ್ತಿಯಾಗಿ ಕೇಳಿ. ಇದು ಹೊಸ ರೂಲ್ ಅಲ್ಲ. ಹಳೆಯದು.

**ಶ್ರೀ ಎಂ. ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಈ ಪದ್ಧತಿಯು ಈ ಹಿಂದೆಯು ಸಹಿತ ಅಂದರೆ, 2010-11ನೇ ಸಾಲಿನಲ್ಲಿ ಹಾಗೂ 2015-16ನೇ ಸಾಲಿನಲ್ಲಿಯೂ ಸಹ ಜಾರಿಯಲ್ಲಿತ್ತು. ಮುಂದುವರೆದು, ಮತ್ತೊಮ್ಮೆ ಸ್ಪಷ್ಟವಾಗಿ ಫಲಾನುಭವಿಗಳನ್ನು ಗ್ರಾಮ ಸಭೆಯ ಮೂಲಕವೇ ಆಯ್ಕೆ ಮಾಡಲು ಸ್ಪಷ್ಟ ನಿರ್ದೇಶನವನ್ನು ದಿನಾಂಕ:16.11.2015ರಂದು ಹೊರಡಿಸಲಾದ ಮಾರ್ಗಸೂಚಿಯಲ್ಲಿಯೇ ತಿಳಿಸಲಾಗಿದೆ. ಅದರಂತೆ, ಈಗಾಗಲೇ ನಾವು ಕಳುಹಿಸಿದ ಮೇಲೆ, 2016-17ನೇ ಸಾಲಿಗೆ ಬಸವ ವಸತಿ ಯೋಜನೆಯಡಿಯಲ್ಲಿ ನೀಡಲಾದ ಗುರಿಗೆ ಎದುರಾಗಿ 60,400 ಫಲಾನುಭವಿಗಳನ್ನು ಗ್ರಾಮ ಸಭೆಯ ಮೂಲಕವೇ 2180 ಗ್ರಾಮ ಪಂಚಾಯಿತಿಗಳು ಆಯ್ಕೆ ಮಾಡಿರುತ್ತವೆ. ಇಷ್ಟು ಹೇಳಿ ಮಾನ್ಯ ಸಭಾಪತಿಗಳೇ ಇದರಲ್ಲಿ ಯಾವುದೇ ರೀತಿಯಾದಂತಹ ಉಲ್ಲಂಘನೆಯನ್ನು ನಾವು ಮಾಡಿಲ್ಲ. ಗ್ರಾಮ ಸಭೆಯ ಮುಖಾಂತರವೇ ಫಲಾನುಭವಿಗಳು ಆಯ್ಕೆಯಾಗುವುದು. ಅದನ್ನು ಹೊರತುಪಡಿಸಿ ಯಾವುದೇ ಉಲ್ಲಂಘನೆಯಾಗಿಲ್ಲ. ಅದು ತಪ್ಪು ಕಲ್ಪನೆ.

**ಸಭಾಪತಿಯವರು:-** ಇಲ್ಲಿಗೆ ಈ ವಿಷಯದ ಬಗ್ಗೆ ಚರ್ಚೆ ಮುಗಿಯಿತು. ಇಲ್ಲ ಇಲ್ಲ ಸಾಧ್ಯವಿಲ್ಲ, ಆಗುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈ ವಿಷಯ ಮುಗಿಯಿತು.

**ಶ್ರೀ ವಿ.ಸೋಮಣ್ಣ :-** ಮಾನ್ಯ ಸಭಾಪತಿಯವರೇ, ........

**Mr.CHAIRMAN**:- No, I will not allow. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಕಾಯಿದೆಗೆ ಮತ್ತು ವ್ಯವಸ್ಥೆಗೆ ವಿರುದ್ಧವಾಗಿದೆ.

**ಸಭಾಪತಿಯವರು:-** ಆಯಿತು ಬೇರೆ ರೀತಿಯಲ್ಲಿ ತನ್ನಿ. ನೋಟಿಸ್ ಕೊಡಿ.

## 4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 5. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

**"ದಿನಾಂಕ:06.02.2017ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ."**

**ಶ್ರೀ ಆರ್.ಪ್ರಸನ್ನಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 6. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

**ಸಭಾಪತಿಯವರು:-** ಈ ನಿರ್ಣಯದ ಬಗ್ಗೆ ಪೂರಕವಾಗಿ ಮಾತನಾಡುವುದೇನಾದರೂ ಇದ್ದರೆ, ಮಾತನಾಡಿ. ತಾವು ಮಾತನಾಡಿದ ನಂತರ ನಾನು ಅವರಿಗೆ ಅವಕಾಶ ನೀಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಂವಿಧಾನದ 176ನೇ ವಿಧಿ ಪ್ರಕಾರ ಘನವೆತ್ತ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡುವುದು ಒಂದು ಸಂಪ್ರದಾಯವಾಗಿದೆ. ಇದು ಸಂವಿಧಾನದಲ್ಲಿ it is a mandate. ಅದಕ್ಕಾಗಿ ಇವತ್ತು ನಮ್ಮನ್ನುದ್ದೇಶಿಸಿ ಮಾಡಿದ ಭಾಷಣದ ಉದ್ದೇಶವೇನೆಂದರೆ, ...

*25/07.02.2017/5.50/hv.gr*

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮುಂದು. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ನಾವು ಜನತೆಯ ಮುಂದಿಟ್ಟಿದ್ದ ಚುನಾವಣಾ ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆ ಕೆಲಸಗಳನ್ನು ಮಾಡಿದೆ, ಘನತೆವೆತ್ತ ರಾಜ್ಯಪಾಲರು ನಮ್ಮ ಸರ್ಕಾರದ ಸಾಧನೆಗಳನ್ನು ಗಮನಕ್ಕೆ ತೆಗೆದುಕೊಂಡು, 'ಸರ್ಕಾರ ಜನತೆಗೆ ಕೊಟ್ಟಂಥ ವಾಗ್ದಾನದಂತೆ ನಡೆದುಕೊಂಡಿದೆಯೇ, ಎಷ್ಟು ಪ್ರಗತಿಯನ್ನು ಸಾಧಿಸಿದೆ, ವರ್ಷದುದ್ದಕ್ಕೂ ಏನೇನು ಕಾರ್ಯಕ್ರಮಗಳನ್ನು ಮಾಡಿದೆ, ಮುಂದೆ ಏನು ಮಾಡಬೇಕಾಗಿದೆ' ಎನ್ನುವ ವಿಚಾರವನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾಲ್ಕು ವರ್ಷಗಳ ಹಿಂದೆ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ನಮ್ಮೆಲ್ಲರ ನಾಯಕರುಗಳಾದ ಸನ್ಮಾನ್ಯ ಸಿದ್ದರಾಮಯ್ಯನವರ ಮತ್ತು ಡಾಃಜಿ.ಪರಮೇಶ್ವರ್‌ರವರ ನೇತೃತ್ವದಲ್ಲಿ ರಾಜ್ಯದ ಉದ್ದಗಲಕ್ಕೂ ಸುತ್ತಾಡಿ ಹಿಂದೆ ರಾಜ್ಯದಲ್ಲಿ ಯಾವ ರೀತಿಯ ರಾಜಕೀಯ ಪರಿಸ್ಥಿತಿ ಇತ್ತು ಎನ್ನುವುದನ್ನು ಈ ರಾಜ್ಯದ ಜನತೆಗೆ ಮನವರಿಕೆ ಮಾಡಿ ತದನಂತರ ಪಾರದರ್ಶಕತೆ, ಭ್ರಷ್ಟಾಚಾರರಹಿತ ಆಡಳಿತ, ಸರ್ವರಿಗೂ ಸಮ ಪಾಲು-ಸಮ ಬಾಳು ನೀಡುತ್ತೇವೆಂದು ಹೇಳಿ ಜನರಿಂದ ಪರಿಪೂರ್ಣ ಜನಾದೇಶವನ್ನು ಪಡೆದು ಅಧಿಕಾರಕ್ಕೆ ಬಂದಿದ್ದೇವೆ. ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದ ಉದ್ದಕ್ಕೂ ನಮ್ಮ ಸರ್ಕಾರ ಮಾಡಿರುವ ಕಾರ್ಯಕ್ರಮಗಳನ್ನು ಹೊಗಳಿದ್ದಾರೆ. ಹಿಂದೆ ದೇಶದಲ್ಲಿಯೇ ಅತ್ಯಂತ ಹದಗೆಟ್ಟ ಆಡಳಿತ ಈ ರಾಜ್ಯದಲ್ಲಿತ್ತು. ಅದನ್ನು ಸರಿಪಡಿಸುವುದಕ್ಕೆ ಸನ್ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರ ಬಹಳ ಬದ್ಧತೆಯಿಂದ ಜನರ ಸರ್ವಾಂಗೀಣ ಅಭಿವೃದ್ಧಿಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿ ಈ ರಾಜ್ಯದ. . .

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, . . . . .

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಶರಣಪ್ಪ ಮಟ್ಟೂರ್‌ರವರು ತಮ್ಮ ಮಾತುಗಳನ್ನು ಮುಗಿಸಿದ ನಂತರ ತಾವು ಮಾತನಾಡಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಅವರು ತಮ್ಮ ಮಾತುಗಳನ್ನು ಮುಗಿಸಲಿ. ಅದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಮಾನ್ಯ ಸಚಿವರು ನೀಡಿರುವಂತಹ ಉತ್ತರ ಸಂವಿಧಾನಕ್ಕೆ ವಿರುದ್ಧವಾಗಿದೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಮಾಡುತ್ತಿರುವ ದ್ರೋಹವಾಗಿದೆ. ವಿಕೇಂದ್ರೀಕರಣದ ಹೆಸರಿನಲ್ಲಿ ಸರ್ಕಾರ ಸರ್ವಾಧಿಕಾರವನ್ನು ತೋರಿಸುತ್ತಿದೆ. ಮಂತ್ರಿಗಳು ಸುಳ್ಳು ಉತ್ತರವನ್ನು ನೀಡಿದ್ದಾರೆ. ಅವರು ನೀಡಿರುವ ಉತ್ತರದಲ್ಲಿ ಬಹಳ ಸ್ಪಷ್ಟವಾಗಿ "ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿದೆ" ಎಂದು ಹೇಳಿದ್ದಾರೆ. ಆದರೆ, ಅದನ್ನು ಸ್ಥಗಿತಗೊಳಿಸಿಲ್ಲ. ಮಂತ್ರಿಗಳು ಈ ಸದನಕ್ಕೆ ಸುಳ್ಳು ಉತ್ತರವನ್ನು ನೀಡುವ ಮೂಲಕ ಸಂವಿಧಾನಕ್ಕೆ ದ್ರೋಹ ಎಸಗಿದ್ದಾರೆ. ಅವರು ಸಂವಿಧಾನಕ್ಕೆ ಅನ್ಯಾಯ ಮಾಡಿದ್ದೇವೆಂದು ಒಪ್ಪಿಕೊಂಡು, ಈಗ ತಿದ್ದುಪಡಿ ಮಾಡುವ ಪ್ರಯತ್ನವನ್ನು ಮಾಡಿದ್ದಾರೆ. ಈ ಸರ್ಕಾರ ಸಂವಿಧಾನ ವಿರೋಧಿ ಸರ್ಕಾರವಾಗಿದೆ. ಸರ್ಕಾರದ ಈ ಸಂವಿಧಾನ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾ ತ್ಯಾಗ ಮಾಡುತ್ತೇವೆ.

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಎಲ್ಲ ಸದಸ್ಯರು ಸರ್ಕಾರದ ಧೋರಣೆಯನ್ನು ಖಂಡಿಸಿ ಸಭಾತ್ಯಾಗ ಮಾಡಿದರು.)**

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನ್ನ ಜೀವಮಾನದಲ್ಲಿ ವಿರೋಧ ಪಕ್ಷದ ಸದಸ್ಯರು ಈ ರೀತಿ ಮಾಡುತ್ತಿರುವುದನ್ನು ಇದೇ ಮೊಲದನೆಯ ಬಾರಿ ನೋಡುತ್ತಿದ್ದೇನೆ. ಹಿಂದೆಂದೂ ನಾನು ಈ ರೀತಿಯ ಘಟನೆಯನ್ನು ನೋಡಿರಲಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಇಷ್ಟು ದೊಡ್ಡ ಅಪಮಾನ!

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಬಹುಶಃ ನಿಯಮಾವಳಿಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ಕಾರ್ಯಾಗಾರವನ್ನು ಏರ್ಪಡಿಸಬೇಕಾಗಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಶರಣಪ್ಪ ಮಟ್ಟೂರ್‌ರವರು ಮೊದಲನೆಯ ಬಾರಿ ಮಾತನಾಡುತ್ತಿದ್ದಾರೆ, ಅವರು ತಮ್ಮ ಮಾತುಗಳನ್ನು ಮುಂದುವರೆಸಲಿ. ಅವರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಡಿ.

**ಶ್ರೀ ಶರಣಪ್ಪ ಮಟ್ಟೂರ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಜನತೆಗೆ ಕೊಟ್ಟ ವಾಗ್ದಾನದಂತೆ ನಡೆದುಕೊಂಡಿದೆ. ಜನತೆಗೆ ಕೊಟ್ಟ ಮಾತಿನಂತೆ ನಡೆದುಕೊಂಡಿರುವ ಸರ್ಕಾರ ಯಾವುದಾದರೂ ಈ ದೇಶದಲ್ಲಿ ಇದ್ದರೆ ಅದು ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅವರು ತಮ್ಮ ಅನುಭವದ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಬಡವರು ಹಾಗೂ ಅತೀ ನಿರ್ಗತಿಕ ಜನರು ಹಸಿವಿನಿಂದ ಬಳಲಬಾರದು, ಅವರ ಬದುಕು ಹಸನಾಗಿರಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡು ಅನ್ನಭಾಗ್ಯ ಯೋಜನೆಯನ್ನು ತಂದಂತಹ ಕೀರ್ತಿ ಮಾನ್ಯ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ರಾಜ್ಯದ ರೈತರು ಮತ್ತು ಬಡವರು ಸಾಲದಿಂದ ಬಳಲಬಾರದು, ಸಾಲದ ಹೊರೆಯಿಂದ ಆತ್ಮಹತ್ಯೆಗೆ ತುತ್ತಾಗಬಾರದು ಎನ್ನುವ ದೃಷ್ಟಿಯಿಂದ ಸಾಲ ಮತ್ತು ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿರುವುದು ನಮ್ಮ ಮುಖ್ಯಮಂತ್ರಿಗಳಲ್ಲಿ ಇರುವಂತಹ ಬದ್ಧತೆಯನ್ನು ತೋರಿಸುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದ ಮಕ್ಕಳು ಅಪೌಷ್ಠಿಕತೆಯಿಂದ ಬಳಲಬಾರದು, ಅವರ ತಂದೆತಾಯಿಗಳ ಬಡತನದ ನೋವು ಆ ಮಕ್ಕಳ ಮನಸ್ಸಿನಲ್ಲಿ ಬರಬಾರದು ಎನ್ನುವ ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಗಳು ತಂದಿರುವಂತಹ ಮಧ್ಯಾಹ್ನದ ಬಿಸಿ ಊಟದ ಕಾರ್ಯಕ್ರಮ ಮತ್ತು ಕ್ಷೀರಭಾಗ್ಯ ಯೋಜನೆಗಳು ಜನಪ್ರಿಯವಾಗಿವೆ. ಶಾಲಾ ಮಕ್ಕಳಿಗೆ ಎರಡು ಹೊತ್ತು ಹಾಲು ಮತ್ತು ಒಂದು ಮೊಟ್ಟೆಯ ಜೊತೆಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡುವ ಮೂಲಕ ಆ ಮಕ್ಕಳು ಅಪೌಷ್ಠಿಕತೆಯಿಂದ ಹೊರ ಬರುವುದಕ್ಕೆ ಅನುಕೂಲವಾಗುವಂತಹ ಯೋಜನೆಗಳನ್ನು ನಮ್ಮ ಸರ್ಕಾರ ಜಾರಿಗೆ ತಂದಿದೆ. ಈ ಯೋಜನೆಗಳು ನಮ್ಮ ರಾಜ್ಯದ ಜನತೆಗೆ ಈ ಸರ್ಕಾರ ಕೊಟ್ಟಿರುವಂತಹ ಅದ್ಭುತವಾಗಿರುವ ಕೊಡುಗೆ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಮೂರು ಯೋಜನೆಗಳು ನಮ್ಮ ಸರ್ಕಾರದ ಬದ್ಧತೆಯನ್ನು ಎತ್ತಿ ತೋರಿಸುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಹಳ ಸಂತೋಷವಾಗುತ್ತಿದೆ. ಅನ್ನಭಾಗ್ಯ, ಸಾಲ ಮನ್ನಾ ಮತ್ತು ಬಿಸಿಯೂಟದ ಕಾರ್ಯಕ್ರಮ ಹಾಗೂ ಕ್ಷೀರಭಾಗ್ಯ ಕಾರ್ಯಕ್ರಮಗಳು ನಮ್ಮ ದೇಶದಲ್ಲಿಯೇ ಮಾದರಿಯಾಗಿವೆ. ಈ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಕೆಲವು ನ್ಯೂನತೆಗಳು ಇರಬಹುದು. ನಮ್ಮ ಗಮನಕ್ಕೆ ಬಂದಿರುವ ನ್ಯೂನತೆಗಳನ್ನು ಸರಿಪಡಿಸುವಂತಹ ಪ್ರಯತ್ನವನ್ನು ಬಹಳ ಬದ್ಧತೆಯಿಂದ ಪಾರದರ್ಶಕತೆಯಿಂದ ನಮ್ಮ ಸರ್ಕಾರ ಮಾಡಿದೆ. ಬಹಳ ನಮ್ಮ ಸರ್ಕಾರದಲ್ಲಿ ಪ್ರಾಮಾಣಿಕ ಮತ್ತು ಅನುಭವಿ ಸಚಿವರುಗಳು ಇದ್ದಾರೆ. ಅವರುಗಳು ಸಹ ಬಹಳ ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ. ಹಿಂದಿನ ಸರ್ಕಾರದ ಅಧಿಕಾರಾವಧಿಯಲ್ಲಿ ಬಹಳಷ್ಟು ಹಗರಣಗಳು ನಡೆದು ಹೋಗಿವೆ. ಅಂತಹ ಯಾವುದೇ ಕಪ್ಪುಚುಕ್ಕೆಗಳು ನಮ್ಮ ಸರ್ಕಾರದಲ್ಲಿನ ಸಚಿವರ ಮೇಲೆ ಇಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ.

*(26) ವೈಎಲ್-ಎಂಡಿ/**07.02.2017/6.00***

**ಶ್ರೀ ಶರಣಪ್ಪ ಮಟ್ಟೂರ:-** ಮುಂದು. ಇಂದು ರಾಜ್ಯಪಾಲರು ಮಾಡಿರತಕ್ಕಂಥ ಭಾಷಣಕ್ಕೆ ಕೆಲವು ವಿಚಾರಗಳನ್ನು ನಾನು ಬಹಳ ಮುಕ್ತ ಕಂಠದಿಂದ ಉಲ್ಲೇಖ ಮಾಡಲಿಕ್ಕೆ ಇಷ್ಟಪಡುತ್ತೇನೆ. ಕಾವೇರಿ, ಮಹದಾಯಿ ಮತ್ತು ಕೃಷ್ಣ ಕಣಿವೆ ವಿಚಾರದಲ್ಲಿ ಸಾಕಷ್ಟು ಸಮಸ್ಯೆಗಳು ಉದ್ಭವಿಸಿತ್ತು. ಯಾವುದೇ ಸಮಸ್ಯೆಗಳು ಬಂದರೂ ಸಹ ನಮ್ಮ ಮಾನ್ಯ ಸಿದ್ಧರಾಮಯ್ಯನವರು ಮತ್ತು ನೀರಾವರಿ ಸಚಿವರು ಬಹಳ ಬದ್ಧತೆಯಿಂದ ನಡೆದುಕೊಂಡು ಆ ಸಮಸ್ಯೆಗೆ ಸರಿಯಾದ ರೀತಿಯಲ್ಲಿ ಕಾನೂನಿನಡಿ ಹೋರಾಟ ಮಾಡಿ, ನಮ್ಮ ರಾಜ್ಯಕ್ಕೆ ನೆಲ, ಜಲ, ರಕ್ಷಣೆ ಬಗ್ಗೆ ನಮಗೆ ಬರಬೇಕಾದ ಪಾಲು ಏನಿತ್ತು, ಅದನ್ನೆಲ್ಲಾ ಉಳಿಸಿಕೊಳ್ಳುವುದಕ್ಕೆ ಬಹಳ ಬದ್ಧತೆಯಿಂದ ನ್ಯಾಯಾಲಯದಲ್ಲಿ ನಮ್ಮ ಹಕ್ಕನ್ನು ರಕ್ಷಣೆ ಮಾಡಿರತಕ್ಕಂಥದ್ದರ ಬಗ್ಗೆ ಕಂಡಿಕೆ 3ರಲ್ಲಿನ ಉಲ್ಲೇಖವನ್ನು ಹೇಳುವುದಕ್ಕೆ ಬಯಸುತ್ತೇನೆ. ನನಗೂ ಇದರಿಂದ ಬಹಳ ಸಂತೋಷವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

With regard to this point no. 4 really it's an immense pleasure for me to participate about this issue is concerned. ಡಾ: ಜಿ.ಪರಮೇಶ್ವರ್‌ರವರು ಗೃಹ ಮಂತ್ರಿಗಳಾಗಿ, he is a foreign returned and a very knowledgeable person. ನಿಜವಾಗಿಯೂ ಒಳ್ಳೆಯ ವಿಚಾರವನ್ನು ತೆಗೆದುಕೊಂಡಿದ್ದಾರೆ. ಕಂಡಿಕೆ ಸಂಖ್ಯೆ 4 ರಲ್ಲಿ ನಮ್ಮ ರಾಜ್ಯದಲ್ಲಿ ಕೆಲವು corruption ವಿಚಾರ ಇರಬಹುದು. ಭ್ರಷ್ಟಾಚಾರ ಎಸಗುತ್ತಿರುವವರ ಮೇಲೆ ಬಲೆ ಬೀಸಿದರೂ ಕೂಡ ಕೆಲವು ಅಧಿಕಾರಿಗಳು "Justice delayed is justice denied" ಎನ್ನುವ ಹಾಗೆ ಅವರಿಗೆ ಶಿಕ್ಷೆ ಆಗುವುದು ತಪ್ಪುತ್ತಿತ್ತು. I must appreciate the stand taken by our Hon'ble Home Minister. ಈ ಒಂದು ವಿಚಾರದಲ್ಲಿ ACB (Anti-Corruption Bureau) ಮಾಡಿದ್ದರು and also the Government have set up Vigilance Cells in the departments. ಅದನ್ನು ಕೂಡ ಬಹಳ ಒಳ್ಳೆಯ ರೀತಿಯಲ್ಲಿ ಮಾಡಿದ್ದಾರೆ. ಇದನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಸ್ವೀಕರಿಸಿದ ನಂತರ 3401 ಅರ್ಜಿಗಳನ್ನು ಸೇರಿಸಿ, 3294 ಅರ್ಜಿಗಳನ್ನು ವಜಾಗೊಳಿಸಿದ್ದಾರೆ. 100 ಪತ್ತೆ ಮಾಡಿದ ಪ್ರಕರಣಗಳು, 32 ದಾಳಿ ಪ್ರಕರಣಗಳು ಮತ್ತು 21 ಶೋಧನೆ ಮಾಡಿದ ಪ್ರಕರಣಗಳೂ ಸೇರಿದಂತೆ ಒಟ್ಟು 153 ಪ್ರಕರಣಗಳನ್ನು ದಾಖಲು ಮಾಡಿಕೊಂಡಿದ್ದಾರೆ. ಅದೇ ರೀತಿ ಇಲಾಖೆಗಳಲ್ಲಿ ಏನು Vigilance Cell ನಲ್ಲಿ ಆಗಿರಬಹುದು ಅಥವಾ trap case ನಲ್ಲಿ ಸಿಕ್ಕಿರುವಂತವರಿಗೆ ಅಂದರೆ, appointing authority has to grant permission. ಅವರನ್ನು prosecute ಮಾಡಲಿಕ್ಕೆ under section 19 of the Prevention of Corruption Act, and under section 197 of the CRPC Act they have to obtain sanction. ಇದರಲ್ಲಿ ನಮ್ಮ ಡಾ:ಜಿ.ಪರಮೇಶ್ವರ್‌ರವರನ್ನು ಗೃಹ ಮಂತ್ರಿಗಳಾಗಿ ಮಾಡಿರತಕ್ಕಂಥದ್ದು ಕೂಡ ತುಂಬಾ ಒಳ್ಳೆಯ ಯೋಚನೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಕಾರಣವೇನೆಂದರೆ, ಜನರು ನಮ್ಮ ಮೇಲೆ ಇಟ್ಟಿರತಕ್ಕಂಥ ವಿಶ್ವಾಸವನ್ನು ಕಳೆದುಕೊಳ್ಳಬಾರದು. ಇವತ್ತಿನ ದಿನದಲ್ಲಿ ಎಷ್ಟೋ trap cases and criminal cases ಗಳು ಆಗುತ್ತವೆ. ಆದರೆ, ಇವತ್ತು ಯಾರಿಗೂ ಸರಿಯಾದ ರೀತಿ ಕಾನೂನಿನಡಿ ಶಿಕ್ಷೆ ಆಗದೇ ನಮಗೂ ಗೊತ್ತಾಗದ ರೀತಿಯಲ್ಲಿ ಮತ್ತೇನೋ ಆಗುತ್ತಿದೆ ಎಂದು common people are talking on the streets with regard to the delay in disposal of cases in the judicial system. As a result they are losing the confidence in the political system and also

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

in the administration of the State. It is happening not only in the state, but also country wide. We had a very good experience when I and Mr. Ugrappa were working together in the Committee. ಸರ್ಕಾರದ 32 ಇಲಾಖೆಗಳ ಅಧಿಕಾರಿಗಳನ್ನು ಸಹ ಕರೆದು ಮಾನ್ಯ ಉಗ್ರಪ್ಪನವರು ಚರ್ಚೆ ಮಾಡಿದ್ದಾರೆ. I must be very thankful to him to have such a wonderful meeting along with all the 32 department Officers right from 10.30 am to 7.30 pm. ಸಂಜೆ 7.30 ರವರೆಗೆ ಸಭೆಯನ್ನು ಮಾಡಿ, ಒಳ್ಳೆಯ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ. With regard to the sanction point ಇರಬಹುದು, cases acquittal ಇರಬಹುದು, less conviction ಇರಬಹುದು. All over the country, the conviction rate is 6 per cent. ಆದರೆ, ನಮ್ಮ ರಾಜ್ಯದಲ್ಲಿ ಕೇವಲ 4.2% ಇದೆ. ಅದನ್ನು ಸರಿಪಡಿಸುವುದರಲ್ಲಿ ಇವತ್ತು ಮಾನ್ಯ ಜಿ.ಪರಮೇಶ್ವರ್‌ರವರು ತೆಗೆದುಕೊಂಡಿರತಕ್ಕಂಥ ವಿಚಾರವನ್ನು ಹೇಳಬೇಕಾಗುತ್ತದೆ. ಪೊಲೀಸ್ ಇಲಾಖೆಯ ಆಧುನೀಕರಣಕ್ಕಾಗಿ ರೂಪಾಯಿ 4,075 ಕೋಟಿ ಕೊಟ್ಟು, 72 ಪೊಲೀಸ್ ಠಾಣೆಗಳನ್ನು ಮತ್ತು 5 ಪೊಲೀಸ್ ತರಬೇತಿ ಶಾಲೆಗಳನ್ನು ಹಾಗೂ 10 police out-posts, 13 barracks, 87 ವಸತಿಯೇತರ ಕಟ್ಟಡಗಳನ್ನು ಮಾಡಿ, ಪೊಲೀಸ್‌ನವರಿಗೆ ಸಾಕಷ್ಟು ಅನುಕೂಲವನ್ನು ಮಾಡಿ ಕೊಟ್ಟಿದ್ದಾರೆ. ಅದರ ಜೊತೆಗೆ 282 ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ಗಳು ಹಾಗೂ 5653 ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಇವರನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡುವ ಅವಶ್ಯಕತೆ ಇದೆ. But we have to appreciate his stand with regard to the recruitment of constables and Sub-Inspectors. ಈ ವಿಚಾರದಲ್ಲಿ ಕೂಡ ನಾನು ಬಹಳ ಸಂತೋಷದಿಂದ ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಪೊಲೀಸ್ ಸಿಬ್ಬಂದಿಗಳಿಗಾಗಿ 100 ರೂಪಾಯಿ ಇದ್ದ ಭತ್ಯೆಯನ್ನು 2100 ರೂಪಾಯಿಗೆ ಏರಿಸಿ ಭತ್ಯೆಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಪೊಲೀಸ್ ಅಧಿಕಾರಿಯವರು ಕರ್ತವ್ಯವನ್ನು ಮಾಡುವಂತಹ ಸಂದರ್ಭದಲ್ಲಿ ಕೇವಲ 100 ರೂಪಾಯಿ ಭತ್ಯೆಯನ್ನು ಕೊಡುತ್ತಾರೆ ಎನ್ನುವ ವಿಚಾರವು ಅವರ ತಲೆಯಲ್ಲಿ ಬರಬಾರದು ಎನ್ನುವಂತಹ ದೃಷ್ಟಿಯಿಂದ 100 ರೂಪಾಯಿ ಕೊಡುತ್ತಿರತಕ್ಕಂಥ ಭತ್ಯೆಯನ್ನು 2100 ರೂಪಾಯಿಗೆ ತಂದಿರತಕ್ಕಂಥದ್ದು ಕೂಡ ಬಹಳ ಒಳ್ಳೆಯ ವಿಚಾರ ಎನ್ನುವಂತಹ ಮಾತನ್ನು ಸಹ ನಾನು ಹೇಳುವುದಕ್ಕೆ ಬಯಸುತ್ತೇನೆ ಹಾಗೂ 2782 ವಸತಿ ಗೃಹಗಳನ್ನು ನಿರ್ಮಾಣ ಮಾಡಿದ್ದಾರೆ. ನಮ್ಮ ಸರ್ಕಾರ ಅದಕ್ಕೋಸ್ಕರ ಒಟ್ಟು 822 ಕೋಟಿ ರೂಪಾಯಿಗಳ ವೆಚ್ಚದಲ್ಲಿ 4016 ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಸಹ ಕ್ರಮ ಕೈಗೊಂಡಿದೆ. ಅದಕ್ಕಾಗಿ ಪೊಲೀಸ್ ಅಧಿಕಾರಿಗಳು ಯಾವುದೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಲೆ ನೋವು ಇಲ್ಲದ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ with rich experience with regard to the life of the police is concerned, ಕೆಲವು ಪೊಲೀಸರು ಕೆಲವು ಕಾರಣದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಆ ರೀತಿಯ ಯಾವುದೇ ತಲೆ ನೋವು ಪೊಲೀಸ್ ಅಧಿಕಾರಿಗಳಿಗೆ ಇರಬಾರದು, ಯಾವುದೇ ರೀತಿಯ ಸಮಸ್ಯೆಗಳು ಕೂಡ ಉದ್ಭವಿಸಬಾರದು ಎನ್ನುವ ನಿಟ್ಟಿನಲ್ಲಿ ಈ ಒಂದು ಕೆಲಸವನ್ನು ಬಹಳ ಬದ್ಧತೆಯಿಂದ ಮಾಡಿದ್ದಾರೆ.

ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನಮ್ಮ ಸರ್ಕಾರ ಬದ್ಧತೆಯಿಂದ ಸಂವಿಧಾನಕ್ಕೆ 98ನೇ ತಿದ್ದುಪಡಿಯಲ್ಲಿ ಅನುಚ್ಛೇದ 371(ಜೆ) ಯ ಕಾನೂನನ್ನು ಹೈದ್ರಾಬಾದ್- ಕರ್ನಾಟಕ ಪ್ರದೇಶದ ಜನರ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಾರಿಗೆ ತಂದಿದ್ದಾರೆ. ವಿಶೇಷವಾಗಿ ರಾಜ್ಯದಲ್ಲಿ 371(ಜೆ) ಯನ್ನು ತಂದಿರುವುದು ತಮ್ಮಗೆಲ್ಲಾ ತಿಳಿದ ವಿಚಾರವಾಗಿದೆ. ನಮ್ಮ ಹೈದ್ರಾಬಾದ್-ಕರ್ನಾಟಕದಲ್ಲಿ 371(ಜೆ) ತರುವುದಕ್ಕಾಗಿ ಸಾಕಷ್ಟು ಹಿರಿಯರು ಹೋರಾಟ ಮಾಡಿದ್ದರು. ಆದರೆ ಅವತ್ತಿನ ದಿನ ಅಧಿಕಾರದಲ್ಲಿದ್ದಂತಹ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರದಲ್ಲಿ ಗೃಹ ಮಂತ್ರಿಗಳಾಗಿದ್ದ ಮಾನ್ಯ ಎಲ್.ಕೆ.ಅಡ್ವಾಣಿಯವರು ಹೈದ್ರಾಬಾದ್-ಕರ್ನಾಟಕದಲ್ಲಿ 371(ಜೆ) ಮಾಡಬೇಕೆಂದು ನಿಯೋಗ ಹೋದಾಗ, ಯಾವುದೇ ಕಾರಣಕ್ಕೂ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದರು. ಈ ಒಂದು ವಿಚಾರವನ್ನು ಪತ್ರದ ಮುಖೇನ ನಮಗೆ ತಿಳಿಸಿದ್ದು ಇದೆ. ಅದೇ ರೀತಿ ಸನ್ಮಾನ್ಯ ಎಲ್.ಕೆ.ಅಡ್ವಾನಿಯವರು ಗುಲ್ಬರ್ಗಾಕ್ಕೆ ಬಂದಾಗ ಅಲ್ಲಿ ಸ್ಥಳೀಯ ನಾಯಕರು ಮನವಿ ಕೊಟ್ಟಾಗ ಕೂಡ ಅದೇ ಮಾತನ್ನು ಹೇಳಿದ್ದರು. ಆದರೆ ಆ ಜನರ ಅಭಿವೃದ್ಧಿಗೋಸ್ಕರ ಈ ರಾಜ್ಯದಲ್ಲಿರತಕ್ಕಂಥ ಎಲ್ಲರಿಗೂ ಕೂಡ 1947 ಸ್ವತಂತ್ರ್ಯ ಬಂದರೆ ನಮಗೆ ಒಂದು ವರ್ಷದ ನಂತರ ಸ್ವತಂತ್ರವನ್ನು ನಾವು ಅಂದಿನ ನಿಜಾಂಶಾಹಿಯಿಂದ ಕಿತ್ತುಕೊಳ್ಳುವುದಕ್ಕೆ ಕಾರಣವಾಗಿತ್ತು. ಅದಕ್ಕೆ ಕಾರಣವೇನೆಂಬುದನ್ನು ಅಭಿವೃದ್ಧಿಯ ಪಥಗಳತ್ತ ನೋಡುತ್ತಿದ್ದೇವೆ. ಆದರೆ ಇವತ್ತಿಗೂ ಅದು ಯಾವುದು ಕೂಡ ಆಗಲಿಲ್ಲ. ಅದಕೋಸ್ಕರ ಈ ಒಂದು ವಿಚಾರವು ಪಾರ್ಲಿಮೆಂಟ್‌ನಲ್ಲಿ ಬಂದಾಗ ಯುಪಿಎ ಸರ್ಕಾರ ಇದ್ದಾಗ, at the same time I must be grateful to our former Prime Minister Dr.Manmohan Singhji and as well as Smt. Sonia Gandhiji, Sri Rahul Gandhiji and also more particularly to Dr.M.Mallikarjuna Kargeji. ಸಾಕಷ್ಟು ಜನ ಹೋರಾಡಿದಂತಹ ಸಂದರ್ಭದಲ್ಲಿ ಆ ವಿಷಯವನ್ನು ಸಂಸತ್ತಿನಲ್ಲಿ ತಂದು ಅಂದಿನ ದಿನ ನಮ್ಮ ಹೈದ್ರಾಬಾದ್-ಕರ್ನಾಟಕದ ದೀಮಂತ ನಾಯಕ, ಇಂದಿನ ವಿರೋಧ ಪಕ್ಷವನ್ನು ಪ್ರತಿನಿಧಿಸತಕ್ಕಂಥ ನಮ್ಮ ಪಕ್ಷದ ಹಿರಿಯ ರಾಜಕಾರಣಿಯಾದಂತಹ ಸನ್ಮಾನ್ಯ ಡಾ: ಎಂ.ಮಲ್ಲಿಕಾರ್ಜುನ್ ಖರ್ಗೆಯವರ ಪ್ರಯತ್ನ ಇದರಲ್ಲಿ ಬಹಳ ಅನನ್ಯವಾಗಿದೆ ಎನ್ನುವ ಮಾತನ್ನು ಈ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂದರ್ಭದಲ್ಲಿ ಸಹ ಹೇಳುವುದಕ್ಕೆ ಬಯಸುತ್ತೇನೆ. ಈ ಒಂದು ತಿದ್ದುಪಡಿ ಆದಮೇಲೂ ಕೂಡ ದಿನಾಂಕ: 01.01.2013 ರಲ್ಲಿ ಒಂದು ಕಮಿಟಿಯನ್ನು ಮಾಡಿ, ಅದಕ್ಕಿಂತ ಮುಂಚೆಯೇ ಶ್ರೀ ನಂಜುಂಡಪ್ಪ ವರದಿಯ ಅನುಷ್ಠಾನಕೋಸ್ಕರ ಪ್ರತಿ ವರ್ಷ ಒಂದೊಂದು ಸಾವಿರ ಕೋಟಿ ರೂಪಾಯಿಗಳಂತೆ ಎಂಟು ಸಾವಿರ ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಕೊಟ್ಟಿದ್ದೇವೆ.

*(27) 7.2.2017 6.10 ಪಿಕೆ:ಎಂಡಿ*

**ಶ್ರೀ ಶರಣಪ್ಪ ಮಟ್ಟೂರ:-** ಮುಂದು ಆದರೂ ಕೂಡ ಏನು ಅಭಿವೃದ್ಧಿ ಆಗಲಿಲ್ಲ. ಅದಕ್ಕೆ ಕಾರಣ ಏನೆಂದರೆ, ಆ ಭಾಗದಲ್ಲಿರುವ ಎಲ್ಲಾ ಇಲಾಖೆಗಳಲ್ಲಿ ಸಾಕಷ್ಟು ಸಿಬ್ಬಂದಿ ಇರುತ್ತಿರಲಿಲ್ಲ, ಬಹಳಷ್ಟು ಹುದ್ದೆಗಳು ಖಾಲಿ ಇರುತ್ತಿತ್ತು. ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಅಧಿಕಾರಿ-ಸಿಬ್ಬಂದಿಗಳ ಕೊರತೆ ಇರುತ್ತಿತ್ತು. ಅಂತಹ ಬವಣೆ ನೀಗಿಸುವುದಕ್ಕೋಸ್ಕರ 371 (ಜೆ)ಗೆ ತಿದ್ದುಪಡಿ ತರಲಾಯಿತು. ಹೈದರಾಬಾದ್-ಕರ್ನಾಟಕದ ಅಭಿವೃದ್ಧಿಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಡಬೇಕು ಎಂಬ ಅಂಶ ಇತ್ತು. ಅದರ ಜೊತೆ, ಆ ಭಾಗದ ವಿಶೇಷ ಅಭಿವೃದ್ಧಿ ಯೋಜನೆಗಾಗಿ ಪ್ರತಿವರ್ಷ ರೂ. 3000 ಕೋಟಿಗಳನ್ನು ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶ ಮಂಡಳಿಗೆ ರೂ. 100 ಸಾವಿರ ಕೋಟಿಗಳನ್ನು ಮೀಸಲಿರಿಸಿದರು. ಇದರಿಂದ ಆ ಭಾಗದ ಅಭಿವೃದ್ಧಿಗೆ ಹಣ ಖರ್ಚು ಮಾಡಲು ಅನುಕೂಲವಾಗಿದೆ. Whole-heartedly I appreciate it. ಏಕೆಂದರೆ ಆ ಭಾಗದ ಜನಗಳಿಗೆ, ರಸ್ತೆ ಇರಬಹುದು, ಆಸ್ಪತ್ರೆಗಳ ಅನುಕೂಲತೆ ಇರಬಹುದು, ನೌಕರಿ ಇರಬಹುದು, ಬಡ್ತಿ ಇರಬಹುದು, ಈ ವಿಚಾರಗಳಲ್ಲಿ ಸಾಕಷ್ಟು ಅನುಕೂಲವಾಗಿದೆ. ಆ ಪ್ರದೇಶಕ್ಕೆಂದು 50,301 ಹುದ್ದೆಗಳನ್ನು ಮೀಸಲಿಡಲಾಗಿದೆ. ಅದರಲ್ಲಿ ಈಗಾಗಲೇ 12,376 ಹುದ್ದೆಗಳನ್ನು ಕಾರ್ಯನಿರತ ಸಿಬ್ಬಂದಿಗಳ ಮಿತಿಯಲ್ಲಿ ಭರ್ತಿ ಮಾಡಲಾಗಿದೆ. 13,135 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ. ಅದೇರೀತಿ promotion list ಕೂಡ ಸಾಕಷ್ಟು ಆಗಿದೆ. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಹೈಸ್ಕೂಲ್‌ನಲ್ಲಿ ಟೀಚರ್ ಆಗಿದ್ದಂಥ 860 ಮಂದಿಗೆ ಮುಖ್ಯೋಪಾಧ್ಯಾಯರಾಗಿ ಬಡ್ತಿ ಸಿಕ್ಕಿದೆ. ಮತ್ತೆ ಅಂದಾಜು 142 ಜನರ ಪಟ್ಟಿ ರೆಡಿಯಾಗಿದೆ. ಪಿಯು ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ಸಿಕ್ಕಿದೆ. ಇದಲ್ಲದೇ, ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿ ಇರಬಹುದು, ಪೊಲೀಸರ ನೇಮಕಾತಿ ಇರಬಹುದು, ಇವೂ ಸೇರಿದಂತೆ ಪ್ರೌಢ ಶಾಲೆಗಳಿಗೆ 1027 ಶಿಕ್ಷಕರ ನೇಮಕಾತಿಯ ಪಟ್ಟಿ ರೆಡಿಯಾಗಿದೆ, 1764 ಉಪನ್ಯಾಸಕರ ನೇಮಕಾತಿಯಾಗಿದೆ. 2009ರ ನಂತರ 2013ರಲ್ಲಿ ಮತ್ತೆ ಇವರ ನೇಮಕಾತಿ ಮಾಡಿದರು. 371(ಜೆ) ತಿದ್ದುಪಡಿ ಆದಮೇಲೆ ಆ ಭಾಗದ ಜನರಿಗೆ ತುಂಬಾ ಅನುಕೂಲವಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಮಾನ್ಯ ಶರಣಪ್ರಕಾಶ ಆರ್.ಪಾಟೀಲ್‌ರವರು ಸಾಕಷ್ಟು ಶ್ರಮವಹಿಸಿ ಕೆಲಸ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುತ್ತಿದ್ದಾರೆ. ಇವರು, ಬದ್ಧತೆಯಿಂದ ಕೂಡಿದ, ಪಾರದರ್ಶಕತೆ ಮತ್ತು ಭ್ರಷ್ಟರಹಿತ ರಾಜಕಾರಣಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಜನವರಿ 26ರಂದು ಒಂದು ಕಾರ್ಯಕ್ರಮಕ್ಕೆ ಹೋಗಿದ್ದಾಗ... ಮಾನ್ಯ ಹೊರಟ್ಟಿಯವರು ನನ್ನನ್ನು ನೋಡಿ ನಗುತ್ತಿದ್ದಾರೆ. ಅದಕ್ಕೆ ಕಾರಣವೇನು ಎಂದು ಹೇಳುತ್ತೇನೆ. I will meet your point Sir. I could make it out looking at your face.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನೀವು ಬಹಳ ಚೆನ್ನಾಗಿ ಮಾತನಾಡುತ್ತೀರಿ ಎಂದುಕೊಂಡರೆ, ಸ್ವಲ್ಪ ಸ್ವಲ್ಪ ಅಡ್ಡದಾರಿ ಹಿಡಿಯುವುದಕ್ಕೆ ಹೊರಟ್ಟಿದ್ದೀರಿ ಎಂದೆನಿಸಿತು. ಅದಕ್ಕೆ ನಗು ಬಂತು.

**ಶ್ರೀ ಶರಣಪ್ಪ ಮಟ್ಟೂರ:-** ಕೋರ್ಟ್‌ನಲ್ಲಿ ಸೀದಾ ದಾರಿ ಹಿಡಿದು ವಾದ ಮಾಡುತ್ತಿದ್ದೆ. ಇಲ್ಲಿ ನಿಮ್ಮನ್ನು ನೋಡಿ ಕಲಿತಿದ್ದೇನೆ. ಮಾನ್ಯ ಸಭಾಪತಿಗಳೆ, ನಾನು ಮತ್ತು ಮಾನ್ಯ ಶರಣಪ್ರಕಾಶ ಪಾಟೀಲರು ಜೈಲಿನಲ್ಲಿ ಹಮ್ಮಿಕೊಂಡಿದ್ದ ಒಂದು ಕಾರ್ಯಕ್ರಮವನ್ನು ಮುಗಿಸಿಕೊಂಡು ಬರುತ್ತಿದ್ದಾಗ, ಮಾನ್ಯ ಮಟ್ಟೂರ್‌ರವರೇ ಅಭಿವೃದ್ಧಿಪಡಿಸಿರುವ ರಸ್ತೆಗಳು ಎಷ್ಟು ಗುಣಮಟ್ಟದ್ದಾಗಿದೆ check ಮಾಡೋಣ ಬನ್ನಿ ಎಂದು ಹೇಳಿ, ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳನ್ನೂ ಕರೆದುಕೊಂಡು ಬಂದರು. ನನಗೆ ಬಹಳ ಖುಷಿಯಾಯಿತು. ಮಾನ್ಯ ಹೊರಟ್ಟಿಯವರು ಮಾಜಿ ಮಂತ್ರಿಗಳು, ಈ ಸದನದ ಹಿರಿಯ ಸದಸ್ಯರು, ಬಹಳ ಅನುಭವ ಇರುವವರು. ಅವರ ಜೊತೆಯಲ್ಲೇ ಒಂದು ಸಮಿತಿಯ ಸದಸ್ಯನಾಗಿ ಬೀದರ್, ಗುಲ್ಬರ್ಗಾ ಪ್ರದೇಶಗಳಿಗೆ ಭೇಟಿ ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನಮ್ಮ ಕಡೆ ಮಂತ್ರಿಗಳು ಮತ್ತು ಮಾಜಿ ಮಂತ್ರಿಗಳು, ಸನಿಕೆ-ಗುದ್ದಲಿಯನ್ನು ಡಿಕ್ಕಿಯಲ್ಲಿ ಹಾಕಿಕೊಂಡು ಹೋಗಿ ನಂತರ ಅದನ್ನು ಹಿಡಿದುಕೊಂಡು ಫೋಟೋ ತೆಗೆಸಿಕೊಂಡು ಪತ್ರಿಕೆಯಲ್ಲಿ ಹಾಕಿಸುತ್ತಿದ್ದರು. ನೀವು ಹಾಗೆ ಮಾಡಬೇಡಿ ಎಂದು ಹೇಳಬಯಸುತ್ತೇನೆ. ನಿಮ್ಮ ಸರ್ಕಾರದ ಸಚಿವರು ಹೀಗೆ ಮಾಡುತ್ತಿದ್ದಾರೆ ಎಂದು ಹೇಳುತ್ತಿಲ್ಲ, ಕೆಲವರು ಹಿಂದೆಲ್ಲಾ ಹೀಗೆ ಮಾಡುತ್ತಿದ್ದರು ಎಂದು ಹೇಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಈ ಮಾತನ್ನು ತಮ್ಮ ಅನುಭವದ ಮೇಲೆ ಹೇಳುತ್ತಿದ್ದೀರೇನೋ ಎಂದು ಭಾಸವಾಗುತ್ತಿದೆ. . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನಿಮ್ಮಷ್ಟು ಅನುಭವ ಇಲ್ಲ. ನಡೆಯುತ್ತಿದ್ದ ಘಟನೆಗಳ ಬಗ್ಗೆ ಹೇಳಿದೆ ಅಷ್ಟೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವಿ.ಎಸ್.ಉಗ್ರಪ್ಪ:-** ತಾವು ಸದನದ ಹಿರಿಯ ಸದಸ್ಯರಾಗಿದ್ದೀರಿ, ನಮ್ಮೆಲ್ಲರಿಗಿಂತಲೂ ಹೆಚ್ಚಿನ ಅನುಭವಸ್ಥರಾಗಿರುವುದರಿಂದ ಈ ಮಾತನ್ನು ಹೇಳುತ್ತಿದ್ದೀರಿ ಎಂದುಕೊಂಡೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸನಿಕೆ-ಗುದ್ದಲಿ ಇಟ್ಟುಕೊಂಡು ಫೋಟೋ ತೆಗೆಸಿಕೊಳ್ಳುವ ಅನುಭವ ನನಗೆ ಇಲ್ಲ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಗಳೇ, ರಾಜ್ಯದಲ್ಲಿ 6 ವರ್ಷಗಳಿಂದ ಕಂಡರಿಯದಷ್ಟು ಬರಗಾಲ ಸ್ಥಿತಿ ಬಂದೊದಗಿದೆ. ಇದರಿಂದ ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಇಂತಹ ಸಂದರ್ಭದಲ್ಲಿ, ಇವರ ಬದುಕನ್ನು ಹಸನುಗೊಳಿಸಬೇಕೆನ್ನುವ ಉದ್ದೇಶದಿಂದ, ಅದರ ಮಾಹಿತಿಯನ್ನು ತರಿಸಿಕೊಂಡು, ಮುಂಗಾರು ಅವಧಿಯಲ್ಲಿ 134 ತಾಲ್ಲೂಕುಗಳನ್ನು, ಹಿಂಗಾರು ಅವಧಿಯಲ್ಲಿ 164 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿ, ಆ ಪ್ರದೇಶಗಳ ಜಾನುವಾರುಗಳಿಗೆ ಕುಡಿಯುವ ನೀರಿಗೆ, ಬರ ಪರಿಹಾರಕ್ಕೆ, ಅಲ್ಲಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ರೂ.1195 ಕೋಟಿಗಳನ್ನು ಬಿಡುಗಡೆ ಮಾಡಿರುವುದು ನಮ್ಮ ಸರ್ಕಾರದ ಹೆಗ್ಗಳಿಕೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇರೀತಿ ಸಾಕಷ್ಟು ಅದ್ಭುತವಾದ ಕಾರ್ಯಕ್ರಮಗಳನ್ನು ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಮಾಡಿದೆ. ಕೆರೆಗಳಿಗೆ ನೀರು ತುಂಬಿಸುವ ವಿಚಾರ ಆಗಿರಬಹುದು, ಹೊಸದಾಗಿ ಕೃಷಿ ಹೊಂಡಗಳನ್ನು ತೊಡಿಸಿರುವಂಥದ್ದು, ಅಂತರ್ಜಲ ಹೆಚ್ಚಿಸಲು ರೂಪಿಸಿರುವ ಕಾರ್ಯಕ್ರಮ ಇತ್ಯಾದಿಗಳನ್ನು ನೋಡುತ್ತಿದ್ದೇವೆ. ಕೃಷಿಭಾಗ್ಯ, ಕೃಷಿಹೊಂಡ, 2450 shade net/poly-houses ಗಳನ್ನು ಮಾಡಿರುವಂಥದ್ದು, 3 ಲಕ್ಷಕ್ಕೂ ಹೆಚ್ಚಿನ ಹೆಕ್ಟೇರ್ ಪ್ರದೇಶಗಳಲ್ಲಿ ನೀರಿನ ಸಮರ್ಪಕ ಬಳಕೆಗಾಗಿ ಹನಿ ನೀರಾವರಿ ಮತ್ತು ತುಂತುರು ಹನಿ ನೀರಾವರಿ ಘಟಕಗಳನ್ನು ಸ್ಥಾಪನೆ ಮಾಡಿರುವಂಥದ್ದನ್ನು ಕಾಣುತ್ತೇವೆ. ಒಟ್ಟು 4 ವರ್ಷಗಳ ಅವಧಿಯಲ್ಲಿ ರೂ. 3924 ಕೋಟಿ ವೆಚ್ಚದಲ್ಲಿ 921 ಕೆರೆಗಳನ್ನು ಭರ್ತಿ ಮಾಡುವ ಯೋಜನೆ ಪೂಣಗೊಳಿಸಲಾಗಿದೆ. ನಮ್ಮ ರಾಜ್ಯದ ಜಲ-ನೆಲದ ರಕ್ಷಣೆಗಾಗಿ ಎಷ್ಟು ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಇದು ಎತ್ತಿ ತೋರಿಸುತ್ತದೆ.

ರೈತರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಸಿಗದೇ ಇರುವ ಸಂದರ್ಭ ಬಂದು ತೊಂದರೆ ಎದುರಿಸುವಂತಾಗಬಾರದು ಎನ್ನುವ ಉದ್ದೇಶದಿಂದ ಮಾರುಕಟ್ಟೆ ಮಧ್ಯೆ ಪ್ರವೇಶ ಮಾಡಿ ರೂ. 65.43 ಕೋಟಿಗಳನ್ನು ಕನಿಷ್ಠ ಬೆಂಬಲ ಬೆಲೆಯಾಗಿ ಈರುಳ್ಳಿ ಸಂಗ್ರಹಣೆಗೆ ಕೊಟ್ಟಿದ್ದಾರೆ. ತೆಂಗು ಬೆಳೆಗೆ ಕನಿಷ್ಠ ರೂ. 155

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೋಟಿ, ರೂ.450 ಕೋಟಿಗಳನ್ನು ಪ್ರತಿ ಕ್ವಿಂಟಾಲ್ ತೊಗರಿಗೆ ಬೋನಸ್ ಆಗಿ ಕೊಟ್ಟಿದ್ದಾರೆ. ಪ್ರತಿ ಕ್ವಿಂಟಾಲ್ ಭತ್ತಕ್ಕೆ ಕನಿಷ್ಠ ಬೆಂಬಲ ಬೆಲೆಯ ಜೊತೆ ರೂ. 100ಅನ್ನು ಬೋನಸ್ ಆಗಿ ಸಂಗ್ರಹ ಮಾಡಿ ಕೊಟ್ಟಿದ್ದಾರೆ. ಕೃಷಿ ಮಾರುಕಟ್ಟೆಗೆ ಸಂಬಂಧಪಟ್ಟಂತೆ ಆನ್‌ಲೈನ್ ಸಿಸ್ಟಮನ್ನು ಏನು ನಮ್ಮ ಸಿದ್ಧರಾಮಣ್ಣನವರ ನೇತೃತ್ವದ ಸರ್ಕಾರದಲ್ಲಿ ಮಾನ್ಯ ಕೃಷ್ಣಭೈರೇಗೌಡರು ಒಂದು ಕಾರ್ಯಕ್ರಮವನ್ನು ಕೈಗೆತ್ತಿಕೊಂಡರೋ ಅದನ್ನು ಕೇಂದ್ರ ಸರ್ಕಾರ ಮಾದರಿಯನ್ನಾಗಿ ಅಳವಡಿಸಿಕೊಂಡಿದೆ. 7436 ಹೆಕ್ಟೇರ್ ಪ್ರದೇಶವನ್ನು ತೋಟಗಾರಿಕೆ ಪ್ರದೇಶವಾಗಿ ವಿಸ್ತರಿಸಲಾಗಿದೆ. ಸಾಕಷ್ಟು ಹಣಕಾಸು ವ್ಯವಸ್ಥೆಯನ್ನು ಮಾಡಿ, ತೊಂದರೆ ಆಗಬಾರದು ಎನ್ನುವ ದೃಷ್ಟಿಯಿಂದ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಬಳಸಿಕೊಳ್ಳುವುದರ ಮೂಲಕ ಆ ದಿಸೆಯಲ್ಲಿ ಕೆಲಸ ಮಾಡಿದ್ದಾರೆ. ಅದೇರೀತಿ ಪಶುಸಂಗೋಪನೆಗೆ ಸಂಬಂಧಪಟ್ಟಂತೆ ರೈತರ ಹಸುಗಳು ಏನು ಸಾಂಕ್ರಾಮಿಕ ರೋಗಗಳಿಂದ ಸಾಯುತ್ತಿದ್ದವೋ ಅದನ್ನು ತಪ್ಪಿಸಲು 645 ಲಕ್ಷ ಔಷಧದ ಲಸಿಕೆಗಳನ್ನು ಒದಗಿಸಿ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ನಮ್ಮ ರೈತರ ಬದುಕನ್ನು ಹಸನುಗೊಳಿಸಲು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿರುವುದನ್ನು ಮಾನ್ಯ ರಾಜ್ಯಪಾಲರು ಮುಕ್ತ ಕಂಠದಿಂದ ಹೇಳಿದ್ದಾರೆ. ನೀರಾವರಿ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಆಗಬೇಕೆಂದು ಆ ನಿಟ್ಟಿನಲ್ಲಿ ಜನರಿಗೆ ಭರವಸೆಯನ್ನು ಕೊಟ್ಟು, ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ರಾಜ್ಯವನ್ನು ಸುತ್ತಾಡಿ, ರೈತರ ಬದುಕು ಹಸನುಗೊಳಿಸಬೇಕು ಎನ್ನುವ ಹಿನ್ನೆಲೆಯಲ್ಲಿ ಕೃಷ್ಣೆ, ಕಾವೇರಿ, ತುಂಗಾ ನದಿಗಳ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರತಿವರ್ಷ ರೂ. 10000 ಕೋಟಿ ಕೊಡುತ್ತೇವೆ ಎಂದು ಮಾಡಿದ್ದ ವಾಗ್ದಾನವನ್ನು ನೆರವೇರಿಸಿ, 4 ವರ್ಷದಲ್ಲಿ 42 ಸಾವಿರ ಕೋಟಿ 540 ಲಕ್ಷ ರೂಪಾಯಿಗಳನ್ನು ಕೊಟ್ಟಿರುವ ಹೆಗ್ಗಳಿಕೆ ಈ ಸರ್ಕಾರಕ್ಕೆ ಸಲ್ಲುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

*(28) 07-02-2017 SK/AK 6.20*

**ಶ್ರೀ ಶರಣಪ್ಪ ಮಟ್ಟೂರ:-** ಮುಂದು ಮಾನ್ಯ ಸಭಾಪತಿಯವರೇ, ಅದೇ ರೀತಿ ಈಗ ಕೇಂದ್ರ ಜಲ ಆಯೋಗವು ನಮ್ಮ ಆಲಮಟ್ಟಿ ನಾರಾಯಣಪುರ ಅಣೆಕಟ್ಟುಗಳ ಪುನಶ್ಚೇತನ ಮತ್ತು ಅಭಿವೃದ್ಧಿಗೋಸ್ಕರ ಅತ್ಯುತ್ತಮ ನಿರ್ವಹಣೆಯ ಗೌರವ ಪ್ರಶಸ್ತಿಯನ್ನು ಪ್ರಧಾನ ಮಾಡಿದೆ. ಇದರರ್ಥ ನಮ್ಮ ಕೆಲಸಗಳಿಗೆ appreciate ಮಾಡಿ ಒಂದು award ಸಹ ಕೊಟ್ಟಿದ್ದಾರೆ, it shows our concern and commitment towards the farmers. ಈ ಕೆಲಸ ಮಾಡಿರುವುದರಿಂದ ಆ ಭಾಗದ ರೈತರಿಗೆ ಒಳ್ಳೆಯದಾಗಿ ಮತ್ತು ಅವರ ಬದುಕು ಯಾವುದೇ ತೊಂದರೆ ತಾಪತ್ರಯ ಇಲ್ಲದೇ ನಡೆಯುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಅರಣ್ಯದಲ್ಲಿ ಎಂಟು ಕೋಟಿ ಸಸಿಗಳನ್ನು ನೆಟ್ಟು ಹಸಿರೀಕರಣಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವುದು ಎದ್ದು ಕಾಣುತ್ತಿದೆ. ಅದನ್ನು ಸಹ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಪ್ರಮುಖ ವಿಚಾರವೇನೆಂದರೆ ನಮ್ಮ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ವಿಶೇಷ ಒತ್ತನ್ನು ಕೊಟ್ಟಿದೆ. ಇದುವರೆವಿಗೂ ಇಷ್ಟು ಅದ್ಭುತವಾದ ಹಣಕಾಸಿನ ವ್ಯವಸ್ಥೆಯನ್ನು ಕೊಟ್ಟಿರುವುದನ್ನು ನಾವು ನೋಡಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು, 'ಈ ವರ್ಗದ ಜನರಿಗೆ ಅನ್ಯಾಯವಾಗಿದೆ, ಇವರು ಹಲವು ಕಾಲದಿಂದ ತುಳಿತಕ್ಕೆ ಒಳಗಾಗಿದ್ದಾರೆ, ಇವರ ಬದುಕನ್ನು ಹಸನಗೊಳಿಸಬೇಕು' ಎಂಬ ಉದ್ದೇಶವನ್ನು ಇಟ್ಟುಕೊಂಡು ಇವರ ಬದುಕನ್ನು ಸರಿಪಡಿಸುವುದಕ್ಕೆ ಸುಮಾರು 19,543 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರಿಗೆ ಮನೆ ಇರಬಹುದು, ರಸ್ತೆಗಳಿರಬಹುದು, ಅವರ ಮಕ್ಕಳಿಗೆ ವಿದ್ಯಾಭ್ಯಾಸವಿರಬಹುದು ಮತ್ತು ಅವರಿಗೆ ಎಲ್ಲಾ ರೀತಿಯ ಅನುಕೂಲತೆಗಳಿಗಾಗಿ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟಿರುವುದು ಯಾವುದಾದರೂ ಇದ್ದರೆ ಅದು ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಎನ್ನುವಂತಹ ಹೆಗ್ಗಳಿಕೆ ನಮಗೆ ಇದೆ.

ಮಾನ್ಯ ಸಭಾಪತಿಯವರೇ, ಡಾ. ಬಿ.ಆರ್.ಅಂಬೇಡ್ಕರ್‌ರವರ 120 ನೇ ಜನ್ಮ ದಿನಾಚರಣೆಯ ಅಂಗವಾಗಿ 125 ವಸತಿ ಶಾಲೆಗಳು, 100 ಹೊಸ ಮೆಟ್ರಿಕ್ ನಂತರದ ವಿದ್ಯಾಲಯಗಳನ್ನು ಸ್ಥಾಪನೆ ಮಾಡಿ, particularly ಆ ಒಂದು ದಿನವನ್ನು ಜಾಗತಿಕ ಸಮ್ಮೇಳನದೊಂದಿಗೆ 'ಜ್ಞಾನದರ್ಶನ ದಿನ'ವನ್ನಾಗಿ ಆಚರಿಸಲು ಉದ್ದೇಶಿಸಿರುವುದು ಬಹಳ ಶ್ಲಾಘನೀಯ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ವಿಶೇಷವಾಗಿ ಹಿಂದುಳಿದ ವರ್ಗಗಳಿಂದ ಬಂದಿರತಕ್ಕಂತಹ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿರುವ ಮಾನ್ಯ ತನ್ವೀರ್ ಸೇಠ್‌ರವರು ಈ ಸದನದಲ್ಲಿದ್ದಾರೆ. ಅವರು ಕೂಡ ಬಹಳ ಬದ್ಧತೆಯಿಂದ ಕೆಲಸ ಮಾಡುವಂಥವರು ಮತ್ತು ಪಾರದರ್ಶಕ ಆಡಳಿತವನ್ನು ಹೊಂದಿರತಕ್ಕಂತಹವರು. ಮಾನ್ಯ ಕಿಮ್ಮನೆ ರತ್ನಾಕರ್‌ರವರು ಶಿಕ್ಷಣ ಸಚಿವರಾಗಿದ್ದಾಗ ಎರಡು ವರ್ಷಗಳ ಕಾಲ ಅವರನ್ನು ಹತ್ತಿರದಿಂದ ನೋಡಿದ್ದೇನೆ. ಅವರೂ ಸಹ ಪಾರದರ್ಶಕತೆ ಮತ್ತು ಭ್ರಷ್ಟಾಚಾರರಹಿತವಾಗಿ ಆಡಳಿತವನ್ನು ನೀಡಿದವರು. ಅದನ್ನೇ ಮುಂದುವರೆಸಿಕೊಂಡು, ಮಾನ್ಯ ತನ್ವೀರ್ ಸೇಠ್‌ರವರು ತುಂಬಾ fast ಆಗಿ ಕಳೆದ 10-15 ವರ್ಷಗಳಿಂದ ಪೆಂಡಿಂಗ್ ಇದ್ದ ಕಡತಗಳನ್ನು clear ಮಾಡಿ ನ್ಯಾಯ ಕೊಡಿಸುವ ಮತ್ತು ಬಡ್ತಿ ನೀಡುವ ಕೆಲಸವನ್ನು ಮಾಡುತ್ತಿದ್ದಾರೆ. ಖಾಲಿ ಇರುವಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಥಾನಗಳಿಗೆ ಭರ್ತಿ ಮಾಡುವುದಕ್ಕೆ ಅವರು ಹಗಲು ರಾತ್ರಿ ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ. ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ಕೊಡುವಲ್ಲಿ ನಮ್ಮ ಸರ್ಕಾರ ಎಷ್ಟು ಮಹತ್ತರ ಪಾತ್ರವನ್ನು ವಹಿಸಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ನಾಲ್ಕೂವರೆ ಲಕ್ಷ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮತ್ತು ಹತ್ತೂವರೆ ಲಕ್ಷ ವಿದ್ಯಾರ್ಥಿಗಳ ಶುಲ್ಕ ಪಾವತಿ ಮಾಡಲು ನೆರವು ನೀಡಲಾಗಿದೆ. ಒಟ್ಟು ಹನ್ನೆರಡು ಲಕ್ಷ ವಿದ್ಯಾರ್ಥಿಗಳಿಗೆ ಇದರ ಲಾಭವಾಗಿದೆ. ಅದೇ ರೀತಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಿಶೇಷವಾಗಿ ಅಲ್ಪಸಂಖ್ಯಾತರು ಅಸಮಾಧಾನ ಪಟ್ಟುಕೊಳ್ಳಬಾರದು ಎನ್ನುವ ದೃಷ್ಟಿಯಿಂದ ಅವರ ಅಭಿವೃದ್ಧಿಯೇ ನಮ್ಮ ರಾಷ್ಟ್ರದ ಸಾಮರಸ್ಯದ ಉದ್ದೇಶವಾಗಿದೆ. ನಾವೆಲ್ಲರು ಇಲ್ಲಿ ಅಣ್ಣ-ತಮ್ಮಂದಿರಂತೆ ಸಹಬಾಳ್ವೆಯಿಂದ ಬದುಕಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ಮತ್ತು ಜಾತ್ಯಾತೀತ ಮನೋಭಾವದಿಂದ ಎಲ್ಲರಿಗೂ ನ್ಯಾಯ ಸಿಗಬೇಕು ಹಾಗೂ ಸಾಮಾಜಿಕ ನ್ಯಾಯದಿಂದ ಬದುಕಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ಅವರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದಕ್ಕಾಗಿ ಸಾಕಷ್ಟು ಹಣಕಾಸಿನ ನೆರವನ್ನು ನೀಡಿರುವ ಸರ್ಕಾರ ಯಾವುದಾದರೂ ಇದ್ದರೆ ಅದು ಸನ್ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಪಕ್ಷದ ಸರ್ಕಾರ ಎಂದು ಹೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಶ್ರೀ ಶರಣಪ್ಪನವರೇ, ತಾವು ಪ್ರಾರಂಭ ಮಾಡಿ 35 ನಿಮಿಷವಾಯಿತು. ಇನ್ನು 3-4 ನಿಮಿಷ conclude ಮಾಡಿದರೆ ಇನ್ನೊಬ್ಬರಿಗೆ ಅವಕಾಶ ಸಿಗುತ್ತದೆ. ಇನ್ನು 5 ನಿಮಿಷವಿದೆ. ಗಡಿಯಾರ ನೋಡಿಕೊಳ್ಳಿ. 6.30 ಗಂಟೆಯೊಳಗೆ ಮುಗಿಸಿ. ನಾನು ಮಧ್ಯೆ ಬಾಯಿ ಹಾಕುವುದಿಲ್ಲ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ನಾನು ಆದಷ್ಟು ಬೇಗನೆ conclude ಮಾಡುತ್ತೇನೆ.

**ಶ್ರೀ ಕೆ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ,...

**ಸಭಾಪತಿಯವರು:-** ಬೇಡಿ-ಬೇಡಿ, ಅವರಿಗೆ request ಮಾಡಿ. ಆ ವಿಷಯದ ಬಗ್ಗೆ ಚರ್ಚೆ ಬೇಡ. ಮಾನ್ಯ ಶರಣಪ್ಪ ಮಟ್ಟೂರರವರು ತಮ್ಮ ಮಾತುಗಳನ್ನು ಮುಂದುವರಿಸಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:-** ಆದರೆ ಎಲ್ಲೋ ಒಂದು ಕಡೆ ನನ್ನ ಸನ್ಮಿತ್ರರು ಈ ಸಂಸದೀಯ ವ್ಯವಸ್ಥೆಯಲ್ಲಿ ಸಂವಿಧಾನದ ರೀತ್ಯಾ ರಾಜ್ಯಪಾಲರಿಗೆ ಅವರು ದಯಪಾಲಿಸಿದ ಭಾಷಣಕ್ಕೆ ವಂದನಾ ನಿರ್ಣಯ ಮಾಡುವಂತಹ ಸಂದರ್ಭದಲ್ಲಿ ಇತಿಹಾಸದಲ್ಲಿ ಎಂದು ಸಹ ವಿರೋಧಪಕ್ಷದವರು ಈ ರೀತಿಯ boycott ಮಾಡಿರುವಂತಹದು ಇಲ್ಲ.

**ಸಭಾಪತಿಯವರು:-** ಇರಲಿ ಬಿಡಿ ಅದು ಅವರ ಇಷ್ಟ.

**ಶ್ರೀ ವಿ.ಎಸ್. ಉಗ್ರಪ್ಪ:-** ನಾನು ಇಷ್ಟೇ ಹೇಳುತ್ತೇನೆ, ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರಪತಿಗಳಿರುವಂತೆ, ಇಲ್ಲಿ ರಾಜ್ಯಪಾಲರು. ರಾಜ್ಯಪಾಲರು ಜಂಟಿ ಸದನಗಳನ್ನುದ್ದೇಶಿಸಿ ಮಾಡಿರುವ ಭಾಷಣದ ಮೇಲೆ ವಂದನಾ ನಿರ್ಣಯ ಮಂಡಿಸುವ ಸಂದರ್ಭದಲ್ಲಿ ಈ ರೀತಿಯ ಒಂದು ಕೆಟ್ಟ ಪರಂಪರೆಯನ್ನು ಹಾಕುವಂತಹದು ಶೋಭೆ ತರುವಂತಹದಲ್ಲ. ದಯಮಾಡಿ ನಿಮ್ಮ ಮೂಲಕ ಅವರಿಗೆ ವಿನಂತಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ, ಯಾವುದೇ ವಿಧವಾದಂತಹ ಟೀಕೆಗಳಿದ್ದರೆ, ಸದನದಲ್ಲಿ ಬಂದು ಟೀಕೆ ಮಾಡುವುದಕ್ಕೆ ಅವರಿಗೆ ಹಕ್ಕಿದೆ. ದಯಮಾಡಿ ಅವರುಗಳು ಸದನಕ್ಕೆ ಬರಲಿ, ನಾವೆಲ್ಲರೂ ಸೇರಿ ರಾಜ್ಯಪಾಲರ ಭಾಷಣಕ್ಕೆ ಗೌರವವನ್ನು ತೋರುವಂತಹ ಸತ್ಸಂಪ್ರದಾಯವನ್ನು ಹಾಕುವುದಕ್ಕೆ ನಾಂದಿ ಹಾಡೋಣ. ಅದನ್ನು ಹೊರತುಪಡಿಸಿ ಈ ರೀತಿಯ ಕೆಟ್ಟ ಸಂಪ್ರದಾಯವನ್ನು ಹಾಕುವುದು ಶೋಭೆ ತರುವುದಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಶ್ರೀ ಶರಣಪ್ಪನವರೇ, ಮುಗಿಸಿಬಿಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಅವರು boycott ಮಾಡಿಲ್ಲ. ಅವರು ಕುಳಿತುಕೊಂಡಿದ್ದಾರೆ.

**ಸಭಾಪತಿಯವರು:-** ಜಾಸ್ತಿ ಹೊಗಳಬೇಡಿ. ಆ ಬಗ್ಗೆ ಚರ್ಚೆ ಬೇಡ.

**ಶ್ರೀ ವಿ.ಎಸ್. ಉಗ್ರಪ್ಪ:-** ಶ್ರೀ ರಾಮಚಂದ್ರಗೌಡರವರನ್ನು ಅಭಿನಂದಿಸುತ್ತೇನೆ. ಏಕೆಂದರೆ boycott ಮಾಡುವ ಸಂದರ್ಭದಲ್ಲಿ ಅವರು ಇರಲಿಲ್ಲ. ಅವರು ಒಂದಿಷ್ಟು ಸಂಪ್ರದಾಯಗಳನ್ನು ಎತ್ತಿ ಹಿಡಿಯುವಂತಹ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುವಂತಹವರಲ್ಲಿ ಅವರು ಒಬ್ಬರು. ಈ ವ್ಯವಸ್ಥೆಯಲ್ಲಿ ಆ ಕೆಟ್ಟ ಸಂಪ್ರದಾಯವಾಗಬಾರದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಆ ವಿಷಯ ಬೇಡ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಎಲ್ಲಾ ವಿರೋಧಪಕ್ಷದವರು ಕುಳಿತುಕೊಳ್ಳುವುದು ಸೂಕ್ತ. ಏಕೆಂದರೆ, ಇದು ಬಹಳ ಪ್ರಮುಖವಾದ ವಿಚಾರವಾಗಿದೆ. Particular ಆಗಿ ನಾವು ಇದರ ಬಗ್ಗೆ ಬಹಳಷ್ಟು ಬರೆದಿದ್ದೇವೆ. ಮಾತನಾಡುತ್ತಾರೆ, ಅವರು ಟೀಕೆ ಮಾಡಿಕೊಳ್ಳುವುದಕ್ಕೂ ಬರೆದುಕೊಂಡಿದ್ದೇವೆ. ಬರೆದುಕೊಂಡರೆ ಏನು ತಪ್ಪಿಲ್ಲ. ಅದಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲರೂ ಬಂದು ಕುಳಿತುಕೊಂಡು ಚರ್ಚೆ ಮಾಡಿದರೆ ಈ ಸದನದ ಘನತೆ ಗೌರವ ಹೆಚ್ಚಾಗುತ್ತದೆ ಎಂಬುದು ನನ್ನ ಅನಿಸಿಕೆ. ಆದ್ದರಿಂದ, ದಯಮಾಡಿ ಬರಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಶ್ರೀ ಶರಣಪ್ಪನವರೇ ಮುಗಿಸಿಬಿಡಿ.

**ಶ್ರೀ ಶರಣಪ್ಪ ಮಟ್ಟೂರ:-** ಸನ್ಮಾನ್ಯ ಸಭಾಪತಿಯವರೇ, ಇವತ್ತು ವಿಶೇಷವಾಗಿ ಅಲ್ಪಸಂಖ್ಯಾತರ ವಿಚಾರವಾಗಿ ನಾನು ಹೇಳುತ್ತಿದ್ದೇನೆ. Christian community ಆಗಿರಬಹುದು, minorities ಆಗಿರಬಹುದು ಮತ್ತು ಅವರಿಗೋಸ್ಕರ ಸಾಕಷ್ಟು ವಿಶೇಷವಾದ ಹಣಕಾಸಿನ ಒತ್ತು ನೀಡಿ, ಮೊರಾರ್ಜಿ ಶಾಲೆಗಳನ್ನು ತೆಗೆದಿರುವಂತಹದು. ಪ್ರತಿ ಮಕ್ಕಳಿಗೆ ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಸತಿ ಶಾಲೆಯನ್ನು ಮಾಡಿರುವುದು. ಹಜ್ ಯಾತ್ರಿಕರಿಗಾಗಿ ಬೆಂಗಳೂರಿನಲ್ಲಿ ನೂತನವಾಗಿ 'ಹಜ್ ಭವನ'ವನ್ನು ಪ್ರಾರಂಭ ಮಾಡಿರುವುದು. ಒಳ್ಳೆಯ ಒಳ್ಳೆಯ ವಿಚಾರಗಳನ್ನು ಸಹ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಒದಗಿಸಿಕೊಟ್ಟಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಏನು ಇವತ್ತು ಮಕ್ಕಳಲ್ಲಿ ಅಪೌಷ್ಠಿಕತೆಯ ಬಗ್ಗೆ ವಿಚಾರವನ್ನು ಈಗಾಗಲೇ ಹೇಳಿದ್ದೇನೆ. ಬಾಣಾಂತಿಯರಿಗೆ ಮತ್ತು ಮಹಿಳೆಯರಿಗೆ ವಿಶೇಷವಾಗಿ ಮಕ್ಕಳಿಗೆ ಕ್ಷೀರಭಾಗ್ಯವನ್ನು ಒದಗಿಸಿರುವ ವಿಚಾರವನ್ನು ಹೇಳಿದ್ದೇನೆ. ಸುಮಾರು 38 ಲಕ್ಷಕ್ಕಿಂತ ಹೆಚ್ಚು ಮಕ್ಕಳಿಗೆ ಒಂದು ವಾರದಲ್ಲಿ ಮೂರು ಸಲ 150 ಮಿಲಿ ಲೀಟರ್ ಕೆನೆಭರಿತ ಹಾಲನ್ನು ಸಹ ಕೊಡುವಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರ ಇಂದು ಮಾಡಿದೆ. ಎಷ್ಟು ಹೊರೆಯಾದರೂ ಕೂಡ ಮಕ್ಕಳ ಮತ್ತು ಮಹಿಳೆಯರ ಬಡವರ ಬದುಕು ಹಸನಾಗಿಸಬೇಕು. ಎಲ್ಲಾರೂ ಬಹಳ ಸಂತೋಷವಾಗಿ ಬದುಕಬೇಕು ಮತ್ತು ಸಹಬಾಳ್ವೆಯಿಂದ ಇರಬೇಕು ಎನ್ನುವ ಅರ್ಥದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಹೆಚ್ಚಿಗೆ ಒತ್ತು ಕೊಟ್ಟು, ಸಮಾಜ ಕಲ್ಯಾಣ ಇಲಾಖೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಾಗಿ ಸಾಕಷ್ಟು ಮಹತ್ವಪೂರ್ಣವಾದ ಕಾರ್ಯಕ್ರಮವನ್ನು ಪ್ರಾಯೋಗಿಸಿ, ಅವರಿಗೆ ಒಳ್ಳೆಯ ಆರೋಗ್ಯ ಸುಧಾರಣೆಯಾಗಲೀ ಎಂದು ಒಳ್ಳೆಯ scheme ಮಾಡಿದ್ದಾರೆ.

**ಸಭಾಪತಿಯವರು:-** ಮುಗಿಸಿಬಿಡಿ. Conclude ಮಾಡಿ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣೆ ಮುಗಿಸಿ.

**ಶ್ರೀ ಶರಣಪ್ಪ ಮಟ್ಟೂರು:-** 15-20 ನಿಮಿಷಗಳಲ್ಲಿ ನಾನು conclude ಮಾಡುತ್ತೇನೆ.

**ಸಭಾಪತಿಯವರು:-** 15-20 ನಿಮಿಷವಿಲ್ಲ. ಬೇರೆಯವರು ಮಾತನಾಡುವುದು ಬೇಡವೇ?

**ಶ್ರೀ ಶರಣಪ್ಪ ಮಟ್ಟೂರು:-** ನಾನು ತಮ್ಮಲ್ಲಿ request ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಬೇರೆ ಯಾರಾದರೂ ತಮ್ಮ ಸಮಯವನ್ನು ಕೊಡುವುದಾದರೆ ನಾನು ಕೊಡುತ್ತೇನೆ. ಏಕೆಂದರೆ ಇಲ್ಲಿ ಒಂದು ನಿಮಿಷ ಮಧ್ಯೆ ಬಾಯಿ ಹಾಕುತ್ತೇನೆ, ತಾವು ತಪ್ಪು ತಿಳಿಯಬೇಡಿ. ರಾಜ್ಯಪಾಲರ ಭಾಷಣಕ್ಕೆ ಅವರಿಗೆ ವಂದನೆಯನ್ನು ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದು ಸಂಪ್ರದಾಯ ಮತ್ತು ಅದು ಸರಿ. ತಾವು ಸರಿಯಾಗಿ ಮಾಡುತ್ತಿದ್ದೀರಿ. ತಮ್ಮ ದೃಷ್ಟಿಯೊಳಗೆ ಅದು ಸರಿ ಎಂದು ಹೇಳುತ್ತಿದ್ದೀರಿ, ನಾನು ಸಹ ಅದೆಲ್ಲಾ ಸರಿ ಎಂದು ಹೇಳುತ್ತಿದ್ದೇನೆ.

**29/ 7-2-2017/6.30/ಡಿಎಸ್-ಎಕೆ**

**ಸಭಾಪತಿಯವರು:- ಮುಂದು**. ಆದರೆ ಸಭೆಯ ಇತರೆ ಸದಸ್ಯರುಗಳ ಹಕ್ಕುಗಳ ಬಗ್ಗೆಯೂ ನಾನು ಗಮನಿಸಬೇಕಾಗುತ್ತದೆ. ಈಗ ನಾನು ಒಬ್ಬರಿಗೆ ಒಂದು ಗಂಟೆ ಕೊಟ್ಟರೆ, ಇನ್ನು ಐದು ದಿನ ಮಾತ್ರ ಸಭೆ ನಡೆಯುತ್ತದೆ, ವಿಧೇಯಕಗಳನ್ನು ಪಾಸ್ ಮಾಡಬೇಕು, ಪ್ರಶ್ನೋತ್ತರ, ಶೂನ್ಯ ವೇಳೆ ತೆಗೆದುಕೊಳ್ಳಬೇಕು. ಬೇರೆ ಗೌರವಾನ್ವಿತ ಸದಸ್ಯರುಗಳೆಲ್ಲಾ ಏಕೆ ಕುಳಿತುಕೊಂಡಿರಬೇಕು? ಮೋಟಮ್ಮನವರಿಗೆ ನಾನು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಅವರು ಕೋಪ ಮಾಡಿಕೊಳ್ಳುವುದಿಲ್ಲವೆ? ಅವರು ಆ ರೀತಿ ಕೋಪ ಮಾಡಿಕೊಳ್ಳುವುದು ನ್ಯಾಯವಲ್ಲವೆ? ಆದ್ದರಿಂದ ದಯಮಾಡಿ ತಾವು ಮುಗಿಸಿಬಿಡಿ. ತಮಗೆ ನಾನು ನಿಗದಿಪಡಿಸಿದ ಸಮಯಕ್ಕಿಂತ ಹೆಚ್ಚು ಸಮಯ ಕೊಟ್ಟಿದ್ದೇನೆ. ಇನ್ನು ಎರಡು-ಮೂರು ನಿಮಿಷಗಳಲ್ಲಿ ಮುಗಿಸಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಪ್ರತಿಯೊಂದು ಮಗು ಶಾಲೆಗೆ ಹೋಗಬೇಕು, ಚೆನ್ನಾಗಿ ಕಲಿಯಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ನಮ್ಮ ಸಂವಿಧಾನದಲ್ಲಿ ಅವರಿಗೋಸ್ಕರ ವಿಶೇಷವಾದ ಒತ್ತು ಕೊಡಬೇಕು ಎಂದು ಆರ್.ಟಿ.ಇ. ಕಾಯ್ದೆಯನ್ನು ಮಾಡಿದ್ದಾರೆ. ಅದರ ಕೆಳಗಡೆ ಇವತ್ತು ನಾಲ್ಕೂವರೆ ಲಕ್ಷ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಅಡ್ಮಿಷನ್ ಕೊಡುವಂತಹ ವ್ಯವಸ್ಥೆ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಕೆಲವು ಸಲ ತೊಂದರೆಗಳಾದರೂ ಕೂಡ ಮಾನ್ಯ ತನ್ವೀರ್ ಸೇಠ್‌ರವರು ಅದನ್ನು ಬಹಳ ಸ್ಟ್ರಿಕ್ಟ್ ಆಗಿ ಅನುಷ್ಠಾನ ಮಾಡಿ ಪ್ರತಿಯೊಬ್ಬ ಬಡವನ ಮಕ್ಕಳಿಗೂ ಖಾಸಗಿ ಶಾಲೆಗಳಲ್ಲಿ ಅಡ್ಮಿಷನ್ ಕೊಡಿಸುವಲ್ಲಿ ಬಹಳ ವ್ಯವಸ್ಥಿತವಾಗಿ ಅದನ್ನು ಮಾಡಿದ್ದಾರೆ. ಅವರಿಗೂ ಕೂಡ ನಾನು ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡಿಕೊಂಡೆ. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ನಡೆಯುತ್ತಿದೆ. ನೀವು ಬಂದು ಸುಮ್ಮನೆ ಕುಳಿತುಕೊಳ್ಳಿ, ನೀವು ಚರ್ಚೆ ಮಾಡಬೇಡಿ. ಅವರ ಭಾಷಣ ಕೇಳಿಕೊಂಡು ನೋಟ್ ಮಾಡಿಕೊಳ್ಳಿ ಎಂದು ಹೇಳಿದೆ. ನಮ್ಮ ಮಾತಿಗೆ ಅವರು ಗೌರವ ಕೊಟ್ಟಿಲ್ಲ, ಅವರು ಮತ್ತೆ ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ನಮಗೆ ಅವಕಾಶ ಕೊಟ್ಟರೆ ನಾವು ಬರುತ್ತೇವೆ ಎಂದು ಹೇಳಿದರು.

**ಶ್ರೀ ವಿ.ಎಸ್.ಉಗ್ರಪ್ಪ:-** ತಾವೇ ಹೇಳಿ, ನಿಯಮಾವಳಿಗಳಲ್ಲಿ ಅವಕಾಶ ಇದೆಯೇ? ಅದಕ್ಕೆ ಶೂನ್ಯ ವೇಳೆಯಲ್ಲಿ ಅವಕಾಶ ಇದೆಯೇ?

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಬೇಡ, ಅವರು ಮುಗಿಸಲಿ. ಇನ್ನು ಅಜೆಂಡಾ ಇದೆ. ಮಾನ್ಯ ಶರಣಪ್ಪ ಮಟ್ಟೂರುರವರೆ, ತಾವು ಮುಗಿಸುವುದಿಲ್ಲವೆ? ರಾಜ್ಯಪಾಲರಿಗೆ ವಂದನೆಯನ್ನು ಸಲ್ಲಿಸಿಬಿಡಿ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ಇವತ್ತೇನು ಮಕ್ಕಳಿಗೆ Right to Education ತಂದು ವಿಶೇಷವಾಗಿ ಮಕ್ಕಳಿಗೆ ಸರ್ಕಾರಿ ಶಾಲೆಯಲ್ಲಿ ಅಷ್ಟೇ ಅಲ್ಲ, ನಮ್ಮ ಖಾಸಗಿ ಶಾಲೆಗಳಲ್ಲಿ ಅವರಿಗೆ ಶಿಕ್ಷಣ ಸಿಗಲಿ, ಒಳ್ಳೆಯ ರೀತಿಯಲ್ಲಿ they should also get good education ಎನ್ನುವ ನಿಟ್ಟಿನಲ್ಲಿ ಆರ್ಟಿಕಲ್ 21-ಎ ಗೆ ತಿದ್ದುಪಡಿ ಮಾಡಿರುವಂತಹ ಸನ್ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾಗಿರುವಂತಹ ಡಾ:ಮನಮೋಹನಸಿಂಗ್‌ರವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಮ್ಮ ಗ್ರಾಮ ನಮ್ಮ ಯೋಜನೆ.....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಶರಣಪ್ಪ ಮಟ್ಟೂರ್‌ರವರೇ, ಈಗ ಹೊಸ ವಿಷಯಕ್ಕೆ ಹೋಗಿಬಿಟ್ಟಿರಿ. ಅದು ಮುಗಿಯುವುದೇ ಇಲ್ಲ. ನಾನು ಹೇಳಿದ ಸಮಯಕ್ಕಿಂತ ಇನ್ನು ಐದು ನಿಮಿಷ ಆಯಿತು. ಈ ರೀತಿ ಮಾಡಬೇಡಿ. ನಿಮ್ಮ ಪಕ್ಷದ ಬೇರೆಯವರ ಸಮಯವನ್ನು ಕಟ್ ಮಾಡುತ್ತೇನೆ. ನೀವು ಮುಗಿಸಿದ ಮೇಲೆ ವಂದನಾ ನಿರ್ಣಯದ ಮೇಲೆ ಅನುಮೋದನೆಯನ್ನು ಮಾಡುವವರಿದ್ದಾರೆ. ಅವರು ಮಾತನಾಡಬೇಕು. ನಾನು ಅಜೆಂಡಾ ಮೂಲಕ ಹೋಗಬೇಕು. ಬೇಡ ಎಂದರೆ ಬಿಟ್ಟುಬಿಡುತ್ತೇನೆ. ನಾನು ಹೇಳಿದ್ದನ್ನು ಮೀರಬೇಕು ಎನ್ನುವುದು ನಿಮ್ಮ ಹಠ ಇದ್ದರೆ ಮುಗಿಸಬೇಡಿ.

**ಶ್ರೀ ಶರಣಪ್ಪ ಮಟ್ಟೂರು:-** ಆ ರೀತಿಯ ಉದ್ದೇಶ ಇಲ್ಲ.

**ಸಭಾಪತಿಯವರು:-** ಮುಗಿಸಿ ಎಂದು ಹೇಳಿದ್ದೇನೆ, ಮುಗಿಸಿಬಿಡಿ. Just close it. ನಾನು ಹೇಳಿದ ಮೇಲೂ ನೀವು ಮಾತನಾಡುತ್ತೇನೆಂದರೆ ಅದು ಶೋಭೆ ಬರುವುದಿಲ್ಲ. ಬೇರೆ ವಿಷಯಕ್ಕೆ ಹೋಗುವುದು ಒಳ್ಳೆಯದಲ್ಲ. ಈ ತರಹ ಹೇಳಿದಂತಹ ರಾಜ್ಯಪಾಲರಿಗೆ ವಂದನಾ ನಿರ್ಣಯ ಮಂಡಿಸುತ್ತಿದ್ದೇನೆ, ತಾವೆಲ್ಲರೂ ಒಪ್ಪಬೇಕೆಂದು ಸದನಕ್ಕೆ ಮನವಿ ಮಾಡಿಕೊಳ್ಳಿ.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಯವರೇ, ಈ ರೀತಿಯ ಸಾಕಷ್ಟು ಕಾರ್ಯಕ್ರಮಗಳನ್ನು ಇವತ್ತು ನಮ್ಮ ಸರ್ಕಾರ ತಂದಿದೆ. ಗೌರವಾನ್ವಿತ ರಾಜ್ಯಪಾಲರು ಮುಕ್ತ ಕಂಠದಿಂದ ಬಹಳ ಚೆನ್ನಾಗಿ ಅದನ್ನು ಹೊಗಳಿ ಹೇಳಿದ್ದಾರೆ. ಈ ಒಂದು ಸಂದರ್ಭದಲ್ಲಿ ನನಗೆ ವಂದನಾ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ವಿಶೇಷವಾಗಿ ತಾವು ಮತ್ತು ನಮ್ಮ ಪಕ್ಷದವರೆಲ್ಲರೂ ಒಳ್ಳೆಯ ವಿಚಾರಗಳನ್ನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ತಂದಂತಹ ಈ ಸೂಚನೆಯನ್ನು ತಾವೆಲ್ಲರೂ ಬೆಂಬಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ ವಂದನಾರ್ಪಣೆ ಮಂಡಿಸಿ ನನಗೆ ಮಾತ್ನನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವಂತಹ ನಿರ್ಣಯವನ್ನು ಮಾನ್ಯ ಸದಸ್ಯರಾದಂತಹ ಶರಣಪ್ಪ ಮಟ್ಟೂರುರವರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಂಡಿಸಿದ್ದಾರೆ. ಅದನ್ನು ನಾನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮಗೆ ವಿನಂತಿ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನಾವು ನಡೆಯುವ ದಾರಿ ನ್ಯಾಯ, ನೀತಿ, ಧರ್ಮಗಳೆಂಬ ರಾಜ ಮಾರ್ಗವಿದ್ದರೆ ಯಾರಿಗೂ ತಲೆಬಾಗಿಸುವ ಪ್ರಮೇಯ ಬರುವುದಿಲ್ಲ. 2013 ರ ಚುನಾವಣೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದಂತಹ ಸಿದ್ದರಾಮಯ್ಯನವರು, ನಮ್ಮ ಪಕ್ಷದ ಅಧ್ಯಕ್ಷರು ಮತ್ತು ಗೃಹ ಮಂತ್ರಿಗಳಾದಂತಹ ಶ್ರೀಯುತ ಜಿ.ಪರಮೇಶ್ವರ್‌ರವರು ಇಡೀ ರಾಜ್ಯದಾದ್ಯಂತ ಪ್ರವಾಸ ಮಾಡಿ ಕಾಂಗ್ರೆಸ್ ಪಕ್ಷ ‘ಕಾಂಗ್ರೆಸ್ ನಡಿಗೆ ಜನರ ಬಳಿಗೆ’ ಎನ್ನುವ ಕಾರ್ಯಕ್ರಮವನ್ನು ಕೊಟ್ಟು 2013 ರ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ಬಹುಮತ ಬಂದು ಆ ಸರ್ಕಾರಕ್ಕೆ ಮುಖ್ಯಸ್ಥರಾಗಿ ಮಾನ್ಯ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯನವರು ಅಧಿಕಾರವನ್ನು ವಹಿಸಿಕೊಂಡರು. ಆ ಅಧಿಕಾರವನ್ನು ವಹಿಸಿಕೊಂಡಂಥ ಸಂದರ್ಭದಲ್ಲಿ ಕೇವಲ ಒಂದೇ ಒಂದು ಗಂಟೆಯಲ್ಲಿ ಸಚಿವ ಸಂಪುಟ ಸಭೆಯನ್ನು ನಡೆಸಿ ಕರ್ನಾಟಕ ರಾಜ್ಯ ಹಸಿವು ಮುಕ್ತ ರಾಜ್ಯವಾಗಬೇಕು, ಯಾರು ಹಸಿವಿನಿಂದ ಇರಬಾರದು, ಅವರಿಗೆ ಅನ್ನ ಸಿಗಬೇಕು ಎನ್ನುವ ಉದ್ದೇಶದಿಂದ ‘ಅನ್ನಭಾಗ್ಯ’ ಎಂಬ ಒಂದು ದೊಡ್ಡ ಕಾರ್ಯಕ್ರಮವನ್ನು ಕೊಟ್ಟರು. ಜೊತೆಗೆ ವಿವಿಧ ನಿಗಮಗಳಿಂದ ನಮ್ಮ ರಾಜ್ಯದ ನಾಗರಿಕರು ಏನು ಸಾಲಗಳನ್ನು ತೆಗೆದುಕೊಂಡಿದ್ದರು ಆ ಸಾಲಗಳನ್ನು ಮನ್ನಾ ಮಾಡುವಂತಹ ಕೆಲಸವನ್ನು ಮಾಡಿದರು. ‘ಭಾಗ್ಯಜ್ಯೋತಿ’ ಯೋಜನೆಯ ಅಡಿಯಲ್ಲಿ ಸಾಲ ಪಡೆದವರು ಹಣ ಕಟ್ಟದಿದ್ದರೂ ಅಂತಹವರ ಸಾಲ ಮನ್ನಾ ಮಾಡಿ ಮತ್ತೆ ಭಾಗ್ಯಜ್ಯೋತಿ ಸಂಪರ್ಕವನ್ನು ಕೊಡಿಸುವಂತಹ ಕೆಲಸ ಮಾಡಿದರು. ನುಡಿದಂತೆ ನಡೆಯುವ ಸರ್ಕಾರ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳಾದಂತಹ ಸಿದ್ದರಾಮಯ್ಯನವರು ಇವತ್ತು ತೋರಿಸಿಕೊಟ್ಟಿದ್ದಾರೆ.

ನಮ್ಮ ಪ್ರಣಾಳಿಕೆಯಲ್ಲಿ ನೀಡಲಾಗಿದ್ದ 165 ಆಶ್ವಾಸನೆಗಳನ್ನು ಪೂರೈಸುವುದರಲ್ಲಿ ನಮ್ಮ ಸರ್ಕಾರ ಮುಂದಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳು, ಎಲ್ಲಾ ಶಾಸಕರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇವತ್ತು ಕರ್ನಾಟಕ ರಾಜ್ಯ ಒಂದು ಮಾದರಿ ರಾಜ್ಯವಾಗಿ ಆಡಳಿತವನ್ನು ನಡೆಸುತ್ತಿದೆ. ಅವರು ಮೊದಲಿನಿಂದಲೂ ಪಾರದರ್ಶಕ ಆಡಳಿತ ಕೊಡುತ್ತೇನೆ, ಭ್ರಷ್ಟಾಚಾರ ರಹಿತ ಆಡಳಿತ ಕೊಡುತ್ತೇನೆ ಎಂದು ಹೇಳಿದ್ದರು. ಅದನ್ನು ಮಾಡಿ ತೋರಿಸಿದ್ದಾರೆ. ನಮ್ಮ ಸರ್ಕಾರ ಬಂದ ದಿನದಿಂದಲೂ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದೆ. ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಗ್ರಾಮ ಪಂಚಾಯಿತಿ ವ್ಯವಸ್ಥೆಗೆ ಬಲವನ್ನು ತುಂಬುವಂತಹ ಕೆಲಸ ಮಾಡಬೇಕಾಗಿತ್ತು, ಆ ಕೆಲಸವನ್ನು ಮಾಡಿ ಇವತ್ತು ಗ್ರಾಮ ಪಂಚಾಯಿತಿಗಳಿಗೆ ಶಕ್ತಿಯನ್ನು ಕೊಡುವಂತಹ ಕೆಲಸ ಮಾಡಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

*(30) 07–02–2017 6.40 ಟಿ.ಸಿ.ಹೆಚ್–ಆರ್.ಎಸ್*

ಗ್ರಾಮ ಪಂಚಾಯಿತಿಗಳು ಸುಮ್ಮನೆ ಅಧಿಕಾರವಿಲ್ಲದೇ ಇರುವಂತಹ ಪರಿಸ್ಥಿತಿ ಇವತ್ತು ಎಲ್ಲಾ ಅಧಿಕಾರವನ್ನು ಗ್ರಾಮಪಂಚಾಯಿತಿಗೆ ನೀಡುವಂತಹ ಕೆಲಸವನ್ನು ಮಾಡಿದರು. ಈಗ ಸುಮಾರು 100 ಸೇವೆಗಳನ್ನು ಗ್ರಾಮಪಂಚಾಯಿತಿ ಮಟ್ಟದಲ್ಲಿ ಪಡೆಯುವಂತಹ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾದಂತಹ ಶ್ರೀ ಹೆಚ್.ಕೆ.ಪಾಟೀಲ್‌ರವರು ಸೇರಿ ಆ ಕೆಲಸವನ್ನು ಮಾಡಿದ್ದಾರೆ. ಒಬ್ಬ ರೈತ ಹೋಬಳಿ ಕೇಂದ್ರಕ್ಕೆ ಹೋಗಿ ಒಂದು ಪಹಣಿಯನ್ನು ಪಡೆದುಕೊಳ್ಳುವುದಕ್ಕೆ ನೂರಾರು ರೂಪಾಯಿಗಳು ಖರ್ಚು ಮಾಡಬೇಕಾಗಿತ್ತು. ಇವತ್ತಿನ ದಿವಸ ರೈತರು ಗ್ರಾಮಪಂಚಾಯಿತಿಗೆ ನೇರವಾಗಿ ಹೋಗಿ ಆ ಪಹಣಿಯನ್ನು ಪಡೆಯುವುದಕ್ಕೆ ಹಾಗೂ ಬೇರೆ ಬೇರೆ ದಾಖಲೆಗಳನ್ನು ಪಡೆಯುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದಾರೆ.

ಇವತ್ತು ರಾಜ್ಯ ಬರಗಾಲದಿಂದ ತತ್ತರಿಸುತ್ತಿದೆ. ಪ್ರಕೃತಿ ಮುನಿಸಿಕೊಂಡಿದೆ. ಮಳೆ ಆಗಿಲ್ಲ. ಸತತ ಮೂರು ವರ್ಷಗಳಿಂದಲೂ ಮಳೆ ಇಲ್ಲದೇ ಪರಿತಪಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ರೈತರು ಆತ್ಮಸ್ಥೈರ್ಯವನ್ನು ಕಳೆದುಕೊಂಡು, ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಗೆ ಬಂದಿದ್ದಾರೆ. ಆದರೆ, ನಮ್ಮ ಸರ್ಕಾರ ಇವತ್ತಿನ ದಿವಸ ರೈತರಿಗೆ ಆತ್ಮಸ್ಥೈರ್ಯವನ್ನು ತುಂಬುವಂತಹ ಕೆಲಸವನ್ನು ಮಾಡಿ, ಯಾರೂ ಆತ್ಮಹತ್ಯೆ ಮಾಡಿಕೊಳ್ಳಬಾರದು, ನಿಮಗೆ ಸಾಕಷ್ಟು ಕಾರ್ಯಕ್ರಮಗಳನ್ನು ಕೊಡುತ್ತೇವೆ, ರೈತರು ಎದೆಗುಂದಬಾರದು ಎಂದು ಹೇಳಿ ರೈತರಿಗೆ ಕೃಷಿ ಭಾಗ್ಯ ಯೋಜನೆ ಮೂಲಕ ಒಂದು ಲಕ್ಷ ಕೃಷಿ ಹೊಂಡಗಳನ್ನು ನಿರ್ಮಿಸಿ ಕೊಡುವಂತಹ ಕೆಲಸವನ್ನು ಮಾಡಿದೆ. ಜೊತೆಗೆ ಇವತ್ತಿನ ದಿವಸ ಆಧುನಿಕ ರೀತಿಯಲ್ಲಿ ವ್ಯವಸಾಯವನ್ನು ಮಾಡಬೇಕೆನ್ನುವ ಉದ್ದೇಶದಿಂದ, polynet ಗಳನ್ನು ಹಾಗೂ polyshed ಗಳನ್ನು ಕೊಡಬೇಕೆಂದು ಮಾಡಿದ್ದರು. ಸುಮಾರು 25 ಸಾವಿರ ಶೆಡ್‌ಗಳನ್ನು ಅವರಿಗೆ ಕೊಟ್ಟು, ಇರುವಂತಹ ಕಡಿಮೆ ನೀರಿನಲ್ಲಿ ಉತ್ತಮ ಗುಣಮಟ್ಟದಲ್ಲಿ ಮತ್ತು ಸಾವಯವ ಕೃಷಿಯನ್ನು ಆಧರಿಸಿಕೊಂಡು, ರೈತರು ಹೆಚ್ಚು ಬೆಳೆಗಳನ್ನು ತೆಗೆದು ಮಾರುಕಟ್ಟೆಯಲ್ಲಿ ಒಳ್ಳೆಯ ಧಾರಣೆ ಸಿಗುವ ರೀತಿಯಲ್ಲಿ ಮಾಡಿ, ಆ ಇಳುವರಿಯನ್ನೂ ಹೆಚ್ಚು ಪಡೆಯುವಂತಹ ರೀತಿಯಲ್ಲಿ ಮಾಡುವುದಕ್ಕೆ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡಿದೆ. ಸುಮಾರು 4 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, 921 ಕೆರೆಗಳಿಗೆ ನೀರನ್ನು ತುಂಬಿಸುವಂತಹ ಕೆಲಸವನ್ನು ಮಾಡಿದೆ. ಅಂತರ್ಜಲವನ್ನು ಹೆಚ್ಚಿಸುವಂತಹ ಕೆಲಸ ಮಾಡಿದೆ. ಇವತ್ತಿನ ದಿವಸ ರೈತರು ಬೋರ್‌ವೆಲ್‌ಗಳನ್ನು ಕೊರೆಸಲು ಹೋದಾಗ, ಸಾವಿರ ಅಡಿಯಿಂದ ಸಾವಿರದ ಇನ್ನೂರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಡಿ ಆಳದವರೆಗೆ ಹೋಗುವಂತಹ ಪ್ರಸಂಗ ಬಂದಿದೆ. ಇವನ್ನೆಲ್ಲವನ್ನೂ ತಪ್ಪಿಸುವುದಕ್ಕೆ, ಆ ಕೆಲಸದಲ್ಲಿ ಸರ್ಕಾರದವರು ಮಗ್ನರಾಗಿದ್ದಾರೆ. ನಮ್ಮ ರೈತರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿಕೊಡುತ್ತಿದ್ದಾರೆ.

ಮಲೆನಾಡಿನಲ್ಲಿ ಅಡಕೆ ಬೆಳೆಗೆ ಕೊಳೆ ರೋಗ ಮತ್ತು ಮುಂಡುಗೆ ರೋಗ ಬಂದಿತ್ತು, ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಸಿದ್ಧರಾಮಯ್ಯರವರು ಮಲೆನಾಡಿನ ಭಾಗಕ್ಕೆ ಬಂದು, ಅದನ್ನು ವೀಕ್ಷಣೆ ಮಾಡಿ, ಅಡಿಕೆ ಬೆಳೆಗಾರರಿಗೆ ಪ್ರಪ್ರಥಮವಾಗಿ ಏನಾದರೊಂದು ಪರಿಹಾರ ಕೊಟ್ಟಿದ್ದಾರೆಂದರೆ, ಇದೊಂದೇ ಒಂದು ದೊಡ್ಡ ಉದಾಹರಣೆ. ಅಡಿಕೆ ಬೆಳೆಗಾರರಿಗೆ ಯಾವತ್ತೂ ಪರಿಹಾರ ಸಿಕ್ಕಿರಲಿಲ್ಲ. ಇವತ್ತು ಅಡಕೆ ಬೆಳೆಗಾರರಿಗೆ ಸುಮಾರು 30 ಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ಕೊಡುವಂತಹ ಕೆಲಸವನ್ನು ಮಾಡಿ, ರೈತರಿಗೆ ಸ್ಥೈರ್ಯ ತುಂಬುವಂತಹ ಕೆಲಸವನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರ 2006ರಲ್ಲಿ ಮಲೆನಾಡಿನ ಭಾಗದಲ್ಲಿ ಅರಣ್ಯ ಭೂಮಿ ಸಕ್ರಮದ ಬಗ್ಗೆ ಕಾನೂನನ್ನು ಜಾರಿಗೆ ತಂದಿತ್ತು. ಆದರೆ, ಅದರ ಅನುಷ್ಠಾನ ಆಗಿರಲಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಾನೂನಿನ ತೊಡಕುಗಳನ್ನು ನಿವಾರಣೆ ಮಾಡಿ, ಅರಣ್ಯ ಭೂಮಿಯನ್ನು ಸಕ್ರಮೀಕರಣ ಮಾಡುವುದಕ್ಕೆ ಹಲವಾರು ಕಾರ್ಯಕ್ರಮಗಳನ್ನು ಮಾಡಿ, ರೈತರಿಗೆ ಆ ಭೂಮಿಯನ್ನು ಸಕ್ರಮೀಕರಣಗೊಳಿಸಲು ಬೇಕಾಗುವಂತಹ ದಾಖಲೆಗಳನ್ನು ಯಾವ ರೀತಿ ಕೊಡಬೇಕು ಮತ್ತು ಅಧಿಕಾರಿಗಳು ಯಾವ ರೀತಿ ಇದರ ಬಗ್ಗೆ ಕಾರ್ಯನಿರ್ವಹಿಸಬೇಕು ಎನ್ನುವುದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯರವರು ಮತ್ತು ಕಂದಾಯ ಸಚಿವರಾದಂತಹ ಸನ್ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪರವರು ಒಂದು ಆಂದೋಲನದ ರೀತಿಯಲ್ಲಿ ಕೆಲಸವನ್ನು ಮಾಡಿ, ಎಲ್ಲಾ ರೈತರಿಗೆ ಎಂಜಾಯ್‌ಮೆಂಟ್ ಪತ್ರ, ಹಕ್ಕುಪತ್ರವೆಂದ ಕೂಡಲೇ ಅವರ ಹೆಸರಿಗೆ ಆಗುವುದಿಲ್ಲ. ಅದನ್ನು ಅನುಭವಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಜೊತೆಗೆ ರೈತರು ಬಗರ್ ಹುಕುಂನಲ್ಲಿ ಇಲ್ಲಿಯವರೆಗೂ ಫಾರಂ ನಂ.50 ಮತ್ತು ಫಾರಂ-53ರಲ್ಲಿ ಅರ್ಜಿಗಳನ್ನು ಹಾಕಿಕೊಂಡಿದ್ದರು. ಇವತ್ತಿನ ದಿವಸ ಆ ಅರ್ಜಿಗಳನ್ನು ವಿಲೇವಾರಿ ಮಾಡಿಸುವಂತಹ ಕೆಲಸ ನಡೆಯುತ್ತಿದೆ. ಮುಂದಿನ 2-3 ತಿಂಗಳಿನಲ್ಲಿ ಅಂದರೆ ಮಾರ್ಚ್ ತಿಂಗಳ ಕೊನೆಯಲ್ಲಿ ಎಲ್ಲಾ ಬಗರ್ ಹುಕುಂ ಅರ್ಜಿಗಳನ್ನು ಇತ್ಯರ್ಥ ಮಾಡಬೇಕೆಂದು, ಬಗರ್ ಹುಕುಂ ಸಮಿತಿಗಳಿಗೆ ಹಲವಾರು ಸುಧಾರಣೆಗಳನ್ನು ತರುವಂತಹ ಕೆಲಸವನ್ನು ಮಾಡಿದ್ದಾರೆ. ಪ್ರತಿ ವಾರ ಬಗರ್ ಹುಕುಂ ಸಮಿತಿಗಳು ಸಭೆಯನ್ನು ಸೇರಲೇಬೇಕು. ಬಗರ್ ಹುಕುಂ ಸಭೆಯನ್ನು ನಡೆಸಬೇಕು. ಎರಡು ಜನ ಸಮಿತಿಯಲ್ಲಿ ಇದ್ದರೆ ಸಾಕು, ಸಮಿಗಳ ಸಭೆಯನ್ನು ನಡೆಸಬೇಕೆಂದು ತಂದಿದ್ದಾರೆ. ಇವತ್ತು ಎಷ್ಟೋ ಜನ ಸರ್ಕಾರಿ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದರೆ ಅಥವಾ ಅವರು ಜಮೀನುಗಳನ್ನು ಮಾಡಿಕೊಂಡಿದ್ದರೆ, ಆ ಮನೆಗಳನ್ನು ಸಕ್ರಮೀಕರಣಗೊಳಿಸುವುದಕ್ಕೆ ಮತ್ತು ಅವರ ಹೆಸರಿಗೆ ಬರುವುದಕ್ಕೆ 94ಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು 94ಸಿ(ಸಿ) ಪಟ್ಟಣ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅವರಿಗೆ ಕಡಿಮೆ ದಂಡ ವಿಧಿಸಿ, ಹಕ್ಕುಪತ್ರಗಳನ್ನು ಕೊಡುವಂತಹ ಕೆಲಸಗಳನ್ನು ಮಾಡಿದ್ದಾರೆ. ಎಷ್ಟೋ ಜನ ರೈತರಿಗೆ...

**ಸಭಾಪತಿಯವರು:-** ಶ್ರೀ ಪ್ರಸನ್ನ ಕುಮಾರ್‌ರವರೇ, ಒಂದು ನಿಮಿಷ ಗಮನಿಸಿ, ನೀವು ಶಿವಮೊಗ್ಗದಿಂದ ಆಯ್ಕೆಯಾಗಿ ಬಂದಿರುವವರು. ಶಿವಮೊಗ್ಗದಲ್ಲಿ ಒಂದು ವಿಚಿತ್ರವಾದ ಸಮಸ್ಯೆ ಇದೆ. ಆ ಶಿವಮೊಗ್ಗದ ಸಮಸ್ಯೆ, ರೈತರ ಸಮಸ್ಯೆ. ಇದು ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ತಾವು ಗ್ರಾಮೀಣ ಪ್ರದೇಶದಿಂದ ಬಂದಿರುವವರು. ಈಗ ಯಾವುದೋ ಹೊಸ ಕಾನೂನನ್ನು ಮಾಡಿರುವುದರಿಂದ ಶಿವಮೊಗ್ಗದ ಇಡೀ ಜಿಲ್ಲೆಯಲ್ಲಿ ಯಾರೇ ರೈತರು ತಮ್ಮ ಜಮೀನು ಇರಬಹುದು ಅಥವಾ ಆಸ್ತಿಯನ್ನು ಮಾರಾಟ ಮಾಡುವುದಕ್ಕೆ ಇದು ಒಂದು ಸಮಸ್ಯೆಯಾಗಿರುತ್ತದೆ. ಯಾವುದೇ ಜಮೀನು ಮತ್ತು ಆಸ್ತಿಗಳು ಸಬ್‌ರಿಜಿಸ್ಟರ್ ಆಫೀಸ್‌ನಲ್ಲಿ ರಿಜಿಸ್ಟರ್ ಆಗುತ್ತಿಲ್ಲ. ಅದರ ಬಗ್ಗೆ ತಾವು ಸದನದಲ್ಲಿ ಪ್ರಸ್ತಾಪ ಮಾಡುತ್ತೀರೆಂದು ನಾನು ಕಾಯುತ್ತಿದ್ದೆನು.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಆ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

**ಸಭಾಪತಿಯವರು:-** ನಾನು ತಮ್ಮ ಗಮನವನ್ನು ಸೆಳೆದೆ. 5 ನಿಮಿಷ ಅದರ ಬಗ್ಗೆಯೂ ಸದನದಲ್ಲಿ ಪ್ರಸ್ತಾಪ ಮಾಡಿದರೆ, ಸರ್ಕಾರ ಉತ್ತರ ಕೊಡಬೇಕು. ಏಕೆಂದರೆ, ಶಿವಮೊಗ್ಗ ಮತ್ತು ಇನ್ನೊಂದು ಜಿಲ್ಲೆ ಈ ಎರಡೂ ಜಿಲ್ಲೆಗಳಲ್ಲಿ ಈ ಸಮಸ್ಯೆಯನ್ನು ಜನರು ಅನುಭವಿಸುತ್ತಿದ್ದಾರೆ. ನಿಮಗೆ ಈ ವಿಚಾರ ಗೊತ್ತಿದೆ ಅಂದುಕೊಂಡಿದ್ದೇನೆ. ದಯವಿಟ್ಟು ಅದನ್ನು ತಾವು ಸದನದಲ್ಲಿ ಪ್ರಸ್ತಾಪ ಮಾಡಿ.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಮಲೆನಾಡು ಭಾಗದ ರೈತರಿಗೆ ಅದರಿಂದ ತೊಂದರೆಯಾಗಿದೆ. ಇವತ್ತಿನ ದಿವಸ ಜಮೀನುಗಳನ್ನು ಮಾರಾಟ ಮಾಡುವುದಕ್ಕೆ ಯಾವುದೇ transaction ಮಾಡುವಂತಹ ಪರಿಸ್ಥಿತಿ ಇರುವುದಿಲ್ಲ. ಅದರ ನಿವಾರಣೆ ಆಗಬೇಕಾಗಿದೆ. ಅದನ್ನು ಮಾನ್ಯ ಕಂದಾಯ ಸಚಿವರು ಆ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆ ಸಮಸ್ಯೆ ನಮ್ಮ ಮಲೆನಾಡಿನ ಭಾಗದಲ್ಲಿ ಇದೆ. ಇವತ್ತು ರೈತರು ಬಹಳಷ್ಟು ಕಷ್ಟವನ್ನು ಅನುಭವಿಸುತ್ತಿದ್ದಾರೆ. ನಮ್ಮ ಜಿಲ್ಲೆಯವರೇ ಕಂದಾಯ ಸಚಿವರಾಗಿರುವುದರಿಂದ, ಆ ಬಗ್ಗೆ ಅವರು ಹೆಚ್ಚಿನ ಕಾಳಜಿಯನ್ನು ಹೊಂದಿದ್ದಾರೆ. ಆದ್ದರಿಂದ ಸರ್ಕಾರ ಖಂಡಿತವಾಗಿಯೂ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಇವತ್ತಿನ ದಿವಸ ಶಿವಮೊಗ್ಗ ಜಿಲ್ಲೆಯಲ್ಲಿ ಭೂಮಿಯ ಜಿ.ಪಿ.ಎಸ್ ಮ್ಯಾಪ್ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಅದು ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಹೊಸ ಕಾನೂನನ್ನು ಸರ್ಕಾರ ಮಾಡಿದೆ. ಅಂದರೆ ಅದನ್ನು ಇದು ಒಂದು ಟ್ರಯಲ್ ಬೇಸಿಸ್ ಎಂದು ಮಾಡಿಬಿಟ್ಟಿದೆ. ಇದರ ಸಮಸ್ಯೆ ಎಷ್ಟಾಗಿದೆ ಎಂದರೆ, ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಯಾರೂ ಯಾವುದೇ ಜಮೀನು ಅಥವಾ ಆಸ್ತಿಯನ್ನು ಮಾರಾಟ ಮಾಡುವುದಕ್ಕಾಗುವುದಿಲ್ಲ ಹಾಗೂ ಖರೀದಿಸಲು ಆಗುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದಾಗ, ಶಾಸಕರು ತಾವು ಇದರ ಬಗ್ಗೆ ಗಮನ ವಹಿಸಿ ಎಂದು ಅವರಿಗೂ ಹೇಳಿದ್ದಾರೆ. ಈ ಬಗ್ಗೆ ನನಗೂ ಹೇಳಿದ್ದಾರೆ. ಅದನ್ನು ನಾನು ಈ ಸದನದಲ್ಲಿ ತಮಗೆ ನೆನಪು ಮಾಡಿದೆ ಅಷ್ಟೆ.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಜಿ.ಪಿ.ಎಸ್‌ನಲ್ಲಿ ಭೂಮಿಯ ಪಿಕ್ಚರ್ ಸಿಗುತ್ತಿಲ್ಲವೆಂದು ಮಾಡುತ್ತಿದ್ದಾರೆ. ಇನ್ನೊಂದು ವಿಚಾರವೆಂದರೆ, ಶಿವಮೊಗ್ಗದಲ್ಲಿ, ಶಿವಮೊಗ್ಗ ನಗರಕ್ಕೆ ಸೀಮಿತವಾಗಿ ಪ್ರಾಪರ್ಟಿ ಕಾರ್ಡ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಪ್ರಥಮ ಹಂತದಲ್ಲಿ ಶಿವಮೊಗ್ಗ ಮತ್ತು ಮೈಸೂರು ಅನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಪ್ರಾಯೋಗಿಕವಾಗಿ ಪ್ರಾಪರ್ಟಿ ಕಾರ್ಡ್ ಅನ್ನು ಜಾರಿಗೊಳಿಸಬೇಕೆಂದು ಹಿಂದಿನ ಸರ್ಕಾರ ಒಂದು ಆದೇಶವನ್ನು ಮಾಡಿತ್ತು. ಸರ್ಕಾರ ಅದಕ್ಕೊಂದು ಅಧಿಸೂಚನೆಯನ್ನು ಹೊರಡಿಸಿದೆ. ನಮ್ಮ ಶಿವಮೊಗ್ಗದಲ್ಲಿ ಮಾತ್ರ ಈ ಪ್ರಾಪರ್ಟಿ ಕಾರ್ಡ್ ಇದೆ. ಆದರೆ ಮೈಸೂರಿನಲ್ಲಿ ಪ್ರಾಪರ್ಟಿ ಕಾರ್ಡ್ ಅನ್ನು ಯಾರೂ ಬಳಸುತ್ತಿಲ್ಲ. ಹೀಗಾಗಿ, ಶಿವಮೊಗ್ಗದಲ್ಲಿ ಪ್ರಾಪರ್ಟಿ ಕಾರ್ಡ್ ಏನಾದರೂ ಇಲ್ಲದೇ ಇದ್ದರೆ, ಆ ಯಾವುದೇ ಆಸ್ತಿಯ transaction ಸಹ ಆಗುವುದಿಲ್ಲ. ಮದುವೆ-ಮುಂಜಿ ಇದ್ದಾಗ ಅವರು ಯಾವುದೇ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರುಗಳು ಇದರ ಕಡೆ ಗಮನಿಸಿ, ಈ ಬಗ್ಗೆ ಉತ್ತರ ಕೊಡುವುದು ಒಳ್ಳೆಯದು. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಅನುಮೋದಿಸಿ ಮಾತನಾಡುತ್ತಿರುವುದಾದರೂ ಸಹ ತಮ್ಮ ಜಿಲ್ಲೆಯ ಸಮಸ್ಯೆಯ ಬಗ್ಗೆ ಅವರ ಮೂಲಕ ನಾನು ಅವರಿಗೆ ಹೇಳಿ ಮಾಡಿಸುತ್ತೇನೆ.

(31) **07.02.2017 6.50 ಬಿಕೆಪಿ-ಆರ್‌ಎನ್**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, Urban Property Ownership Record (UPOR) ಎಂದು ಮಾಡಿದ್ದಾರೆ. ಎಡಿಎಲ್ಆರ್ ಮತ್ತು ಡಿಡಿಎಲ್ಆರ್ ರವರು ಒಂದು ನಕ್ಷೆಯನ್ನು ಮಾಡಿ, ಅದಕ್ಕೆ ಒಂದು ಪ್ರತ್ಯೇಕವಾದಂತಹ ನಕ್ಷೆ ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಮೈಸೂರಿನಲ್ಲಿ ಈಗಾಗಲೇ ಅದು ಪೂರ್ಣಗೊಂಡಿದೆ.

(ಗೊಂದಲ)

**ಶ್ರೀ ಆರ್. ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಒಂದು ನಿಮಿಷ, ಶ್ರೀಯುತ ಪ್ರಸನ್ನ ಕುಮಾರ್‌ರವರೇ. ಈ ವಿಷಯವಾಗಿ ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಶಿವಮೊಗ್ಗ ಮತ್ತು ಮೈಸೂರು ಜಿಲ್ಲೆಗಳೆರಡಕ್ಕೂ ಈ ಒಂದು ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದ್ದು ಹೌದು. ಆದರೆ, ಮೈಸೂರಿನವರು ಇದನ್ನು ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿದರು. ಶಿವಮೊಗ್ಗದಲ್ಲಿ ಮಾಡಲಿಕ್ಕೆ ಹೋಗಿ ಕಳೆದ ಹಲವಾರು ತಿಂಗಳುಗಳಿಂದ ಅವರುಗಳ ವ್ಯವಹಾರ ನಿಂತು ಹೋಗಿದೆ. ಇನ್ನು ಹಲವಾರು ತಿಂಗಳುಗಳ ಕಾಲ ಯಾವುದೇ ವ್ಯವಹಾರವಾಗುವುದಿಲ್ಲ. ಇಡೀ ಶಿವಮೊಗ್ಗದ ನಾಗರೀಕರು ಸ್ವಲ್ಪಮಟ್ಟಿಗೆ ಅಸ್ತವ್ಯಸ್ತಗೊಂಡಿದ್ದಾರೆ. ಸರ್ಕಾರದ ರೆವಿನ್ಯೂ ಅಧಿಕಾರಿಗಳಿಂದ ಆ ವಿಷಯವನ್ನು ಸಂಗ್ರಹಣೆ ಮಾಡಿ, ತಾವು ಆಗಲಿ, ರೆವಿನ್ಯೂ ಸಚಿವರಾಗಲಿ ಅಥವಾ ಮುಖ್ಯಮಂತ್ರಿಗಳಾಗಲಿ, ಈ ಸದನದಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡುವುದಾಗಲಿ ಅಥವಾ ಈ ಸಮಸ್ಯೆಯನ್ನು ಪರಿಹಾರ ಮಾಡುವುದಾದರೂ ಮಾಡಬೇಕು. ಇದಕ್ಕೆ ಚಾಲೆಂಜಿಂಗ್ ಉತ್ತರ ಏನೂ ಬೇಕಾಗಿಲ್ಲ. ಜನರ ಸಮಸ್ಯೆಯ ಪರಿಹಾರದ ಕಡೆ ತಾವು ಗಮನಿಸಬೇಕೆನ್ನುವುದಾಗಿದೆ.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಈ ಪ್ರಾಪರ್ಟಿ ಕಾರ್ಡ್ ವಿಷಯವಾಗಿ ಹೇಳುವುದಾದರೆ, ಏನು ಹಳೆ ಸಿಟಿ ಇದೆ, ಆ ಹಳೆ ಸಿಟಿಯಲ್ಲಿ 'ನಿಮ್ಮ alienation ಏನಾಗಿದೆ, ಟೌನ್ ಪ್ಲಾನ್ನಿಂಗ್‌ನಲ್ಲಿ ಆಗ ಯಾವ ಒಂದು ಸ್ಕೆಚ್ ಮಾಡಲಾಗಿದೆ' ಎಂದು ಕೇಳಿದರೆ, ಅಲ್ಲಿ ಯಾವುದೇ ದಾಖಲೆಗಳು ಸಿಕ್ಕುವುದಿಲ್ಲವೆನ್ನುವ ಪರಿಸ್ಥಿತಿ ಇದೆ. ಹಾಗಾಗಿ, ಈ ಒಂದು ಪ್ರಾಪರ್ಟಿ ಕಾರ್ಡ್ ಮಾಡಿಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಅದರಲ್ಲೂ ಮುಖ್ಯವಾಗಿ ಹಳೆಯ ಸಿಟಿ ಏನಿದೆ, ಹಳೆಯ ಸಿಟಿಯವರು ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದರೆ, ಹಿಂದೆ ಜಿಲ್ಲಾಧಿಕಾರಿಗಳಾಗಿದ್ದಂತಹ ಇಕ್ಕೇರಿಯವರು ಆ ಒಂದು ಜವಾಬ್ದಾರಿಯನ್ನು ಹೊತ್ತಿದ್ದಾರೆ. ಅವರ ಗಮನಕ್ಕೆ ತರಲಾಗಿದ್ದು, ಅವರಿಗೆ ಎಲ್ಲಾ ವಿಚಾರವೂ ಗೊತ್ತಿದೆ. ಏನು ಸಮಸ್ಯೆ ಇದೆ, ಏನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಮಸ್ಯೆಯಾಗುತ್ತಿದೆ ಎನ್ನುವುದು ಅವರಿಗೆ ಗೊತ್ತಿದೆ. ಈ ವಿಚಾರವಾಗಿ ಮಾನ್ಯ ಕಂದಾಯ ಸಚಿವರಾದ ಶ್ರೀಯುತ ಕಾಗೋಡು ತಿಮ್ಮಪ್ಪನವರ ಹತ್ತಿರ ಪ್ರಸ್ತಾಪ ಮಾಡಿದಾಗ, ಅದಕ್ಕೆ ಸ್ವಲ್ಪಮಟ್ಟಿಗೆ ಕಾನೂನಿನ ತೊಡಕು ಇದೆ, ಅದನ್ನು ಸರಿ ಮಾಡಿ, ಮಾಡಬೇಕಾಗುತ್ತದೆ ಎಂದವರು ಹೇಳಿದರು.

ಅಷ್ಟೆ ಅಲ್ಲದೇ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಾನು ಮತ್ತು ಶಿವಮೊಗ್ಗದ ಶಾಸಕರು ಹೋಗಿ ಮಾತನಾಡಿ, ಈ ರೀತಿಯ ಸಮಸ್ಯೆ ಇದೆ ಎನ್ನುವುದನ್ನು ಅವರ ಗಮನಕ್ಕೆ ತಂದಿದ್ದೇವೆ. ಅವರಿಗೆ ನಾವಿಬ್ಬರು ಸೇರಿ ಒಂದು ಪತ್ರವನ್ನು ಕೊಟ್ಟಿದ್ದೇವೆ. ಆ ಒಂದು ಪತ್ರವನ್ನು ಕೊಟ್ಟಂತಹ ಸಂದರ್ಭದಲ್ಲಿ ಅದರ ಮೇಲೆ ಒಂದು ಆದೇಶವನ್ನು ಮಾಡಿದ್ದಾರೆ. ಅದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ ಅದಕ್ಕೆ ಏನು ಬದಲಾವಣೆಯಾಗಬೇಕು, ಆ ಸಂಬಂಧ ಕಾನೂನಿಗೆ ಏನಾದರೂ ತಿದ್ದುಪಡಿ ತರಬೇಕಾದರೆ ತರಬೇಕೆಂದು ಹೇಳಿ, ಅದರ ಮೇಲೆ ಬರೆದಿದ್ದಾರೆ. ಅದು ಆದಷ್ಟು ಶೀಘ್ರವಾಗಿ ಆದಲ್ಲಿ ಶಿವಮೊಗ್ಗ ಜನರು ಉಸಿರಾಡಲು ಅನುಕೂಲವಾಗುತ್ತದೆ. ಏಕೆಂದರೆ, ಶಿವಮೊಗ್ಗ ಜನರು ಬಹಳ ತಾಪತ್ರಯವನ್ನು ಅನುಭವಿಸುತ್ತಿದ್ದಾರೆ.

**ಸಭಾಪತಿಯವರು:-** ಈ ವಿಚಾರ ನನಗೆ ಗೊತ್ತಿತ್ತು. ಇದು ಮಾನ್ಯ ಸದಸ್ಯರ ಬಾಯಿಯಲ್ಲಿ ಬರಲಿಲ್ಲವೆಂದು ನಾನು ಕಾಯುತ್ತಿದ್ದೆ. ಅದಕ್ಕೆ ಆ ವಿಚಾರವನ್ನು ಸದಸ್ಯರು ಪ್ರಸ್ತಾಪ ಮಾಡಲಿ ಎಂದವರಿಗೆ ಹೇಳಿದೆ. ಮಾನ್ಯ ಸದಸ್ಯರು ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ.

**ಶ್ರೀ ಆರ್. ಪ್ರಸನ್ನ ಕುಮಾರ್:-** ಶಿವಮೊಗ್ಗ ಜಿಲ್ಲೆಯಲ್ಲಿ ಯಾವತ್ತು ಮಳೆ ಕಡಿಮೆಯಾಗಿದ್ದು, ನೋಡಿರಲಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರವಲ್ಲ, . . . .

(ಗೊಂದಲ)

**ಸಭಾಪತಿಯವರು:-** ಆ ರೀತಿ ಅಲ್ಲ, ಶ್ರೀಯುತ ಪ್ರತಾಪಚಂದ್ರ ಶೆಟ್ಟಿರವರೆ, ಇಡೀ ರಾಜ್ಯದೊಳಗೆ ಎರಡು ಜಿಲ್ಲೆಗಳಲ್ಲಿ ಮಾತ್ರ ಇದನ್ನು ಪ್ರಾಯೋಗಿಕವಾಗಿ ಮಾಡುತ್ತೇವೆಂದು ಸರ್ಕಾರ ಹೇಳಿದೆ. ಮೈಸೂರಿನವರು ನಾವು ಮಾಡುವುದಿಲ್ಲವೆಂದು ಹೇಳಿದರು. ಶಿವಮೊಗ್ಗ ಜಿಲ್ಲೆಯವರು ಮಾಡಿದರು. ಆದರೆ, ಈಗ ಶಿವಮೊಗ್ಗ ಜಿಲ್ಲೆಯವರಿಗೆ ಈ ವಿಚಾರದಲ್ಲಿ ಏನು ಮಾಡಬೇಕೆಂದು ಗೊತ್ತಾಗದೇ ಬೊಮ್ಮಡಿ ಹೊಡೆಯುತ್ತಿದ್ದಾರೆ. ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಚಾರದಲ್ಲಿ ಸರಿ ಮಾಡಬೇಕೆಂದು ಪತ್ರ ಕೊಟ್ಟಿದ್ದು, ಅದಕ್ಕೆ ಸರ್ಕಾರದಿಂದ ರಿಪ್ಲೈ ಆಗಲಿಲ್ಲ, ರಿಪೇರಿ ಆಗಲಿಲ್ಲ. ಅವರಿಗೆ ಹಳೆಯದು ಇಲ್ಲ, ಹೊಸ ವ್ಯವಸ್ಥೆಯು ಇಲ್ಲ. ಏನೂ ಆಗುತ್ತಿಲ್ಲವಾದ್ದರಿಂದ, ಆ ವಿಚಾರವನ್ನು ಸರ್ಕಾರದ ಗಮನಕ್ಕೆ ತನ್ನಿ ಎಂದವರಿಗೆ ನಾನು ಹೇಳಿದೆ. ಈ ರೀತಿಯ ಸಮಸ್ಯೆ ಬೇರೆ ಕಡೆ ಎಲ್ಲಿಯೂ ಇಲ್ಲ.

**ಶ್ರೀ ಆರ್.ಪ್ರಸನ್ನ ಕುಮಾರ್:-** ದಕ್ಷಿಣದ ಚಿರಾಪುಂಜಿ ಎಂದು ಹೇಳುವಂತಹ ಆಗುಂಬೆ, ತೀರ್ಥಹಳ್ಳಿ ತಾಲ್ಲೂಕು, ಹೊಸನಗರ ತಾಲ್ಲೂಕು ಮತ್ತು ಸಾಗರ ತಾಲ್ಲೂಕು ಹೆಚ್ಚು ಮಳೆ ಬೀಳುವಂತಹ ಪ್ರದೇಶಗಳಾಗಿದ್ದು, ಇವತ್ತು ಅಲ್ಲಿ ಮಳೆ ಇಲ್ಲದೆ, ಪರಿತಪಿಸುವಂತಹ ಕೆಲಸವಾಗಿದೆ. ಏನು ನಮ್ಮ ರಾಜ್ಯಕ್ಕೆ ಹೆಚ್ಚಿನ ವಿದ್ಯುತ್ ಕೊಡುವಂತಹ ಶರಾವತಿ ವಿದ್ಯುದಾಗಾರ ಇರಬಹುದು, ಲಿಂಗನಮಕ್ಕಿ ವಿದ್ಯುದಾಗಾರ ಇರಬಹುದು, ಈ ಯೋಜನೆಗಳು ನಮ್ಮ ಜಿಲ್ಲೆಯಲ್ಲಿವೆ. ಆದರೆ, ಅಲ್ಲಿ ಇವತ್ತು ನೀರು ಇಲ್ಲದೆ, ಪರಿತಪಿಸುತ್ತಿದ್ದಾರೆ. ಕಳೆದ ವರ್ಷದಲ್ಲಿ ಲಿಂಗನಮಕ್ಕಿ ಎನ್ನುವಂತಹ ಏನು ಒಂದು ಹೈಡ್ರೋ ಪ್ರಾಜೆಕ್ಟ್ ಇತ್ತು, ಅಲ್ಲಿ ನಾವು ಒಂದು ದೊಡ್ಡ ಪ್ರಮಾಣದ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೆವು. ಆದರೆ, ಅಲ್ಲಿ ಆಕಸ್ಮಿಕವಾಗಿ ಬೆಂಕಿ ಬಿದ್ದು, ಅದು ಸಂಪೂರ್ಣವಾಗಿ ನಷ್ಟವಾಯಿತು. ಆ ಸಂದರ್ಭದಲ್ಲಿ ಮಾನ್ಯ ಇಂಧನ ಸಚಿವರಾದಂತಹ ಶ್ರೀಯುತ ಡಿ.ಕೆ.ಶಿವಕುಮಾರ್‌ರವರು ತಕ್ಷಣವೇ ಶಿವಮೊಗ್ಗ ಜಿಲ್ಲೆಗೆ ಧಾವಿಸಿ, ಆ ಒಂದು ಕೆಲಸ ಇನ್ನು ಒಂದು ವರ್ಷ, ಎರಡು ವರ್ಷ ಆಗುವುದಿಲ್ಲವೆನ್ನುವ ರೀತಿಯಲ್ಲಿ ಎಲ್ಲಾ ತಾಂತ್ರಿಕ ಸಲಹೆಗಾರರು ಹೇಳಿದಂತಹ ಸಂದರ್ಭದಲ್ಲಿಯೂ ಕೂಡ ಅವರು ಹೆಚ್ಚಿನ ಆಸಕ್ತಿಯನ್ನು ವಹಿಸಿ, ಅದನ್ನು ಮೂರೇ ತಿಂಗಳುಗಳಲ್ಲಿ ರಿಪೇರಿ ಮಾಡಿಸುವಂತಹ ಕೆಲಸವನ್ನು ಮಾಡಿ, ಹೊಸ ವ್ಯವಸ್ಥೆಯನ್ನು ಮಾಡಿ, ಇವತ್ತು ಮತ್ತೆ, ನಮ್ಮ ವಿದ್ಯದಾಗಾರದಿಂದ ವಿದ್ಯುತ್ ಪಡೆಯುವಂತಹ ಕೆಲಸವನ್ನು ನಾವು ಮಾಡಿದ್ದಾರೆ. ಅದರ ಜೊತೆಗೆ ಏನು

ನಮ್ಮ ಕರ್ನಾಟಕ ರಾಜ್ಯದಲ್ಲಿ ಹಿಂದಿನ ದಿನಗಳಲ್ಲಿ ನಮಗೆ ಎಷ್ಟು ವಿದ್ಯುತ್ ಬೇಕಿತ್ತೋ ಅಷ್ಟು ವಿದ್ಯುತ್ ಇತ್ತು. ಆದರೆ, ಇವತ್ತು ಬೇಡಿಕೆ ಹೆಚ್ಚಾಗಿರುವುದರಿಂದ ವಿದ್ಯುತ್ ಉತ್ಪಾದನೆ ಕಡೆ ಗಮನ ಕೊಡುವಂತಹ ಕೆಲಸವಾಗಿರಲಿಲ್ಲ. ಆದರೆ, ಇವತ್ತು ಏನು ಹೊಸದಾಗಿ ಒಂದು ಯೋಜನೆಯನ್ನು ಪಾವಗಡದಲ್ಲಿ ಮಾಡಿ ಸುಮಾರು 2000 ಮೆಗಾವ್ಯಾಟ್ ಸೋಲಾರ್ ಪಾರ್ಕ್ ಮಾಡುವಂತಹ ಕೆಲಸವನ್ನು ಮಾಡಿ, ಇವತ್ತು ಆ ಯೋಜನೆಯನ್ನು ಮಾಡಿ, ಮುಂದಿನ ದಿನಗಳಲ್ಲಿ ವಿದ್ಯುತ್‌ಗೆ ಕೊರತೆಯಾಗದ ರೀತಿಯಲ್ಲಿ ನಮ್ಮ ಸರ್ಕಾರ, ನಮ್ಮ ಮುಖ್ಯಮಂತ್ರಿಗಳು, ನಮ್ಮ ಇಂಧನ ಸಚಿವರು ಮಾಡಿದ್ದಾರೆ. ಅದನ್ನು ನಾವು ಶ್ಲಾಘಿಸಲೇಬೇಕು. ನಾವು ಈ ವಿಚಾರವಾಗಿ ಬಹಳ ದಿವಸಗಳಿಂದ ಎಲ್ಲಿಯೂ ಸಹ ವಿದ್ಯುತ್ ಉತ್ಪಾದನೆ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಇವತ್ತು ಈ ಒಂದು ಕೆಲಸ ಮಾಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮ್ಮ ಮಾನ್ಯ ಗೃಹ ಸಚಿವರು ಪೊಲೀಸ್ ಇಲಾಖೆಗೆ ಒಂದು ಕಾಯಕಲ್ಪವನ್ನು ಮಾಡಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್‌ಗಳು ಬಹಳಷ್ಟು ತಾಪತ್ರಯ ಪಡುತ್ತಿದ್ದರು. ಅವರುಗಳು ಮನೆಯಲ್ಲಿ ಅರ್ಧದಿವಸ ಸಹ ಹೆಂಡತಿ-ಮಕ್ಕಳೊಂದಿಗೆ ಆರಾಮವಾಗಿ ಇರದಂತಹ ಪರಿಸ್ಥಿತಿ ಇತ್ತು. ಇವತ್ತು ಆ ಒಂದು ಆರ್ಡರ್ಲಿ ಪದ್ಧತಿಯನ್ನು ರದ್ದು ಮಾಡುವಂತಹ ಕೆಲಸವನ್ನು ಮಾನ್ಯ ಗೃಹ ಸಚಿವರು ಮಾಡಿದ್ದಾರೆ. ಏನು ಅವರಿಗೆ 100 ರೂಪಾಯಿಗಳ ಭತ್ಯೆ ಇತ್ತು, ಇವತ್ತು 2100 ರೂಪಾಯಿಗಳ ಭತ್ಯೆಯನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಸುಮಾರು 282 ಜನ ಸಬ್ ಇನ್ಸ್‌ಪೆಕ್ಟರ್‌ಗಳನ್ನು ನೇಮಕ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಸುಮಾರು 5000ಕ್ಕೂ ಹೆಚ್ಚು ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ನೇಮಕಾತಿ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಮತ್ತೆ ಇನ್ನು ಸುಮಾರು 8000 ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡುವ ಪ್ರಕ್ರಿಯೆಯಲ್ಲಿ ಅವರಿದ್ದಾರೆ.

ಇವತ್ತು 2007 ರ ನಂತರ ನಮ್ಮ ಪ್ರಾಥಮಿಕ ಪಾಠಶಾಲೆಯ ಶಿಕ್ಷಕರುಗಳನ್ನು ಎಲ್ಲಿಯೂ ಸಹ ನೇಮಕಾತಿ ಮಾಡಿರಲಿಲ್ಲ. ನಮ್ಮ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಿಂದಿನ ಶಿಕ್ಷಣ ಸಚಿವರಾಗಿದ್ದಂತಹ ಮಾನ್ಯ ಶ್ರೀ ಕಿಮ್ಮನೆ ರತ್ನಾಕರ್ ರವರು ಸೇರಿ 9200ಕ್ಕೂ ಹೆಚ್ಚು ಶಿಕ್ಷಕರುಗಳನ್ನು ಅಂದು ನೇಮಕ ಮಾಡುವಂತಹ ಒಂದು ದೊಡ್ಡ ಐತಿಹಾಸಿಕ ಕೆಲಸವನ್ನು ಮಾಡಿದ್ದಾರೆ. ಅದರ ಜೊತೆಗೆ ಪ್ರೌಢಶಿಕ್ಷಣ ಇಲಾಖೆಗೆ ಸುಮಾರು 2000ಕ್ಕೂ ಹೆಚ್ಚು ಶಿಕ್ಷಕರುಗಳನ್ನು ನೇಮಕಾತಿ ಮಾಡುವಂತಹ ಪ್ರಕ್ರಿಯೆಯ ಕೆಲಸವನ್ನು ಅಂದು ಮಾಡಿದರು. ಆದರೆ, ಎಲ್ಲೋ ಒಂದು ಕಡೆ ಮೀಸಲಾತಿ ಕುರಿತಂತೆ ನ್ಯಾಯಾಲಯಕ್ಕೆ ಆ ವಿಚಾರ ಹೋಗಿದ್ದರಿಂದ, ಮತ್ತು ಆ ಕೆಲಸ ಸರಿಯಾದ ರೀತಿಯಲ್ಲಿ ಆಗದೇ ಅದು ಪ್ರಸ್ತುತ ಪೆಂಡಿಂಗ್‌ನಲ್ಲಿ ಉಳಿದಿದೆ. ಆ ಒಂದು ಕೆಲಸವನ್ನು ಈಗಿನ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ತನ್ವೀರ್ ಸೇಠ್‌ರವರು ಈ ಬಗ್ಗೆ ನ್ಯಾಯಾಲಯದಲ್ಲಿ ಏನು ತಡೆಯಾಜ್ಞೆಯಿದೆ, ಅದನ್ನು ತೆರವುಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಈ ರೀತಿಯಲ್ಲಿ ಶಿಕ್ಷಣಕ್ಕೆ ಒತ್ತು ಕೊಡುವಂತಹ ಕೆಲಸವನ್ನು ನಮ್ಮ ಸರ್ಕಾರ ಇವತ್ತು ಮಾಡುತ್ತಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಶ್ರೀಯುತ ಪ್ರಸನ್ನ ಕುಮಾರ್‌ರವರು ಇಲ್ಲಿ ಗಮನಿಸಬೇಕು. ಆ 9200 ಶಿಕ್ಷಕರುಗಳನ್ನು ಯಾವಾಗ ನೇಮಕಾತಿ ಮಾಡಿದ್ದಾರೆಂಬುದನ್ನು ಸಹ ಅವರು ಈ ಸಂದರ್ಭದಲ್ಲಿ ಹೇಳ ಬೇಕಾಗುತ್ತದೆ. ಏಕೆಂದರೆ, ಇದು ರೆಕಾರ್ಡ್‌ಗೆ ಸರಿಯಾಗಿ ಹೋಗಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್. ಪ್ರಸನ್ನ ಕುಮಾರ್:–** ಈ ನೇಮಕಾತಿಯನ್ನು ಕಳೆದ ವರ್ಷ ಮಾಡಲಾಗಿದೆ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಡಿಸೆಂಬರ್ 2015 ರಲ್ಲಿ ಏನು ನಾವು ಅಧಿಸೂಚನೆಯನ್ನು ಹೊರಡಿಸಿದ್ದು, ಅದರ ಪ್ರಕಾರ 7905 ಶಿಕ್ಷಕರುಗಳನ್ನು ನೇಮಕ ಮಾಡಿ, ಜೂನ್–ಜುಲೈ 2016 ರಲ್ಲಿ ಅವರುಗಳಿಗೆ ಸ್ಥಳ ನಿಯೋಜನೆ ಸಹ ಮಾಡಿದ್ದು, ಈಗಾಗಲೇ ಅವರುಗಳು ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

**ಶ್ರೀ ಆರ್. ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಏನು ಇವತ್ತು 176 ತಾಲ್ಲೂಕುಗಳಲ್ಲಿ 160 ತಾಲ್ಲೂಕುಗಳು ಬರಪೀಡಿತ ಪ್ರದೇಶವೆಂದು ಘೋಷಣೆಯಾಗಿದೆ, ಇಲ್ಲಿ ರೈತರಿಗೆ ಸಹಾಯ ಮಾಡುವಂತಹ ಕೆಲಸ ಸಹ ಪ್ರಾರಂಭವಾಗಿದೆ. ಬೆಳೆ ವಿಮೆ ಮಾಡುವುದಕ್ಕೆ ಸುಮಾರು 675 ಕೋಟಿ ರೂಪಾಯಿಗಳನ್ನು ಇವತ್ತು ಸರ್ಕಾರ ಮೀಸಲಿಟ್ಟಿದೆ. ಮತ್ತೆ, ಬೆಳೆ ವಿಮೆ ಪರಿಹಾರವನ್ನು ಯಾವಾಗ ಕೊಡಬೇಕು, ಅದನ್ನು ತಡವಾಗದ ರೀತಿಯಲ್ಲಿ ತಕ್ಷಣದಲ್ಲಿ ಕೊಡಲಾಗುತ್ತಿದೆ. ಇವತ್ತು ಹೊಸ ತಂತ್ರಜ್ಞಾನವನ್ನು ಬಳಸಿ, ಬೆಳೆಯ ಕಟಾವು ಕಾರ್ಯವನ್ನು ಹೇಗೆ ಮಾಡುವುದು ಎನ್ನುವುದನ್ನು ಪ್ರಾಯೋಗಿಕವಾಗಿ ಮಾಡುವಂತಹ ಕೆಲಸವನ್ನು ಒಂದು App (Application) ನಿರ್ಧಾರ ಮಾಡಿ, ಅದರ ಮೂಲಕ ಇವತ್ತು ಬೆಳೆ ವಿಮೆಯನ್ನು ಸರಿಯಾದ ಸಮಯಕ್ಕೆ ರೈತರಿಗೆ ತಲುಪಿಸುವಂತಹ ಕೆಲಸವನ್ನು ಇವತ್ತು ಸರ್ಕಾರ ಮಾಡುತ್ತಿದೆ. ಹೀಗಾಗಿ, ರೈತರಿಗೆ ಬೇಕಾದಂತಹ ವ್ಯವಸ್ಥೆಗಳನ್ನು ಮಾಡಿ ಅವರ ಬದುಕು ಹಸನಾಗಿರಬೇಕು, ಅವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಗೆ ಹೋಗಬಾರದೆನ್ನುವ ಉದ್ದೇಶಕ್ಕೆ ಇವತ್ತು 675 ಕೋಟಿ ರೂಪಾಯಿಗಳನ್ನು ಮೀಸಲಿಡುವಂತಹ ಕೆಲಸವನ್ನು ಸರ್ಕಾರ ಮಾಡಿದೆ.

ಮತ್ತೆ, ಇವತ್ತು ಏನು ಕುಡಿಯುವ ನೀರಿಗೆ ನಮ್ಮಲ್ಲಿ ಹೆಚ್ಚಿನ ತಾತ್ವಾರ ಇದೆ, ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಇವತ್ತು ಕುಡಿಯುವ ನೀರಿಗೆ ಸಮಸ್ಯೆ ಇದೆ. ಆ ಕುಡಿಯುವ ನೀರಿನ ಸಮಸ್ಯೆ ಮತ್ತು ಬೇರೆ ಬೇರೆ ಸಮಸ್ಯೆಗಳನ್ನು ನೀಗುವುದಕ್ಕೆ ಈಗಾಗಲೇ ಕಳೆದ ಏಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೂ 1200 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ.

*(32) 07.02.2017 MM-VK 7.00*

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಪ್ರಸನ್ನ ಕುಮಾರ್** : ಮುಂದು .ಬರಗಾಲದಿಂದಾಗಿ ಮುಂಗಾರು ಬೆಳೆಯಲ್ಲಿ ರೂ. 4800 ಕೋಟಿಯಷ್ಟು ನಷ್ಟವಾಗಿರುವುದರಿಂದ ಇದನ್ನು ಭರಿಸಿಕೊಡಬೇಕೆಂದು ಕೇಂದ್ರ ಸರ್ಕಾರವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಕೇಳಿದಂತಹ ಸಂದರ್ಭದಲ್ಲಿ ನಮಗೆ ಸುಮಾರು 1700 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೊತ್ತದ ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಆ ಹಣ ಇನ್ನೂ ಬಂದಿಲ್ಲ. ಹಣ ಬರದಿದ್ದರೂ ಆ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ. ಆದ್ದರಿಂದ ಆ ಹಣವನ್ನು ಬಿಡುಗಡೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ಕೇಂದ್ರ ಸರ್ಕಾರವನ್ನು ಮನವಿ ಮಾಡಿಕೊಳ್ಳುತ್ತೇನೆ. ಜೊತೆಗೆ ಹಿಂಗಾರು ಬೆಳೆ ನಷ್ಟ ಬರಬೇಕಾಗಿದ್ದು ಅದರ ನಷ್ಟವನ್ನು ಸಹ ಕೇಂದ್ರ ಸರ್ಕಾರದ ಮುಂದೆ ಇಡುವ ಕೆಲಸ ಆಗಬೇಕಾಗಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾಗಿಟ್ಟಿರುವ ಹಣವನ್ನು ಅದೇ ವರ್ಷದಲ್ಲಿ ಖರ್ಚು ಮಾಡದಿದ್ದರೆ ಆ ಹಣ ಲ್ಯಾಪ್ಸ್ ಆಗುತ್ತಿತ್ತು. ಆದರೆ ಇವತ್ತು ಆ ಹಣವನ್ನು ಮುಂದುವರಿಸಿಕೊಂಡು ಹೋಗುವ ಕೆಲಸ ಮಾಡುತ್ತಿದ್ದೇವೆ. ಆ ಹಣವನ್ನು ಖರ್ಚು ಮಾಡದಿದ್ದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಜವಾಬ್ದಾರಿ ಮಾಡುವ ಕೆಲಸವನ್ನು ಸರ್ಕಾರ ಮಾಡಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾಗಿರುವ ಆ ಹಣವನ್ನು ಖರ್ಚು ಮಾಡಿ ಯಾವ ರೀತಿಯಲ್ಲೂ ಮೋಸವಾಗದ ರೀತಿಯಲ್ಲಿ ಕೆಲಸ ಮಾಡಿದೆ. ಎಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾಲೋನಿಗಳಿವೆ ಅಲ್ಲಿ 1200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಾಂಕ್ರೀಟ್ ರಸ್ತೆಗಳನ್ನು ಮತ್ತು ಚರಂಡಿಗಳನ್ನು ನಿರ್ಮಿಸುವ ಕೆಲಸ ಮಾಡಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರು ಇರಬಹುದು, ಅಲ್ಪಸಂಖ್ಯಾತರಿರಬಹುದು, ಹಿಂದುಳಿದ ವರ್ಗದವರಾಗಿರಬಹುದು, ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಮಾಡಿ ನಮ್ಮ ವಿದ್ಯಾರ್ಥಿಗಳು ವಿದೇಶದಲ್ಲಿ ವ್ಯಾಸಂಗ ಮಾಡುವುದಕ್ಕೆ ಸರ್ಕಾರ ಪ್ರಥಮ ಬಾರಿಗೆ ಅವಕಾಶ ಕಲ್ಪಿಸಿಕೊಟ್ಟಿದೆ.

**ಸಭಾಪತಿಯವರು:-** ಮಾನ್ಯ ಪ್ರಸನ್ನ ಕುಮಾರ್‌ರವರೇ, ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಬೇರೆ ವಿಷಯಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಗಡಿಯಾರ ನೋಡಿಕೊಂಡು ಇನ್ನು ಐದು ನಿಮಿಷಗಳಲ್ಲಿ ಮುಗಿಸಿ.

**ಶ್ರೀ ಆರ್. ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರತಿ ನಾಗರಿಕನಿಗೂ ಶುದ್ಧ ಕುಡಿಯುವ ನೀರು ದೊರೆಯಲು ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಆರಂಭಿಸಬೇಕು. ಕಾರಣ ಬೋರ್‌ವೆಲ್ ನಿಂದ ಬರುವ ನೀರು ಬೇರೆ ಬೇರೆ ರಾಸಾಯನಿಕಗಳಿಂದ ಕೂಡಿರುವುದರಿಂದ ಆ ನೀರನ್ನು ಕುಡಿದರೆ ಜನರ ಆರೋಗ್ಯದಲ್ಲಿ ಏರುಪೇರುಗಳಾಗುತ್ತದೆ. ಆದ್ದರಿಂದ ಎಲ್ಲರಿಗೂ ಶುದ್ಧ ಕುಡಿಯುವ ನೀರನ್ನು ಕೊಡಬೇಕೆಂದು ಈಗಾಗಲೇ ಸುಮಾರು ರೂ. 1000 ಕೋಟಿ ಖರ್ಚು ಮಾಡಿ 8000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದೆ. ಪ್ರತಿ ಗ್ರಾಮಗಳಲ್ಲಿಯೂ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡಲೇ ಬೇಕೆಂಬ ನಮ್ಮ ಸರ್ಕಾರದ ಗುರಿ ಶ್ಲಾಘನೀಯವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ, ಶುದ್ಧ ಕುಡಿಯುವ ನೀರನ್ನು ದೊರಕಿಸಿಕೊಟ್ಟಲ್ಲಿ ಜನರ ಆರೋಗ್ಯವೂ ಸುಧಾರಣೆಯಾಗುತ್ತದೆ, ಆಸ್ಪತ್ರೆಗಳಿಗೆ ಹೋಗುವುದೂ ತಪ್ಪುತ್ತದೆ. ಹಾಗಾಗಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡಬೇಕಾಗಿದೆ. ಇವತ್ತಿನ ದಿವಸ ಸುಮಾರು 6022 ಗ್ರಾಮ ಪಂಚಾಯಿತಿಗಳಲ್ಲಿ ಸುಮಾರು 5971 ಹಳ್ಳಿಗಳಿಗೆ ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಹಣವನ್ನು ಬಿಡುಗಡೆ ಮಾಡಿ ಸಮಗ್ರವಾದ ಅಭಿವೃದ್ಧಿಯನ್ನು ಮಾಡುವುದಕ್ಕೆ ನಮ್ಮ ಸರ್ಕಾರ ಕ್ರಮ ಕೈಗೊಂಡಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಹಳ್ಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು ಹೆಚ್ಚು ಅವಕಾಶವನ್ನು ಮಾಡಿಕೊಟ್ಟಿದೆ.

ಅದರ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಶೇ. 50 ಕ್ಕಿಂತ ಜಾಸ್ತಿ ಇರುವಂತಹ ಪ್ರದೇಶಗಳಲ್ಲಿ ಮುಖ್ಯಮಂತ್ರಿಯವರು ಮಹಾದಾಯಿ ಗ್ರಾಮ ಮಾಡುವುದಕ್ಕೋಸ್ಕರ 150 ಗ್ರಾಮಗಳನ್ನು ಗುರುತು ಮಾಡಿದ್ದು, ಈಗಾಗಲೇ ಅಲ್ಲಿ ಅಭಿವೃದ್ಧಿ ಕೆಲಸಗಳಾಗಿವೆ. ಮುಂದಿನ ದಿನಗಳಲ್ಲಿ ಅಲ್ಲಿ ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡುವಂತಾಗುತ್ತದೆ. ನಮ್ಮ ರಾಜ್ಯಕ್ಕೆ ಕಾವೇರಿ ಮತ್ತು ಮಹಾದಾಯಿ ಯಾವತ್ತೂ ಮುಗಿಯದ ಸಮಸ್ಯೆಯಾಗಿದೆ. ಕಾವೇರಿ ವಿಚಾರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನಡೆದುಕೊಂಡ ರೀತಿ ಶ್ಲಾಘನೀಯವಾಗಿದೆ. ಏಕೆಂದರೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶಗಳು ನಮಗೆ ಮಾರಕವಾಗಿದ್ದರೂ ಸಹ ಅದನ್ನು ಯಾವರೀತಿ ಎದುರಿಸಬೇಕು ಎಂಬ ವಿಚಾರದಲ್ಲಿ ಎರಡೂ ಸದನಗಳ ವಿಶ್ವಾಸವನ್ನು ತೆಗೆದುಕೊಂಡು ಅವರು ಕಾನೂನಾತ್ಮಕವಾಗಿ ಹೋರಾಟ ಮಾಡಿದರು. ಆ ಹೋರಾಟದ ಕಾರಣದಿಂದಾಗಿ ನಾವು ಇವತ್ತು ಉಸಿರಾಡುವ ಪರಿಸ್ಥಿತಿಗೆ ಬಂದಿದ್ದೇವೆಂದರೆ ಅದಕ್ಕೆ ಕಾರಣ ನಮ್ಮ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ಧರಾಮಯ್ಯನವರು ಎಂದರೆ ತಪ್ಪಾಗಲಾರದು. ಕೇಂದ್ರ ಸರ್ಕಾರದ ಮುಂದೆ ನಮ್ಮ ಸರ್ವಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಿ ಕಾವೇರಿ ಇರಬಹುದು, ಮಹಾದಾಯಿ ವಿಚಾರ ಇರಬಹುದು ಅದರ ಬಗ್ಗೆ ಮಾತನಾಡುವ ಕೆಲಸವನ್ನು ಮಾಡಿದ್ದಾರೆ. ಆದರೂ ಅವರ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ಕೇಂದ್ರ ಸರ್ಕಾರದಿಂದ ನಮಗೆ ಅನುಕೂಲವಾಗದೇ ಇದ್ದರೂ ನಾವು ಮತ್ತೆ ಅವರಲ್ಲಿ ಮನವಿ ಮಾಡಿಕೊಳ್ಳುವ ಕೆಲಸವನ್ನು ಮಾಡಬೇಕು. ನಮ್ಮ ಪರವಾಗಿ ಆಗುವಂತೆ ಕೆಲಸ ಮಾಡಬೇಕು. ಮಹದಾಯಿ ವಿಚಾರದ ಹೋರಾಟದಲ್ಲಿ ರೈತರು ಹೋರಾಟ ಮಾಡುವಂತಹ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ಕಾನೂನನ್ನು ಕೈಗೆ ತೆಗೆದುಕೊಂಡಂತಹ ಸಂದರ್ಭದಲ್ಲಿ ಪೊಲೀಸರು ಕೇಸುಗಳನ್ನು ದಾಖಲು ಮಾಡಿದ್ದಾರೆ. ಅದರಲ್ಲಿ ನಮ್ಮ ಸರ್ಕಾರ ಸಾಕಷ್ಟು ಪ್ರಕರಣಗಳನ್ನು ಹಿಂಪಡೆದಿದೆ. ಆದರೆ ಇನ್ನುಳಿದ ಕೇಸ್‍ಗಳನ್ನು ಕರುಣೆಯಿಂದ ನೋಡಿ ಆ ಕೇಸ್‍ಗಳನ್ನು ವಾಪಸ್

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಡೆಯಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಗೃಹ ಸಚಿವರಲ್ಲಿ ಮತ್ತು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾಲ್ಕು ತಿಂಗಳಾಯಿತು, petty case ಗಳು ನಾಲ್ಕು ತಿಂಗಳಿನಿಂದಲೂ ರೈತರು ದಿನಕ್ಕೆ ಎರಡು ಬಾರಿ ಪೊಲೀಸ್ ಸ್ಟೇಷನ್‌ಗೆ ಹೋಗಿ ಹಾಜರಿ ಕೊಡಬೇಕು. ಅದಕ್ಕಾಗಿ ಊರು ಬಿಟ್ಟು ಬರಬೇಕು. ನಾನು ಕೂಡ ಕಾನೂನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಕಾನೂನು ಮಂತ್ರಿಯವರಿಗೂ, ಮಾನ್ಯ ಮುಖ್ಯಮಂತ್ರಿಯವರಿಗೂ ಈ ವಿಷಯದ ಬಗ್ಗೆ ಹೇಳಿದ್ದೇನೆ. ಆದರೂ ಇದುವರೆಗೂ ಒಬ್ಬ ರೈತರ ಕೇಸನ್ನು ಸಹ ಹಿಂತೆಗೆದುಕೊಂಡಿಲ್ಲ. ಮಾನ್ಯ ಪ್ರಸನ್ನ ಕುಮಾರ್‌ರವರು ಹೊಸದಾಗಿ ಮಾತನಾಡುತ್ತಿದ್ದರೂ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ಮಹಾದಾಯಿ ವಿಚಾರದಲ್ಲಿ ಉಳಿದ ವಿಚಾರಗಳಿಗಿಂತ ವಿಭಿನ್ನವಾಗಿ ವಿಚಾರ ಮಾಡುತ್ತಿದ್ದಾರೆ ಎನ್ನುವ ಆಪಾದನೆ ಸರ್ಕಾರದ ಮೇಲಿದೆ. ದಯಮಾಡಿ ಅದನ್ನು ಕಡಿಮೆ ಮಾಡಿ.

**ಶ್ರೀ ಆರ್. ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ...

**ಸಭಾಪತಿಯವರು:–** ನಿಮ್ಮ ಮಾತಿಗೆ ಅವರು ದನಿಗೂಡಿಸಿದ್ದಾರೆ. ನೀವು ಮುಂದುವರಿಸಿ. ಉತ್ತರ ಕೊಡಲು ನೀವು ಸಚಿವರಲ್ಲ; ಉತ್ತರವನ್ನು ಸಚಿವರು ಕೊಡುತ್ತಾರೆ.

**ಶ್ರೀ ಆರ್. ಪ್ರಸನ್ನ ಕುಮಾರ್:–** ಕರ್ನಾಟಕ ರಾಜ್ಯ ಐಟಿ ಬಿಟಿಯಲ್ಲಿ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಈ ಕ್ಷೇತ್ರಕ್ಕೆ ನಮ್ಮ ರಾಜ್ಯದ ಕೊಡುಗೆ ಅನನ್ಯವಾದ ಕೊಡುಗೆಯಾಗಿದೆ. ಇವತ್ತಿನ ದಿವಸ ಐಟಿ ಬಿಟಿ ಅಭಿವೃದ್ಧಿಗೆ ನಮ್ಮ ಸರ್ಕಾರ ಇನ್ನೂ ಹೆಚ್ಚಿನ ಕಾರ್ಯವನ್ನು ಮಾಡುತ್ತಿದೆ. ಅದು ಇನ್ನೂ ಹೆಚ್ಚಿಗೆ ಅಭಿವೃದ್ಧಿಯಾಗಬೇಕು. ಅದಕ್ಕಾಗಿ ಇನ್ನು ಹೆಚ್ಚು ಪ್ರೋತ್ಸಾಹ ನೀಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ.

**ಸಭಾಪತಿಯವರು:–** ಸಾಕು ಮುಗಿಸಿಬಿಡಿ.

**ಶ್ರೀ ಆರ್. ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**Mr. CHAIRMAN:-** You should not test the patience of other Members.

**ಶ್ರೀ ಆರ್. ಪ್ರಸನ್ನ ಕುಮಾರ್:-** ವಿಶ್ವ ಪ್ರವಾಸಿ ದಿನವನ್ನು ನಮ್ಮ ರಾಜಧಾನಿಯಾದ ಬೆಂಗಳೂರಿನಲ್ಲಿ ನಡೆಸಿ ವಿಶ್ವದ ಬಂಡವಾಳದಾರರನ್ನು ಆಕರ್ಷಣೆ ಮಾಡುವ ಕೆಲಸವನ್ನು ಮಾಡಿ ನಮ್ಮ ರಾಜ್ಯಕ್ಕೆ ಹೆಚ್ಚಿನ ಬಂಡವಾಳ ಹರಿದು ಬರುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಅದನ್ನು ನಾವು ಶ್ಲಾಘಿಸಬೇಕಾಗಿದೆ. ಹಲವಾರು ಕಾರ್ಯಕ್ರಮಗಳನ್ನು ನುಡಿದಂತೆ ನಡೆದು ಏನು ಆಶ್ವಾಸನೆಗಳನ್ನು ಕೊಟ್ಟಿತ್ತು ಆ ಆಶ್ವಾಸನೆಗಳನ್ನು ಪೂರೈಸುವ ಕೆಲಸದಲ್ಲಿ ನಮ್ಮ ಸರ್ಕಾರ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇದನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ನಮಗೆಲ್ಲಾ ಇದರ ಬಗ್ಗೆ ಗೊತ್ತಿದೆ. ಇವತ್ತಿನ ದಿವಸ ನಮಗೆ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಾನ್ಯ ಶರಣಪ್ಪ ಮಟ್ಟೂರು ರವರು ಮಂಡಿಸಿದರು ಅದನ್ನು ನಾನು ಅನುಮೋದಿಸುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟ ಮಾನ್ಯ ಸಭಾನಾಯಕರು ಮತ್ತು ಗೃಹಸಚಿವರಾದ ಡಾ: ಜಿ ಪರಮೇಶ್ವರ್ ರವರಿಗೆ ಮತ್ತು ಮುಖ್ಯ ಸಚೇತಕರುಗಳಿಗೂ ಮತ್ತು ನಮ್ಮ ಎಲ್ಲಾ ಸದಸ್ಯರುಗಳಿಗೂ ಮತ್ತು ಈ ಸದನದ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿರವರಿಗೂ ಮತ್ತು ನನಗೆ ಮಾರ್ಗದರ್ಶನ ಮಾಡಿದ ತಮಗೂ ಸಹ ನಾನು ವಂದನೆಗಳನ್ನು ಸಲ್ಲಿಸಿ ಈ ಒಂದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವಕ್ಕೆ ತಾವೆಲ್ಲರೂ ಅನುಮೋದನೆಯನ್ನು ಕೊಡಬೇಕೆಂದು ಬೇಡಿಕೊಂಡು ಈ ಸಂದರ್ಭದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು.

**7. ಗಮನ ಸೆಳೆಯುವ ಸೂಚನೆ**

"ಸರ್ಕಾರವು ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆ ಹಾಗೂ ಆದೇಶಗಳಿಂದ ಸರ್ಕಾರಿ ಕಟ್ಟಡ, ರಸ್ತೆ ಕಾಮಗಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಅಗತ್ಯವಾಗಿರುವ ಮರಳು, ಜಲ್ಲಿ ಮತ್ತು ಮೊರಮ್ (Murram) ಲಭಿಸದೆ ತೊಂದರೆಯಾಗಿರುವ ಬಗ್ಗೆ"

~~~~~~~

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರವು ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆ ಹಾಗೂ ಆದೇಶಗಳಿಂದ ಸರ್ಕಾರಿ ಕಟ್ಟಡ, ರಸ್ತೆ ಕಾಮಗಾರಿಗಳಿಗೆ ಹಾಗೂ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~~~~~

ಸಾರ್ವಜನಿಕರಿಗೆ ಅಗತ್ಯವಾಗಿರುವ ಮರಳು, ಜಲ್ಲಿ ಮತ್ತು ಮೊರಮ್ (Murram) ಲಭಿಸದೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ವಿನಯ ಕುಲಕರ್ಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ,

(ಸಚಿವರ ಲಿಖಿತ ಹೇಳಿಕೆಯ ಪ್ರತಿ ಲಗತ್ತಿಸಿದೆ)

*(33) 07.02.2017 7:10 MGN-VK*

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಉತ್ತರವನ್ನು ಓದುವುದಕ್ಕಿಂತ ಅದರಲ್ಲಿನ ಮುಖ್ಯಾಂಶಗಳನ್ನು ಮೌಖಿಕವಾಗಿ ತಿಳಿಸಿಬಿಡುವುದು ಸೂಕ್ತವೆನಿಸುತ್ತದೆ.

**ಸಭಾಪತಿಯವರು:-** ಉತ್ತರವನ್ನು ಮಂಡಿಸಿ ಆಗಿದೆ, ಮತ್ತೇನು?

**ಶ್ರೀ ವಿನಯ ಆರ್.ಕುಲಕರ್ಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು):-** ರಾಜ್ಯದ ಮರಳಿನ ಅವಶ್ಯಕತೆ ಸುಮಾರು 23 ಎಂ.ಎಂ.ಟಿ.ಗಳಷ್ಟಿದೆ. ಆದರೆ ಈಗ ನಮ್ಮಲ್ಲಿ ಎಂ-ಸ್ಯಾಂಡ್‌ನಿಂದ 15 ಎಂ.ಎಂ.ಟಿ. ಮತ್ತು ರಿವರ್ ಸ್ಯಾಂಡ್‌ನಿಂದ 3 ಎಂ.ಎಂ.ಟಿ. ಈ ರೀತಿ ಒಟ್ಟಾರೆಯಾಗಿ 18 ಎಂ.ಎಂ.ಟಿ. ಮರಳು ಉತ್ಪಾದನೆಯಾಗುತ್ತಿರುವುದರಿಂದ 5 ಎಂ.ಎಂ.ಟಿ.ಗಳಷ್ಟು ಮರಳಿನ ಕೊರತೆ ಇದೆ. ರಿವರ್ ಸ್ಯಾಂಡ್‌ನಿಂದ ಹೊಸ ಟೆಂಡರ್ ಮುಖಾಂತರ ಈಗಾಗಲೇ ನಮ್ಮಲ್ಲಿ 348 ಬ್ಲಾಕ್‌ಗಳನ್ನು ನಾವು ಗುರುತಿಸಿದ್ದೇವೆ. ಅದರಲ್ಲಿ 235 ಬ್ಲಾಕ್‌ಗಳಿಗೆ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಬಿಡ್ ಕೂಡ ಈಗಾಗಲೇ ಓಪನ್ ಆಗಿದೆ. ಈ ಬ್ಲಾಕ್‌ಗಳು ಕಾರ್ಯಾರಂಭವಾದರೆ ಇದೇ ಜುಲೈ ತಿಂಗಳ ವೇಳೆಗೆ 6 ಎಂ.ಎಂ.ಟಿ.ಗಳಷ್ಟು ಹೊಸ ಮರಳು ಉತ್ಪಾದನೆಯಾಗುತ್ತದೆ. ಅಷ್ಟಲ್ಲದೆ 74 ಹೊಸ ಕ್ರಷರ್‌ಗಳು ಅಂದರೆ, ಕ್ರಷರ್ಸ್‌ನ್ನು ಅವರು ಎಂ-ಸ್ಯಾಂಡ್ ಯುನಿಟ್ ಆಗಿ ಕನ್ವರ್ಟ್ ಮಾಡಿಕೊಂಡರು. ಅದರಲ್ಲಿ ಕೂಡ 10 ಎಂ.ಎಂ.ಟಿ.ಗಳಷ್ಟು ಮರಳು ಉತ್ಪಾದನೆಯಾಗುತ್ತದೆ. ಅಷ್ಟು ಪ್ರಮಾಣದಲ್ಲಿ ಮರಳು ಉತ್ಪಾದನೆಯಾದರೆ ಒಟ್ಟಾರೆಯಾಗಿ ನಮ್ಮಲ್ಲಿ ಮೊದಲಿದ್ದ 3 ಎಂ.ಎಂ.ಟಿ. ಜೊತೆಗೆ ಹೊಸ ಬ್ಲಾಕ್‌ಗಳು ಸಹ ಕಾರ್ಯಾರಂಭಗೊಂಡರೆ 6 ಎಂ.ಎಂ.ಟಿ. ಮರಳು ಉತ್ಪಾದನೆಗೊಂಡು ಒಟ್ಟು 9 ಎಂ.ಎಂ.ಟಿ. ಮರಳು ನಮಗೆ ರಿವರ್ ಸ್ಯಾಂಡ್‌ನಿಂದ ಬರುತ್ತದೆ. ಜೊತೆಗೆ ಮೊದಲಿದ್ದ 15 ಎಂ.ಎಂ.ಟಿ. ಮರಳು ನಮಗೆ ಎಂ-ಸ್ಯಾಂಡ್‌ನಿಂದ ಬರುತ್ತಿತ್ತು. 74 ಯುನಿಟ್‌ಗಳು ಜುಲೈ ವೇಳೆಗೆ ಪ್ರಾರಂಭವಾಗಲಿದ್ದು, ಅದರಿಂದ 10

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂ.ಎಂ.ಟಿ. ಮರಳು ಉತ್ಪಾದನೆಯಾಗುತ್ತದೆ. ನಮಗೆ ಒಟ್ಟಾರೆಯಾಗಿ 23 ಎಂ.ಎಂ.ಟಿ. ಮರಳಿನ ಅವಶ್ಯಕತೆ ಇದ್ದು, ಈಗಿರುವ ಉತ್ಪಾದನೆಯ ಜೊತೆಗೆ ಹೊಸ ಯುನಿಟ್‌ಗಳೆಲ್ಲಾ ಕಾರ್ಯಾರಂಭಗೊಂಡರೆ ಒಟ್ಟಾರೆಯಾಗಿ 34 ಎಂ.ಎಂ.ಟಿ. ಮರಳು ಉತ್ಪಾದನೆಯಾಗುತ್ತದೆ.

ಇದಲ್ಲದೆ ಕಾಯಿದೆಗೆ ಹೊಸ ತಿದ್ದುಪಡಿಯಾದ ನಂತರ ಸುಮಾರು 658 ಅರ್ಜಿಗಳು ನಮ್ಮಲ್ಲಿ save ಆಗಿವೆ. ಆದರೆ ಅದರಲ್ಲಿ ಎಂ-ಸ್ಯಾಂಡ್ ಯುನಿಟ್‌ಗಾಗಿಯೇ 102 ಹೊಸ ಬ್ಲಾಕ್‌ಗಳು ಕೂಡ save ಆಗಿವೆ. ಹೀಗಾಗಿ ನಮಗೆ ಬರುವಂತಹ ದಿನಗಳಲ್ಲಿ auction ಇರುವಂಥವು, ಜೊತೆಗೆ ಎಂ-ಸ್ಯಾಂಡ್ ಯುನಿಟ್‌ಗಳು ಕಾರ್ಯಾರಂಭವಾದರೆ ಇದೇ ಜುಲೈ ತಿಂಗಳ ವೇಳೆಗೆ ಸಾಕಷ್ಟು ಪ್ರಮಾಣದಲ್ಲಿ ನಮಗೆ ಮರಳು ಲಭ್ಯವಾಗುತ್ತದೆ.

ಮಾನ್ಯ ಸದಸ್ಯರು ಜಲ್ಲಿ ಕೊರತೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ನಮ್ಮಲ್ಲಿ ಎಲ್ಲಿಯೂ ಜಲ್ಲಿಯ ಕೊರತೆ ಇಲ್ಲ, ಮರಳಿನ ಕೊರತೆ ಮಾತ್ರ ಇದೆ. ಜುಲೈ-2017ರ ವೇಳೆಗೆ ಸಂಪೂರ್ಣವಾಗಿ ಹೊಸ ಬ್ಲಾಕ್‌ಗಳು ಸಹ ಕಾರ್ಯಾರಂಭವಾಗುತ್ತವೆ, ನದಿ ಮರಳು ಮತ್ತು ಎಂ-ಸ್ಯಾಂಡ್ ಕೂಡ ಸಾಕಷ್ಟು ಪ್ರಮಾಣದಲ್ಲಿ ಬರುತ್ತದೆ.

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಿರ್ಮಾಣ ಹಂತದಲ್ಲಿರುವಂತಹ ಸರ್ಕಾರಿ ಕಟ್ಟಡಗಳು, ಸರ್ಕಾರಿ ಕಾಮಗಾರಿಗಳಿಗೆ murram, ಸ್ಯಾಂಡ್ ಮತ್ತು ಮೆಟಲ್ ಇವುಗಳ ಲಭ್ಯತೆಯ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆದಿದ್ದೇನೆ. ಸರ್ಕಾರ 2016ರಲ್ಲಿ ಜಾರಿಗೆ ತಂದಿರುವ ಹೊಸ ಕಾಯಿದೆಯ ಅಡಿಯಲ್ಲಿ murram, ಸ್ಯಾಂಡ್ ಮತ್ತು ಮೆಟಲ್ ಇವುಗಳನ್ನು minor minerals ಎಂದು ಪರಿಗಣಿಸಲಾಗಿದೆ. ಅದಕ್ಕೆ ಮುಂಚೆ ರಸ್ತೆ ಕಾಮಗಾರಿಗಳೇನಾದರೂ ಇದ್ದರೆ ಅದಕ್ಕೆ ಬೇಕಾದಂತಹ ಮರಳನ್ನು ಆ ಪ್ರದೇಶದಲ್ಲಿನ ಯಾವುದಾದರೂ ನದಿ ಅಥವಾ ಹಳ್ಳಗಳಿಂದ ಸಂಗ್ರಹಿಸಿಕೊಂಡು ಉಪಯೋಗಿಸುತ್ತಿದ್ದರು. ಆ ಪ್ರದೇಶದ ಸ್ವಂತ ಕಟ್ಟಡಗಳು, ಸರ್ಕಾರಿ ಕಟ್ಟಡಗಳಿಗೆ ಬೇಕಾದ ಮರಳನ್ನು ಸಹ ಅದೇ ರೀತಿ ಪೂರೈಸಿಕೊಳ್ಳುತ್ತಿದ್ದರು. ಮರಳು ನೀತಿಯನ್ನು ಜಾರಿಗೆ ತಂದ ಮೇಲೆ ಅದನ್ನು regulate ಮಾಡಿ, centralise ಮಾಡಿಕೊಂಡು ಪ್ರತಿಯೊಂದಕ್ಕೂ ಸಹ ಇಲ್ಲಿಂದಲೇ permission ಆಗಬೇಕು, ಇಲ್ಲಿ clearance ಆದರೆ ಮಾತ್ರ ಅದನ್ನು ಹರಾಜು ಮಾಡಬೇಕು. ಹರಾಜು ಮಾಡುವಾಗ ಕೂಡ ನದಿ ತೀರದಿಂದ manual ಆಗಿ ಮೇಲೆ ತಂದು ಸಂಗ್ರಹ ಮಾಡಿದ ನಂತರ ಅದನ್ನು ಲಾರಿಗೆ ತುಂಬಿಸಬೇಕು ಎನ್ನುವಂತಹ ವ್ಯವಸ್ಥೆಯನ್ನು ತಂದರು. ಇದರಿಂದ ಇಲ್ಲದಿದ್ದ ಅನಾಹುತಗಳೆಲ್ಲಾ ಆದವು. ಆದರೆ ಮಂತ್ರಿಗಳು 'ಮರಳಿನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉತ್ಪಾದನೆ ಕಡಿಮೆ ಇದೆ, ಬೇಡಿಕೆ ಹೆಚ್ಚಾಗಿದೆ. ಹಾಗಿರುವಾಗ ಅದನ್ನು regulate ಮಾಡಬೇಕು' ಎಂದು ತಿಳಿಸಿದರು. ಇದರ ಜೊತೆಗೆ ಸಾಕಷ್ಟು ಅವ್ಯವಹಾರಗಳು, ಮರಳಿನ ಕಳ್ಳ ಸಾಗಾಣಿಕೆ ಇವತ್ತಿಗೂ ನಡೆಯುತ್ತಿವೆ.

ನಮ್ಮಲ್ಲಿ ಹರಪ್ಪನಹಳ್ಳಿಯಿಂದ ಪ್ರಾರಂಭವಾಗುವ ತುಂಗಭದ್ರಾ ನದಿ ತೀರದಿಂದ ಲಾರಿಗಟ್ಟಲೆ ಮರಳು ಲೂಟಿಯಾಗುತ್ತಿದೆ. ಒಬ್ಬ ರೈತ ಅವರ ಸ್ವಂತ ಉಪಯೋಗಕ್ಕಾಗಿ ಮರಳು ತರಲು ಟ್ರ್ಯಾಕ್ಟರ್ ತೆಗೆದುಕೊಂಡು ಹೋದರೆ ಅದನ್ನು ಯಾರಾದರೂ ಪೊಲೀಸರು ಕಂಡರೆ ಅಥವಾ ಯಾರಾದರೂ Whatsapp ನಲ್ಲಿ ಈ ಫೋಟೋ ಸಹಿತ ಮಾಹಿತಿಯನ್ನು ಕಳುಹಿಸಿದರೆ ಸಾಕು, ಟ್ರ್ಯಾಕ್ಟರ್ ಕೂಡ ಸೀಜ್ ಮಾಡಿ ಅಲ್ಲಿ ಮರಳು ತೆಗೆಯುತ್ತಿದ್ದವರನ್ನು ಅರೆಸ್ಟ್ ಮಾಡಿ ಆರು ತಿಂಗಳಾದರೂ ಹೊರಗಡೆ ಬಿಡುವುದಿಲ್ಲ. ಚಾರ್ಜ್ ಶೀಟ್ ಹಾಕುವುದಿಲ್ಲ, ರೈತರನ್ನು ಅಷ್ಟು ಗೋಳಾಡಿಸುತ್ತಾರೆ. ಇದು ಒಂದು ವಿಚಾರವಾದರೆ ಮೊನ್ನೆ ಏನು ಮಾಡಿದರೆಂದರೆ, ಮೊನ್ನೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು ಸುತ್ತೋಲೆಯೊಂದನ್ನು relax ಮಾಡಿದರು. ಅಂದರೆ, ಆಶ್ರಯ ಸಮಿತಿ ಜಿಲ್ಲಾ ಮಟ್ಟದಲ್ಲಿಯೇ ಇಂತಹವುಗಳಿಗೆಲ್ಲಾ identify ಮಾಡಿ ಅವರಿಗೆ ಅದರಲ್ಲಿ 25% ರಷ್ಟನ್ನು ಕೊಡಬೇಕು ಎಂದು ತಿಳಿಸಲಾಗಿದೆ. ಇದು ಯಾವ ರೀತಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಇವತ್ತು ನಮ್ಮ ರಾಜ್ಯದಲ್ಲಿ ಸಾಕಷ್ಟು ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳ ಕಾಮಗಾರಿಗಳು ನಡೆಯುತ್ತಿವೆ. ನಾನು ನಮ್ಮ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಈ ವಿಚಾರವನ್ನು expose ಮಾಡುತ್ತಿದ್ದೇನೆ. ಇವತ್ತು ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 3 ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿಗಳು ನಡೆಯುತ್ತಿವೆ. ಹೊಸಪೇಟೆ-ಚಿತ್ರದುರ್ಗ, Hospet border 3000 ಕೋಟಿ ರೂಪಾಯಿಗಳ ವೆಚ್ಚದಲ್ಲಿ NH-63 ಕಾಮಗಾರಿಗಳು ನಡೆಯುತ್ತಿವೆ. 157 ಎಂದು ಜಡಚರ್ಲ-ಹಗರಿ ರಸ್ತೆ ಕಾಮಗಾರಿಯೊಂದು ನಡೆಯುತ್ತಿದೆ. ಇಲ್ಲಿ murram ಈ ಮೊದಲು ಕಂಟ್ರೋಲ್‌ನಲ್ಲಿರಲಿಲ್ಲ. murram ಎಲ್ಲಿತ್ತು ಎಂದರೆ, ಎಲ್ಲಿಯಾದರೂ ಒಂದು murram ನ ಗುಡ್ಡ ಇದ್ದರೆ ಅದನ್ನು ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳಲು ಜಿಲ್ಲಾಧಿಕಾರಿ ಅಥವಾ ತಹಸೀಲ್ದಾರ್ ಅವರೇ ಅದಕ್ಕೆ ಪರ್ಮಿಷನ್ ಕೊಡುತ್ತಿದ್ದರು, ಕಂಟ್ರಾಕ್ಟರ್‌ಗಳು ಅದನ್ನು ತಂದು ರಸ್ತೆಗೆ ಹಾಕಿ ಕಾಮಗಾರಿಗಳನ್ನು ಮುಗಿಸುತ್ತಿದ್ದರು. murram ನ್ನು ಯಾರೂ ಸಂಗ್ರಹ ಮಾಡಿಟ್ಟುಕೊಳ್ಳುವುದಿಲ್ಲ. ಮರಳನ್ನು ಸಂಗ್ರಹ ಮಾಡಿಟ್ಟರೆ ಅದು ಬೇರೆ ಬೇರೆ ಕಾಮಗಾರಿಗಳಿಗೆ ಉಪಯೋಗಕ್ಕೆ ಬರುತ್ತದೆ. ಆದರೆ murram ರಸ್ತೆ ಕಾಮಗಾರಿಗೆ ಬಿಟ್ಟರೆ ಬೇರೆ ಉಪಯೋಗಕ್ಕೆ ಬರುವುದಿಲ್ಲ. ಈ murram ನ್ನು gravel pitching

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ ನಂತರ mettling ಮಾಡಿ, ಅದರ ಮೇಲೆ gravelling ಮಾಡಿದ ನಂತರ ರಸ್ತೆಗೆ ಡಾಂಬರನ್ನು ಹಾಕಲಾಗುತ್ತದೆ. ಈ ಪಾಲಿಸಿಯನ್ನು ಇವರು minor minerals ಗೆ ತಂದು ಖಾಸಗಿ ಜಾಗವಾಗಿದ್ದರೂ ಅಲ್ಲಿ ಬಾವಿ ತೋಡುವುದಿದ್ದರೆ ಅದಕ್ಕೂ permission ತೆಗೆದುಕೊಳ್ಳಬೇಕು ಎಂದು ಮಾಡಿದರು. ಇಷ್ಟೆಲ್ಲಾ ಆಯಿತು.

*(34) 07.02.2017 ಕೆಹೆಚ್/ಜಿಆರ್ 7.20*

**ಶ್ರೀ ಕೆ.ಸಿ.ಕೊಂಡಯ್ಯ** ಮುಂದು. The first paragraph of the Circular dated 26.12.2016, quoting Rule 3A of the Karnataka Minor Minerals Concession (Amendment) Rules, 2016, reads thus:

"(a) the digging of wells for water and digging of earth for foundation of building and disposal of the minor mineral extracted thereof; and

(b) removal of minor mineral from the agricultural field for bonafide use and / or for betterment of the agricultural land by the occupant himself subject to the certification by the Agriculture Department to that effect and subject to the condition that such activity shall not render the land less fit for cultivation than before and also subject to the condition that the mineral as removed in a manner that does not pose danger to the neighboring areas"

ಇದನ್ನು ತಂದರು. ಮುಂದುವರೆದಂತೆ, ಸದರಿ ಸುತ್ತೋಲೆಯಲ್ಲಿ ಈ ರೀತಿ ಹೇಳಿದ್ದಾರೆ:

"ಉಪವಾಕ್ಯ (ಬಿ)ಗೆ ಸಂಬಂಧಿಸಿದಂತೆ ಪಟ್ಟಾ ಜಮೀನನ ಮಾಲೀಕರು ಗಣಿ ಚಟುವಟಿಕೆ ನಡೆಸಿ, ಉಪಖನಿಜವನ್ನು ತೆಗೆಯುವ ಮುನ್ನ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರಿಂದ ಕಾರ್ಯಾನುಮತಿಯನ್ನು ಪಡೆಯಬೇಕಾಗಿರುತ್ತದೆ.

ಪಟ್ಟ ಜಮೀನಿನ ಸುಧಾರಣೆ ಸಂಬಂಧ ಕಾರ್ಯಾನುಮತಿ ಪಡೆದ ಪಟ್ಟಾ ಜಮೀನಿನ ಮಾಲೀಕರು ಷೆಡ್ಯೂಲ್–IIರಲ್ಲಿ ನಿಗದಿಪಡಿಸಿರುವ ರಾಜಧನ ಮತ್ತು ಸರಾಸರಿ ಹೆಚ್ಚುವರಿ ನಿಯತಕಾಲಿಕ ಸಂದಾಯದ ಮೊತ್ತ ಪಾವತಿಸಿ ಖನಿಜ ಸಾಗಾಣಿಕೆ ಪರವಾನಿಗೆಯೊಂದಿಗೆ ಉಪಖನಿಜ ಸಾಗಾಣಿಕೆ ಮಾಡಿ ಮಾರಾಟ ಮಾಡಲು ಅವಕಾಶ ಕಲ್ಪಿಸಿದೆ.

ಕೆಲವು ಜಿಲ್ಲಾ ಕಛೇರಿಗಳ ವ್ಯಾಪ್ತಿಯಲ್ಲಿ ಈ ನಿಯಮಗಳನ್ನು ಸರಿಯಾದ ರೀತಿ ವ್ಯಾಖ್ಯಾನಿಸದೆ, ತಪ್ಪಾಗಿ ಅರ್ಥೈಸಿಕೊಂಡು ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

> ನಡೆಸಲು ಕಾರ್ಯಾನುಮತಿ ನೀಡುತ್ತಿರುವುದು ಕಂಡುಬಂದಿದೆ. ಇದು ನಿಯಮಗಳಿಗೆ ವಿರುದ್ಧವಾಗಿರುತ್ತದೆ.
>
> ಆದ್ದರಿಂದ ಇನ್ನು ಮುಂದೆ ಕೆ.ಎಂ.ಎಂ.ಸಿ.ಆರ್-1994ರ ತಿದ್ದುಪಡಿ-2016ರ ನಿಯಮ 3(ಎ) ರಡಿ ಗಣಿಗಾರಿಕೆಗೆ ಕಾರ್ಯಾನುಮತಿ ನೀಡುವ ಮುನ್ನ ಅಗತ್ಯ ದಾಖಲಾತಿಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸಿ ಕೇಂದ್ರ ಕಛೇರಿಯ ಸಹಮತಿ ಪಡೆದ ನಂತರವೇ ನಿಯಮಾನುಸಾರ ಗಣಿಗಾರಿಕೆ ನಡೆಸಲು ಅವಕಾಶ ಕಲ್ಪಿಸಲು ಸೂಚಿಸಿದೆ. ಕೇಂದ್ರ ಕಛೇರಿ ಅನುಮತಿ ಪಡೆಯದೇ ಗಣಿಗಾರಿಕೆಗೆ ಕಾರ್ಯಾನುಮತಿ ನೀಡಿದ್ದಲ್ಲಿ ಸಂಬಂಧಪಟ್ಟ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರನ್ನು ನೇರ ಹೊಣೆಗಾರರನ್ನಾಗಿಸಿ ಸಿಸಿಎ ನಿಯಮಗಳ ಪ್ರಕಾರ ಶಿಸ್ತು ಕ್ರಮ ಜರುಗಿಸಲಾಗುವುದು."

ಅಂದರೆ, ರಸ್ತೆಯ ಕಾಮಗಾರಿ ಕೆಲಸ ಇದ್ದಲ್ಲಿ, ಯಾವುದಾದರೂ ಊರು 10-12 ಕಿಲೋ ಮೀಟರ್ ದೂರದಲ್ಲಿದ್ದು, ಅಲ್ಲಿ ಗ್ರಾವೆಲ್ ಗುಡ್ಡ ಇದ್ದರೆ ಅನುಮತಿ ಕೊಡುತ್ತಿದ್ದರು. ಅನುಮತಿಯನ್ನು ತೆಗೆದುಕೊಂಡ ನಂತರ ಅವರು ರಸ್ತೆಯನ್ನು ಪೂರ್ಣಗೊಳಿಸುತ್ತಿದ್ದರು. ಆ ಹೊಲದಲ್ಲಿ 2-3 ಅಡಿ ಒಳಗಡೆ ಗ್ರಾವೆಲ್ ಇದ್ದರೆ, ಆ ಹೊಲದ ಮಾಲೀಕನಿಗೆ ಹಣವನ್ನು ಕೊಟ್ಟು, ಅವನು 3-4 ಅಡಿ ತೆಗೆದುಕೊಟ್ಟ ಮೇಲೆ ಆ ಗ್ರಾವೆಲ್‌ನ್ನು ಉಪಯೋಗ ಮಾಡುತ್ತಿದ್ದರು. ಉದಾಹರಣೆಗೆ, ಗದಗ ಜಿಲ್ಲೆಯ ಜಡಚರ್ಲ ರಾಷ್ಟ್ರೀಯ ಹೆದ್ದಾರಿ-157 ರಲ್ಲಿ ರಸ್ತೆಯ ಉದ್ದಕ್ಕೂ ಕೂಡ ಕರಿಮಣ್ಣಿನ ಹೊಲಗಳಿವೆ. ಅಲ್ಲಿ ನಾಲ್ಕು ಅಡಿ ತೆಗೆದರೆ ಗ್ರಾವೆಲ್ ಬರುತ್ತದೆ. ಈ ಗುತ್ತಿಗೆದಾರನು 6-7 ಅಡಿ ಗ್ರಾವೆಲ್ ತೆಗೆದಿರುವ ವಿಷಯ ಕೇಳಿ ರೈತರು ಬಹಳ ಖುಷಿ ಪಟ್ಟರು. ಕೃಷಿ ಹೊಂಡ ತೆಗೆಯಬೇಕಾದರೆ ಒಂದು ಲಕ್ಷದಿಂದ ಒಂದೂವರೆ ಲಕ್ಷವಾಗುತ್ತದೆ. ನಮ್ಮ ಹೊಲದಲ್ಲಿರುವ ಗ್ರಾವೆಲ್ ಅನ್ನು ಕೊಡುತ್ತೇವೆ. ರಸ್ತೆಗೆ ಬಳಸಿಕೊಂಡರೆ ಕೃಷಿ ಹೊಂಡವಾಗುತ್ತದೆ ಎಂದು ಹೇಳಿದರು. ನಿಮ್ಮ ಅನುಮತಿ ಪ್ರಕಾರ ಆ ಹೊಲದವನು ಒಂದು ಎಕರೆ ಜಾಗದಲ್ಲಿ ಗ್ರಾವೆಲ್ ತೆಗೆಯಲು Karnataka Minor Mineral Concession Rules ಅಡಿಯಲ್ಲಿ ಆಪ್ಲಿಕೇಷನ್ ಕೊಡಬೇಕು. ಮೈನಿಂಗ್ ಪ್ಲ್ಯಾನ್ ಕೊಡಬೇಕು. ಅವನು ಉಪ ನಿರ್ದೇಶಕರ ಕಛೇರಿಗೆ ಹೋಗಬೇಕು. ಅಲ್ಲಿ ಪಾಸ್ ಆದ ಮೇಲೆ ಕೇಂದ್ರ ಕಛೇರಿಗೆ ಬರಬೇಕು. ನೀವು discretionary power ಯಾರಿಗೂ ಕೊಟ್ಟಿಲ್ಲ. District Task Force Committee ಮಾಡಿದ್ದೀರಿ. ಆ ಕಮಿಟಿಯಲ್ಲಿ ಜಿಲ್ಲಾಧಿಕಾರಿಗಳನ್ನು ಸಹ ಸದಸ್ಯರನ್ನಾಗಿ ಮಾಡಿದ್ದೀರಿ. ಆದರೆ ಅದರಲ್ಲಿ ಎಂ.ಎಲ್.ಎ., ಆಗಲಿ, ಯಾವ ಅಧಿಕಾರಿಗಳು ಸಹ ಇಲ್ಲ. ತಿಂಗಳಿಗೊಂದು ಮೀಟಿಂಗ್ ಆಗುತ್ತದೆ. ಆ ಮೀಟಿಂಗ್‌ನಲ್ಲಿ ಚರ್ಚೆಯಾದ ಮೇಲೆ ಒಂದು ಎಕರೆಯದು ನಿಮಗೆ ಬರಬೇಕಾ? ಇವತ್ತು ರಸ್ತೆಗಳಿಗೆ ರೂ.300.00 ಕೋಟಿ ಮಂಜೂರಾಗಿದೆ. ಕಟ್ಟಡಗಳು ನಿಂತು ಹೋಗಿವೆ. ಇದರಲ್ಲಿ ಏನು ಅನಾಹುತವಾಗಿದೆ ಎಂದರೆ ಗುತ್ತಿಗೆದಾರರು ಮತ್ತು ರೈತರು ಕಲೆತು ಕೆಲಸ ಮಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

RTI activists ಬಂದು "ಗುತ್ತಿಗೆದಾರರು ಮಾಡುತ್ತಿದ್ದಾರೆ. ಕರಿಕಲ್ಲು ಹತ್ತಿರ ಗ್ರಾವೆಲ್ ತೆಗೆದುಬಿಟ್ಟಿದ್ದಾನೆ, ಇದಕ್ಕೆ ಅನುಮತಿಯನ್ನು ತೆಗೆದುಕೊಂಡಿದ್ದಾನಾ?" ಎಂದು ಕಛೇರಿಯ ಹತ್ತಿರ ಹೋಗಿ ಏಕೆ ನೀವು ಕೊಟ್ಟಿಲ್ಲವೆಂದು ಗಲಾಟೆ ಮಾಡುವುದಕ್ಕೆ ಹೋಗುತ್ತಾನೆ. Press ಗೂ ಸಹ ಹೋಗುತ್ತಾರೆ. ಗುತ್ತಿಗೆದಾರರಾದರೆ ಬೆಳಗಾವಿಯಲ್ಲಿ ಒಂದು ಗಂಟೆಗೆ ಗ್ರಾವೆಲ್ ಹೊಡೆಯುತ್ತಿದ್ದರು. ಯಾರೋ ದೂರು ಕೊಟ್ಟಾಗ ಎ.ಸಿ., ಹೋಗಿ ಏಳು ಲಾರಿಗಳನ್ನು ವಶಪಡಿಸಿಕೊಂಡು, ಅವನ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಿದರು. ಏಕೆಂದರೆ ಇದು ನಿಮ್ಮ ಅಧಿಕಾರಿಗಳು ಏನು ಮಾಡುತ್ತಾರೆ ಎನ್ನುವುದನ್ನು ತೋರಿಸುತ್ತದೆ. ನಮಗೆ ಮಾಹಿತಿ ಬಂದರೂ ಸಹ ಪ್ರಕರಣ ದಾಖಲಿಸಲಿಲ್ಲ ಅಂದರೆ ನಮ್ಮ ಮೇಲೆ ಸಿಸಿಐ ನಿಯಮ ಹಾಕುತ್ತಾರೆ. 2016 ರ ಮೊದಲು Karnataka Minor Mineral Concession Rules ಅಡಿಯಲ್ಲಿ rider ಏನೂ ಇರಲಿಲ್ಲ. ಅಗತ್ಯ ಇದ್ದರೆ ಮಾಡಿಕೊಳ್ಳುತ್ತಿದ್ದರು. ಇವತ್ತಿನ ದಿವಸ ಸರ್ಕಾರಿ ಗುಡ್ಡದಲ್ಲಿರುವ ಗ್ರಾವೆಲ್‌ಗಳನ್ನು ಹೊಡೆಯಬೇಕೆನ್ನಿಸಿದರೂ ಕೂಡ ಹೊಡೆಯುವುದಕ್ಕೆ ಆಗುತ್ತಿಲ್ಲ. ನಮ್ಮ ಜಿಲ್ಲಾಧಿಕಾರಿಗಳು ಇದ್ದಾಗ ಸುಮಾರು 20 ಜನ Contractors ಅಂದರೆ Municipality Contractors, Highway Contractors, Railway Contractors ಇವರುಗಳನ್ನು ಕರೆದುಕೊಂಡು ಹೋಗಿ ಕೂರಿಸಿದೆ. ಆಗ, ಎ.ಸಿ., ಅವರು ಒಂದೊಂದು ಕಾನೂನಿನ ಅಂಶಗಳನ್ನು ಅಂಡರ್‌ಲೈನ್ ಮಾಡಿ ತೋರಿಸಿದರು. ನೀವೆ ಹೇಳಿ ಕಾನೂನು ಹೀಗೆ ಇದ್ದಾಗ ನಾವು ಏನು ಮಾಡುವುದಕ್ಕೆ ಬರುತ್ತದೆ ಎಂದರು. Discretionary powers ಇಲ್ಲ. ಒಂದು ವೇಳೆ ಸ್ಟೇಟ್ ಗೌರ್ನಮೆಂಟ್‌ನವರು ಕೆಲಸಗಳನ್ನು ನಡೆಸುತ್ತಾರೋ, ಇಲ್ಲವೋ ಗೊತ್ತಿಲ್ಲ. ಅನುಮತಿ ಕೊಡುವುದಿಲ್ಲ.

ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಈ ತಕ್ಷಣ ಯಾವ ರೀತಿ 2016 ರ ಮುಂಚೆ ಇತ್ತು, ಈಗ ಒಂದು ಸಂತೋಷದ ವಿಷಯ ಹೇಳಿದರು. ಸ್ಯಾಂಡ್‌ನಿಂದ ಅಭಾವ ಇತ್ತು. ಎಂ-ಸ್ಯಾಂಡ್ ಅವು ಇವು ಎಲ್ಲ ಸೇರಿಕೊಂಡು ಒಂದು ಕಂಟ್ರೋಲ್‌ಗೆ ಬಂದಿದೆ. ಈ ಬೇಡಿಕೆಯನ್ನು ಅರ್ಥ ಮಾಡಿಕೊಂಡು ನಿರ್ದೇಶಕರು, ಮೈನ್ಸ್ ರವರು ವಿನಾಯಿತಿ ಕೊಟ್ಟರು. ಒಂದು-ಎರಡು ತಿಂಗಳೊಳಗೆ ಸ್ಯಾಂಡಿನ ಬಗ್ಗೆ ಏನಾದರೂ ವಿನಾಯಿತಿ ಕೊಡಬಹುದು. ಮೊರಮ್‌ನಿಂದ ಇವತ್ತಿನವರೆಗೆ ಈ ಕಷ್ಟವಿರುತ್ತದೆ. ಮೊರಮ್ ಎನ್ನುವುದು ರಸ್ತೆಗೆ ಬಿಟ್ಟು ಬೇರೆ ಯಾವುದಕ್ಕೂ ಬಳಸುವುದಿಲ್ಲ. ಮನೆಗಳ ಬುನಾದಿಗೆ ಉದ್ದ ಮೂರು-ನಾಲ್ಕು ಅಡಿ ಇದ್ದರೆ ತುಂಬುತ್ತಾರೆ. ಇದಕ್ಕೆ Karnataka Minor Mineral Concession Rules ಅಡಿಯಲ್ಲಿ ಏಕೆ ತಂದಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ. ಒಂದು ಎಕರೆ ಜಮೀನಿಗೆ Karnataka Minor Mineral Concession Rules ಕೆಳಗಡೆ ಅಪ್ಲಿಕೇಷನ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕುವುದಕ್ಕೆ ಬರುತ್ತದೆಯೆ? ಗುತ್ತಿಗೆದಾರರು ಆ ಹೊಲದಲ್ಲಿ ತರುವವನು ಇದ್ದರೆ ಅವನು ಅಪ್ಲಿಕೇಷನ್ ತೆಗೆದುಕೊಂಡು ಕೊಟ್ಟರೆ ಆ ಹೊಲದವನು ಬೇಡ ಸರ್ ನಾನು ಸಹಿ ಮಾಡುವುದಿಲ್ಲ. ನನಗೆ ಬೇಕಾಗಿಲ್ಲ ಎಂದು ಹೇಳುತ್ತಾನೆ. ಅವನ ಹೊಲದಲ್ಲಿ ಮೊರಮ್ ತೆಗೆಯುವುದಕ್ಕೆ ಕೃಷಿ ಅಧಿಕಾರಿ ದೃಢಪಡಿಸಬೇಕು. ನಮ್ಮಲ್ಲಿ ಇಬ್ಬರು-ಮೂವರು ರೈತರು ಇದ್ದಾರೆ. ನಮ್ಮ ಹೊಲಕ್ಕೆ ಬನ್ನಿ ಸರ್, ನಾವು ಗ್ರಾವೆಲ್ ಕೊಡುತ್ತೇವೆ. ಇದು ನನಗೆ ಸಂಬಂಧಪಡುವುದಿಲ್ಲ. ನನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾನೆ. ಮಂತ್ರಿಗಳೇ, ಇದನ್ನು ಯಾವ ರೀತಿ ಮಾಡಬೇಕು. ಜಿಲ್ಲಾ ಮಟ್ಟದಲ್ಲಿ District Task Force Committees ಮಾಡಿದ್ದೀರಿ. ಆ ಕಮಿಟಿಗಳಿಗೆ ಮೈನರ್ ಮಿನರಲ್ಸ್‌ನ ಬಗ್ಗೆ ಚರ್ಚೆ ಮಾಡಿ recommend ಮಾಡುವ ಅಧಿಕಾರವನ್ನು ಕೊಟ್ಟಿದ್ದೀರಿ. ಇನ್ನು ಮುಂದೆ ಕನಿಷ್ಠ 5 ಎಕರೆಗಳು ಮೊರಮ್ ಆಗಲಿ, ಸ್ಯಾಂಡ್ ಆಗಲಿ, ತಾವು ತಕ್ಷಣದಿಂದ ವಿನಾಯಿತಿ ಮಾಡಿದಲ್ಲಿ, Task Force Committees ತೀರ್ಮಾನ ಮಾಡುತ್ತಾರೆ. ನಿಯಮ 3(ಬಿ) ಎಂಬುದು ಸರ್ಕಾರದ ಕೆಲಸಗಳಿಗೆ ವಿನಾಯಿತಿ ನೀಡುವುದು. ನಿಮ್ಮ ಕೆಲಸಗಳಿಗೆ ಪ್ರಧಾನ ಕಾರ್ಯದರ್ಶಿ, ಪಿ.ಡಬ್ಲ್ಯೂ.ಡಿ., ಇವರು ನಮ್ಮ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯುತ್ತಾನೆ. ರಾಷ್ಟ್ರೀಯ ಹೆದ್ದಾರಿಗಳ ಕೆಲಸಗಳು ನಿಂತು ಹೋಗಿವೆ. ಇದರ ಬಗ್ಗೆ ಏನು ಮಾಡುತ್ತೀರಿ ಎಂದು ಪತ್ರವನ್ನು ಬರೆಯುತ್ತಾರೆ. ಅವರ ಪತ್ರದಲ್ಲಿ ಈ ರೀತಿ ಹೇಳಿದ್ದಾರೆ:-

> "It is brought to your notice that as per the C & I Notification No.C418/2015-16, under the Karnataka Minor Minerals Concession Rules, there is a special provision for minor minerals required for the National and State Highways, Major Irrigation works and Railways. In the said Rule 3(B), the District Task Force may after obtaining the approval of the State Government......"

ಈ ಕ್ಲಾಸ್ ಇರುವುದರಿಂದ ಪ್ರತಿಯೊಂದು ನಿಮ್ಮ ಹತ್ತಿರ ಬಂದಾಗ ಕೆಲಸಗಳು ಎಲ್ಲಿಯಾಗುತ್ತದೆ? ಎಲ್ಲಾ ಕೆಲಸಗಳು standstill ಆಗುತ್ತವೆ. ನಮ್ಮ ಜಿಲ್ಲೆಯಲ್ಲಿ ಒಂದು ಕೆಲಸ ನಡೆಯುತ್ತಿಲ್ಲ. ಕರ್ನಾಟಕ ರಕ್ಷಣಾ ವೇದಿಕೆ, ಆ ರಕ್ಷಣಾ ವೇದಿಕೆ, ಆ ಹಳ್ಳಿಗಳಿಗೆ ಹೋಗುವುದು, ಗುತ್ತಿಗೆದಾರರ ಮೇಲೆ ಪ್ರಕರಣ ದಾಖಲಿಸುವುದು ಇವರುಗಳದೇ ಕಾಟ ಜಾಸ್ತಿಯಾಗಿದೆ. ರಾತ್ರಿ ಒಂದು ಗಂಟೆಗೆ ಏಳು ಟಿಪ್ಪರ್‌ಗಳನ್ನು ವಶಪಡಿಸಿಕೊಂಡು ಬೆಳಿಗ್ಗೆಯೇ ಪ್ರಕರಣವನ್ನು ದಾಖಲಿಸಿದರು. ಮಾಲೀಕ ಬೆಂಗಳೂರಿಗೆ ಬಂದು ಜಾಮೀನು ತೆಗೆದುಕೊಂಡು ಬಂದರು. ಒಂದು ಟಿಪ್ಪರ್‌ಗೆ ರೂ.2.00 ಲಕ್ಷ ದಂಡ ವಿಧಿಸಿದರು. ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ನಿಮ್ಮ ಕೆಲಸ ಮಾಡುತ್ತಾನೆ. ಸರ್ಕಾರಿ ಕೆಲಸ ಮಾಡುತ್ತಾನೆ ಎಂದು ಹೇಳಿದಾಗ ಐವತ್ತು ಸಾವಿರ ರೂಪಾಯಿಗಳು ದಂಡ ವಿಧಿಸಿದರು. ಜಿಲ್ಲಾಧಿಕಾರಿಗಳು ಹೇಳಿದರು: "ಸಾರ್, ರೂ.2.00 ಲಕ್ಷ ರೂಪಾಯಿಯಿಂದ I have given concession,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

fixing the fine amount to Rs.50,000/-" ದೊಡ್ಡ ಬಹುಮಾನ ಕೊಟ್ಟಂತೆ ಆಯಿತು. ಇದು ಅವಶ್ಯಕತೆ ಇದೆಯಾ? ಇನ್ನು ಎಲ್ಲಿ ಪ್ರಗತಿ ನಡೆಯುತ್ತದೆ? ಪ್ರಗತಿ ನಡೆಯುವುದಿಲ್ಲ. ಆದ್ದರಿಂದ ನಾನು ಇದನ್ನು ತಂದಿದ್ದೇನೆ. ತಕ್ಷಣ ತಾವು ವಿನಾಯಿತಿ ಕೊಟ್ಟು ಮೊರಮ್ ಸಂಬಂಧ 5 ಎಕರೆಯನ್ನು Task Force Committees ಗಳಿಗೆ ಕೊಟ್ಟರೆ ಕೆಲಸಗಳು ಆಗುತ್ತದೆ. ಇದು ತಕ್ಷಣ ಮಾಡಬೇಕೆಂಬುದು ನನ್ನ ಬೇಡಿಕೆ. ಮೂರನೆಯದು quarries ಬಗ್ಗೆ ಯಾವುದು ಇಲ್ಲ ಎಂದು ಹೇಳಿದ್ದೀರಿ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ quarries ಗುಡ್ಡಗಳು ಎಲ್ಲಿ ಇರುತ್ತದೆ? ಸರ್ಕಾರಿ ಗುಡ್ಡ ಇರುತ್ತದೆ. ಸರ್ಕಾರಿ ಗುಡ್ಡಗಳನ್ನು ರೆವಿನ್ಯೂ ಇಲಾಖೆಯವರು ಲೀಸ್‌ಗೆ ಕೊಡುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಲ್ಲಾದರೂ ಗುಡ್ಡಗಳು ಉಳಿದಿವೆಯೆ?

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಗುಡ್ಡಗಳು ಉಳಿದಿದೆ. ಆ ಗುಡ್ಡಗಳ ಮೇಲೆ iron ore ಗುಡ್ಡಗಳು ಎಲ್ಲ ಹೋದವು. Iron ore ಗುಡ್ಡಗಳನ್ನು ಲೂಟಿ ಮಾಡುವಾಗ ಬಿಟ್ಟರು, ಈಗ ಮೊರಮ್‌ಗೆ ತಂದು ಇಟ್ಟಿದ್ದಾರೆ. ಜಲ್ಲಿಗೆ ಸಂಬಂಧಪಟ್ಟಂತೆ ಎಲ್ಲ ಗುಡ್ಡದಲ್ಲಿ ಇರುತ್ತವೆ. ಇವು ಕಂದಾಯ ಇಲಾಖೆಯ ಅಧೀನದಲ್ಲಿ ಇರುವುದರಿಂದ ಅವರು ಲೀಸ್ ಕೊಡುತ್ತಾರೆ. ಗುಡ್ಡದ ಕೆಳಗಡೆ ಕ್ರಷರ್ ಹಾಕಿಕೊಂಡು ಮಾಡುತ್ತಾನೆ. ಇನ್ನು ನಮ್ಮಲ್ಲಿ ವಿಚಿತ್ರ ಏನಾಗಿದೆ ಎಂದರೆ ಅನುಮತಿ ಕೊಟ್ಟಿದ್ದರೂ, ಅರಣ್ಯದವರು ಬಂದು ಯಾವುದೇ ಗುಡ್ಡಗಳನ್ನು ತೆಗೆದುಕೊಂಡರೆ 'ಡೀಮ್ಡ್ ಫಾರೆಸ್ಟ್' ಎಂದು ಹೇಳಿದರು.

*(35)/07-02-2017/7-30/RC-GR*

**ಶ್ರೀ ಕೆ.ಸಿ.ಕೊಂಡಯ್ಯ** : ಮುಂದು. ನಮ್ಮಲ್ಲಿರುವಂತಹ 57 ಕ್ರಷರ್ಸ್ ಈಗಾಗಲೇ ಬಂದ್ ಆಗಿವೆ. ಡೀಮ್ಡ್ ಫಾರೆಸ್ಟ್‌ನ ಕ್ಲಾಸಿಫಿಕೇಶನ್ ಏನಿದೆ ಎಂದರೆ, ಗುಡ್ಡ ಇದ್ದು ನೂರು ಮೀಟರ್ ಕೆಳಗಡೆ ಇದ್ದರೆ ಅದನ್ನು ರೆವಿನ್ಯೂ ಲ್ಯಾಂಡ್ ಎಂದು ತಹಶೀಲ್ದಾರ್ ಹೇಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ನಿಮ್ಮ ಬಳ್ಳಾರಿಯಲ್ಲಿರುವುದು ಬಂದ್ ಆಗಿ ನಮ್ಮ ಕಪ್ಪತ್ತ ಗುಡ್ಡಕ್ಕೆ ಬರುತ್ತಿವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಇಲ್ಲಿ ಯಾವ ರೀತಿ ಆಗಿದೆ ಎಂದರೆ, ನಮ್ಮಿಂದ ಹತ್ತು ಕಿಲೋಮೀಟರ್ ದೂರದಲ್ಲಿರುವ ಆಂಧ್ರ ಪ್ರದೇಶದಲ್ಲಿ ಮೊದಲು ಸ್ಟ್ರಿಕ್ಟ್ ಆಗಿ ಮಾಡಿದ್ದರು ಆದರೆ ಈಗ ಸ್ಯಾಂಡ್‌ಗೆ ಇರುವಂತಹ ರಿಲಾಕ್ಸ್ ಏನಿತ್ತು ಅದನ್ನು ತೆಗೆದುಹಾಕಿದರು. ಗ್ರಾವೆಲ್‌ಗೆ ಅಲ್ಲಿ ಪರ್ಮಿಶನ್ ಇಲ್ಲ. ಅಂದರೆ ಗ್ರಾವೆಲ್ ಗುಡ್ಡವಿದ್ದರೆ ಅವರು ಹೊಡೆದುಕೊಳ್ಳಬಹುದು. ಕ್ವಾರಿಗೆ ಸಂಬಂಧಪಟ್ಟಿದ್ದು ನಮ್ಮಲ್ಲಿ ಪಕ್ಕದ ಹತ್ತು ಕಿಲೋಮೀಟರ್ ದೂರದಲ್ಲಿ ಸುಮಾರು 20 ಕ್ವಾರಿಗಳಿವೆ. ದಾವಣಗೆರೆಯಿಂದ ಹುಬ್ಬಳ್ಳಿಯವರೆಗೆ ಇದೆ. ಮೈನರ್ ಮಿನರಲ್ಸ್ ಏನಿದೆ ಇವೆಲ್ಲವೂ ಅಭಿವೃದ್ಧಿಗೆ ಸಂಬಂಧಪಟ್ಟಂತಹ ಮೆಟೀರಿಯಲ್ಸ್. ಆದುದರಿಂದ ತಕ್ಷಣ ಸರ್ಕಾರಕ್ಕೆ ನಾನು ಗಮನ ಸೆಳೆಯುವುದೇನೆಂದರೆ, ಈ ಮೂರು ಐಟೆಂ ಅನ್ನು ರಿಲ್ಯಾಕ್ಸ್ ಮಾಡಿ, ಒಂದು ವೇಳೆ ಮಾನೀಟರ್ ಮಾಡಲೇಬೇಕೆಂದರೆ Task Force ಗೆ discretionary powers ಕೊಡಿ. ಜಿಲ್ಲಾ ಮಟ್ಟದಲ್ಲಿ ಕೊಡಿ. ಈ ಹಿಂದೆ ಇದ್ದಂತಹ ಜಿಲ್ಲಾಧಿಕಾರಿಗಳು ಏನು ಮಾಡುತ್ತಿದ್ದರು ಎಂದರೆ, ಅವರು ಇನ್ಸ್‌ಪೆಕ್ಟ್ ಮಾಡುತ್ತಿದ್ದರು. ಅಂದರೆ ಇಲ್ಲಿ ಒಂದು morrum ಗುಡ್ಡ ಇದೆ ಎಂದು ಹೇಳಿದರೆ, ಯಾವ ರೋಡಿಗೆ ಮಾಡುತ್ತೇವೆಂದು ಹೇಳಿ ಒಂದು ಸರ್ಟಿಫಿಕೇಟ್ ತೆಗೆದುಕೊಂಡು Contractor ತೋರಿಸಿದಮೇಲೆ 'Permitted 50 lorries of gravels to so and so' ಎಂದು on payment of royalty ಮೇಲೆ ಮಾಡುತ್ತಿದ್ದರು. ಇಷ್ಟೆಲ್ಲಾ ಆಗಿದೆ ತಮಗೆ ಏನು ರಾಯಲ್ಟಿ ಬಂದಿದೆ? ಇಲ್ಲಿಯವರೆಗೆ ಏನು ಆದಾಯ ಬಂದಿದೆ? ನಾವು illegal ಗೆ ಸಪೋರ್ಟ್ ಸಪೋರ್ಟ್ ಮಾಡಿದ್ದೇವೆ ಹೊರತು, ಲೀಗಲ್ ಆಗಿ ಯಾರು ಮಾಡುತ್ತಾರೆ ಅವರಿಗೆ ಸಪೋರ್ಟ್ ಸಪೋರ್ಟ್ ಇಲ್ಲ. ಇದರ ಜೊತೆಗೆ RTI Act, ಆಮೇಲೆ ಸಂಘ ಸಂಸ್ಥೆಗಳ ವಿರೋದದಂತಹ ಸಮಸ್ಯೆಗಳಿವೆ. ಆದರೆ ಇವತ್ತು ಈ ವಿಷಯ ನೋಟೀಸ್‌ನಲ್ಲಿ ಬಂದಿರುವುದು ನನಗೆ ಗೊತ್ತಿರಲಿಲ್ಲ. ಇವತ್ತು ಬೆಳಿಗ್ಗೆ ನನಗೆ ಒಂದು ಫೋನ್ ಬಂತು. ಏನೆಂದರೆ, ಅಣ್ಣ ಇವತ್ತು ಯಾರೋ ರಾತ್ರಿ ಬಂದು ಕಂಪ್ಲೀಟ್ ನಿಲ್ಲಿಸಿಬಿಟ್ಟಿದ್ದಾರೆ, ನಿಮ್ಮ D.D., Mines, ಹತ್ತಿರ ಹೋಗಿ ಗಲಾಟೆ ಮಾಡುತ್ತಿದ್ದಾರೆ ಎಂದು ನನಗೆ ಫೋನ್ ಮುಖಾಂತರ ತಿಳಿಸಿದರು. 'ಏನ್ ಸಾರ್' ಅಲ್ಲಿ ಅವರು ಇಟಾಚಿ ಇಟ್ಟು ಗುಂಡಿ ತೋಡುತ್ತಿದ್ದಾರೆ, ನೀವು case ಮಾಡಿಲ್ಲ, ಏಕೆ ಮಾಡಿಲ್ಲ? ಎಂದು ಕೇಳುತ್ತಾರೆ. ಏಕೆಂದರೆ ನೀವು ಒಬ್ಬ ಅಧಿಕಾರಿಗೂ ಸಹ discretionary powers ಕೊಟ್ಟಿಲ್ಲ. ಇವರೇನಾದರು ತಪ್ಪಿತಸ್ಥರಾದರೆ ಅವರ ಮೇಲೆ K.C.S.(CCA) Rules ಪ್ರಕಾರ ಕ್ರಮ ತೆಗೆದುಕೊಳ್ಳಬಹುದು. ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಈ ಮೂರನ್ನು the Karnataka Minor Mineral Concession Rules ನಿಂದ ರಿಲ್ಯಾಕ್ಸ್ ಮಾಡಿ. ಒಂದು ವೇಳೆ Regulatory Authority ಮಾಡಬೇಕೆಂದರೆ Task

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Force Committees ಗಳಿಗೆ ವಹಿಸಿ, ಜನರಿಗೆ ಸುಸೂತ್ರವಾಗಿ ಸರ್ಕಾರಿ ಕೆಲಸಗಳು ಆಗುವಂತೆ ಮಾಡಿ ಎಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಸರ್ಕಾರ ಈ ವಿಷಯದ ಬಗ್ಗೆ ಏನು ಹೇಳುತ್ತದೆ ಕೇಳಿ.

**ಶ್ರೀ ವಿನಯ ಆರ್.ಕುಲಕರ್ಣಿ (ಗಣಿ ಮತ್ತು ಭೂವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಜಲ್ಲಿ ಬಗ್ಗೆ ಮತ್ತು ಮರಳಿನ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಆದರೆ ಕೆಲವೊಂದು ಫಾರೆಸ್ಟ್ ಏರಿಯಾದಲ್ಲಿರುವಂತಹ ಜಲ್ಲಿಗಳಿಗೆ ನಾವು ಏನು ಮಾಡುವುದಕ್ಕೂ ಆಗುವುದಿಲ್ಲ. ಏಕೆಂದರೆ ನಮಗೆ Forest Department clearance ಬೇಕು. ಏಕೆಂದರೆ ನಾವು ರೂಲ್ ಬಿಟ್ಟು ಮಾಡುವುದಕ್ಕೆ ಆಗುವುದಿಲ್ಲ. ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವಂಥವುಗಳಿಗೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಎರಡನೆಯದಾಗಿ, morrum ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ನಾನು ತಕ್ಷಣ ಪರಿಶೀಲನೆ ಮಾಡುತ್ತೇನೆ. ನಾಳೆ ದಿವಸ ಈ ವಿಷಯದ ಬಗ್ಗೆ ನಮ್ಮ ಅಧಿಕಾರಿಗಳೊಂದಿಗೆ ಮೀಟಿಂಗ್ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಹೇಳುವಂತಹ ವಿಷಯವನ್ನು ಈಗಾಗಲೇ ಮಾನ್ಯ ಸಚಿವರ ಗಮನಕ್ಕೂ ಸಹ ತಂದಿದ್ದೇನೆ. ಜಲ್ಲಿ ಕ್ರಷಿಂಗ್‌ನಲ್ಲಿ ಎರಡು ವಿಧವಿದೆ. ಖಾಸಗಿ ವ್ಯಾಪಾರ ಮಾಡುವವರು, ದಂಧೆ ಮಾಡುವವರು ಒಂದು ಕಡೆ, ಸರ್ಕಾರಿ ಕೆಲಸಗಳಿಗಷ್ಟೇ ಬರುವಂತಹ ಕ್ವಾರಿಗಳನ್ನು ನೀವು 'Safer Zone' ಎಂದು ಡಿಕ್ಲೇರ್ ಮಾಡಿದ್ದೀರಿ. ಲೈಸೆನ್ಸ್ ಎಲ್ಲಾ ಕೊಟ್ಟಿದ್ದೀರಿ. ಆದರೆ ನಿಮ್ಮ ಇಲಾಖೆಯಿಂದ ಕೊಡುವಂತಹ ಹಿಂಸೆ ಏನಿದೆ ಅದಕ್ಕೆ ದೊಡ್ಡ ನಮಸ್ಕಾರ ಹೇಳುತ್ತೇನೆ. ಅವರುಗಳು ಲಕ್ಷ ಲಕ್ಷ ರಾಯಲ್ಟಿಯನ್ನು ಪೇ ಮಾಡುತ್ತಾರೆ. ಅವರು ಬಳಸುವಂತಹ ಮೆಟೀರಿಯಲ್ ಏನಿದೆ ಅದು ಸರ್ಕಾರದ ಕೆಲಸಗಳಿಗೆ ಮಾತ್ರ ಬಳಸುತ್ತಾರೆ. ಆದರೆ ಅವರಿಗೂ ನೀವು ಅಷ್ಟೊಂದು ಹಿಂಸೆ ಕೊಟ್ಟರೆ ಅವರು ಹೇಗೆ ಕಾಮಗಾರಿ ಮಾಡುವುದಕ್ಕೆ ಆಗುತ್ತದೆ? ನಾನು ತಮ್ಮ ಗಮನಕ್ಕೂ ಸಹ ತಂದೆ. ಅವರಿಗೆ ಅನಗತ್ಯವಾಗಿ ದಂಡ ಹಾಕಲಾಗುತ್ತಿದೆ. ಇದನ್ನು ನಿಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಗಮನಕ್ಕೂ ಸಹ ತಂದಿದ್ದೇನೆ. ಅವರು ರಸ್ತೆ ಕಾಮಗಾರಿಗೆ ಸರ್ಕಾರದ ಟೆಂಡರ್‌ಗೆ ಬಿಟ್ಟು ಬೇರೆ ಯಾವ ಕಾಮಗಾರಿಗೂ ಸಹ ಬಳಸುವುದಿಲ್ಲ. ಆದರೆ ನಿಮ್ಮ ಇಲಾಖೆಯಿಂದ ಮತ್ತು ಅರಣ್ಯ ಇಲಾಖೆಯಿಂದ ಅವರಿಗೆ ಕೊಡುವಂತಹ ತೊಂದರೆ ಏನಿದೆ ಅದನ್ನು ಸಹಿಸಲು ಅಸಾಧ್ಯ. ಸರ್ಕಾರಿ ಕೆಲಸ ಮಾಡುವವರಿಗೆ ಒಂದು Single Window System ಮಾಡಿ. ಖಾಸಗಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವ್ಯಾಪಾರದವರಿಗೆ ಬೇರೆ ಮಾಡಿ. ಸರ್ಕಾರಿ ಕೆಲಸವನ್ನು ಮಾತ್ರ ಮಾಡುವವರಿಗೆ ಒಂದು Single Window System ಮಾಡಿ renewal ಅನ್ನು immediate ಆಗಿ ಮಾಡಿ. ಲೈಸೆನ್ಸ್ ಕೊಡುವುದಾದರೆ ಕೊಡಿ. 'Safer Zone' ಕೊಟ್ಟಿದ್ದರೆ ಕೊಡಿ. ಅವರಿಗೆ ನಿಮ್ಮ ಇಲಾಖೆಯಿಂದ ಮತ್ತು ಅರಣ್ಯ ಇಲಾಖೆಯಿಂದ ಆಗುವಂತಹ ಹಿಂಸೆಯನ್ನು ದಯಮಾಡಿ ತಪ್ಪಿಸಿ ಎನ್ನುವುದೇ ನನ್ನ ಮನವಿ.

**ಶ್ರೀ ವಿನಯ ಆರ್. ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಯಾವುದೋ ಒಂದು ಕ್ವಾರಿಯಲ್ಲಿ ತೊಂದರೆಯಾಗಿದೆ. ಉಳಿದಂತೆ ಯಾವುದು complaint ಇಲ್ಲ. ಇಡೀ ರಾಜ್ಯಾದ್ಯಂತ ಈ ರೀತಿ ಸರ್ಕಾರಿ ಕೆಲಸಕ್ಕೆ ನಿಯಮ 56ರ ನಿರ್ಬಂಧನೆಯಲ್ಲಿ ಕೊಟ್ಟಿರುತ್ತೇವೆ. ಆ ರೀತಿ ಇವತ್ತಿನವರೆಗೂ ಯಾವುದೇ ದೂರುಗಳು ಬಂದಿಲ್ಲ. ಇವರು ಮೊದಲ complaint ಹೇಳಿದ್ದಾರೆ. ಮಾನ್ಯ ಸದಸ್ಯರು ಕೊಟ್ಟಂತಹ ದೂರನ್ನು ಕಳೆದ ಬಾರಿ ನೋಡಿದ್ದೇನೆ. ಆದರೆ ನನಗೆ ಇವತ್ತಿನವರೆಗೂ ಬಂದಿರುವುದು ಇದೊಂದೆ ಪ್ರಕರಣ. ಉಳಿದುದು ಯಾವುದು ಬಂದಿಲ್ಲ. ಆದರೆ ಸರ್ಕಾರಿ ಕೆಲಸಕ್ಕೆ ಎಲ್ಲಾ ಕಡೆಗಳಲ್ಲಿಯೂ ತಕ್ಷಣ approval ಮಾಡಿ ಕೊಟ್ಟಿರುತ್ತೇವೆ.

**ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮರಳು ಮತ್ತು ಜೆಲ್ಲಿ ಲಭಿಸದೆ ಕರ್ನಾಟಕದಲ್ಲಿ ಬಹಳ ಭಯಾನಕವಾಗಿ ಸಮಸ್ಯೆ ಬೆಳೆಯುತ್ತಿದೆ. ಕಳೆದ ಸಲ ನಾನು ಸದನದಲ್ಲಿ ಇದೇ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೆ. ಅಲ್ಲಿನ ಕೆಲವು ಮಾಫಿಯಾಗಳು ಭೀಮಾ ನದಿಯಲ್ಲಿರುವಂತಹ ಒಂದು ಬ್ಯಾರೇಜಿನ ಗೇಟುಗಳನ್ನೇ ಮುರಿದು ಮರಳು ಸಾಗಾಣಿಕೆ ಮಾಡಿದ್ದಾರೆ. ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ನಾವು ಗಣಿ ಮಾಫಿಯಾ ನೋಡಿದ್ದೇವೆ, ರಿಯಲ್ ಎಸ್ಟೇಟ್ ಮಾಫಿಯಾ ನೋಡಿದ್ದೇವೆ. ಕರ್ನಾಟಕದಲ್ಲಿ ಇದು ಮೂರನೇ ದೊಡ್ಡ ಕ್ಯಾನ್ಸರ್. ಇವತ್ತು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಲಕ್ಷ್ಮೇಶ್ವರ ಪೊಲೀಸ್ ಠಾಣೆಯ ಮೇಲೆ ಮರಳು ಮಾಫಿಯಾ ಅವರೇ ಧಾಳಿ ಮಾಡಿದ್ದಾರೆ. ಈ ರೀತಿ ಮರಳು ಮಾಫಿಯಾ ಬೆಳೆಯುತ್ತಿದೆ. ಮಾನ್ಯ ಕೊಂಡಯ್ಯನವರು ಹೇಳಿದಂತೆ ಇದನ್ನು ಆದಷ್ಟು ಸರಳೀಕರಣ ಮಾಡುವಂತೆ ಮಾಡಬೇಕು. ದಿನಕ್ಕೊಂದು Circular ಮಾಡುತ್ತಾರೆ. ಇವತ್ತು ಬಿಜಾಪುರದಲ್ಲಿ ಗಣಿ ಎಲ್ಲಿದೆ ಎಂದರೆ ಜಿಲ್ಲಾಧಿಕಾಗಳು 25 ಕಿ.ಲೋ ಮೀಟರ್ ದೂರದಲ್ಲಿ ತೋರಿಸುತ್ತಾರೆ. ಈ ರೀತಿ ಆದರೆ ಬಿಜಾಪುರ ನಗರದಲ್ಲಿ ಒಬ್ಬ ಸಾಮಾನ್ಯ ಮನುಷ್ಯ ಮನೆ ಹೇಗೆ ಕಟ್ಟುತ್ತಾನೆ? ಇವತ್ತು ಸಾಕಷ್ಟು ಮನೆಗಳ ನಿರ್ಮಾಣ ಯೋಜನೆ ಬಂದಿವೆ. ಅಂದರೆ ವಾಜಪೇಯಿ ವಸತಿ ಯೋಜನೆ ಈ ರೀತಿ ನಾನಾ ಯೋಜನೆಗಳು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಂದಿವೆ. ಬಡವರು 25 ಕಿಲೋಮೀಟರ್ ದೂರದಿಂದ ಮರಳನ್ನು ತಂದು ಮನೆಯನ್ನು ಕಟ್ಟುವುದಕ್ಕೆ ಸಾಧ್ಯವಿದೆಯೇ? ಇಷ್ಟೇ ಅಲ್ಲದೆ ಮೂರು ತಿಂಗಳಿಗೊಮ್ಮೆ ಡಿ.ಸಿ., ಅವರು ಹಾಗೂ ಗಣಿ ಇಲಾಖೆಯ ಅಧಿಕಾರಿಗಳು ಹೋಗಿ ಗಣಿಗಳನ್ನು ಬಂದ್ ಮಾಡಿ ಬರುತ್ತಾರೆ. ನಿರಂತರವಾಗಿ ಯಾವುದೇ ರೀತಿ ತೊಂದರೆ ಆಗದಂತೆ ದಯವಿಟ್ಟು ಇದನ್ನು ಮಾನ್ಯ ಸಚಿವರು ಗಮನಿಸಬೇಕು. ವಿಶೇಷವಾಗಿ ಮಾನ್ಯ ಗೃಹ ಸಚಿವರಲ್ಲಿ ವಿನಂತಿಸುವುದೇನೆಂದರೆ, ಇಂಥ ಮರಳು ಮಾಫಿಯಾದವರ ಮೇಲೆ ನಿಗಾ ಇಡಬೇಕು. ಏಕೆಂದರೆ, ಇದರಲ್ಲಿ ಪೊಲೀಸ್ ಇಲಾಖೆಯು ಸಹ ಶಾಮೀಲಾಗಿದೆ. ಗಣಿ ಮಾಫಿಯಾದಲ್ಲಿ ಅವರೇ ಪಾಲುದಾರರಾಗಿದ್ದಾರೆ. ನಮ್ಮ ಭೀಮಾ ನದಿಯ ಕಡೆ ಬಂದರೆ ನಿಮಗೆ ಗೊತ್ತಾಗುತ್ತದೆ, ಎಲ್ಲಾ C.P.I., P.S.I., ಗಳು ಸುಮಾರು ಹತ್ತರಿಂದ ಹದಿನೈದು ಲಾರಿಗಳ ಮಾಲೀಕರಿದ್ದಾರೆ. ಹಗಲು ರಾತ್ರಿ ಎನ್ನದೆ ಭೀಮಾ ನದಿಯಲ್ಲಿರುವಂತಹ ಮರಳನ್ನು ತೆಗೆದು ಇಡೀ ಭೀಮಾ ನದಿಯೇ ಖಾಲಿಯಾಗಿದೆ. ಮಹಾರಾಷ್ಟ್ರದವರು ಪೂರ್ಣವಾಗಿ ಖಾಲಿ ಮಾಡಿದ್ದಾರೆ. ಈ ರೀತಿ ಇರುವಾಗ ನೀವು ಏನೇ ನೀತಿ ಮಾಡಿದರು ಅಲ್ಲಿ ಏನೂ ಉಳಿದಿಲ್ಲ. ಆದಕಾರಣ ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, 'ಮರಳು ಮತ್ತು ಜಲ್ಲಿಕಲ್ಲು ಸಮರ್ಪಕವಾಗಿ ಪೂರೈಕೆಯಾಗುತ್ತಿದೆ, ಯಾವುದೇ ಸಮಸ್ಯೆ ಇಲ್ಲ' ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅಧಿಕಾರಿಗಳು ಏನು ಉತ್ತರ ಕೊಟ್ಟಿದ್ದಾರೆ ಅದನ್ನೇ ನೀವು ಹೇಳಿದ್ದೀರಿ ಎಂದು ಕಾಣಿಸುತ್ತಿದೆ. ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಹೇಳುವುದಾದರೆ ಒಂದು ಅಥವಾ ಎರಡು ಕಡೆಗಳಲ್ಲಿ ಬ್ಲಾಕ್ ಮುಖಾಂತರ ತಮ್ಮ ಹಿಂದಿನ ಕಾಯಿದೆ ಪ್ರಕಾರ ಲೋಕೋಪಯೋಗಿ ಇಲಾಖೆಯಿಂದ ಅದನ್ನು ವಿತರಣೆ ಮಾಡುತ್ತಿದ್ದರು. ಆದರೆ ಈಗ ಅಂಕಿ-ಸಂಖ್ಯೆಯನ್ನು ನೋಡಿದರೆ ಎಷ್ಟು ಟನ್ ಮರಳು ಅಲ್ಲಿಗೆ ಹೋಗಿದೆ. ಅದರ ಅರ್ಥ ಅಲ್ಲಿಗೆ ಹೋಗಿಲ್ಲ ಎಂದು ಹೇಳುವುದಾದರೆ ಅಕ್ರಮವಾಗಿ ಇದು ಸಾಗಣಿ ಆಗುತ್ತಿದೆ. ಅಕ್ರಮವಾಗಿ ಆಗಬೇಕಾದರೆ ಪರೋಕ್ಷವಾಗಿ ಸರ್ಕಾರದ ಜಟಿಲ, ಕಠಿಣ ನೀತಿಯಿಂದಾಗಿ ಅಕ್ರಮವಾಗಿ ಹೋಗುತ್ತಿದೆ. ಎಲ್ಲಿ ಅದನ್ನು ಶಾಸನಬದ್ಧವಾಗಿ ತೆಗೆಯುವುದಕ್ಕೆ ಅವಕಾಶ ಇಲ್ಲದೆ ಇದ್ದಾಗ smuggling ಆಗುವುದು ಸ್ವಾಭಾವಿಕ. ಇವತ್ತು ತಾವು license renewal ಮಾಡುವಂತಹ ಸಂದರ್ಭದಲ್ಲಿ ಬಹುಶಃ ನೀವು ಎಷ್ಟು ತಿಂಗಳು ಅಪ್ಲಿಕೇಶನ್ ಇಟ್ಟುಕೊಳ್ಳುತ್ತೀರಿ? 'ಇಟ್ಟುಕೊಳ್ಳುತ್ತೀರಿ' ಎಂದರೆ ಅದರ ಅರ್ಥ ಅಕ್ರಮವಾಗಿ ನಡೆಯುತ್ತಿರುತ್ತದೆ, ಆದರೆ ಇಲ್ಲಿ ಅದು ಪೆಂಡಿಂಗ್ ಇರುತ್ತದೆ. ಆದುದರಿಂದ ಏನು renewal ಆಗಬೇಕಾಗಿದೆ ಅದನ್ನು renewal ಮಾಡುವಂಥದ್ದು, ಮತ್ತು ಮರಳಿನ ಅವಶ್ಯಕತೆ ಎಲ್ಲಿದೆ ಅದನ್ನು ಯಾವ ರೀತಿಯಲ್ಲಿ ಅಂದರೆ ಮೂಲಭೂತವಾದ ಅವಶ್ಯಕತೆಗಳನ್ನು ಪೂರೈಸುವಂಥದ್ದು ಸರ್ಕಾರದ ಜವಾಬ್ದಾರಿ. ಬಹುಶಃ ಸರ್ಕಾರ ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಾದಂತಹ ಜವಾಬ್ದಾರಿಯನ್ನು ಹೊರದೆ, ನಾವು ಇಂತಿಷ್ಟು ಮಾಡಿದ್ದೇವೆ ಎಂದು ಅಂಕಿ–ಸಂಖ್ಯೆ ಕೊಟ್ಟಾಗ ಅದು ಸಾಧನೆಗಳಾಗುವುದಿಲ್ಲ.

**(36) 07-02-2017 ಎಸ್‌ಪಿಆರ್/ಎಂಡಿ 7.40**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಮುಂದು**. ಸಾಧನೆ ಆಗಬೇಕಾದರೆ, ಯಾವ ಜನರಿಗೆ ತಲುಪಬೇಕಾಗಿದೆ, ಆ ಜನರಿಗೆ ತಲುಪಿದರೆ ಮಾತ್ರ ಕಾನೂನು ಕಾಯಿದೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಿಕ್ಕಾಗುತ್ತದೆ. ಇದು ವಾಸ್ತವಾಂಶ. ತಾವು ಬೇಕಾದರೆ ನಮ್ಮ ಜಿಲ್ಲೆಗೆ ಬನ್ನಿ, ಆಗ ನಾವು ಅದನ್ನು ತೋರಿಸುವುದರ ಜೊತೆಗೆ ಅದರ ಬಗ್ಗೆ ಹೇಳುತ್ತೇವೆ. ಯಾವುದೇ ಒಂದು ರೀತಿಯಲ್ಲಿ ಬಹುಶಃ ಇವತ್ತು ತಮ್ಮ ಪ್ರಶ್ನೆ ಬಂದಿದೆಯೋ ಗೊತ್ತಿಲ್ಲ. ಎಲ್ಲಾ ಕಡೆಗಳಲ್ಲೂ ನಿಂತಿದೆ ಎಂದು ತಾವು ಹೇಳಿದ್ದೀರಿ. ನಿಲ್ಲಿಸುವ, ಪ್ರಾರಂಭ ಮಾಡುವ ಪ್ರಕ್ರಿಯೆಗಳು ಏಕೆ? ಆಶ್ರಯ ಮನೆಗಳ ವಿಚಾರ ಬಿಡಿ. ಇವತ್ತಿನ ದಿವಸ ಸದಸ್ಯರು ಕೇಳಿರುವ ಪ್ರಶ್ನೆಯು ಸರ್ಕಾರಿ ಕಟ್ಟಡಗಳಿಗೆ ಮಾತ್ರ . . .

**ಸಭಾಪತಿಯವರು:–** ಇಲ್ಲ ಸದಸ್ಯರು ಸರ್ಕಾರಿ ಹಾಗೂ ಸಾರ್ವಜನಿಕ ಕಟ್ಟಡಗಳು ಎರಡಕ್ಕೂ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲು ಸರ್ಕಾರಿ ಕೆಲಸ ಹಾಗೂ ನಂತರದಲ್ಲಿ ಸಾರ್ವಜನಿಕರ ಸಮಸ್ಯೆಯ ಬಗ್ಗೆಯೂ ಸಹ ಕೇಳಿದ್ದಾರೆ.

**ಶ್ರೀ ವಿನಯ ಆರ್.ಕುಲಕರ್ಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರಾವಳಿ ಪ್ರದೇಶದವರಾಗಿರುವುದರಿಂದ, ಇಡೀ ರಾಜ್ಯದ ಒಂದು ಸಮಸ್ಯೆಯಿದ್ದರೆ, ಕರಾವಳಿ ಪ್ರದೇಶದ್ದೇ ಪ್ರತ್ಯೇಕವಾಗಿ ಒಂದು ಸಮಸ್ಯೆಯಿರುತ್ತದೆ ಎಂಬುದಾಗಿ ಹೇಳಿರುತ್ತಾರೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಬೇರೆ ರಾಜ್ಯದವರೇ?

**ಶ್ರೀ ವಿನಯ ಆರ್.ಕುಲಕರ್ಣಿ:–** ಮಾನ್ಯ ಸಭಾಪತಿಯವರೇ, ತಾವು ಬೇರೆ ರಾಜ್ಯದವರು ಅಂತಲ್ಲ. ಅಲ್ಲಿ CRZ (Coastal Regulation Zone) and Non-CRZ ಗಳಲ್ಲಿ sand bar ಗಳಿರುವುದರಿಂದ, ನಾವು ಮರಳನ್ನು ತೆಗೆಯಲು ಅವಕಾಶ ಕೊಡುತ್ತಿದ್ದೆವು. ಪರಂಪರಾನುಗತವಾಗಿ ಮರಳನ್ನು ತೆಗೆಯುವವರು ಅವರೇ ಮರಳನ್ನು ತೆಗೆಯುತ್ತಾರೆ, ಅವರುಗಳನ್ನು ಬಿಟ್ಟು ಬೇರೆಯವರಿಗೆ ಅವಕಾಶ ಕೊಡಬಾರದು ಎಂಬುದಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದು ಎಲ್ಲಾ ಸದಸ್ಯರ ಒತ್ತಾಯವಾಗಿದೆ. ಆ ರೀತಿಯಲ್ಲಿ ನಾವು open auction ಮಾಡಿ ಅಂದರೆ, ನಾಳೆಯೇ auction ಮಾಡಿಬಿಡುತ್ತೇವೆ. ಆದರೆ, ಪರಂಪರಾನುಗತವಾಗಿ ಮರಳನ್ನು ತೆಗೆದುಕೊಂಡು ಬಂದಿರುವವರಿಗೆ ಅವಕಾಶ ಕೊಡಬೇಕು ಎನ್ನುವ ಕಾರಣಕ್ಕಾಗಿಯೇ auction ನಿಂತು ಹೋಗಿದೆ. ಈ ಸಂಬಂಧ ಈಗಾಗಲೇ ನಮ್ಮ ಸಚಿವ ಸಂಪುಟದ ಉಪ ಸಮಿತಿಯು ರಚನೆಗೊಂಡಿದೆ ಹಾಗೂ ಈ ಸಂಬಂಧ ಮೂರ್ನಾಲ್ಕು ಸಭೆಗಳು ನಡೆದಿವೆ ಹಾಗೂ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ಇನ್ನುಳಿದ ಕಡೆಗಳಲ್ಲಿ ನಾವು ಈಗಾಗಲೇ ಟೆಂಡರ್‌ಗಳನ್ನು ಕರೆದಿದ್ದೇವೆ. ಸದಸ್ಯರು ಕರಾವಳಿ ಪ್ರದೇಶದವರಾಗಿರುವುದರಿಂದ, ಯಾರಿಗೂ ಟೆಂಡರ್‌ನ್ನು ನೀಡಿರುವುದಿಲ್ಲ. ಹೀಗಾಗಿ ಇಡೀ ರಾಜ್ಯದ್ದು ಒಂದು ರೀತಿಯ ಸಮಸ್ಯೆಯಾದರೆ, ಕರಾವಳಿ ಪ್ರದೇಶದ್ದು ಮತ್ತೊಂದು ರೀತಿಯ ಸಮಸ್ಯೆಯಾಗಿದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಮ್ಮದು ಬೇರೆ ಏನೂ ತಕರಾರು ಇಲ್ಲ. ನೀವು ಏನು ಬೇಕಾದರೂ, ಹೇಗೆ ಬೇಕಾದರೂ ಮಾಡಿ, ನಮ್ಮ ಪ್ರಮುಖ ಪ್ರಶ್ನೆ ಏನೆಂದರೆ, ಎಲ್ಲಾ ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದು ಸರ್ಕಾರದ ಜವಾಬ್ದಾರಿ. ಅದನ್ನು ಅವರು ಹೇಗೆ ನಿಭಾಯಿಸುತ್ತಾರೋ ಅದು ಅವರ ಜವಾಬ್ದಾರಿಗೆ ಬಿಟ್ಟ ವಿಚಾರವಾಗಿದೆ. ಪರಂಪರಾನುಗತವಾಗಿ ಮರಳು ತೆಗೆಯುವವರಿಗೆ ಅವಕಾಶ ಕೊಡುತ್ತಾರೋ ಅಥವಾ ಇನ್ನಾರಿಗೋ ಅವಕಾಶ ನೀಡುತ್ತಾರೊ ಅಥವಾ ಬೇರೆ ಏನಾದರೂ ಮಾಡಲಿ, ಆದರೆ ಸರಳವಾಗಿ ಜನರಿಗೆ ಮರಳು ಸಿಗುವಂತಾಗಬೇಕು. ಇವತ್ತು ಮಂಗಳೂರಿನಿಂದ ಮರಳು ಉಡುಪಿ ಜಿಲ್ಲೆಗೆ ಬಂದು, ಕೇರಳ ರಾಜ್ಯಕ್ಕೂ ಸಹ ರವಾನೆಯಾಗುತ್ತದೆ. ನಮ್ಮ ಉಡುಪಿ ಜಿಲ್ಲೆಯಲ್ಲಿ ಮರಳನ್ನು ತೆಗೆಯುವುದಕ್ಕೆ ಅವಕಾಶವಿಲ್ಲ. ರಾತ್ರಿ ಹೊತ್ತಿನಲ್ಲಿ ಮರಳನ್ನು ತೆಗೆಯುತ್ತಾರೆ ಹೊರತು ಹಗಲಿನಲ್ಲಿ ತೆಗೆಯಲು ಅವಕಾಶವಿಲ್ಲ. ನಿಮ್ಮದು ಇದು ಯಾವ ರೀತಿಯ ಕಾಯ್ದೆ? ನಾನು ನಿಮಗೆ ಬೇರೆನೂ ಹೆಚ್ಚು ಹೇಳುವುದಕ್ಕೆ ಬರುವುದಿಲ್ಲ. ಕಾಯ್ದೆ ಯಾವುದೇ ಇರಲಿ, ಜನರಿಗೆ ಮರಳು ಸರಳವಾಗಿ ಸಿಗುವಂತೆ ಮಾಡಿ ಎಂಬುದಾಗಿ ಹೇಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಚಿವರು ಮರಳು ಸಾಕಷ್ಟು ಲಭ್ಯವಿದೆ ಎಂದು ಮಾಡಿರುವ ವಾದವನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಇಂದು ನಮ್ಮ ಜಿಲ್ಲೆಯಲ್ಲಿ ಇದು ಬಹಳ ಜಟಿಲವಾದ ಸಮಸ್ಯೆಯಾಗಿದೆ. ಇವತ್ತಿನ ದಿವಸ ನಮಲ್ಲಿ ಮರಳು ತೆಗೆಯುವ ದಂಧೆ ಎಂದರೆ, ಅದಕ್ಕಿಂತ ದೊಡ್ಡ ದಂಧೆ ಬೇರೋಂದಿಲ್ಲ. Under World, Over World ಎಲ್ಲಾ ಮುಗಿದಿದೆ. ಈಗ ಮರಳನ್ನು ಯಾರು ಸಾಗಣೆ ಮಾಡುತ್ತಾರೆ, ಅವರಿಗೆ ಸಾಕಷ್ಟು ಸಂಪಾದನೆ ಮಾಡುವ ಅವಕಾಶವಿದೆ ಎನ್ನುವುದು ಸ್ಪಷ್ಟವಾಗಿದೆ. ಬಹಳ ಸರಳವಾಗಿ ಹಣ ಬರುತ್ತದೆ. ನಮ್ಮಲ್ಲಿ ಸಾಂಪ್ರದಾಯಿಕವಾಗಿ

ಮರಳು ಹೇಗೆ ತೆಗೆಯುತ್ತಾರೆಂದರೆ, ನದಿಗಳಿಗೆ ದೋಣಿಗಳನ್ನು ತೆಗೆದುಕೊಂಡು ಹೋಗುತ್ತಾರೆ, ನದಿಯಲ್ಲಿ ಮುಳುಗಿ ಬಕೇಟ್ ಮುಖೇನ ಮರಳನ್ನು ತೆಗೆದು ಅದನ್ನು ದೋಣಿಗೆ ತುಂಬಿಸಿ, ಬದಿಗೆ ತರುತ್ತಾರೆ. ನಂತರ ಅಲ್ಲಿಂದ ಲಾರಿಗಳಿಗೆ ಮರಳನ್ನು ತುಂಬಿಸುತ್ತಾರೆ. ಇದು ನಮ್ಮಲ್ಲಿ ಪಾಲಿಸುವಂತಹ ಕ್ರಮವಾಗಿದೆ. ಹಿಂದೆಯೂ ಹೀಗೆ ಇತ್ತು. ಆದರೆ, ಇವತ್ತಿನ ದಿವಸ ನೇರವಾಗಿ ನದಿಗಳಿಗೆ lorry, JCB, bulldozerಗಳನ್ನು ತೆಗೆದುಕೊಂಡು ಹೋಗಿ, ಮರಳನ್ನು ತೆಗೆದು ಲಾರಿಗಳಿಗೆ ನೇರವಾಗಿ ತುಂಬಿಸಿ, ಯಥೇಚ್ಛವಾಗಿ ಮರಳನ್ನು ತೆಗೆದುಕೊಂಡು ಹೋಗುತ್ತಾರೆ. ಸಾಂಪ್ರದಾಯಿಕವಾಗಿ ಮರಳನ್ನು ತೆಗೆಯುವವರು ತಮ್ಮ ಭಾಗ ಎಷ್ಟು ಇದೆ ಎಂದು ಹೇಳಿದರೆ, ಜಿಲ್ಲಾಧಿಕಾರಿಗಳು ಅದಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಮುಖೇನ permit ನೀಡುತ್ತಾರೆ. ಈ ಹಿಂದೆ ಜಿಲ್ಲಾಧಿಕಾರಿಗಳು 500 ಪ್ರಕರಣಗಳಲ್ಲಿ permit ನೀಡಿದ್ದರೆ, ಅ ಪೈಕಿ 300 permit ಗಳು ಸರ್ಕಾರಿ ನೌಕರರಿಗೆ ಅಂದರೆ ಪೊಲೀಸ್ ಹಾಗೂ ಇನ್ನಿತರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ದೊರೆತಿದೆ. ಅವರು ಯಥೇಚ್ಛವಾಗಿ ಮರಳನ್ನು ತೆಗೆಯುತ್ತಾರೆ. ರೂ.500/- ಗಳನ್ನು ಒಬ್ಬ ಪೊಲೀಸ್ ಅಧಿಕಾರಿಗೆ ನೀಡಿದರೆ, ಅವರು ಶಿರಾಡಿ ಘಾಟ್‌ನಿಂದ ಕೆಳಗೆ ಮರಳನ್ನು ತೆಗೆದುಕೊಂಡು ಬಂದು ಎಲ್ಲಿಗೆ ಬೇಕೋ ಅಲ್ಲಿಗೆ ಹಾಕಲು ಅವಕಾಶ ನೀಡುತ್ತಾರೆ. ಇದು ವಾಸ್ತವಾಂಶ. ಈ ಅಂಶವನ್ನು ನಾನು ಈ ಸದನದಲ್ಲಿ ಮಾತ್ರವಲ್ಲ ನಮ್ಮ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಗಳಲ್ಲೂ ಪ್ರಸ್ತಾಪಿಸಿದ್ದೇನೆ. ಅದು ಅವತ್ತಿನ ದಿವಸ ಪೂರ್ಣ ಪ್ರಮಾಣದಲ್ಲಿ ಚರ್ಚೆಯಾಗಿದೆ. ಆದರೂ ಕೂಡ ಇದಕ್ಕೆ ಉತ್ತರ ದೊರೆತಿಲ್ಲ. ಬಡ ಜನರಿಗೆ ಮರಳು ದೊರೆಯುತ್ತಿಲ್ಲ. ಮರಳು ತೆಗೆಯಲು ಮಾಲೀಕರಿಗೆ ತಿಂಗಳೊಂದಕ್ಕೆ 10 permit ನೀಡುತ್ತಾರೆ. ಪರವಾನಿಗೆ ತೆಗೆದುಕೊಂಡಿರುವವರು ಮೊದಲು ಸ್ಯಾಂಡ್‌ಬಾರ್‌ನ್ನು ಗುರುತಿಸಿಕೊಳ್ಳಬೇಕು. ನಂತರ ದೋಣಿ, ಲಾರಿ, ಕೆಲಸಗಾರರನ್ನು ಇಟ್ಟುಕೊಳ್ಳಬೇಕು. ಸ್ಥಳಗಳಲ್ಲಿ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಬೇಕು. ಜಿ.ಪಿ.ಎಸ್. ಯಂತ್ರಗಳನ್ನು ಅಳವಡಿಸಿಕೊಳ್ಳಬೇಕು. ಇಷ್ಟೆಲ್ಲಾ ಸಾಮಗ್ರಿಗಳನ್ನು ಹೊಂದಿರುವವರಿಗೆ ತಿಂಗಳಿಗೆ 10 ಪರವಾನಿಗೆ ನೀಡಿದರೆ, ಅವರುಗಳು 10 ಲೋಡ್ ಮರಳನ್ನು ತೆಗೆದು, ಕೆಲಸಗಾರರನ್ನು ನಿರ್ವಹಿಸಲು, ವಹಿವಾಟು ನಡೆಸಲು ಸಾಧ್ಯವಾಗುತ್ತದೆಯೇ? ನಿಮ್ಮ ನೀತಿಯನ್ನು ಬದಲಾಯಿಸಿ, ಸರಳೀಕರಣಗೊಳಿಸಿ. ಹಾಲಿಯಿರುವ ನೀತಿಯಿಂದ ಇವತ್ತಿನ ದಿವಸ ಶ್ರೀಮಂತರಿಗೆ ಏನೂ ತೊಂದರೆಯಾಗಿಲ್ಲ, ಬಡವರಿಗೆ ಮಾತ್ರ ತೊಂದರೆಯಾಗಿದೆ. ಮನೆ ಕಟ್ಟುವವರಿಗೆ ಮರಳು ಸಿಗುತ್ತಿಲ್ಲ. ಆಶ್ರಯ ಯೋಜನೆಯಡಿ ನೀವು ರೂ. 1,20,000/- ಗಳಲ್ಲಿ ಮನೆಯನ್ನು ನಿರ್ಮಿಸಲು ಹೇಳುತ್ತೀರಿ. ಆ ಮನೆಗಳಿಗೆ ಎಷ್ಟು ಮರಳು ಬೇಕು? ನನ್ನ ಪ್ರಕಾರ ಕನಿಷ್ಠವೆಂದರೂ 25 ಲೋಡ್ ಮರಳು ಬೇಕಾಗುತ್ತದೆ. ಮರಳಿಗಾಗಿಯೇ ಅವರು ರೂ.1,25,000/- ಗಳನ್ನು ಖರ್ಚು ಮಾಡಬೇಕಾಗುತ್ತದೆ. ಈಗ ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಿದ್ದಾಗ ಯಾವ ರೀತಿಯಲ್ಲಿ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲಿಕ್ಕೆ ಸಾಧ್ಯವೇ? ಈ ಸಂಬಂಧ ನಾನು ಹೇಳುವುದೇನೆಂದರೆ, ಮರಳು ತೆಗೆಯುವವರು ಎಷ್ಟು ಪರವಾನಿಗೆಯನ್ನು ಕೇಳುತ್ತಾರೋ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಷ್ಟನ್ನು ಕೊಡಿ. ಆಗ ಅವರು ಎಷ್ಟು ಬೇಡಿಕೆಯಿದೆಯೋ ಅಷ್ಟು ಮರಳನ್ನು ಸಾಗಣೆ ಮಾಡುತ್ತಾರೆ. ಯಾರು ಅಕ್ರಮವಾಗಿ ಮರಳು ತೆಗೆಯುತ್ತಾರೆ, ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ. ಅಕ್ರಮವಾಗಿ ಮರಳು ತೆಗೆಯುತ್ತಿರುವ ಬಗ್ಗೆ ನಿಮಗೆ ದೂರವಾಣಿ ಮುಖೇನ ವಿಚಾರ ತಿಳಿದಾಗ, ಬಿಹಾರ, ಉತ್ತರ ಪ್ರದೇಶ ರಾಜ್ಯಗಳಿಂದ ಬಂದಂತಹ ಮರಳು ತೆಗೆಯುವ ಕೆಲಸಗಾರರು ಅಲ್ಲಿ ಟೆಂಟ್‌ಗಳನ್ನು ಹಾಕಿಕೊಂಡು ಜೀವನ ನಡೆಸಲು ಚಪಾತಿ ಮಾಡುತ್ತಿರುತ್ತಾರೆ. ಅಂತಹವರನ್ನು ಹಿಡಿದುಕೊಂಡು ಬಂದು ಪೊಲೀಸ್ ಠಾಣೆಗೆ ಹಾಕುತ್ತಾರೆ. ಇವರು ನೈಜ ಮಾಲೀಕರನ್ನು ಅಥವಾ ಸ್ಯಾಂಡ್‌ಬಾರ್ ಮಾಲೀಕರುಗಳನ್ನು ದಸ್ತಗಿರಿ ಮಾಡಿರುವ ಪ್ರಸಂಗಗಳಿವೆಯೇ? ಇವರು ದಾಖಲಿಸಿರುವ ಪ್ರಕರಣಗಳು ಕಲಂ 379 ಭಾರತೀಯ ದಂಡ ಸಂಹಿತೆಯಡಿ ಬರುವಂತಹದ್ದು. ನೀವು ನೇರವಾಗಿ ಕೆಲಸಗಾರರನ್ನು ಜೈಲಿಗೆ ಹಾಕುತ್ತೀರಿ. ಅಲ್ಲಿ ಅವರುಗಳು ಚಪಾತಿ ಮಾಡುವುದಕ್ಕಾಗುತ್ತದೆಯೇ? ಈ ರೀತಿಯ ಪರಿಸ್ಥಿತಿಯು ನಮ್ಮ ಜಿಲ್ಲೆಯಲ್ಲಿದೆ. ಆದ್ದರಿಂದ ದಯವಿಟ್ಟು ಇಂತಹ ಪರಿಸ್ಥಿತಿಗಳನ್ನು ಸುಧಾರಿಸುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿನಯ ಆರ್.ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಹೇಳುತ್ತಿರುವ ಅಂಶಗಳು ನಮ್ಮ ಗಮನಕ್ಕೆ ಬಂದಿವೆ. ಜಿಲ್ಲಾಧಿಕಾರಿಗಳ ವಿರುದ್ಧ ದೂರು ನೀಡಿದಂತಹ ಪ್ರಕರಣಗಳಲ್ಲಿ ಈಗಾಗಲೇ ನೀಡಿದ್ದ ಪರವಾನಿಗೆಗಳನ್ನು ನಾವು ಹಿಂದಕ್ಕೆ ಪಡೆದುಕೊಂಡಿದ್ದೇವೆ. ಪರವಾನಿಗೆಗಳನ್ನು ಹಿಂಪಡೆದು ಹರಾಜು ಮಾಡಬೇಕೆಂದು ಅಂದುಕೊಂಡಿದ್ದೆವು. ಹರಾಜು ಮಾಡಲು ನಾವು ಈಗಾಗಲೇ ಯೋಜನೆಗಳನ್ನು ರೂಪಿಸಿಕೊಂಡು ತಯಾರಿ ಮಾಡಿದ್ದೆವು. ಆದರೆ, ನಂತರದ ದಿನಗಳಲ್ಲಿ ಪರಂಪರಾನುಗತವಾಗಿ ಮರಳು ತೆಗೆಯುವವರಿಗೆ ಮಾತ್ರ ಪರವಾನಿಗೆ ನೀಡಬೇಕೆನ್ನುವ ಕಾರಣದಿಂದ ಹರಾಜು ಪ್ರಕ್ರಿಯೆಯು ಸ್ಥಗಿತಗೊಂಡಿತು. ಪರಂಪರಾನುಗತವಾಗಿ ಮರಳು ತೆಗೆಯುವವರಿಗೆ ಪರವಾನಿಗೆ ನೀಡಬೇಕೆನ್ನುವುದು ಕಡ್ಡಾಯವಾಯಿತು. ಇಲ್ಲದಿದ್ದರೆ ಹರಾಜು ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತಿತ್ತು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ನಂತರ ಈ ಸಂಬಂಧ ಸಚಿವ ಸಂಪುಟದ ಉಪ ಸಮಿತಿಯು ರಚನೆಗೊಂಡಿದೆ. ಒಂದು ವಾರದೊಳಗೆ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು ಹಾಗೂ ಆ ನಂತರ ನಿಯಮಾವಳಿಗಳನ್ನು ಸರಳೀಕರಣಗೊಳಿಸಲಾಗುವುದು. ಏಕೆಂದರೆ, ರಾಜ್ಯದಾದ್ಯಂತ ನಿಯಮಗಳನ್ನು ಸರಿಪಡಿಸುವ ವ್ಯವಸ್ಥೆ ಮಾಡಿದ್ದೇವೆ. ಆದರೆ, ಕರಾವಳಿ ಪ್ರದೇಶದಲ್ಲಿ ಮಾತ್ರ ಈ ಸಮಸ್ಯೆಯಿದೆ. ಇದು ನಮ್ಮ ಗಮನಕ್ಕೆ ಬಂದಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಸುಮಾರು ಒಂದು ತಿಂಗಳ ಸಮಯಾವಕಾಶ ಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮರಳು ತೆಗೆಯುವಲ್ಲಿ ಜೆ.ಸಿ.ಬಿ. ಯಂತ್ರಗಳನ್ನು ಉಪಯೋಗಿಸಬಾರದು ಎಂಬ ನಿಯಮವಿದೆಯೇ?

**ಶ್ರೀ ವಿನಯ ಆರ್.ಕುಲಕರ್ಣಿ:-** ಮಾನ್ಯ ಸಭಾಪತಿಯವರೇ, ಕೆಲವೊಂದು ಭಾಗಗಳಲ್ಲಿ ಜೆ.ಸಿ.ಬಿ. ಯಂತ್ರಗಳನ್ನು ಎಷ್ಟು ಬೇಕೋ ಅಷ್ಟರ ಮಟ್ಟಿಗೆ ಉಪಯೋಗಿಸಲು ಅವಕಾಶ ನೀಡಿದ್ದೇವೆ. ಏಕೆಂದರೆ ಕೆಲಸಗಾರರಿಂದ ಎಲ್ಲಾ ಕಡೆಗಳಲ್ಲಿ ಮರಳನ್ನು ತುಂಬುವುದಕ್ಕಾಗುವುದಿಲ್ಲ. ಕೆಲವು ಕಡೆ ಕಾಯ್ದೆಯ ಪ್ರಕಾರ ವಿನಾಯಿತಿಯನ್ನು ನಾವು ನೀಡಿದ್ದೇವೆ. ಕಾಯ್ದೆಯ ಪ್ರಕಾರ ಎಷ್ಟು ಸೀಮಿತವಿದೆಯೋ ಅಲ್ಲಿ ಜೆ.ಸಿ.ಬಿ. ಯಂತ್ರಗಳನ್ನು ಉಪಯೋಗಿಸಲು ಅನುಮತಿ ನೀಡಿದ್ದೇವೆ. ಮರಳು ತೆಗೆಯಲು ನೀರಿನೊಳಗೆ ಮೋಟರ್‌ಗಳನ್ನು ಅಳವಡಿಸುತ್ತಾರೆಯೋ, ಅಂತಹ ಸಾಕಷ್ಟು ಮೋಟಾರು ಬೋಟುಗಳನ್ನು ಅಮಾನತ್ತುಪಡಿಸಿಕೊಂಡಿದ್ದೇವೆ ಹಾಗೂ ಅಂತಹ ಕೃತ್ಯ ಎಸಗುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದೇವೆ. ಬೋಟ್‌ನೊಳಗೆ ಮೋಟರ್‌ಗಳನ್ನು ಅಳವಡಿಸಿ ಯಾರೋ ಕೆಲಸ ಮಾಡುತ್ತಿರಬಹುದು. ಅಂತಹ ಬೋಟ್‌ಗಳನ್ನು ನಿರ್ವಹಿಸುತ್ತಿರುವವರನ್ನು ನಾವು ಹಿಡಿಯಬೇಕಾಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಳ್ಳೆಯ ಮಂತ್ರಿಗಳು ಉತ್ತಮವಾದ ಉತ್ತರವನ್ನು ಕೊಟ್ಟಿದ್ದಾರೆ. ಸಚಿವರೇ ಹೇಳಿದ ಪ್ರಕಾರ ಬೇಡಿಕೆಯಿರುವ ಮರಳು ಸುಮಾರು 23 ದಶಲಕ್ಷ ಟನ್. ಇದನ್ನು ಸರ್ಕಾರವೇ ಅಂದಾಜಿಸಿದ್ದು. ಪ್ರಸ್ತುತ ನದಿಗಳಿಂದ 3 ದಶಲಕ್ಷ ಟನ್ ಹಾಗೂ M-sand ನಿಂದ 15 ದಶಲಕ್ಷ ಟನ್ ಮರಳು ಉತ್ಪಾದನೆಯಾಗುತ್ತಿದೆ. Minor Mineral Concession Rules 1967...

**ಸಭಾಪತಿಯವರು:-** ಇಲ್ಲಿ ಆ ವಿವರಗಳು ಬೇಡ. ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇಲ್ಲಿ ಪಶ್ನೆ ಇಷ್ಟೆ. ಒಂದು ಕಡೆ ಸರ್ಕಾರಿ ಕಾಮಗಾರಿಗಳಿಗೆ ಮತ್ತೊಂದು ಕಡೆ ಜನ ಸಾಮಾನ್ಯರಿಗೆ ಮರಳು ಬೇಕಾಗಿದೆ. ಮರಳನ್ನು ತೆಗೆಯುವುದರ ಜೊತೆಗೆ ತಾವು ಗಮನಿಸಿದ ಹಾಗೆ ಮಲೆನಾಡು ಭಾಗದ ಜಮೀನುಗಳಲ್ಲಿ ಹಳ್ಳ-ಗುಡ್ಡಗಳಿವೆ, ಬರಪೀಡಿತ ಬಯಲುಸೀಮೆ ಪ್ರದೇಶಗಳಲ್ಲಿ ಸಮತಟ್ಟಾಗಿರುವಂತಹ ಪ್ರದೇಶಗಳಿವೆ. ಸಮತಟ್ಟಾದ ಪ್ರದೇಶಗಳಲ್ಲಿ ಮಳೆ ಬೀಳುತ್ತಿಲ್ಲ. ಈ ಅಂಶವನ್ನು ಸರ್ಕಾರ ಗಮನಿಸಬೇಕು. ಈ ಅಂಶವನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*(37) 07.50 07-02-2017 CS.MD*

**ಶ್ರೀ ವಿ.ಎಸ್.ಉಗ್ರಪ್ಪ:– ಮುಂದು**.ನಾವೇನಾದರೂ ಇದೇ ರೀತಿ ಗುಡ್ಡಗಳನ್ನು ಕಡಿದು ಸಮ ಮಾಡುತ್ತಾ ಹೋದರೆ ಕರ್ನಾಟಕ ಮತ್ತೊಂದು ರಾಜಸ್ಥಾನ ಆಗುವುದರಲ್ಲಿ ಯಾವುದೇ ಸಂಶಯ ಇಲ್ಲ. ಏಕೆಂದರೆ ಈ ನಿಟ್ಟಿನಲ್ಲಿ ಈಗಾಗಲೇ ಕರ್ನಾಟಕ ಎರಡನೆಯ ಸ್ಥಾನದಲ್ಲಿದೆ. ಉದಾಹರಣೆಗೆ ಪಾವಗಡದಲ್ಲಿ ಮೊದಲು 700 ರಿಂದ 800 ಮಿ.ಮಿ ಮಳೆ ಬೀಳುತ್ತಿತ್ತು. ಈಗ ಅದು 400 ಮಿ.ಮಿ ಗೆ ಬಂದು ನಿಂತಿದೆ. ಈ ಬಗ್ಗೆ ನಾನು ಎರಡು ವಿಚಾರಗಳನ್ನು ಸರ್ಕಾರಕ್ಕೆ ಕೇಳಬಯಸುತ್ತೇನೆ. ಮೊದಲನೆಯದು ನಮ್ಮ ರಾಜ್ಯದಲ್ಲಿನ ಮರಳಿನ ಬೇಡಿಕೆ 23 ದಶಲಕ್ಷ ಟನ್ ಇರಬೇಕಾದರೆ, 34 ದಶಲಕ್ಷ ಟನ್ ಗೆ ಏಕೆ ಅವಕಾಶವನ್ನು ಕೊಡುತ್ತಾ ಇದ್ದೀರಿ? ನಮ್ಮ ರಾಜ್ಯದಿಂದ ಮಹಾರಾಷ್ಟ್ರಕ್ಕೆ ಮತ್ತು ಕೇರಳಕ್ಕೆ ಸಾಕಷ್ಟು ಮರಳು ಹೋಗುತ್ತಾ ಇದೆ. ಹಾಗೆಯೇ ತಮಿಳುನಾಡು ಮತ್ತು ಆಂಧ್ರದಿಂದ ನಮ್ಮ ರಾಜ್ಯಕ್ಕೆ ಮರಳು ಬರುತ್ತಿದೆ. ಈ ಮರಳಿನ ಸಂಪತ್ತು ಏನಿದೆ, ಇದು ಕಬ್ಬಿಣದ ಅದಿರಿನ ಗಣಿಗಾರಿಕೆಯನ್ನು ನಿಲ್ಲಿಸಿದ ಮೇಲೆ ಅತಿ ಹೆಚ್ಚು ಹಣ ಗಳಿಕೆ ಮಾಡುತ್ತಿರುವುದು ಮರಳಿನ ದಂಧೆ. ನಾನು ಸರ್ಕಾರಕ್ಕೆ ಕೇಳುವುದೇನೆಂದರೆ ದಯಮಾಡಿ ಇದರ ಬಗ್ಗೆ ಒಂದು ಸ್ಪಷ್ಟವಾದ ನೀತಿಯನ್ನು ರೂಪಿಸಬೇಕು. ಎರಡನೆಯದಾಗಿ ಆಂಧ್ರಪ್ರದೇಶ ಮತ್ತು ತಮಿಳುನಾಡು ಮತ್ತಿತರ ರಾಜ್ಯಗಳಲ್ಲಿ ಈ ರೀತಿಯ ಸಮಸ್ಯೆಗಳಿಲ್ಲ. ಆ ರಾಜ್ಯಗಳಲ್ಲಿ ಮರಳಿನ ಬಗ್ಗೆ ಯಾವ ರೀತಿಯ ನೀತಿಯನ್ನು ಅನುಸರಿಸುತ್ತಿವೆ ಎನ್ನುವುದನ್ನು ಪರೀಕ್ಷಿಸಿ, ಬೇಡಿಕೆಗೆ ಅನುಗುಣವಾಗಿ ಉತ್ಪಾದನೆಯನ್ನು ಮಾಡುವುದರ ಮೂಲಕ ಪರಿಸರದ ರಕ್ಷಣೆ ಮಾಡುವುದಕ್ಕೆ ಸರ್ಕಾರ ಮುಂದಾಗದೇ ಹೋದರೆ ಅತಿ ಹೆಚ್ಚಿನ ದುಷ್ಪರಿಣಾಮಗಳಾಗುತ್ತವೆ ಎನ್ನುವ ಎಚ್ಚರಿಕೆಯನ್ನು ಸರ್ಕಾರಕ್ಕೆ ನೀಡಬಯಸುತ್ತೇನೆ.

**ಶ್ರೀ ವಿನಯ ಆರ್.ಕುಲಕರ್ಣಿ:–** ಮಾನ್ಯ ಸಭಾಪತಿಗಳೇ, ಮಾನ್ಯ ಉಗ್ರಪ್ಪನವರು ಹೇಳಿರುವ ವಿಚಾರವನ್ನು ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ ಈಗಾಗಲೇ ನಮ್ಮಲ್ಲಿ ಅಂತರ್ಜಲದ ಮಟ್ಟ ಸಾಕಷ್ಟು ಕುಸಿದಿದೆ. ಈ ಕಾರಣದಿಂದಲೇ ನಾವು ನದಿಯಿಂದ ಮರಳನ್ನು ತೆಗೆಯುವುದು ಕಡಿಮೆ ಆಗಲಿ ಎನ್ನುವ ಉದ್ದೇಶದಿಂದಲೇ ನಾವು M-sand (Manufactured sand) ಗೆ ಹೆಚ್ಚಿನ ಉತ್ತೇಜನವನ್ನು ನೀಡುತ್ತಿದ್ದೇವೆ. ನಾನು ಆಗಲೇ ಹೇಳಿರುವಂತೆ 3 ಎಂ.ಎಂ.ಟಿ ಮರಳನ್ನು ಮಾತ್ರ ನದಿಯಿಂದ ತೆರೆಯುತ್ತೇವೆ. ಹೊಸ ಬ್ಲಾಕ್‌ಗಳ auction ಆದರೆ ಅದು 6 ಎಂ.ಎಂ.ಟಿ ಆಂದರೆ, 9ಕ್ಕೆ ಬರುತ್ತದೆ. ಈಗ ನಾವು ಹೆಚ್ಚಾಗಿ M-sand ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಅದರಿಂದ ಯಾವುದೇ recharging structure ಆಗಲಿ, ಯಾವುದೇ effect ಆಗುವುದಿಲ್ಲ. ಈ ಉದ್ದೇಶದಿಂದಲೇ ನಾವು M-sand ಗೆ ಹೆಚ್ಚಿನ ಉತ್ತೇಜನವನ್ನು ನೀಡಿದ್ದೇವೆ. ಇವತ್ತು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮರಳಿನ ಬೆಲೆ ಕೂಡ ಬಹಳ ಹೆಚ್ಚಾಗಿದೆ. ಇದರಿಂದ ಸಾಮಾನ್ಯರು ಮರಳನ್ನು ಖರೀದಿ ಮಾಡದ ಸ್ಥಿತಿ ಉಂಟಾಗಿದೆ. M-sand units ಹೆಚ್ಚಾದರೆ ನಮ್ಮೆಲ್ಲ ಸರ್ಕಾರಿ ಕಾಮಗಾರಿಗಳಿಗೆ ರಸ್ತೆಗಳಿಗೆ ಅದನ್ನು ಬಳಕೆ ಮಾಡಬಹುದು. ಏಕೆಂದರೆ ದೊಡ್ಡ ದೊಡ್ಡ ರಸ್ತೆಗಳು ಬರುತ್ತಿವೆ. The State Government is giving priority to SC/ST localities in villages by constructing CC roads (Cement Concrete Road). ಸಿಸಿ ರಸ್ತೆಗಳನ್ನು ನಿರ್ಮಿಸಲು ಉತ್ತಮ ಮಟ್ಟದ M-sand ನ್ನು ಉಪಯೋಗಿಸಲಾಗುವುದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, M-sand ಮಾಡುವುದಕ್ಕೆ ಏನು ಗುಡ್ಡಗಳನ್ನು ಅಗೆಯಲಾಗುತ್ತಿದೆ. ಇದರಿಂದ ಪರಿಸರದ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಆಗುತ್ತಿದೆ.

**ಶ್ರೀ ವಿನಯ ಆರ್.ಕುಲಕರ್ಣಿ:–** ಮರಳಿನ ಬೆಲೆ ತಗ್ಗಿಸುವ ಸಲುವಾಗಿ ಹೆಚ್ಚಿನ ಪ್ರಮಾಣದಲ್ಲಿ M-sand ಅಗೆಯಲು ಅವಕಾಶ ನೀಡಲಾಗಿದೆ. ಇಲ್ಲದೆ ಹೋದರೆ rate ಮತ್ತಷ್ಟು competitive rate ನಲ್ಲಿರುತ್ತದೆ. ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿದ್ದರೆ ಬೆಲೆ ಕಡಿಮೆ ಆಗಬಹುದು ಎನ್ನುವ ಉದ್ದೇಶದಿಂದ ಇದನ್ನು ಮಾಡಲಾಗಿದೆ.

**ಸಭಾಪತಿಯವರು:–** ಧನ್ಯವಾದಗಳು, ಈ ವಿಚಾರದ ಬಗೆಗಿನ ಚರ್ಚೆ ಇಲ್ಲಿಗೆ ಮುಗಿದಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11:00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 53 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 08ನೇ ಫೆಬ್ರವರಿ ಮಾಹೆ 2017ರ ಬುಧವಾರದಂದು ಬೆಳಿಗ್ಗೆ 11:00 ಗಂಟೆಗೆ ಸೇರಲು ನಿಶ್ಚಯಿಸಿತು)**

- - - - - - - -

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು